ಸಂಪುಟ ೨
ಸಂಚಿಕೆ ೨

ಕರ್ನಾಟಕ ಭಾರತಿ

ಅಕ್ಷಯತೃತೀಯಾ ಸಂಚಿಕೆ
೧೯೭೦

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, ಸಂಪಾದಕರು 'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ ಡಾಯರೆಕ್ಟರ್, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ರಾಜ್ಯೋದಯ ಸಂಚಿಕೆ ೨. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೫-೦೦ (ಅಂಚೆವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ : ರೂ. ೩-೦೦ (ಅಂಚೆವೆಚ್ಚ ಪ್ರತ್ಯೇಕ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ಅಯನ ಪತ್ರಿಕೆ

ಸಂಪುಟ : ೨ ಸಂಚಿಕೆ : ೨

ಅಕ್ಷಯತೃತೀಯಾ ಸಂಚಿಕೆ

ಕ್ರಿ. ಶ. ೧೯೭೦ ಶಾ. ಶ. ೧೮೯೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ಅಯನ ಪತ್ರಿಕೆ

ಸಂಪುಟ : ೩,   ಸಂಚಿಕೆ : ೨

ಮೇ ೧೯೭೦

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪೀಕರ ರೋಡ್, ಹುಬ್ಬಳ್ಳಿ–೨೦

ಪರಿವಿಡಿ



ಗೌರವ ಕರ್ನಲ್ ಕಮಾಂಡಂಟ್

ಡಾ. ಎ. ಎಸ್. ಅಡಕೆ

ಕುಲಪತಿಗಳು

ಪಕ್ಷಿತಟಾಕ

ಮುಂಜಾವು–ಇಲ್ಲ–ಸಂಜೆ ಈ ಕೆರೆಯ ದೂರದಿ
ಕುಳಿತು ಕಣ್ಣೋಡಿಸುವೆ: ದಂಡೆ ಗಿಡಗಂಟಿಗಳ
ದುಂಡುಕಟ್ಟಿನಲಿ ಕನ್ನಡಿಯಾಗಿ, ಮೋಡಗಳ
ನಭದ ಚಿತ್ತಾರವನು ಬಿಡಿಸಿ ತರೆ ಹತ್ತಿರದಿ—

ರಾಮ ಚಂದ್ರಬಿಂಬವ ಹಿಡಿದು ಅಳುವ ನಿಲ್ಲಿಸಿ-
ದಂತೆ ನನಗೂ ವಿರಾಮ. ರೈಲು ಕಂಬಿಯ ಜೋಡು-
ಗೆರೆ; ಆಚೆ ಕೆಂಪು ಮೊಗವೆತ್ತಿರುವ ಕಾಲೇಜು
ನೆನಪಿನ ಮೋಜು; ಹೊಗೆಯಾಡುವಿಟ್ಟಂಗಿ ಭಟ್ಟಿ.

ಕೊಕ್ಕರೆ, ಕಪ್ಪೆ, ಮೀನು; ಇರಬಹುದಲ್ಲೆ ಹಾವು.
ಜೋತಿರುವ ಗೀಜಗ ಗೂಡು; ಒಂದೆರಡು ಗೋವು.
ತೆರೆಗೆ ಬಂದೆರಗಿ ಹಾರುವ ಹಕ್ಕಿ ನಾಲ್ಕಾರು—

ಇದಕು ಸಾಕಷ್ಟು ಪರಿವಾರ; ಸನಿಹದಲಿ ಬೇವು
ಮಾವು. ಕೆರೆಯ ತುಂಬು ಬಾಳಿಗೆ ನೀರೆ ಜೀವಾಳ;
ಕೆಸರು–ಕ್ಲೇಶವ ಸಹಿಸಿ ತಿಳಿದಾಗ ಭಾವಮೇಳ.

★ ಚೆನ್ನವೀರ ಕಣವಿ

(ಅರ್ಧ)ನೇಮಿನಾಥಪುರಾಣದ ಶ್ರೀಕೃಷ್ಣ

"ಧರ್ಮಕ್ಷೇತ್ರೇ ಕುರುಕ್ಷೇತ್ರೇ" ಗೀತೋಪದೇಶ ಮಾಡಿ, ದುಷ್ಟನಿಗ್ರಹ ಶಿಷ್ಟಪರಿಪಾಲನೆ ಮಾಡಿದ, ಶ್ರೀಕೃಷ್ಣನ ಹೆಸರು ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ನಿಂತಿದೆ.

ನೋಡುವವರ ದೃಷ್ಟಿಕೋನ ಹೇಗೇ ಇರಲಿ, ಸಾವಿರಾರು ವರ್ಷಗಳು ಕಳೆದುಹೋದರು, ಭಾರತೀಯನ ನೆನಪಿನಲ್ಲಿ ಇನ್ನೂ ಜೀವಂತವಾಗಿ ಉಳಿದು ದಲ್ಲದೆ, ಆತನಲ್ಲಿ ನವಚೇತನವನ್ನುಂಟುಮಾಡಲು ಕಾರಣೀಭೂತನಾಗಿರುವ ಶ್ರೀಕೃಷ್ಣನು ಮಹಾ+ಆತ್ಮನೆಂಬಲ್ಲಿ ಯಾವ ಸಂಶಯವೂ ಇರಲಾರದು. ಮಹಾ+ಆತ್ಮ ಮತ, ದೇಶ, ಭಾಷೆಗಳೆಂಬ ಸಂಕುಚಿತ ಸಂಕೋಲೆಗಳಿಗೆ ಸಿಕ್ಕಿ ಬೀಳುವುದಿಲ್ಲ. ಅಂತಹ ಆತ್ಮನು ಎಲ್ಲರಿಗೂ, ಎಲ್ಲ ಕಾಲಕ್ಕೂ ವಂದ್ಯನೇ ಆಗಿರುತ್ತಾನೆ. ಹೀಗಿದ್ದರೂ ಬೇರೆ ಬೇರೆ ವಿಚಾರಪ್ರಣಾಲಿಗಳ ಮುಖಂಡರು, ಇಂತಹ ಮಹಾತ್ಮರನ್ನು ತಮ್ಮ ಮತ, ಧರ್ಮಗಳ ಸಂಕೋಲೆಗಳಿಂದ ಬಂಧಿಸಿ, ಅವರು ತಮ್ಮವರು, ಅನ್ಯರವರಲ್ಲ ಎಂದು ಸಾಧಿಸಲು ಪ್ರಯತ್ನಿಸಿದ್ದುಂಟು. ಹೀಗೆ ಬೇರೆ ಬೇರೆ ಮತಗ್ರಂಥಗಳಲ್ಲಿ ಸೇರ್ಪಡೆಯಾದ ಪ್ರಮುಖ ವ್ಯಕ್ತಿಗಳಲ್ಲಿ ಶ್ರೀಕೃಷ್ಣನೂ ಒಬ್ಬನಾಗಿದ್ದಾನೆ.

ಭಾರತೀಯ ಸಾಹಿತ್ಯಗಳಲ್ಲಿ ಅತಿ ಪ್ರಾಚೀನವೆಂದು ಹೇಳಿಕೊಳ್ಳುವ ವೈದಿಕಸಾಹಿತ್ಯದ ಪುರಾಣಗಳಲ್ಲಿ ಶ್ರೀಕೃಷ್ಣನು ವಿವಿಧ ರೀತಿಯಿಂದ, ನಾನಾ ಅವತಾರಗಳಲ್ಲಿ ಸೇರಿಹೋಗಿದುದನ್ನು ವಿವರಿಸುವ ಅಗತ್ಯವಿಲ್ಲ. ಅದರಂತೆ ಭಾರತೀಯ ಸಂಸ್ಕೃತಿಯನ್ನು ಇನ್ನೊಂದು ದೃಷ್ಟಿಕೋನದಿಂದ — ಹೆಚ್ಚಾಗಿ ತರ್ಕದ ಹಿನ್ನೆಲೆಯಲ್ಲಿ ಪೋಷಿಸಿಕೊಂಡುಬಂದ, ಅಷ್ಟೇ ಪ್ರಾಚೀನವಾದ ಶ್ರಮಣ ಸಾಹಿತ್ಯದಲ್ಲಿಯೂ ಶ್ರೀಕೃಷ್ಣನು ಸೇರಿಕೊಂಡಿದ್ದಾನೆ. ಶ್ರಮಣ ಅಥವಾ ಜೈನ ಎಂದು ಇಂದು ಪ್ರಸಿದ್ಧವಿರುವ ಜೈನಸಾಹಿತ್ಯದಲ್ಲಿ ಭಾರತೀಯ ಸಂಸ್ಕೃತಿಯನ್ನು ಪೋಷಿಸಿದ ಅನೇಕ ಮಹಾತ್ಮರ ಕಥೆಗಳು ಆ ಮತದ ಛಾಯೆಯಲ್ಲಿ ಸೇರಿಕೊಂಡು ದುಂಟು. ಅಂತಹ ಮಹಾತ್ಮರಲ್ಲಿ ಶ್ರೀಕೃಷ್ಣನು ಬಹು ಮುಖ್ಯನಾಗಿದ್ದಾನೆ.

ಜೈನರು ತಮ್ಮ ಮತಪ್ರಚಾರವನ್ನು ಕೈಕೊಂಡು ಗ್ರಂಥರಚನೆ ಮಾಡಿ ದವುಗಳಲ್ಲಿ ತೀರ್ಥಂಕರರ ಪುರಾಣಗಳು ಬಹು ಮುಖ್ಯವಾದವುಗಳಾಗಿವೆ. ವರ್ತಮಾನಕಾಲದ ಇಪ್ಪತ್ನಾಲ್ಕು ತೀರ್ಥಂಕರರ ಚರಿತ್ರಗಳನ್ನು ಬರೆಯುವಾಗ ಆ, ಆ ತೀರ್ಥಂಕರರ ಕಾಲಕ್ಕೆ ಆದ ಅಥವಾ ಇಬ್ಬರು ತೀರ್ಥಂಕರರ ನಡುವಿನ ಕಾಲದಲ್ಲಿ ಆದ ಹನ್ನೆರಡು ಜನ ಚಕ್ರವರ್ತಿಗಳು, ಒಂಬತ್ತು ಜನ ಬಲದೇವರು, ಒಂಬತ್ತು ಜನ ವಾಸುದೇವರು, ಒಂಬತ್ತು ಜನ ಪ್ರತಿವಾಸುದೇವರುಗಳ ಕಥೆ

ಗಳನ್ನು ಸೇರಿಸಿ ಒಂದು 'ಮಹಾಪುರಾಣ'ವನ್ನೇ ಬರೆದುಬಿಟ್ಟರು. ಈ 'ತ್ರಿಷಷ್ಟಿ ಶಲಾಕಾಪುರುಷ'ರ ಹೆಸರುಗಳನ್ನು ಹಾಗೂ ಅವರಿಗೆ ಸಂಬಂಧಿಸಿದಂತೆ ಬರುವ ಕಾಮದೇವರು, ಯಕ್ಷಯಕ್ಷಿಣಿಯರು ಮೊದಲಾದವರ ಹೆಸರುಗಳನ್ನು ನೋಡಿದರೆ ಭಾರತೀಯ ಸಾಹಿತ್ಯರಚನೆಗೆ ವಸ್ತುವಾದ ಮಹಾತ್ಮರ ಪರಿಚಯ ವಾಗುವಂತಿದೆ, ಇರಲಿ.

ಪ್ರಸ್ತುತ ಶ್ರೀಕೃಷ್ಣನನ್ನು ಪಾತ್ರ ಕುರಿತು ವಿಚಾರಿಸಬಹುದು. ವರ್ತ-ಮಾನಕಾಲದ ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥನ ಚರಿತ್ರೆಯಲ್ಲಿ ಶ್ರೀಕೃಷ್ಣನನ್ನು ಸೇರಿಸಿಕೊಳ್ಳಲಾಗಿದೆ. ನೇಮಿನಾಥನು ಹರಿವಂಶದ ಅರಸನಾದ ಸಮುದ್ರವಿಜಯ ಎಂಬವನ ಮಗನು. ಕೃಷ್ಣ ಸಮುದ್ರವಿಜಯನ ಕಿರಿಯ ತಮ್ಮನಾದ ವಸುದೇವನ ಮಗನು. ಅರ್ಥಾತ್ ನೇಮಿನಾಥನು ಕೃಷ್ಣನ ದೊಡ್ಡಪ್ಪನ ಮಗ; ಆದರೆ ವಯಸ್ಸಿನಲ್ಲಿ ಚಿಕ್ಕವನು. ಇದೂ ಅಲ್ಲದೆ ಜೈನ ಮತದ ಹಿನ್ನೆಲೆಯಲ್ಲಿ ರೂಪಿತರಾದ ಒಂಬತ್ತು ಜನ ವಾಸುದೇವರಲ್ಲಿ ಕೊನೆಯ ವಾಸುದೇವ-ಕೃಷ್ಣ. ಕೊನೆಯ ಬಲದೇವನಾದ ಬಲರಾಮನ ತಮ್ಮ; ಜೈನ ಮತದಂತೆ ಕಾಮದೇವನಾದ ವಸುದೇವನ ಮಗ, ಇನ್ನೊಬ್ಬ ಕಾಮದೇವನಾದ ಪ್ರದ್ಯುಮ್ನನ ತಂದೆ. ಅದರಂತೆ ಆ ಕಾಲದ ಪುಣ್ಯಪುರುಷರು ಹಾಗೂ ಕಾರಣೀ ಪುರುಷರು ಆದ ಪಾಂಡವರ ಬೀಗ. (ಪಾಂಡವರು ಕುರುವಂಶದವರು. ಹರಿವಂಶ, ಕುರುವಂಶದವರು ಸಂಬಂಧಿಕರಾದುದರಿಂದ ನೇಮಿನಾಥಪುರಾಣದಲ್ಲಿ ಮಹಾಭಾರತದ ಕಥೆ ಅಡಕವಾಗಿದೆ. ಅದರಂತೆ ಇಪ್ಪತ್ತನೆಯ ತೀರ್ಥಂಕರ ನಾದ ಮುನಿಸುವ್ರತನ ಚರಿತ್ರೆಯಲ್ಲಿ ರಾಮಾಯಣದ ಕಥೆ ಸೇರಿದೆ.) ವಾಸುದೇವ ನಾದ ಕೃಷ್ಣ ಪ್ರತಿವಾಸುದೇವನಾದ ಜರಾಸಂಧನನ್ನು ಕೊಂದು ಮೂರು ಖಂಡಗಳ ಅಧಿಪತಿಯಾಗಿ ಅರ್ಥಾತ್ ಅರ್ಧಚಕ್ರಿಯಾಗಿ ರಾಜ್ಯಭೋಗಮಾಡುವ ಪುಣ್ಯಪುರುಷ. ಇದಲ್ಲದೆ ನೇಮಿನಾಥ ತೀರ್ಥಂಕರರ ಭವಿಷ್ಯದ್ವಾಣಿಯಂತೆ ಭವಿಷ್ಯತ್ಕಾಲದ ತೀರ್ಥಂಕರನಾಗಿ ಹುಟ್ಟುವ ಮಹಾತ್ಮ! ನೇಮಿನಾಥ ತೀರ್ಥಂಕರನ ಜನ್ಮವಾಗುವ ದ್ವಾರಕಾ ಪಟ್ಟಣವನ್ನು ನಿರ್ಮಿಸುವವನು ಕೃಷ್ಣ. ನೇಮಿನಾಥ ತೀರ್ಥಂಕರರು ತೀರ್ಥಂಕರರಾಗಿ ಹೋಗುವಲ್ಲಿ, ಅವರ ಧರ್ಮೋಪದೇಶಗಳಲ್ಲಿ ಪ್ರಮುಖಪಾತ್ರ ಕೃಷ್ಣನದು. ಹೀಗೆ ಹರಿವಂಶ ಪುರಾಣದಲ್ಲಿ ಅರ್ಥಾತ್ ನೇಮಿನಾಥಪುರಾಣದಲ್ಲಿ ಕೃಷ್ಣನ ಪಾತ್ರವನ್ನು ಉಚ್ಚಸ್ಥಾನದಲ್ಲಿರಿಸಿದ್ದಾರೆ—ಜೈನಾಚಾರ್ಯರು.

ಬಹು ಪ್ರಾಚೀನ ಕಾಲದಿಂದಲೇ ಸಾಗಿಬಂದ ಪರಂಪರೆ ಜೈನಮಹಾಪುರಾಣಕ್ಕೆ ಇದೆ. ಇಂತಹ ಗ್ರಂಥಗಳೇ ಕನ್ನಡ ಕವಿಗಳಿಗೆ ಆಕರಗ್ರಂಥಗಳು. ಇಂತಹ ಗ್ರಂಥಗಳನ್ನು ಅಳವಡಿಸಿಕೊಂಡು ಮೂಲ ಕಥೆಯನ್ನು ಬರೆಯುತ್ತಿದ್ದರೂ, ಕನ್ನಡಕವಿಗಳು ತಮ್ಮತನವನ್ನು ಬಿಟ್ಟಿಲ್ಲ. ತಮ್ಮ ಕಾಲದ ಹಿನ್ನೆಲೆಯನ್ನು

ಹಾಗೂ ತಮ್ಮ ಸ್ವಂತ ನುಡಿಯಾದ ಕನ್ನಡವನ್ನು ಅರ್ಥಾತ್ 'ದೇಶಿ'ಯ ಸೊಬಗನ್ನು ತಮ್ಮ ಕೃತಿಗಳಲ್ಲಿ ಸುಂದರವಾಗಿ ಮೂಡಿಸಿದ್ದಾರೆ. ನೇಮಿನಾಥ ಪುರಾಣದ ಮಾತನ್ನೇ ನೆನೆದಾಗ ಇನ್ನೊಂದು ಮಾತೂ ಸ್ಪಷ್ಟವಾಗಿ ಕಂಡು ಬರುತ್ತದೆ. ಕೃಷ್ಣನನ್ನು ಪ್ರಮುಖಪಾತ್ರದಲ್ಲಿ ಸೇರಿಸುವುದಂತೂ ಸಂಪ್ರದಾಯದ ಮಾತೇ ಆಯಿತು. ಇದಲ್ಲದೆ ವಿಷ್ಣುಪುರಾಣ, ಭಾಗವತ ಮೊದಲಾದ ಪುರಾಣಗಳನ್ನು ಓದಿದ ಕನ್ನಡಕವಿಗಳಿಗೆ, ಅದರಲ್ಲೂ ಮಧ್ಯಕಾಲದ ಕನ್ನಡಕವಿಗಳಿಗೆ, ಕೃಷ್ಣನ ಬಾಲಲೀಲೆಗಳು ಬಹು ಮೆಚ್ಚಿಗೆಯಾದಂತೆ ಕಂಡುಬರುತ್ತದೆ. ಮಕ್ಕಳ ಆಟನೋಟಗಳನ್ನು ಮೆಚ್ಚಲು ಯಾವ ಮತಧರ್ಮವೂ ಆತಂಕವಾಗಬೇಕಿಲ್ಲ. ಅಲ್ಲದೆ ತನ್ನ ಕೃತಿಯಲ್ಲಿ ಮಾನವೀಯ ಅಂಶಗಳನ್ನು ತರಲು ಹಾಗೂ ಭಿನ್ನ ಭಿನ್ನ ರಸಗಳನ್ನು ಪೋಷಿಸಿಕೊಂಡು ಬರಲು ಕವಿಗೆ ಒಂದು ಒಳ್ಳೆಯ ಅವಕಾಶವೂ ಸಿಕ್ಕಂತಾಗುತ್ತದೆ. ಇದೂ ಅಲ್ಲದೆ ಮಕ್ಕಳ ವಿಷಯವಿರುವದರಿಂದ 'ದೇಶಿ' ಬಳಕೆಗೆ ಸದವಕಾಶವೂ ಸಿಕ್ಕುತ್ತದೆ. ಹೀಗಾಗಿ ಅನೇಕ ಜನ ಜೈನ ಕವಿಗಳು ಕೃಷ್ಣನ ಬಾಲಲೀಲೆಗಳನ್ನು ವಿವರವಾಗಿ ಕೊಟ್ಟು ತಮ್ಮ ಗ್ರಂಥಗಳನ್ನು ಜೈನೇತರರೂ ಓದಲು ಅನುವುಮಾಡಿಕೊಟ್ಟಿದ್ದಾರೆಂದು ಹೇಳಬಹುದಾಗಿದೆ. ಇಂತಹ ಕವಿಗಳ ಒಳ್ಳೇ ಪ್ರತಿನಿಧಿಯಾಗಿದ್ದಾನೆ—ಕವಿ ನೇಮಿಚಂದ್ರ.

ಕವಿ ನೇಮಿಚಂದ್ರನು ಕ್ರಿ.ಶ. ೧೧೭೦–೧೧೯೦ರ ಅವಧಿಯಲ್ಲಿ ತನ್ನ ಕೃತಿಗಳಾದ 'ಲೀಲಾವತಿ' ಹಾಗೂ 'ನೇಮಿನಾಥಪುರಾಣ'ಗಳನ್ನು ಬರೆದಿದ್ದಾನೆ. "ಚತುರ್ಭಾಷಾ" ಪರಿಣತನಾದ ಈತನ 'ಲೀಲಾವತಿ' ಶೃಂಗಾರ ರಸಕ್ಕಾಗಿ ಪ್ರಸಿದ್ಧವಾದ ಕಾವ್ಯ. ನೇಮಿನಾಥ ಪುರಾಣವು ಹೆಸರೇ ಸೂಚಿಸುವಂತೆ ವರ್ತಮಾನಕಾಲದ ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥನ ಚರಿತ್ರೆ. ಕವಿ ನೇಮಿಚಂದ್ರನು ಬರೆದ ಈ ಕೃತಿಯು ಪೂರ್ಣವಾಗದೆ ಉಳಿದಿದೆ. ಪ್ರಸ್ತುತ ಗ್ರಂಥದಲ್ಲಿ ನೇಮಿನಾಥನ ಪೂರ್ವದ ಭವಾವಳಿಗಳ ಕಥೆ ಹಾಗೂ ಆತನ ಜನನವಾಗುವ ಹರಿವಂಶದ ಮತ್ತು ಹರಿವಂಶದ ಸಂಬಂಧಪಡೆದ ಕುರುವಂಶದ ಆರಂಭದ ಕಥೆಯು ಹೇಳಲ್ಪಟ್ಟು ನಂತರ ಕೃಷ್ಣನ ತಂದೆಯಾದ ವಸುದೇವನ ಸಾಹಸಗಳು, ಕೃಷ್ಣನ ಜನನ, ಹಾಗೂ ಆತನ ಬಾಲಲೀಲೆಗಳ ವರ್ಣನೆ ಮೊದಲಾದವುಗಳ ವಿವರಣೆ ಬಂದು ಕೊನೆಗೆ ಕೃಷ್ಣನು ಕೈಟಭ ಆನೆಯನ್ನೂ ಚಾಣೂರ ಮಲ್ಲನನ್ನೂ ಕಂಸನನ್ನೂ ಕೊಲ್ಲುವ ವರ್ಣನೆ ಬರುತ್ತದೆ. ಇಲ್ಲಿಗೆ ಕೃತಿ ನಿಂತು ಹೋಗಿದೆ. ಬಹುಶಃ ಕವಿ ಸಾವಿಗೀಡಾಗಿರಬಹುದೆಂದು ಕಾಣುತ್ತದೆ. ಅರ್ಧಕ್ಕೆ ನಿಂತುಬಿಟ್ಟಿರುವ ಈ ಕೃತಿ 'ಅರ್ಧನೇಮಿಪುರಾಣ'ವೆಂದೇ ಹೆಸರಾಗಿರುತ್ತದೆ. ಕವಿಯ ಎರಡೂ ಕೃತಿಗಳನ್ನು ಪರಿಶೀಲಿಸಿದಾಗ ಉತ್ತಮ ಕವಿಗೆ ಇರಬೇಕಾದ ಪಾಂಡಿತ್ಯ, ಪ್ರತಿಭೆ, ಲೌಕಿಕಜ್ಞಾನಗಳ ಪರಿಚಯವಾಗುವುದರ ಜೊತೆಗೆ ಕವಿ ನೇಮಿಚಂದ್ರನು ತನ್ನ ಕಾಲದ ಚಿತ್ರವನ್ನೂ ತನ್ನ ಜನತೆಯ ಅಭಿರುಚಿಯನ್ನೂ

ಸುಂದರವಾಗಿ ಕೊಟ್ಟು "ಕರ್ಣಾಟಕೃತಿಗೆ ನೇಮಿಜನ್ನಮರ್ವರೆ ಸೀಮಾ-ಪುರುಷರ್" ಎಂಬ ಪ್ರಶಸ್ತಿಗೆ ಪಾತ್ರನಾಗಿದ್ದಾನೆಂಬುದರ ಕಲ್ಪನೆ ಬರುತ್ತದೆ.

ಈಗ ಕವಿ ನೇಮಿಚಂದ್ರನು ತನ್ನ ನೇಮಿನಾಥಪುರಾಣದಲ್ಲಿ ಚಿತ್ರಿಸಿದ ಕೃಷ್ಣನ ಚಿತ್ರವನ್ನು ಸ್ವಲ್ಪ ತಿಳಿದುಕೊಳ್ಳಬಹುದು. ಕವಿ ನೇಮಿಚಂದ್ರನು ಬರೆದ ಕೆಳಗಿನ ಪದ್ಯವು ಗಮನಾರ್ಹವಾಗಿದೆ :

"ಈ ರಸವತ್ಕೃತಿಯೊಳಹಂ । ಕಾರ ಜರಾಸಂಧ ಕಾಮ ನೇಮಿಕುಮಾರರ್ ।
ಶ್ರೀರಮಣರ್ಧೀರರ್ ಧೃತ । ವೀರ ಲಲಿತವೀರಶಾಂತಧೀರೋದಾತ್ತರ್ ।"

(ನೇ.ಪು. ಆ. ೧, ಪ. ೪೧)

ಒಂದು ದೃಷ್ಟಿಯಿಂದ ನೇಮಿನಾಥಪುರಾಣದಲ್ಲಿ ಬಹು ಮುಖ್ಯಪಾತ್ರ ಕೃಷ್ಣನದೇ ಇದೆ. ಕಾರಣ ಜೈನಕವಿಗಳು ಅವನಿಗೆ ಬಹಳೇ ಮಹತ್ವ ಕೊಟ್ಟಿದ್ದಾರೆಂಬ ಮಾತು ಕವಿ ನೇಮಿಚಂದ್ರನು ಕೃಷ್ಣನನ್ನು (ಶ್ರೀರಮಣ) ಧೀರೋದಾತ್ತ (ಧೀರ+ಉದಾತ್ತ) ನಾಯಕನನ್ನಾಗಿ ಸ್ವೀಕರಿಸುವದರಲ್ಲಿ ಕಂಡುಬರುತ್ತದೆ. ಹೀಗೆ ಹೆಚ್ಚುಕಡಿಮೆ ಕಥಾನಾಯಕನಂತೆ ಬರುವ ಕೃಷ್ಣನ ಕಥೆ (ಅರ್ಧ)ನೇಮಿನಾಥಪುರಾಣದಲ್ಲಿ ಬಹು ಸೊಗಸಾಗಿ ಬಂದಿದೆ. ಆದರೆ ಆಗಲೇ ಹೇಳಿದಂತೆ ಅದು ಕೃಷ್ಣ ಕಂಸನನ್ನು ಕೊಲ್ಲುವವರೆಗೆ ಮಾತ್ರ ಬಂದಿದೆ.

ಕಂಸನ ಬಂಧನದಲ್ಲಿದ್ದ ವಸುದೇವ ದೇವಕಿಯರಿಗೆ ಮಗನಾಗಿ ಕೃಷ್ಣನು ದೇವಕಿಗೆ ನವಮಾಸ ತುಂಬುವ ಪೂರ್ವದಲ್ಲಿಯೇ ಭಾದ್ರಪದ (ಶುದ್ಧ) ಅಷ್ಟಮಿಯಂದು ಮಧ್ಯರಾತ್ರಿಯಲ್ಲಿ ಹುಟ್ಟಿದನು. (ವೈದಿಕ ಹಿನ್ನೆಲೆಯಲ್ಲಿ ಕೃಷ್ಣ-ಜನ್ಮಾಷ್ಟಮಿ ಶ್ರಾವಣ ಮಾಸದಲ್ಲಿ ಬರುತ್ತದೆಂಬುದನ್ನು ಇಲ್ಲಿ ಗಮನಿಸಬಹುದು.) ಕೃಷ್ಣನ ಜನ್ಮವನ್ನು ವರ್ಣಿಸುವ ಪದ್ಯ ಹೀಗಿದೆ :

"ಅಳಿಯುಂ ಪದ್ಮಿನಿ ನಾಭಿವೇಳೆ ವಿಷಮುಂ ಕಸ್ತೂರಿಯುಂ ಪುಟ್ಟಿ ಕ-
ಜ್ಜಳಮುಂ ದೀಪಿಕೆ ಕಾಳರಾತ್ರಿ ತಮಮುಂ ನೀಲಾಶ್ಮಮುಂ ರೋಹಣ-
ಸ್ಥಳ ಭೂದೇವಿ ತಮಾಳಮುಂ ಪಡೆವವೋಲ್ಲ್ಯಾನಾಹಿತಾಂಕೂರ ಕಾ-
ದಳನಂ ದೇವಕಿ ಶೀಲೆಯುಂ ಪಡೆದಳ್ ಕಂಸೋಷ್ಣನಂ ಕೃಷ್ಣನಂ"

(ನೇ.ಪು. ಆ. ೭, ಪದ್ಯ ೪೩)

ಇಲ್ಲಿ ಸುಂದರವಾದ ಶುಭ್ರವರ್ಣದ ದೇವಕಿ ಕಂಸನಿಗೆ ತಾಪವನ್ನುಂಟುಮಾಡುವ ನೀಲವರ್ಣದ ಕೃಷ್ಣನನ್ನು ಹಡೆದಳು ಎಂಬುದು ಸ್ಪಷ್ಟವಾಗಿ ತಿಳಿಯುವಂತೆ ಕವಿ, ನಿತ್ಯಜೀವನದಲ್ಲಿಯ ಸೊಗಸಾದ ಹೋಲಿಕೆಗಳನ್ನು ಕೊಟ್ಟು, ಹೇಳಿದ್ದಾನೆ. ಕೃಷ್ಣನು ಕಾರಣಪುರುಷನಾಗಿದ್ದುದರಿಂದ ಜನನವಾದ ವಿಷಯ ತನಗೆ ತಿಳಿಯಲೆಂದು ಕಂಸನು ಇಟ್ಟ ಕಾವಲುಗಳ ಸಂಜ್ಞೆಗಳೆಲ್ಲ ಸ್ವಾಭಾವಿಕವಾಗಿ ಅಲ್ಲಿ ಆಗುತ್ತಿದ್ದ ಮಳೆ, ಗಾಳಿ, ಗುಡುಗುಮಿಂಚುಗಳ ಧ್ವನಿಯಲ್ಲಿ ಅಡಗಿಹೋದು

ವಲ್ಲದೆ ಕೃಷ್ಣನು "ತನ್ನಯ ತನುತಪೋರುಚಿ"ಯಿಂದ ಸೊಡರುಗಳ ಬೆಳಕನ್ನು ಮುಚ್ಚಿಬಿಟ್ಟನೆಂದು ಕವಿ ವರ್ಣಿಸುತ್ತಾನೆ. ನಂತರ ವಸುದೇವನು ಕೃಷ್ಣನನ್ನು ಎತ್ತಿಕೊಂಡು ಹೊರಡುತ್ತಾನೆ. ಆಗ ಪುರುಷೋತ್ತಮನಾದ ಕೃಷ್ಣನ ಪುಣ್ಯಪ್ರಭಾವದಿಂದ–ಅವನ ಉಂಗುಷ್ಟ ತಾಕಿದಾಗ ಅಗಸೆಯ ಬಾಗಿಲು ತನ್ನಷ್ಟಕ್ಕೆ ತಾನೇ ತೆರೆಯಿತಂತೆ; ಗಸ್ತಿ ಮಾಡುವವರು 'ಮಾಟದ ಮಾನಸ'ರಂತೆ ಮಿಳಮಿಳನೆ ನೋಡುತ್ತ ಪುಂಡರೀಕಾಕ್ಷಂಗೆ ನಮಸ್ಕರಿಸಿ ನಿಂತರಂತೆ. ಮಥುರಾನಗರಿಯ ಬಾಗಿಲ ದಾಟಿ ನಿಂತಾಗ ಕತ್ತಲೆಯಲ್ಲಿ ಅವರಿಗೆ ದಾರಿ ತೋರಲು ಆ ಊರ ದೇವತೆ ಎತ್ತಿನ ರೂಪ ಧರಿಸಿ ತನ್ನ ಕೋಡುಗಳೆರಡರಲ್ಲಿ ಸೊಡರನ್ನು ಹೊತ್ತು ಬಂದಿತಂತೆ. ಆ ವೃಷಭ ನಡೆದ ದಾರಿಯಲ್ಲಿ ನಡೆವಾಗ ಮುಂದೆ ಭಯಂಕರವಾಗಿ ತುಂಬಿ ಹರಿಯುವ ಯಮುನಾ ನದಿ ಬಂದಿತು. "ಅದಂ ಕಂಡಹೋ ವಿಘ್ನಪರಂಪರಾ" ಎಂದು ವಸುದೇವ ಉದ್ಗರಿಸಿದಾಗ, ಆ ವೃಷಭ ನದಿಯಲ್ಲಿ ಹೊಕ್ಕಿತು. ಅದರ ಬೆನ್ನಹಿಂದೆ ವಸುದೇವ, ಬಲರಾಮರೂ ಹೊಕ್ಕರು. ಆಗ—

"ಬಾಲಕನ ಮಹಿಮೆಯಿಂದಂ। ಕಾಲಿಂದಿಯ ನೀರ ಮೇಲೆ ನಡೆವುದು ಮುದದಿಂ॥
ನೀಲದ ಪೊಸ ನೆಲಗಟ್ಟಿನ। ಮೇಲೊಯ್ಯನೆ ನಡೆವ ತೆಱದೆ ಹರಿಕುಲತಿಲಕಂ॥"

ಇಲ್ಲಿ ಕೃಷ್ಣನ ಮಹಿಮೆಯನ್ನು ಚೆನ್ನಾಗಿ ಎತ್ತಿ ತೋರಿಸಲಾಗಿದೆ. ನೀಲದ ನೆಲಗಟ್ಟಿನ ಮೇಲೆ ನಡೆದುಹೋದಷ್ಟು ಸಹಜವಾಗಿ ನಡೆದುಹೋದ ವಸುದೇವ ಬಲರಾಮರಿಗೆ ಎದುರಾಗಿ ಒಬ್ಬನು ದೀಪ ಸಹಿತ ಬರುತ್ತಿದ್ದನು. ಅದನ್ನು ಕಂಡು ಇವರು ಒಂದು ಗುಡಿಯಲ್ಲಿ ಹೊಕ್ಕು ಆ ಗುಡಿಯ ದೇವತೆಯ ವಿಗ್ರಹದ ಹಿಂದೆ ಅಡಗಿನಿಲ್ಲುತ್ತಾರೆ. ಆಗ ಆ ವ್ಯಕ್ತಿಯೂ ಅಲ್ಲಿಗೇ ಬಂದು, ಆ ದೇವತೆಯ ಮುಂದೆ ಅದೇ ಹುಟ್ಟಿದ ಒಂದು ಹೆಣ್ಣುಕೂಸನ್ನು ಇಟ್ಟು "ಗಂಡು ಕೂಸನ್ನು ಕೊಡೆಂದು ಹರಕೆ ಹೊತ್ತ ನನ್ನ ಹೆಂಡತಿಗೆ ಹೆಣ್ಣುಕೂಸನ್ನು ಕೊಟ್ಟೆಯಾ? ಇದನ್ನು ನೀನೇ ತೆಗೆದುಕೋ" ಎಂದು ಆ ಕೂಸನ್ನು ಬಿಟ್ಟು ಅವನು ಹೊರಗೆ ಹೋಗುತ್ತಾನೆ. ಆ ವ್ಯಕ್ತಿಯೇ ನಂದಗೋಕುಲದ ನಂದ. ವಿಷಯವೇನೆಂಬುದನ್ನು ಗ್ರಹಿಸಿದ ವಸುದೇವನು ತನ್ನ ಮಗ ಕೃಷ್ಣನನ್ನು ದೇವಿಯ ಮುಂದೆ ಮಲಗಿಸಿ ಆ ಹೆಣ್ಣುಕೂಸನ್ನು ತಾನು ತೆಗೆದುಕೊಂಡು. ದೇವತೆಯೇ ಮಾತನಾಡಿದಂತೆ "ನಂದನೇ, ಸಿಟ್ಟಿಗೆದ್ದು ಹೋಗಬೇಡ. ನಿನ್ನ ಇಚ್ಛೆಯಂತೆ ಗಂಡು ಕೂಸನ್ನೇ ಕೊಟ್ಟಿದ್ದೇನೆ. ನೋಡು, ತೆಗೆದುಕೋ" ಎಂದೆನ್ನಲು ತಿರುಗಿ ಬಂದ ನಂದನು ಗಂಡು ಕೂಸನ್ನು ಅರ್ಥಾತ್ ಕೃಷ್ಣನನ್ನು ಕಂಡು ಸಂತಸಗೊಂಡು ದೇವಿಗೆ ನಮಿಸಿ ಸಂತೋಷದಿಂದ ತನ್ನ ನಂದ ಗೋಕುಲಕ್ಕೆ ಮರಳಿ ತನ್ನ ಹೆಂಡತಿಗೆ ಕೃಷ್ಣನನ್ನು ಒಪ್ಪಿಸಿದನು. ಹೀಗೆ

ಕೃಷ್ಣನು ಗೋಕುಲವನ್ನು ಸೇರಿ ಯಶೋದೆಗೆ ಮಗನಾಗಿ ಬೆಳೆಯುತ್ತಿದನು. ಈ ಸಂದರ್ಭವು ಕವಿ ನೇಮಿಚಂದ್ರನ ನಿಪುಣತೆಯನ್ನು ಎತ್ತಿತೋರಿಸುವ ಉತ್ತಮ ಉದಾಹರಣೆಯಾಗಿದೆ.

ಯಶೋದೆ ಹಾಗೂ ಗೋಪಿಯರು ಕೃಷ್ಣನನ್ನು ಎರೆದು ಅಲಂಕಾರ ಮಾಡಿ, ರತ್ನಖಚಿತವಾದ ತೊಟ್ಟಿಲಲ್ಲಿ ಮಲಗಿಸಿ ಜೋಗುಳ ಹಾಡಿದರು. ಹೀಗೆ ಯಶೋದೆ ಹಾಗೂ ಗೋಪಿಯರ ಕಣ್ಣಾಗಿ ಬೆಳೆಯುವ ಕೃಷ್ಣನನ್ನು ಕುರಿತು ಕವಿ ನೇಮಿಚಂದ್ರನು ಹಲವು ಒಳ್ಳೇ ಪದ್ಯಗಳನ್ನು ಬರೆದಿದ್ದಾನೆ. ಆ ಪದ್ಯಗಳಲ್ಲಿ ಚಿಕ್ಕಮಕ್ಕಳ ಆಟ, ಆ ಆಟನೋಟಗಳನ್ನು ನೋಡಿ ತನ್ನ ಜನ್ಮದ ಸಾರ್ಥಕತೆಯನ್ನು ಕಾಣುವ ತಾಯಿಯ ಸ್ವಭಾವ ಚೆನ್ನಾಗಿ ಮೂಡಿಬಂದಿದೆ. ಉದಾಹರಣೆಗಾಗಿ ಇಲ್ಲಿ ಒಂದು ಪದ್ಯವನ್ನು ನೋಡಬಹುದು :

> " ಎಳವೆಯ ರೂಪುಂ ಮುದ್ದುಂ । ಬಳಯಿಸೆ ನೋಡುವವರ ಮನದೊಳ್ ಪಸುಂ ।
> ಬಳೆವಂತೆ ಬಳೆದು ಕೃಷ್ಣಂ । ಬಳೆದಂ ಗೋಪಿಯರ ತೋಳೊಳಂ ತೊಟ್ಟಿಲೊಳಂ "

ಹಾಗೆ ಕೃಷ್ಣನು ಬೆಳೆಯುತ್ತಿರುವಾಗ ಮಥುರಾ ಪಟ್ಟಣದಲ್ಲಿ ಅಪಶಕುನಗಳು ಜರುಗಲಾರಂಭಿಸಿದುವು. ಅವುಗಳ ಫಲಗಳನ್ನು ಕಂಸ ಕೇಳಿದಾಗ "ದೇವಕಿಯ ಮಗನೊಬ್ಬನು ನಿನಗೆ ವೈರಿಯಾಗಿ ಹೊರಗೆ ಬೆಳೆಯುತ್ತಿದ್ದಾನೆ" ಎಂದು ನೈಮಿತ್ತಿಕನು ಹೇಳಲು ಕಂಸನು ಚಿಂತಾಕ್ರಾಂತನಾಗಿ ಕುಳಿತನು. ಆಗ ಅವನ ಪೂರ್ವಭವದ ಎಂಟು ದೇವತೆಗಳು ಬೇರೆಬೇರೆಯಾಗಿ ಬಂದು

> " ಆರಂ ಬಾರಿಪ್ಪೆನಾರಂ ನಿನಗೆಡಿಗಿಪೆನಾರಂ ಕೊಲಲ್ಕಾಯ್ವೆನಾರಂ ।
> ಬೇರಿಂದಂ ಕಿಳ್ತೆನಾರಂ ನಿರಿದು ನೊಣೆವೆನಾರಂ ತಿವಿರ್ದೋವಿರ್ದುಸುರ್ವುಟಿಂ ।
> ದಾರಂ ಪ್ರೊಯ್ದಾವೆನಾರಂ ಪಿಡಿದು ಪ್ರೊಸೆವೆನಾರಂ ಕರಂ ಪೋಟ್ಟೆನಾರಂ ।
> ನಾರಂ ಪೀಳ್ವಂತೆ ಪೀಳ್ವೆಂ ಬೆಸಸೆಲೆ ಕಂಸ ರಾಜಾವತಂಸಾ ॥ "
>
> (ನೇ.ಪು. ಅ. ೭, ಪದ್ಯ ೬೯)

ಎಂದು ಅರ್ಥಟಿಸಿದುವು. ಆಗ ಕಂಸನು "ದೇವಕಿಯ ಮಗನು ಎಲ್ಲಿಯೋ ಬೆಳೆಯುತ್ತಿದ್ದಾನೆ, ಅವನನ್ನು ನಾಶಮಾಡಿರಿ" ಎಂದು ಹೇಳಲು ಪೂತಿನಿ ಎಂಬ ದೇವತೆ ಯಶೋದೆಯಾಗಿ ನಂಜಿನ ಹಾಲು ಕುಡಿಸಲು ಹೋಗಿ ತಾನೇ ನಾಶವಾದಳು. ಇನ್ನೊಬ್ಬ ದೇವತೆ ಕಾಗೆಯಾಗಿ ಕೃಷ್ಣನ ಕಣ್ಣನ್ನು ತೆಗೆವೆನೆಂದು ಎರಗಲು, ಆತನು ಅದರ ಮೂಗನ್ನೇ ಮುರಿದು ಕಳುಹಿದನು. ಮತ್ತೊಂದು ದೇವತೆ "ಲೋಯಿಸರದ ಮೇಲೆ ಧಂಡಿ ಹರಿದಂತು ಮಾಟ್ಪೆ"ನೆಂದು ಅಂಗಳದಲ್ಲಿ ಅಂಬೆಗಾಲಿಟ್ಟು ಆಡುವ ಕೃಷ್ಣನ ಮೇಲೆ ಶಕಟವಾಗಿ ಹರಿದುಬರಲು ಕೃಷ್ಣನು ಅದನ್ನು ಒದೆದು ಮುರಿದನು. ಮತ್ತೊಂದು ದೇವತೆ ಕುದುರೆಯಾಗಿ ಬಂದು ಕೃಷ್ಣನ ಕೈಯನ್ನು ಕಚ್ಚಲು "ದುಷ್ಟಾಶ್ವಮನಿಕ್ಕಿ ಕೊಂದು ಮಾಧವನಸ್ವ-

ಮೇಧಮುಂ ಮಾಡಿ ತುಱುಪಟ್ಟಿಯ ಪಾಲುಂ ಮೊಸರುಂ ಬೆಣ್ಣೆಯುಮಂ ಸೂಱೆಗೊಂಡು ಸಹಪಾಂಶುಕ್ರೀಡಿತರಪ್ಪ ಗೋಪಕುಮಾರಕರ್ಗೆ ದಕ್ಷಿಣೆಗುಡುವಂತೆ ಕೊಟ್ಟು ಪೊರೆಯುತ್ತುಮಿರೆ", ಹಾಲು ಮೊಸರನ್ನು ಕಳೆದುಕೊಂಡ ಗೋಪಿಯರೆಲ್ಲ ಬಂದು ಯಶೋದೆಗೆ ದೂರು ಹೇಳುತ್ತಾರೆ. ತಾಯಿ ಯಶೋದೆ ಕೃಷ್ಣನನ್ನು ಕಡೆಗೋಲಿಗೆ, ಒರಳಿಗೆ ಕಟ್ಟುತ್ತಾಳೆ. "ಆನೆಯನೆತ್ತುವಂಗಾಡು ಚಿಕ್ಕಾಡೆಂಬಂತೆ" ಕೃಷ್ಣನು ಅವುಗಳನ್ನು ಕಡೆಗಣಿಸಿ ಎಳೆದಾಡುತ್ತಾನೆ. ಒಮ್ಮೆ ಅಂಗಳದಲ್ಲಿ ಆಡುವ ಕೃಷ್ಣನನ್ನು ಅವರ ಮನೆಯ ಮುಂದೆ ಅತ್ತಿಯ ಮರಗಳಾಗಿ ಬೆಳೆದುನಿಂತ ದೇವತೆಗಳು ಕತ್ತರಿಯ ಹಾಗೆ ಹಿಚುಕಿಹಾಕಬೇಕೆಂದು ಬಗೆದಾಗ ಕೃಷ್ಣನು ಅವುಗಳನ್ನು ಬೇರುಸಹಿತ ಕಿತ್ತು ನಾಶಮಾಡಿದನು. ಹೀಗೆ ಪುಂಡ ಬಾಲಕನಾಗಿ ಬೆಳೆಯುತ್ತಿರುವ ಕೃಷ್ಣನು ಗೋಕುಲದ ಆಬಾಲವೃದ್ಧರಿಗೂ ಸಾಕಷ್ಟು ಉಪಟಳವನ್ನು ಕೊಡುತ್ತಿದ್ದನು. ಅವನ ಕೀಟಲೆಯನ್ನು ಕವಿ ನೇಮಿಚಂದ್ರನ ಶಬ್ದಗಳಲ್ಲಿಯೇ ಕೇಳಿದರೆ ಲೇಸು :

"ಅಡೆವಂ ಗೋಣ್ಮುರಿಗೊಂಡು ಬೋಟದಲೆಯಂ ಮುಂಗೆಯ್ಗಳಂ ಮೂಱಿಗೊಂ
ಡಿಡುವಂ ಕೂಂಕಿ ಕೊಡಂಕೆಯಂ ಮುರಿವಸುಳ್ಗತ್ತಳ್ಕೆಯಂ ಗಲ್ಲಮಂ ॥
ಮಿಡಿವಂ ಮಿಂಡರ ಮೀಸೆಯಂ ಸೆಱೆದು ಮೂಗಿಟ್ಟೀಱುವಂ ಮಕ್ಕಳ ।
ಱ್ರೊಡೆ ಬಾಯ್ವಾಯನೆ ಪೊಯ್ವನೇಂ ಸಿತಗನೋ ಕಾಳಾಹಿ ಕೋಳಾಹಳಂ ॥

(ನೇ.ಪು. ಆ. ೭, ಪ. ೮೪)

ಮತ್ತು

"ಇಡುವಂ ಗುರ್ದುವನುರ್ದುವಂ ಕೆಡಪುವಂ ನುಲ್ಲಿಕ್ಕುವಂ ಕುಕ್ಕುವಂ ।
ಬಡಿವಂ ಜೆಯ್ದು ಚಿವುಂಟುವಂ ಕಿನಿಸುವಂ ಪಾಯ್ದೊತ್ತುವಂ ಕುತ್ತುವಂ ।
ಜಡಿವಂ ಜತ್ತಕುಱಾಡುವಂ ಬಳಸುವಂ ಜಿನ್ನಟ್ಟುವಂ ಮುಟ್ಟುವಂ ।
ಪಿಡಿವಂ ಮಕ್ಕಳನೇಂ ಕರಂ ವಿಕರಿಯೋ ಕೂಸಾಟದೊಳ್ಕೇಶವಂ ॥"

(ನೇ.ಪು. ಆ. ೭, ಪ. ೮೫)

ನಾನಾ ತರಹದ ಹಿಂಸೆಗೆ ಗುರಿಯಾದ ಮಕ್ಕಳನ್ನು ಕರೆತಂದು ಯಶೋದೆಗೆ ತೋರಿಸಿ ಕೃಷ್ಣನನ್ನು ದಂಡಿಸಬೇಕೆಂದು ಬೇಡಿದ ಗೋಪಿಯರನ್ನೂ "ಕಾಲ್ವಿಡಿದೆತ್ತಿ ಕೆಡಪಿ, ಕಾಲಂ ಪಿಡಿದೆೞೆದೆೞೆದೞಸಿ ಬಿಟ್ಟನಾ ಗೋಪಿಯರಂ."

ಮತ್ತೊಮ್ಮೆ ಗೋಪಾಲಕರಿಗೆ ಹಿಂಸೆ ಮಾಡುತ್ತಿದ್ದ ತಾಳವೃಕ್ಷವನ್ನು ಒಂದೇ ಹೊಡೆತದಿಂದ ಮುರಿದುಹಾಕಿದನು.

ಮಗನ ಕೀಟಲೆಯನ್ನು ತಾಳಲಾರದ ನಂದನು ಆಕಳುಗಳನ್ನು ನೋಡಿಕೊಂಡಿರುವಂತೆ ಆಜ್ಞಾಪಿಸಿ ಗೋಪಾಲಕರ ಸಂಗಡ ಕೃಷ್ಣನನ್ನೂ ವೃಂದಾರಕವನಕ್ಕೆ (ವೃಂದಾವನಕ್ಕೆ) ಕಳುಹಿಸಿದನು. ಅಲ್ಲಿಯೂ ಕೃಷ್ಣನ ಅನೇಕ ಅದ್ಭುತ ಬಾಲಲೀಲೆಗಳು ಮುಂದುವರೆದವು. ಕವಿ ಹೇಳುತ್ತಾನೆ :

“ ಉರಗಾನೀಕಮನೆತ್ತಿ ತರ್ಪನಿದು ಬಲ್ಮೀಣೆಂದು ತನ್ನಂದ ಸುಂ ।
ದರಿಪ್ಪೋಪ್ಪೋ ಎನುತೋಡೆ ಕಾಡ ಪುಲಿಯಂ ಜೆಕ್ಕೆಂದು ತರ್ಪಂ ಮಹಾ ।
ಕರಿಯಂ ಕೊರ್ವಿದ ದಂಷ್ಟ್ರಿಯೆಂದು ಪಿಡಿತರ್ಪಂ ನೋಡ ನಾಂಪೆಂದು ಕೇ ।
ಸರಿಯಂ ಪಾಸದೊಳಿಕ್ಕಿ ತರ್ಪನಿದು ಬಾಲಕ್ರೀಡೆ ಗೋಪಾಲನ ॥ ”

(ನೇ.ಪು. ಆ. ೭, ಪ. ೪೯)

ಹಾವನ್ನು ತಂದು ಹಗ್ಗವೇದು ಇನ್ನೊಬ್ಬರ ಮೇಲೆ ಒಗೆಯುವುದು, ಕಾಡ ಹುಲಿಯನ್ನು ಬೆಕ್ಕೆಂದು ತರುವುದು, ಕಾಡಾನೆಯನ್ನು ಕಾಡ ಹಂದಿಯೆಂದು ತರುವುದು, ಸಿಂಹಕ್ಕೆ ಹಗ್ಗ ಕಟ್ಟಿ ಎಳೆದುಕೊಂಡು ಬರುವುದು—ಕೃಷ್ಣನಂತಹ ಮಹಾಪುರುಷನ ಬಾಲಕ್ರೀಡೆಗಳಾಗಬಲ್ಲುವೇ ಹೊರತು ಸಾಮಾನ್ಯ ಮಾನವರವಲ್ಲ!

ಮತ್ತೊಂದು ದಿವಸ ಒಂದು ಭಯಂಕರ ಕತ್ತೆ ಬಂದು ತೊಂದರೆ ಕೊಡಲಾರಂಭಿಸಿದಾಗ, ಕೃಷ್ಣನು ಅದರ ಬಾಯನ್ನು ಸೀಳಿ ಎರಡೂ ದಿಕ್ಕಿಗೆ ಬಿಸುಟನು. ಮಳೆಗಾಲದಲ್ಲಿ ಒಂದು ದಿವಸ ಕೃಷ್ಣನಿಂದ ಸೋತುಹೋದ ವಿದ್ಯಾದೇವತೆಗಳೆಲ್ಲ ಒತ್ತಟ್ಟಿಗೆ ಕೂಡಿ, ಮತ್ತೊಮ್ಮೆ ತಮ್ಮ ಕೈಚಳಕ ತೋರಿಸಲು ನಿರ್ಣಯಿಸಿ, ಭಯಂಕರವಾದ ಗುಡುಗು, ಮಿಂಚು, ಗಾಳಿಗಳಿಂದ ಕೂಡಿದ ಧಾರಾಕಾರವಾದ ಆಣೆಕಲ್ಲಿನ ಮಳೆಯನ್ನು ಸುರಿಸಲು ಆರಂಭಿಸಿದವು. ಗೋಸಮೂಹ, ಗೋಪಾಲಕರು ಕಂಗೆಟ್ಟರು. ಅವರ ಮೇಲೆ ಮರುಕಗೊಂಡ ಮಾಧವನು ಅವರನ್ನೆಲ್ಲ ಗೋವರ್ಧನ ಗಿರಿಗೆ ಕರೆದುಕೊಂಡು ಹೋಗಿ—

“ ಪರಲಂ ಜಾತ್ರೆಗೆ ಮೀಂಟುವಂತೆ ಚರಣಾಂಗುಷ್ಠದಿಂ ಮೀಂಟಿ ಝು ।
ಲ್ಲರಿಪ್ಪೋಲ್ಲುಳ್ಳಿನೆ ಸೂಸಿ ನಿರ್ಝರ ಜಲಂ ಮುಚ್ಚಿರ್ಪನಂ ಕಾಮಿಸಂ ।
ತಿರೆ ಕೊಂಡೆತ್ತಿದ ಕೆಯ್ ಮುರಾರಿ ಕೊಡೆಯಂ ಕ್ರೀಡಾರಸಕ್ಕೆತ್ತುವಂ ।
ತಿರೆ ಕಿಬ್ಬೆತ್ತಿದನೊಂದೆ ಕೆಯ್ಯೊಳ್ ಮಹಾ ಗೋವರ್ಧನಾದ್ರೀಂದ್ರಮಂ ॥ ”

(ನೇ.ಪು. ಆ. ೮, ಪದ್ಯ ೧೧)

ವಿದ್ಯಾದೇವತೆಗಳು ಏಳು ದಿವಸಗಳವರೆಗೆ ದೊಡ್ಡ ಮಳೆ ಸುರಿಸಿದರೂ ಗೋವರ್ಧನಗಿರಿಯನ್ನೆತ್ತಿ ಎಲ್ಲರನ್ನೂ ರಕ್ಷಣೆ ಮಾಡಿದ ಕೃಷ್ಣನನ್ನು—ಇವನು ಪ್ರತ್ಯಕ್ಷ ದೇವನೇ ಎಂದೂ, ಅವನ ತಂದೆತಾಯಿಗಳೂ ಸಹ ದೇವತೆಗಳೇ ಎಂದೂ ಜನರೆಲ್ಲ ಹೊಗಳಿ ಪೂಜಿಸಿ, ದೊಡ್ಡ ಜಾತ್ರೆಯೇ ನಡೆದುಹೋಯಿತು. ಇದನ್ನು ಕಂಡು ಕಂಸನು ‘ ಅರಿಷ್ಟ ’ನೆಂಬ ದಾನವನನ್ನು ಕರೆದು ಕೃಷ್ಣನನ್ನು ಕೊಲ್ಲಲು ಕಳುಹಿದನು. ಅವನು ಭಯಂಕರ ಗೂಳಿಯಾಗಿ ಬಂದು ಕೃಷ್ಣನನ್ನು ಕೊಲ್ಲಲು ಪ್ರಯತ್ನಿಸಿದಾಗ, ಕೃಷ್ಣನು ಅದರ ಕೋಡುಗಳನ್ನು ಹಿಡಿದು, ಅದರ ಗೋಣನ್ನು ಮುರಿದು ಕಳುಹಿದನು. ಹೀಗೆ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿ ಬೃಂದಾವನದಲ್ಲಿ ಬೆಳೆಯುತ್ತಿರುವ ಮಗನನ್ನು ‘ ಗೋಮುಖಿ ’

ಎಂಬ ನೋಂಪಿಯನ್ನು ಮಾಡುವ ನೆಪದಿಂದ ದೇವಕಿ, ವಸುದೇವ, ಬಲರಾಮ ಇವರು ಬಂದು ಕೃಷ್ಣನನ್ನು ನೋಡಿಕೊಂಡು ಅವನು ಬೇರೆ ಬೇರೆ ವಿದ್ಯಾ ದೇವತೆಗಳನ್ನು ಸೋಲಿಸಿದ ಸ್ಥಳಗಳನ್ನು ನೋಡಿ, ಸಂತಸಬಟ್ಟು ಹೋದರು. ಕೃಷ್ಣನನ್ನು ತಾಯಿ ದೇವಕಿ ಪ್ರೀತಿಯಿಂದ ಅಪ್ಪಿಕೊಂಡಾಗ ಅವಳ ಮೊಲೆ ಹಾಲು ಧಾರೆಯಾಗಿ ಕೃಷ್ಣನ ಮೇಲೆ ಸುರಿಯಿತಂತೆ! ತಾಯಿಯ ಮಮತೆಯು ಅಮೋಘವಾದುದಲ್ಲವೇ ?

ಕೃಷ್ಣನು ಹಾಗೆ ಹೆಚ್ಚೆಚ್ಚು ಬಲಶಾಲಿಯಾಗಿ ಬೆಳೆಯುತ್ತಿರುವಾಗ, ಇತ್ತ ಮಥುರಾ ಪಟ್ಟಣದಲ್ಲಿ ಒಂದು ಚೈತ್ಯಾಲಯದಲ್ಲಿ 'ನಾಗಶಯ್ಯೆ,' 'ಶಾರ್ಙ್ಗ-ಚಾಪ,' ಮತ್ತು 'ಪಾಂಚಜನ್ಯ'ಗಳು ಹುಟ್ಟಿದುವು. ಅವುಗಳನ್ನು ವಶಪಡಿಸಿಕೊಂಡವರು ಅರ್ಧಚಕ್ರಿಗಳಾಗುತ್ತಾರೆಂದು ತಿಳಿದ ಕಂಸನು ಅವುಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿ ವಿಫಲನಾಗಿ ಅವುಗಳನ್ನು ವಶಪಡಿಸಿಕೊಂಡವರಿಗೆ ತನ್ನ ಮಗಳನ್ನು ಕೊಡುವುದಾಗಿ ಸಾರಿಸಿದನು. ಆ ವಿಷಯ ತಿಳಿದ ಕೃಷ್ಣನು ಕೂಡಲೆ ಬಂದು ಭಯಂಕರವಾದ ಆ ಮೂರು ವಸ್ತುಗಳನ್ನು ವಶಪಡಿಸಿಕೊಂಡನು. ಆಗ ಕಂಸನು ಸಂತೋಷಗೊಂಡವನಂತೆ ನಟಿಸಿ, ಯಮುನಾನದಿಯ 'ನಾಗಹೃದ'ದೊಳಗಿರುವ ಸಾವಿರ ಎಸಳಿನ ಕಮಲವನ್ನು ತಂದು ದೇವರಿಗೆ ಏರಿಸು ಎಂದು ಹೇಳಿದನು. ಕೂಡಲೆ ಕೃಷ್ಣನು ಅಲ್ಲಿಗೆ ಹೋಗಿ ಆ ಮಡುವಿನಲ್ಲಿದ್ದ ಭಯಂಕರವಾದ ವಿಷಸರ್ಪವನ್ನು ಕೊಂದು ಆ ಸತ್ತ ಹಾವನ್ನೂ ಕಮಲವನ್ನೂ ಗೋಪಾಲಕರ ಕೈಯಲ್ಲಿ ಕೊಟ್ಟು ಕಂಸನಲ್ಲಿಗೆ ಕಳುಹಿಸಿ ಮನೆಗೆ ಹೋದನು.

ಆ ಹಾವನ್ನೂ ಹೂವನ್ನೂ ಕಂಡ ಕಂಸನು ಹೆದರಿ ಅವನೇ ತನ್ನ ವೈರಿಯೆಂದು ನಿಶ್ಚಯಿಸಿ, ಅವನು ಇನ್ನೂ ಬಲಶಾಲಿಯಾಗದ ಮುನ್ನವೇ ಕೊಲ್ಲಬೇಕೆಂದು ಮಂತ್ರಿಗಳೊಂದಿಗೆ ಮಂತ್ರಾಲೋಚನೆ ಮಾಡಿ, ಕೃಷ್ಣನನ್ನು ಮಲ್ಲಯುದ್ಧಕ್ಕೆ ಬರಮಾಡಿಕೊಂಡು ಚಾಣೂರಮಲ್ಲನಿಂದ ಅವನನ್ನು ಕೊಲ್ಲಿಸುವ ಹಂಚಿಕೆ ಮಾಡುತ್ತಾನೆ. ಅದರಂತೆ ಕೃಷ್ಣನನ್ನು ಆಹ್ವಾನಿಸಲು ಒಬ್ಬ ದೂತನನ್ನು ಕಳುಹಿಸುತ್ತಾನೆ. ಯಶೋದೆಯಲ್ಲಿಗೆ ಬಂದು ಆ ದೂತನು ಕಂಸನು ಕಳುಹಿಸಿದ 'ತಿವುರುಂ ತಿಳಕಮುಮಂ' ಕೊಟ್ಟು ಚಾಣೂರನ ಸಂಗಡ ಮಲ್ಲಯುದ್ಧಕ್ಕೆ ಕೃಷ್ಣನನ್ನು ಕಳುಹಿಸು ಎಂದಾಗ, ಆ ವೀರಮಾತೆ "ಎನ್ನ ಮಗನಾವ ತಿವುರಿಂ। ಮುನ್ನಿಕ್ಕಿದನಣ್ಣ ಶಕಟನಂ ಪೂತಿನಿಯಂ॥ ಪನ್ನಗನಂ ಯಮಳಾರ್ಜುನ। ರನ್ನರಕನನವನಿಗಧಿಕನೇ ಚಾಣೂರಂ॥" ಎಂದು ಹೇಳಿ "ಎನ್ನ ಮಗಂ ನೀರೊಳ್ನಾನಂ, ಬಿಸಿಲೊಳ್ಬಾಡಂ, ಬೆಂಕೆಯೊಳ್ಬೆಯ್ಯಂ ಜವನ ಕೆಯ್ಯೊಳ್ ಸಾಯಂ, ಏನುಂ ಬೇಡೊಡಗೊಂಡು ಪೋಗು" ಎನ್ನುತ್ತಿದ್ದಂತೆಯೇ ಕೃಷ್ಣನು "ಅಬ್ಬಾ (ಅಮ್ಮಾ) ಪಸಿದೆನ್" ಎಂದು ತಾಯಿಯ ಹತ್ತಿರ ಬರುತ್ತಾನೆ. ಆಗ

ತಾಯಿ " ಸಮೆದಂ ಮೊಸರಂ ಬಾಳ್ದೊಸ| ರುಮುನಾಂ ಘನವಾಗಿ ತಂದೆನಿಕ್ಕಿ-ದಪೆಂ ಲಂ|| ಚಮುನೆನ್ನ ಮಲ್ಲ ಚಾಣೂ| ರ ಮಲ್ಲನಂ ಮುಱಿದು ಬಂದು ಹಸಿವಂ ಮುಱಿಯಾ ||" ಎಂದು ಕೇಳಲು, ಹಾಗೇ ಆಗಲೆಂದು, ಗೆಳೆಯರಾದ ಗೋಪಾಲರನ್ನು ಕೂಡಿಕೊಂಡು ಹೊರಟೇಬಿಡುತ್ತಾನೆ. ದಾರಿಯಲ್ಲಿ ಯಮುನಾ ನದಿಯಲ್ಲಿ ಕಂಸನ ಅರಿವೆಗಳನ್ನು ಒಗೆಯುತ್ತಿದ್ದ ಅಗಸನ ಕೈಗಳನ್ನು ಮುರಿದು ರಾಜಪೋಷಾಕುಗಳನ್ನು ಹಾಕಿಕೊಂಡು ಮಥುರಾನಗರಿಗೆ ಬರುತ್ತಾನೆ. ಅಗಸೆಯ ಬಾಗಿಲಿಗೆ ಬಂದಾಗ 'ಕೈಟಭ' ಎಂಬ ಆನೆಯನ್ನು ಕೃಷ್ಣನಮೇಲೆ ಬಿಡಲಾಯಿತು. ಭಯಂಕರವಾದ ಆ ಆನೆಯನ್ನು ಎದುರಿಸಿ ಕೊಂದು, ಹಂದಿಯನ್ನು ಎಳೆದು ತರುವಂತೆ ಎಳೆದು ತಂದು ಮಲ್ಲಕಾಳಗವನ್ನು ನೋಡುವುದಕ್ಕೆ ಕುಳಿತಿದ್ದ ಕಂಸನ ಮುಂದೆ ಅದನ್ನು ಇಟ್ಟು, ಹಾಸ್ಯಮಾಡಿ, ತಾನು ಕಿತ್ತು ತಂದ ಅದರ ಕೋರೆಗಳನ್ನು ತೋರಿಸಿ, "ನಿನ್ನ ಬಂಡಾರದಲ್ಲಿಟ್ಟುಕೋ" ಎಂದು ಹಂಗಿಸುತ್ತಾನೆ. ಆಗ ಕಂಸನ ಸಂಜ್ಞೆಯಂತೆ ಚಾಣೂರಮಲ್ಲನು ಕೃಷ್ಣನ ಮೇಲೆ ಬೀಳುತ್ತಾನೆ. ಆಗ ಮುಗುಳ್ನಗೆ ನಗುತ್ತ ಮುಕುಂದನು "ಆಟ್ಟಿ ತಿಂಬದೆಯ್ಯಕ್ಕೆ ಪಾಟಂ ಬಟ್ಟೆಯೆಂದೆಬ್ದುಕೊಂಡು" ಅಪ್ಪಳಿಸುತ್ತಾನೆ. ಇಬ್ಬರಿಗೂ ಮಲ್ಲಯುದ್ಧವಾಗುತ್ತದೆ. ಇಲ್ಲಿ ಕವಿ ನೇಮಿಚಂದ್ರನು ಮಾಡಿರುವ ಮಲ್ಲಯುದ್ಧದ ವರ್ಣನೆ ಆತನು ಆ ಶಾಸ್ತ್ರದಲ್ಲಿ ಪರಿಣತನಾಗಿದ್ದನೆಂಬುದಕ್ಕೆ ನಿದರ್ಶನವಾಗಿದೆ. ಕುಸ್ತಿ ಆಡಿ, ನೋಡಿ ಅನುಭವ ಇದ್ದವರಿಗೆ ಇದೊಂದು ರಸದೌತಣವಿದ್ದಂತೆ ಇದೆ. ಕೊನೆಗೆ ಚಾಣೂರನನ್ನು ಹಣ್ಣುಮಾಡಿದಾಗ 'ಮುಷ್ಟಿಕ'ನು ಕೃಷ್ಣನ ಮೇಲೆ ಏರಿ ಬರುತ್ತಾನೆ. ಆಗ ಕೃಷ್ಣನು "ಎರಡುಂ ಕೆಯ್ಯಂ ಕೊಂಡಿ| ರ್ದರುಮಂ ಬೊಂಬೆಗಳನಾಡಿಪನವೋಲಮನಿ || ರ್ದರ ತಲೆಯಂ ತಾಟಿಸಿದಂ| ಬಿರಿವಿನೆಗಂ ತಾಳ ಕಾಯ್ಗಳಂ ತಾಟಿಪವೋಲ್ ||" ಹಾಗೆ ಎರಡೂ ತಲೆಗಳನ್ನು ತಾಟಿಸಲು ಅವರ ತಲೆಗಳು ಒಡೆದು ಮಲ್ಲರಂಗದಲ್ಲಿ ಮಿದುಳು ಚೂರುಚೂರಾಗಿ ಬಿದ್ದಿತು. ರಕ್ತ ಜೀಕಳಿ ಹೊಡೆದಂತೆ ಮೂಗಿನಿಂದಲೂ ಬಾಯಿಂದಲೂ ಹೊರಬಿತ್ತು. ಚಾಣೂರ, ಮುಷ್ಟಿಕ ಸತ್ತದ್ದನ್ನು ಕಂಡು ಅವರ ಶಿಷ್ಯರಾದ ಧೀರೋದ್ಧತ, ದುಂದುಭಿಧ್ವಾನ, ಮಹೀಧರದುರ್ಧರ, ಮಹಾಕಾಳ, ಪ್ರಳಯಕಾಳ ಮೊದಲಾದ ಸಾವಿರ ಜನರು ಕೃಷ್ಣನನ್ನು ಮುತ್ತಿದರು. ಆಗ ಕೃಷ್ಣ ಹೇಗೆ ಕಂಡನೆಂಬುದನ್ನು ಕವಿ ಹೀಗೆ ಬರೆದಿದ್ದಾನೆ:

" ತೆಕ್ಕೆಯೊಳುಲಿದೆಯ್ತಂದು ಪ್ರೆ । ಣಕ್ಕೆಗೆ ಮೇಲ್ವಾಯ್ವ ನುಸುಜಿ ಮಲ್ಲಸಹಸ್ರಂ ।
ಮರ್ಕಟ ಕಟಕಂ ಮುತ್ತಿದ । ಉರ್ಕೆಯ ನೀಳಾಚಳಂಬೊಲಿರ್ದಂ ಕೃಷ್ಣಂ ||"

ಸ್ವಲ್ಪ ಸಮಯದಲ್ಲಿಯೇ ಕೃಷ್ಣನು ಅವರನ್ನೆಲ್ಲ ಆನೆ ತುಳಿವಂತೆ ತುಳಿದು ನುಗ್ಗುಮಾಡಿದನು. ಅದನ್ನು ಕಂಡ ಕಂಸನ ಚತುರಂಗಸೇನೆ ಕೃಷ್ಣನ ಮೇಲೆ

ಬೀಳಲು ಬರುತ್ತದೆ. ಆಗ ಆ ಸಮಯವನ್ನೇ ಎದುರುನೋಡುತ್ತ ಕುಳಿತ ವಸುದೇವ ಹಾಗೂ ಬಲರಾಮರು ತಮ್ಮ ಸೈನ್ಯದೊಂದಿಗೆ ಆ ಸೈನ್ಯವನ್ನು ತಡೆಯುತ್ತಾರೆ. ಆಗ "ಕಡುಮುಳಿಸುಮುಳಿವಿಗಳುರಿಯೆ ಸಿಗ್ಗಾಗಿ ಸೈರಿಸಲಾಱದೆ ಯಭಿನವನಾರಸಿಂಹಾಡಂಬರಮುಗುರ್ವುಮದ್ಭುತವಾಗೆ."

"ಮಾಡದ ಕಂಭಮಂ ಮುಳಿಸಿನೊಳ್ಪರಿಪಾಯ್ದು ಸೆಲಕ್ಕೆ ಚಾಳಿಸ।
ಳ್ಪಾಡೆ ನೆಗಪ್ಪಿಕೊಂಡು ತೊಡೆಗಾ ನರಸಿಂಹನವುಂಕಿ ಕಂಭದಿಂ॥
ಮೂಡಿದ ಕಾಳರಕ್ಕಸನನಿಕ್ಕುವವೋಲ್ ನಖದಿಂ ಕರುಳ್ಗಳಂ।
ತೋಡಿ ಪಿಸುಳು ಸೀಟ್ದಿ ಬಿಸುಟಂ ಕಲಿಕಂಸನನಬ್ಜಲೋಚನಂ॥"

(ನೇ.ಪು. ಆ. ೮, ಪ. ೧೧೭)

ಹೀಗೆ ನಾಡಿಗೆ, ಪ್ರಜೆಗಳಿಗೆ, ಬಂಧುಬಾಂಧವರಿಗೆ ಕಂಟಕಪ್ರಾಯನಾಗಿದ್ದ ಕಂಸನನ್ನೂ, ಚಾಣೂರಾದಿ ಆತನ ಮಲ್ಲರನ್ನೂ ಒಂದೇ ಸಮಯದಲ್ಲಿ ಕೊಂದು ಎಲ್ಲರಿಗೂ ಸಂತೋಷವನ್ನುಂಟುಮಾಡಿ ವಿಜಯಶ್ರೀಯನ್ನು ಹೊಂದಿದ ಕೃಷ್ಣನ ಬಗೆಗೆ ಕವಿ ಬರೆದ ಕೊನೆಯ ಪದ್ಯ ಹೀಗಿದೆ:

"ಮಧುಮಾಯಾಮಥನಂ ಸಮುದ್ಧೃತಮಹಾಗೋತ್ರಂ ಗುಣೋದ್ದಾಮ ಧ।
ರ್ಮಧರಾ ಕಂಟಕ ಕೈಟಭಾಪಹರಣಂ ವಾಚಾಳ ಚಾಣೂರ ವಾ॥
ರಿಧಿಸಂಶೋಷಣ ಬಾಡಬಾಗ್ನಿ ಕಲಿ ಕಂಸಧ್ವಂಸಕಂ ತಾಳ್ದಿದಂ।
ಕದನಕ್ರೀಡೆಯನಾಡಿ ನಿತ್ಯ ಜಯಮಂ ಶ್ರೀವೀರನಾರಾಯಣಂ॥"

(ನೇ.ಪು. ಆ. ೮, ಪದ್ಯ ೧೨೧)

ಸಾಮಾನ್ಯ ಮನುಷ್ಯರಂತೆ ಹುಟ್ಟಿದರೂ ಕಾರಣಪುರುಷರು ತಮ್ಮ ಪುಣ್ಯಪ್ರಭಾವದಿಂದ ಅಸಾಮಾನ್ಯರಾಗಿ ಬೆಳೆದು ಹೇಗೆ ಮಹಾತ್ಮರಾಗುತ್ತಾರೆಂಬುದನ್ನು ಜೈನಕವಿಗಳು ತಮ್ಮ ಪುರಾಣಕಾವ್ಯಗಳಲ್ಲಿ ತೋರಿಸಲು ಪ್ರಯತ್ನಿಸಿದ್ದುಂಟು. ಇದಕ್ಕೆ ಉತ್ತಮ ಉದಾಹರಣೆ ಕೃಷ್ಣನಾಗಿದ್ದಾನೆ. ಜೈನ, ವೈದಿಕ ಎರಡೂ ಸಂಪ್ರದಾಯದ ಕೃತಿಗಳನ್ನು ಓದಿ, ಸಮನ್ವಯ ಮಾಡಿಕೊಂಡು ಕೃಷ್ಣನ ಚಿತ್ರವನ್ನು ಮಧ್ಯಕಾಲದ ಜೈನಕವಿಗಳು ಕೊಟ್ಟು, ಮೇಲೆ ಹೇಳಿದಂತೆ, ಮಾನವೀಯ ಅಂಶಗಳನ್ನು ಕೊಡುವುದರ ಜೊತೆಗೆ ರಸಪೋಷಣೆಯನ್ನೂ ಮಾಡಿ ಧರ್ಮವನ್ನೂ ಕಾವ್ಯಧರ್ಮವನ್ನೂ ಬೆಳಗಿ ಕೃತಕೃತ್ಯರಾಗಿದ್ದಾರೆ. ನೇಮಿಚಂದ್ರನ ಕೃತಿಯಲ್ಲಿ, ಅರ್ಧವಾದರೂ, ಮೇಲಿನ ಅಂಶಗಳನ್ನು ಹಾಗೂ 'ದೇಶಿ'ಯ ಸೊಬಗನ್ನು ಹೊಂದಿ ನಿರೂಪಿತವಾಗಿರುವ ಕೃಷ್ಣನ ಚಿತ್ರವು ಅಮರವಾಗಿದೆ, ಚೇತೋಹಾರಿಯಾಗಿದೆ.

★ ಬಿ. ಎಸ್. ಕುಲಕರ್ಣಿ

ಮೈಸೂರ ರಾಜ್ಯದಲ್ಲಿ ಔದ್ಯಮಿಕ ನೆಲೆಗಳು

ಕೃಷಿಪ್ರಧಾನವಾಗಿರುವ ಹಿಂದುಳಿದ ದೇಶಗಳಲ್ಲಿ ರೈತರ ಉತ್ಪಾದನಾ ಶಕ್ತಿಯು ತೀರ ಕಡಿಮೆಯಾಗಿರುತ್ತದೆ. ಬೇಸಾಯವನ್ನೇ ತಮ್ಮ ಜೀವನೋಪಾಯವಾಗಿ ಅವಲಂಬಿಸಿರುವವರಿಗೆ ಅದು ಪೂರ್ಣ ಉದ್ಯೋಗಾವಕಾಶ ಒದಗಿಸುವದರಲ್ಲಿ ಅಸಮರ್ಥವಾಗಿರುವದಲ್ಲದೆ ರಾಷ್ಟ್ರೀಯ ಉತ್ಪನ್ನವನ್ನು ತೀವ್ರಗತಿಯಲ್ಲಿ ಹೆಚ್ಚಿಸಲಿಕ್ಕೆ ಅದಕ್ಕೆ ಸಾಧ್ಯವಾಗಿಲ್ಲ. ಇಂಥ ವಿಷಮ ಪರಿಸ್ಥಿತಿಯಲ್ಲಿ ಸಣ್ಣ ಕೈಗಾರಿಕೆಗಳು ಅತಿ ಮುಖ್ಯ ಪಾತ್ರವಹಿಸಬಲ್ಲವು. ನಮ್ಮ ದೇಶದ ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಚಿಕ್ಕ ಕೈಗಾರಿಕೆಗಳು ವಹಿಸಿದ ಹಾಗೂ ವಹಿಸಬೇಕಾದ ಪಾತ್ರಗಳ ಬಗ್ಗೆ ಸರಕಾರವು ೧೯೪೮ ಮತ್ತು ೧೯೫೬ರ ಔದ್ಯಮಿಕ ನೀತಿಯ ಗೊತ್ತುವಳಿಗಳಲ್ಲಿ ಹಾಗೂ ಬೇರೆ ಬೇರೆ ಪಂಚವಾರ್ಷಿಕ ಯೋಜನೆಗಳಲ್ಲಿ ತನ್ನ ಧ್ಯೇಯಧೋರಣೆಗಳನ್ನು ಪ್ರಕಟಿಸುವದರ ಜೊತೆಗೆ ಅವುಗಳನ್ನು ಪೋಷಿಸಿಕೊಂಡು ಬಂದಿರುವುದೂ ಸೂಕ್ತವಾಗಿದೆ. ಸಣ್ಣ ಕೈಗಾರಿಕೆಗಳು ದೊಡ್ಡ ಪ್ರಮಾಣದಲ್ಲಿ ಉದ್ಯೋಗವನ್ನು ಒದಗಿಸುವವು. ರಾಷ್ಟ್ರೀಯ ಉತ್ಪನ್ನವನ್ನು ಅತಿ ಸಮಾನವಾದ ರೀತಿಯಲ್ಲಿ ಹಂಚುವ ವಿಧಾನವನ್ನು ಹೇಳಿಕೊಡುವವು. ಮತ್ತು ಬಂಡವಾಳ ಹಾಗು ಕೌಶಲ್ಯದ ಸಂಪನ್ಮೂಲಗಳ ಪರಿಣಾಮಕಾರಿ ಶೇಖರಣೆಯನ್ನು ಅತಿ ಸುಲಭಗೊಳಿಸುವವು. ಸಣ್ಣ ಕೈಗಾರಿಕೆಗಳು ಇಲ್ಲದಿದ್ದರೆ ಬಂಡವಾಳ ಹಾಗು ಕೌಶಲ್ಯದ ಸಂಪನ್ಮೂಲಗಳು ಸರಿಯಾದ ರೀತಿಯಲ್ಲಿ ಉಪಯೋಗವಾಗದೇ ಉಳಿಯುತ್ತಿದ್ದವು.[1] ನಮ್ಮ ಸರಕಾರವು ಸಮತೋಲ ಪ್ರಾದೇಶಿಕ ಅಭಿವೃದ್ಧಿ[2] (Balanced Regional Development)ಯನ್ನು ಸಾಧಿಸಿ ಸಮಗ್ರದೇಶದ ಜೀವನಮಟ್ಟವನ್ನು ಎತ್ತರಿಸುವದಕ್ಕೆ ಕೈಕೊಂಡ ಹಲವಾರು ಯೋಜನೆಗಳಲ್ಲಿ ಕೈಗಾರಿಕೆಗಳ ವಿಕೇಂದ್ರೀಕರಣವು ಅತಿ ಮುಖ್ಯವಾದುದು.

ಚಿಕ್ಕ ಕೈಗಾರಿಕೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸಿದರೆ—ಒಕ್ಕಲುತನದ ಮೇಲಿನ ಹೆಚ್ಚಿನ ಜನಸಂಖ್ಯೆಯ ಭಾರವು ಕಡಿಮೆಯಾಗಿ ಒಕ್ಕಲಿಗನ ಉತ್ಪಾದನಾಶಕ್ತಿಯು ಹೆಚ್ಚುವದು. ಹುಸಿ ನಿರುದ್ಯೋಗಿಗಳಿಗೆ (Disguised Unemployment) ಪೂರ್ಣ ಉದ್ಯೋಗಾವಕಾಶವನ್ನು ಒದಗಿಸಿ—ರಾಷ್ಟ್ರೀಯ ಉತ್ಪನ್ನವನ್ನು ಅಧಿಕಗೊಳಿಸುವದು. ಚಿಕ್ಕ ಕೈಗಾರಿಕೆ

---

1. Industrial Policy Resolution, 30th April, 1956, reprinted in Govt. of India: Second Five Year Plan, 1956, P. 47.
2. Ibid, P. 48.

ಗಳು ಕೇವಲ ಹಿಂದುಳಿದ ರಾಷ್ಟ್ರಗಳಲ್ಲಿ ಅಲ್ಲದೇ ಔದ್ಯೋಗಿಕವಾಗಿ ಮುಂದುವರಿದ ದೇಶವಾದ ಜಪಾನಿನಲ್ಲಿ ಸಹ ಅತಿ ಮುಖ್ಯ ಪಾತ್ರವಹಿಸಿವೆ. ಸಣ್ಣ ಕೈಗಾರಿಕೆಗಳು ಸಾಧಿಸಬಹುದಾದ ಕಾರ್ಯಗಳನ್ನು ನೋಡಿದಾಗ ಅವುಗಳಿಗೆ ಅಗ್ರಪ್ರಾಶಸ್ತ್ಯ ಕೊಡುವದು ಸ್ತುತ್ಯ. ಆದರೆ ಹಣಕಾಸಿನ ಕೊರತೆ, ಆಧುನಿಕ ಉತ್ಪಾದನೆಯ ವಿಧಾನಗಳ ಪರಿಚಯವಿಲ್ಲದಿರುವಿಕೆ, ಮಾರುಕಟ್ಟೆಯ ಮತ್ತು ಆಧುನಿಕ ಯಂತ್ರಗಳ ಬಗ್ಗೆ ಅಜ್ಞಾನ, ತರಬೇತಿಪಡೆದ ಕೆಲಸಗಾರರ ಕೊರತೆ, ಕಾರಖಾನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಅತ್ಯವಶ್ಯವಾದ ಸ್ಥಳದ ಅಭಾವ, ಇವುಗಳಿಂದಾಗಿ ಸಣ್ಣ ಉದ್ದಿಮೆಗಳು ಸಾಧಿಸಬೇಕಾದ ಪ್ರಗತಿಯನ್ನು ಸಾಧಿಸಲಾರವಾಗಿವೆ. ಚಿಕ್ಕ ಕೈಗಾರಿಕೆಗಳು ಶಕ್ತಿಯುತವಾಗಿ, ಆರೋಗ್ಯಕರವಾಗಿ ಮತ್ತು ಸ್ಪರ್ಧಾತ್ಮಕ ಭಾವನೆಯಿಂದ ಬೆಳೆದು ತಮ್ಮ ಕಾಲುಗಳ ಮೇಲೆ ತಾವು ನಿಲ್ಲುವಂತೆ ಮಾಡುವ ಹಲವಾರು ಕಾರ್ಯಕ್ರಮಗಳಲ್ಲಿ ಔದ್ಯಮಿಕ ನೆಲೆಗಳ (Industrial Estates) ಯೋಜನೆಯು ಪ್ರಥಮ ಸ್ಥಾನ ಗಳಿಸಿದೆಯೆನ್ನುವದರಲ್ಲಿ ಅತಿಶಯೋಕ್ತಿಯೇನಿಲ್ಲ.

ಪ್ರಪ್ರಥಮ ಔದ್ಯಮಿಕ ನೆಲೆಯು ೧೮೯೬ರಲ್ಲಿ ಇಂಗ್ಲಂಡ ದೇಶದ ಮ್ಯಾಂಚೆಸ್ಟರ್ ನಗರದ ಟ್ರಾಫರ್ಡ ಪಾರ್ಕಿನಲ್ಲಿ (Trafford Park) ಖಾಸಗಿ ಸಂಸ್ಥೆಯಿಂದ ಸ್ಥಾಪಿತವಾಯಿತು.[3] ಆಮೇಲೆ ೧೮೯೯ ರಲ್ಲಿ ಅಮೇರಿಕೆ ಸಂಯುಕ್ತ ಸಂಸ್ಥಾನದಲ್ಲಿ ಚಿಕ್ಯಾಗೋದ ಹತ್ತಿರ ಒಂದು ನೆಲೆಯೂ, ಅದರಂತೆ ಇಟಲಿಯಲ್ಲಿಯೂ ವಿಶೇಷ ಕಾಯ್ದೆಯ ಪ್ರಕಾರ ೧೯೦೪ರಲ್ಲಿ ಇಂತಹ ಒಂದು ನೆಲೆಯೂ ಸ್ಥಾಪನೆಯಾಯಿತು. ಈ ನೆಲೆಗಳು ೧೯೩೦ರ ಜಾಗತಿಕ ಆರ್ಥಿಕ ಮುಗ್ಗಟ್ಟಿನ ಈಚೆಗೆ ಹೆಚ್ಚಿಗೆ ಜನಪ್ರಿಯವಾದವು. ಹೆಚ್ಚಾಗಿ ಎಲ್ಲ ಮುಂದುವರಿದ ದೇಶಗಳು ಔದ್ಯಮಿಕ ನೆಲೆಗಳ ಸ್ಥಾಪನೆಯನ್ನು ಆರಂಭಿಸಿ ಅವು ಪ್ರತಿಫಲಗಳನ್ನು ಪಡೆಯಹತ್ತಿರುವುವು. ಬೆಳೆಯುತ್ತಿರುವ ದೇಶಗಳಲ್ಲಿ ಔದ್ಯೋಗಿಕ ನೆಲೆಗಳ ಯೋಜನೆಯನ್ನು ಇಷ್ಟು ದೊಡ್ಡ ಪ್ರಮಾಣದಲ್ಲಿ ಕೈಕೊಂಡಿರುವ ಕೀರ್ತಿ ನಮ್ಮ ದೇಶಕ್ಕೆ ಸಲ್ಲುವದು. ನಮ್ಮ ದೇಶದಲ್ಲಿ ಔದ್ಯಮಿಕ ನೆಲೆಗಳು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯ ಸಾಧನಗಳಾಗಿವೆಯೆಂಬುದನ್ನು ಮನಗಂಡದ್ದರಿಂದ ಈ ಕಾರ್ಯಕ್ರಮವು ನಮ್ಮ ಔದ್ಯೋಗಿಕ ಯೋಜನೆಯ ಅವಿಭಾಜ್ಯ ಅಂಗವಾಗಿದೆ. ಈ ಕಾರ್ಯಕ್ರಮವನ್ನು ಪ್ರಥಮ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಸಣ್ಣ ಕೈಗಾರಿಕೆಗಳ ಮಂಡಲಿಯು ೧೯೫೫ರಲ್ಲಿ ರೂಪಿಸಿತು. ೧೯೫೬ರ ಕೈಗಾರಿಕಾನೀತಿಯ ಗೊತ್ತುವಳಿಯಲ್ಲಿ ಸಹ ಔದ್ಯಮಿಕ ನೆಲೆಗಳು ಚಿಕ್ಕ ಕೈಗಾರಿಕೆಗಳ ಬೆಳವಣಿಗೆಯಲ್ಲಿ ಹೇಗೆ ಸಹಾಯವಾಗಬಲ್ಲವೆನ್ನುವದನ್ನು ವಿವರಿ

3. U. N. O.: Establishment of Industrial Estates in Underdeveloped Countries, 1961, P.1.

ಸಿದೆ. ಪ್ರಥಮ ಹಂತದಲ್ಲಿ ದಿಲ್ಲಿಯ ಹತ್ತಿರ ಓಖ್ಲಾ ಮತ್ತು ಅಲಹಾಬಾದದ ಸಮೀಪ ನೈನಿ ಎಂಬ ಸ್ಥಳಗಳಲ್ಲಿ ಒಂದೊಂದು ನೆಲೆಯನ್ನು ಸ್ಥಾಪಿಸಲಾಯಿತು. ದ್ವಿತೀಯ ಹಂತದಲ್ಲಿ ಹಾಗೂ ಬೇರೆ ಬೇರೆ ಯೋಜನೆಗಳಲ್ಲಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಿ ಈ ನೆಲೆಗಳನ್ನು ಸ್ಥಾಪಿಸುವ ಯೋಜನೆಗಳನ್ನೂ ಕೈಕೊಂಡಿತು.

ಕೈಗಾರಿಕಾ ನೆಲೆಗಳನ್ನು ನಿರ್ಮಿಸುವ ಮತ್ತು ಅವುಗಳ ಆಡಳಿತದ ಜವಾಬ್ದಾರಿಯು ರಾಜ್ಯಸರಕಾರಕ್ಕೆ ಸೇರಿದ್ದರೂ ಅವುಗಳಿಗೆ ತಗಲುವ ವೆಚ್ಚವನ್ನು ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಸಾಲರೂಪದಲ್ಲಿ ಒದಗಿಸುವದಾಗಿ ಭರವಸೆಯಿತ್ತಿತ್ತು.[4] ಔದ್ಯಮಿಕನೆಲೆಗಳನ್ನು ದೊಡ್ಡ ನಗರಗಳಲ್ಲಿ ಜನಸಂಖ್ಯೆ ಹೆಚ್ಚಾಗದ ರೀತಿಯಲ್ಲಿ ಸ್ಥಾಪಿಸಬೇಕೆಂದು ಇಲ್ಲವೇ ಗ್ರಾಮಗಳಲ್ಲಿ ಸ್ಥಾಪಿಸಬೇಕೆಂದು ಸಣ್ಣ ಕೈಗಾರಿಕಾ ಸಮಿತಿ(ಕರ್ವೆ ಸಮಿತಿ)ಯು ಒತ್ತಾಯಿಸಿತು.[5] ಚಿಕ್ಕ ಕೈಗಾರಿಕೆಗಳನ್ನು ಸ್ಥಾಪಿಸುವಾಗ ಈ ವಿಷಯವನ್ನು ಇಟ್ಟುಕೊಂಡರೆ ಸಣ್ಣ ಪಟ್ಟಣಗಳ ಸಮೀಪದಲ್ಲಿ ಕೈಗಾರಿಕಾನೆಲೆಗಳನ್ನು ಸ್ಥಾಪಿಸಲು ಅನುಕೂಲವಾಗುವದು.

ರಾಜ್ಯ ಸರಕಾರದ ಯೋಜನೆಗಳು ನಾಲ್ಕು ಪ್ರಕಾರದವಿರುವವು:[6]

(೧) ತಾಂತ್ರಿಕ ಸಹಾಯ ಮತ್ತು ಸಂಶೋಧನಾ ಯೋಜನೆಗಳು, ತರಬೇತಿ ಮತ್ತು ಉತ್ಪತ್ತಿ ಕೇಂದ್ರಗಳು, ಪೊಲಿಟೆಕ್ನಿಕ್‌ಗಳು.

(೨) ಕೈಗಾರಿಕಾ ಸಹಕಾರಿ ಸಂಸ್ಥೆಗಳಾಗಿ ಅಥವಾ ಖಾಸಗಿ ಸಂಸ್ಥೆಗಳಾಗಿ ಪರಿವರ್ತಿಸುವ ದೃಷ್ಟಿಯಿಂದ ಇಲಾಖೆಯಿಂದ ಪ್ರಾರಂಭಿಸಲ್ಪಟ್ಟ ಯೋಜನೆಗಳು.

(೩) ಕೈಗಾರಿಕಾ ಶಾಸನಗಳ ಪ್ರಕಾರ ಒದಗಿಸುವ ಸರಕಾರಿ ಸಹಾಯಕ್ಕನುಸಾರವಾಗಿ ಖಾಸಗಿ ಸಂಸ್ಥೆಗಳಿಗೆ ಸಾಲಗಳು ಮತ್ತು ವ್ಯಾಪಾರ ಲಕ್ಷಣಗಳಿಂದ ಕೂಡಿದ ಉತ್ಪತ್ತಿ ಯೋಜನೆಗಳು.

(೪) ವಿದ್ಯುಚ್ಛಕ್ತಿ ಪೂರೈಕೆ ಯೋಜನೆಗಳು.

ಔದ್ಯಮಿಕ ನೆಲೆಯೆಂದರೇನು?

ಉತ್ತಮವಾದ ಸ್ಥಳಾವಕಾಶವನ್ನು ಬಾಡಿಗೆಯಿಂದ ಒದಗಿಸುವ ಮತ್ತು ಬೇರೆ ಬೇರೆ ಮುಖ್ಯ ಸೌಲಭ್ಯಗಳನ್ನು ಸಣ್ಣ ಸಂಘಟಕದಾರರ ಗುಂಪಿಗೆ ಒದಗಿಸುವ ಪ್ರಯತ್ನವೇ ಔದ್ಯಮಿಕ ನೆಲೆಯೆನ್ನಬಹುದು. "ಒಂದು ವ್ಯಾಪಕ ಯೋಜನೆಯ ಪ್ರಕಾರ ಸಾಮೂಹಿಕ ಔದ್ಯಮಿಕ ಸಂಸ್ಥೆಗಳಿಗೆ ಉಪಯೋಗವಾಗಲೆಂದು ಬೇರೆಬೇರೆಯಾಗಿ ವಿಂಗಡಿಸಲ್ಪಟ್ಟ ಮತ್ತು ಅಭಿವೃದ್ಧಿಪಡಿಸಿದ

4. Government of India : Second Five Year Plan, 1956, P. 453.
5. Ibid, P. 453. 6. Ibid, P. 453.

ಪ್ರದೇಶವೇ ಔದ್ಯೋಗಿಕ ನೆಲೆ. ಈ ಯೋಜನೆಯಲ್ಲಿ ಸಣ್ಣ ಸಂಸ್ಥೆಗಳಿಗೆ ಬೇಕಾಗುವ ಅನುಕೂಲತೆಗಳನ್ನು ವಿವರವಾಗಿ ಅಭ್ಯಸಿಸಿ ಬೀದಿ ಹಾಗು ರಸ್ತೆಗಳು ಸಾರಿಗೆಸೌಲಭ್ಯಗಳು ಮತ್ತು ಹೊಸ ಹೊಸ ಆವಶ್ಯಕತೆಗಳನ್ನು ಪೂರೈಸುವ-ದಲ್ಲದೆ ಕಾರಖಾನೆಗಳಿಗೆ ಬೇಕಾಗುವ ಕಟ್ಟಡಗಳನ್ನು ಮೊದಲೇ ನಿರ್ಮಿಸಿ ಮಾರುವ ಅಥವಾ ಬಾಡಿಗೆ ಕೊಡುವ ವ್ಯವಸ್ಥೆಯೂ ಇರುವದು."[೭] ಇದಕ್ಕಿಂತ ಶ್ರೀ ಪಿ. ಸಿ. ಅಲೆಕ್ಝಾಂಡರರವರ ವ್ಯಾಖ್ಯೆಯು ಔದ್ಯಮಿಕ ನೆಲೆಗಳ ಅರ್ಥವನ್ನು ಸರಿಯಾಗಿ ವಿವರಿಸುವದು. "ನೀರು, ಸಾರಿಗೆ, ವಿದ್ಯುಚ್ಛಕ್ತಿ, ಹಣಕಾಸಿನ ಸಂಸ್ಥೆಗಳು, ಅಂಚೆಕಚೇರಿಗಳು, ಚಹಾದ ಅಂಗಡಿಗಳು, ಪ್ರಥಮ ಚಿಕಿತ್ಸೆ, ತಾಂತ್ರಿಕ ಮಾರ್ಗದರ್ಶನ ಮತ್ತು ಸಾಮಾನ್ಯ ಸೇವೆಸೌಲಭ್ಯಗಳ ವಿಶೇಷ ವ್ಯವಸ್ಥೆಯುಳ್ಳ ಯೋಗ್ಯಸ್ಥಳಗಳಲ್ಲಿ ಮಿತವ್ಯಯದಿಂದ ನಿರ್ಮಿಸಿದ ಕಾರಖಾನೆಗಳ ಗುಂಪಿಗೆ ಔದ್ಯಮಿಕ ನೆಲೆಯೆನ್ನುವರು."[೮]

ಔದ್ಯಮಿಕ ಕ್ಷೇತ್ರಗಳ ಉದ್ದೇಶಗಳು :

(೧) ಚಿಕ್ಕ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಮತ್ತು ಔದ್ಯಮಿಕ ವಿಕೇಂದ್ರೀಕೃತ ಕ್ಷೇತ್ರವನ್ನು ನಿರ್ಮಿಸುವ ಕಾರ್ಯಕ್ರಮಗಳಲ್ಲಿ ಔದ್ಯಮಿಕ ನೆಲೆಗಳ ಸ್ಥಾಪನೆಯು ಅತಿಮುಖ್ಯವಾದುದು.[೯] ಈ ಯೋಜನೆಯನ್ನು ರೂಪಿಸುವಾಗ ಚಿಕ್ಕ ಕೈಗಾರಿಕೆಗಳ ಅಭಿವೃದ್ಧಿಯೂ ಮೂಲೋದ್ದೇಶವಾಗಿತ್ತು. ಪ್ರಗತಿ ಸಾಧಿಸಿದ ತರುವಾಯ ಬೇರೆ ಬೇರೆ ಉದ್ದೇಶಗಳನ್ನು ಈ ಯೋಜನೆಗೆ ಸೇರಿಸಲಾಯಿತು.[೧೦] ಕೆಲಸದಲ್ಲಿ ದಕ್ಷತೆ, ಉತ್ಪತ್ತಿಪ್ರಮಾಣವನ್ನು ಏಕರೀತಿಯಲ್ಲಿರಿಸುವದು, ವಸ್ತು ಮತ್ತು ಸಲಕರಣೆಗಳನ್ನು ಲಾಭದಾಯಕವಾಗಿ ಉಪಯೋಗಿಸುವದು, ಇವುಗಳ ಬಗ್ಗೆ ಬೇಕಾದ ಅನುಕೂಲತೆಗಳನ್ನೊದಗಿಸುವ ದೃಷ್ಟಿಯಿಂದ ಕೈಗಾರಿಕಾನೆಲೆಗಳನ್ನು ಸ್ಥಾಪಿಸಲಾಗಿದೆ. ಅನೇಕ ಸಣ್ಣ ಸಂಸ್ಥೆಗಳಿಗೆ ಉತ್ತಮ ಸ್ಥಳ, ವಿದ್ಯುಚ್ಛಕ್ತಿ, ನೀರು, ಗ್ಯಾಸು, ಹವೆ, ಕಂಪ್ರೆಸ್ಡ್ ಗಾಳಿ, ಕಾವಲು, ರೇಲ್ವೆಸೌಕರ್ಯಗಳನ್ನು ಒದಗಿಸುವದೇ ಈ ನೆಲೆಗಳ ಮುಖ್ಯ ಉದ್ದೇಶವಾಗಿದೆ.[೧೧] ಸಣ್ಣ ಸಂಸ್ಥೆಗಳು ಒಂದಕ್ಕೊಂದು ತೀರ ಸಮೀಪದಲ್ಲಿರುವದರಿಂದ ಬೇರೆ ಸಂಸ್ಥೆಗಳ ವಸ್ತುಗಳನ್ನು ಹಾಗೂ ಸೇವೆಯನ್ನು ಉಪಯೋಗಿಸಲು

---

7. William Bredo: Industrial Estates—Tool for Industrialization 1962, P. 1.
8. P. C. Alexander: Industrial Estates in India, 1963, P. 5.
9. Goveverment of India : Review of the First Five Year Plan. May. 1957, P. 226.
10. P. C. Alexander : Industrial Estates of India, P. 5.
11. Government of India: Second Five Year Plan, 1956, P. 452.

ಅನುಕೂಲವಾಗುವದರಿಂದ ಒಂದರಮೇಲೊಂದು ಅವಲಂಬಿಸಿರುವ ಹಾಗೂ ಪೂರಕ ಸಂಸ್ಥೆಗಳಾಗಿ ಬೆಳವಣಿಗೆಯಾಗುವಲ್ಲಿ ಹೆಚ್ಚು ಅನುಕೂಲವಾಗುವದು.

(೨) ದಟ್ಟ ವಸತಿಯಿಂದ ದೊಡ್ಡ ಪಟ್ಟಣಗಳಲ್ಲಿ ಆಗಬಹುದಾದ ದುಃಸ್ಥಿತಿಗಳನ್ನು ನಿವಾರಿಸಲು ಸಹಾಯಕಾರಿಯಾಗುತ್ತದೆ. ಕೈಗಾರಿಕಾ ನೆಲೆಗಳನ್ನು ಸಣ್ಣ ಪಟ್ಟಣಗಳಲ್ಲಿ ಹಾಗೂ ಹಳ್ಳಿಗಳಲ್ಲಿ ಸ್ಥಾಪಿಸುವದರಿಂದ ಜನರು ಆ ಪಟ್ಟಣಗಳಲ್ಲಿ ಉದ್ಯೋಗಾವಕಾಶವನ್ನು ದೊರಕಿಸುವದರ ಸಲುವಾಗಿ ಹೋಗಿ ನೆಲೆಸುವ ಆವಶ್ಯಕತೆಯಿಲ್ಲ.

(೩) ಆರ್ಥಿಕ ದೃಷ್ಟಿಯಿಂದ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಔದ್ಯಮಿಕ ಅಭಿವೃದ್ಧಿಗೆ ಉತ್ತೇಜನ ಕೊಡುತ್ತದೆ. ಇದರಿಂದ ಪ್ರಾದೇಶಿಕ ಅಭಿವೃದ್ಧಿಗಳಲ್ಲಿಯ ಅಸಮಾನತೆಯನ್ನು ಹೋಗಲಾಡಿಸಲು ಅನುಕೂಲ ವಾಗುವದು. ಆರ್ಥಿಕ ಬೆಳವಣಿಗೆಯ ಪ್ರತಿಫಲವನ್ನು ಎಲ್ಲರಿಗೂ ಸಮಾನವಾಗಿ ಹಂಚಿ ಜೀವನಮಟ್ಟವನ್ನು ಎತ್ತರಿಸುವದರಲ್ಲಿ ಕೈಗಾರಿಕಾನೆಲೆಗಳು ಮುಖ್ಯಪಾತ್ರ ವಹಿಸುವವು. ಇದನ್ನು ಸಾಧಿಸುವದೇ ನಮ್ಮ ಯೋಜನೆಗಳ ಗುರಿಯೂ ಆಗಿದೆ.

(೪) ಭಾರಿ ಉದ್ದಿಮೆಗಳಿಗೆ ಉಪಕೈಗಾರಿಕೆ (Ancillary Industries) ಗಳನ್ನು ಪೂರೈಸುವದರಲ್ಲಿ ಮತ್ತು ವಿದ್ಯಾರ್ಥಿಗಳಿಗೆ ಕೆಲಸದ ಸುಸಂಧಿಗಳನ್ನು ಕಲ್ಪಿಸಿಕೊಡುವಲ್ಲಿ ಈ ನೆಲೆಗಳು ಅತಿ ಉಪಯುಕ್ತವಾಗಿವೆ.

ಮೇಲೆ ವಿವರಿಸಿದ ಗುರಿಗಳನ್ನು ಸಾಧಿಸುವದಿದ್ದರೂ ಭಾರತದಲ್ಲಿ ಔದ್ಯಮಿಕ ನೆಲೆಗಳ ಗುರಿಗಳು ಮುಖ್ಯವಾಗಿ ಎರಡು :[12]

(೧) ಚಿಕ್ಕ ಉದ್ದಿಮೆಗಳ ತೀವ್ರ ಅಭಿವೃದ್ಧಿಗೆ ಸಹಾಯಕಾರಿಯಾಗಬೇಕು ಮತ್ತು (೨) ಆರ್ಥಿಕವಾಗಿ ಹಿಂದುಳಿದ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಔದ್ಯೋಗೀಕರಣಕ್ಕೆ ಬೇಕಾಗುವ ಸೌಲಭ್ಯಗಳನ್ನು ಒದಗಿಸುವದು.

ಮೈಸೂರ ರಾಜ್ಯದಲ್ಲಿಯ ಕೈಗಾರಿಕಾನೆಲೆಗಳ ಪ್ರಗತಿ :

ಇಲ್ಲಿಯವರೆಗೆ ಕೈಗಾರಿಕಾನೆಲೆಗಳ ಅರ್ಥ, ಸ್ಥಾಪಿಸುವ ಉದ್ದೇಶ ಮತ್ತು ದೇಶದ ಜಟಿಲ ಆರ್ಥಿಕ ಸಮಸ್ಯೆಗಳಿಗೆ ಅವು ಒದಗಿಸುವ ಪರಿಹಾರವಿಧಾನ-ಗಳನ್ನು ಪರಿಶೀಲಿಸಿದೆವು. ಈಗ ಇವುಗಳ ಹಿನ್ನೆಲೆಯಲ್ಲಿ ಮೈಸೂರ ರಾಜ್ಯವು ಸಾಧಿಸಿದ ಪ್ರಗತಿಯನ್ನು ವಿಚಾರಿಸೋಣ. ಕೈಗಾರಿಕಾನೆಲೆಗಳನ್ನು ಸ್ಥಾಪಿಸುವ ಮುಖಾಂತರ ಚಿಕ್ಕ ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸುವ ಭಾರತ

12. P. C. Alexander: Industrial Estates in India, P. 8.

ಸರಕಾರದ ಮುಖ್ಯ ಧೋರಣೆಯನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆ ತರಲಾಯಿತು. ಇದರ ಸಲುವಾಗಿ ೧೦ ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಯಿತು. ಈ ನೀತಿಗನುಸಾರವಾಗಿ ಬೇರೆ ಬೇರೆ ರಾಜ್ಯ ಸರಕಾರಗಳು ತಮ್ಮ ಧೋರಣೆಗಳನ್ನು ಪ್ರಕಟಪಡಿಸಿದವು. ಮೈಸೂರ ರಾಜ್ಯವು ಸಹ ತನ್ನ ನೀತಿಯನ್ನು ಪ್ರಕಟಪಡಿಸಿ ಕೈಗಾರಿಕಾನೆಲೆಗಳನ್ನು ಸ್ಥಾಪಿಸುವದಕ್ಕೆ ೬೩ ಲಕ್ಷ ರೂಪಾಯಿಗಳನ್ನು ಕೆಳಗಿನ ಕೋಷ್ಟಕದಲ್ಲಿ ತೋರಿಸಿದಂತೆ ಖರ್ಚುಮಾಡಲು ಯೋಜಿಸಿತು.

ಕೋಷ್ಟಕ ೧

ಅ.ಸಂಖ್ಯೆ	ಕೈಗಾರಿಕಾನೆಲೆಯ ಸ್ಥಳ	ವೆಚ್ಚಮಾಡಲು ಯೋಜಿಸಿದ ಹಣ (ಲಕ್ಷದಲ್ಲಿ)
೧	ಮೈಸೂರು	೧೪·೫೦
೨	ಹರಿಹರ	೧೫·೫೦
೩	ಬೆಂಗಳೂರು	೧೦·೦೦
೪	ಬೆಳಗಾಂವ	—
೫	ಗುಲಬಗಾರ್	೫·೦೦
೬	ಹುಬ್ಬಳ್ಳಿ	೧೦·೦೦
೭	ರಾಮನಗರಮ್	೩·೦೦
೮	ಮಂಗಳೂರು	೫·೦೦
		ಒಟ್ಟು ೬೩·೦೦

Source : Government of Mysore Second Five Year Plan (1956-57 to 1960-61), P. 220.

ಈ ಒಟ್ಟು ಹಣವನ್ನು ಕೇಂದ್ರ ಸರಕಾರವು ರಾಜ್ಯಸರಕಾರಕ್ಕೆ ದೀರ್ಘಾವಧಿ ಸಾಲದ ರೂಪದಲ್ಲಿ ಒದಗಿಸಿತು. ಮೊದಲು ರಾಜ್ಯಸರಕಾರವು ಬೆಂಗಳೂರಿನಲ್ಲಿ ೫೦ ಲಕ್ಷ ರೂ.ಗಳ ವೆಚ್ಚದ ನೆಲೆಯನ್ನು ಸ್ಥಾಪಿಸಲು ಯೋಜಿಸಿತ್ತು. ಆದರೆ ಹಣದ ಅಭಾವದ ಮೂಲಕ ಮೊದಲನೇ ಹಂತದಲ್ಲಿ ಕೇವಲ ೧೦ ಲಕ್ಷ ರೂ.ಗಳನ್ನು ವೆಚ್ಚಮಾಡಲು ನಿರ್ಧರಿಸಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೬೩ ಲಕ್ಷ ರೂ.ಗಳನ್ನು ಕೆಳಗಿನಂತೆ ಖರ್ಚು ಮಾಡಲು ಯೋಜಿಸಿತು.

ಕೋಷ್ಟಕ ೨

ಯೋಜನೆಯ ವರ್ಷ	ಹಣದ ಮೊತ್ತ (ರೂ. ಲಕ್ಷದಲ್ಲಿ)
೧೯೫೬–೫೭	೭•೫೩
೧೯೫೭–೫೮	೨೦.೭೨
೧೯೫೮–೫೯	೨೫•೨೫
೧೯೫೯–೬೦	೪•೭೫
೧೯೬೦–೬೧	೪•೭೫
ಒಟ್ಟು	೬೩•೦೦

Source : Government of Mysore: Second Five year Plan, P. 227.

ತೃತೀಯ ಪಂಚವಾರ್ಷಿಕ ಯೋಜನೆಯನ್ನು ರೂಪಿಸುವ ವೇಳೆಗೆ ರಾಜ್ಯ ಸರಕಾರವು ಕೆಳಗಿನ ಕೋಷ್ಟಕದಲ್ಲಿ ವಿವರಿಸಿದಂತೆ ನೆಲೆಗಳು ಪೂರ್ಣವಾಗಿ ಪ್ರತಿಯೊಂದು ನೆಲೆಗಳಲ್ಲಿ ಅವುಗಳ ಮುಂದೆ ತೋರಿಸಿದಷ್ಟು ಶೆಡ್ಡುಗಳನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯ ಕೊನೆಗೆ ನಿರ್ಮಿಸಬಹುದೆಂಬ ಆಶೆಯನ್ನು ಹೊಂದಿತ್ತು.

ಕೋಷ್ಟಕ ೩

ಅ. ಸಂ.	ಕೈ. ನೆಲೆಯ ಹೆಸರು	ಕ್ಷೇತ್ರ (ಎ.ಗು.)	ಒಟ್ಟು ಶೆಡ್ಡುಗಳು	ಶೆಡ್ಡುಗಳ ಪ್ರಕಾರ* A	B	C	D	E	MF	ಅಂದಾಜು ಮಾಡಿದ ವೆಚ್ಚ ರೂ. ಲಕ್ಷದಲ್ಲಿ
೧	೨	೩	೪	೫	೬	೭	೮	೯	೧೦	೧೧
೧	ಬೆಂಗಳೂರು	೪೩.೦೦	೪೯	೫	೧೨	೨೪	೮	–	–	೨೩.೦೦
೨	ಮೈಸೂರು	೨೦.೦೦	೧೬	–	–	–	೪	–	೧೨	೭•೧೬
೩	ಹುಬ್ಬಳ್ಳಿ	೮೬•೮೦	೨೨	–	೬	೮	೮	–	–	೭•೯೫
೪	ಹರಿಹರ	೧೮•೩೨	೧೪	–	೬	೪	೪	–	–	೬•೭೯
೫	ಬೆಳಗಾಂವ	೪೭•೩೫	೧೪	–	೬	೪	೪	–	–	೫•೯೩
೬	ಮಂಗಳೂರು	೧೭•೩೧	೧೨	–	–	೮	೪	–	–	೫•೫೬
೭	ರಾಮನಗರಮ್	೫•೯೦	೧೬	–	–	–	–	೧೬	–	೨•೭೦
೮	ಗುಲಬರ್ಗಾ	೨೦.೦೧	೧೬	–	–	೮	೮	–	–	೪•೬೦

* ವಿವಿಧ ಶೆಡ್ಡುಗಳ ಕ್ಷೇತ್ರದ ವಿವರಣೆಯನ್ನು ೮ನೇ ಕೋಷ್ಟಕದಲ್ಲಿ ವಿವರಿಸಿದೆ.

Source : Government of Mysore: Second Five year Plan, P. 227.

ಮೇಲಿನ ಕೋಷ್ಟಕದಲ್ಲಿ ವಿವರಿಸಿದಂತೆ ಒಟ್ಟು ೬೩·೬೯ ಲಕ್ಷ ರೂ.ಗಳ ವೆಚ್ಚದಿಂದ ೮ ನೆಲೆಗಳಲ್ಲಿ ೧೫೯ ಶೆಡ್ಡುಗಳು ತಯಾರಾಗಬಹುದೆಂಬ ಆಶೆಯಿಂದ ತೃತೀಯ ಯೋಜನೆಯಲ್ಲಿ ೧೨೫ ಲಕ್ಷ ರೂ.ಗಳನ್ನು ಖರ್ಚುಮಾಡಿ ೩೦ ಹೊಸ ನೆಲೆಗಳಲ್ಲಿ ಒಟ್ಟು ೫೦೦ ಶೆಡ್ಡುಗಳನ್ನು ನಿರ್ಮಿಸುವ ಯೋಜನೆಯನ್ನಿಟ್ಟು ಕೊಂಡಿತ್ತು.[೧೩] ಆಮೇಲೆ ೫೦೦ ಶೆಡ್ಡುಗಳನ್ನು ನಿರ್ಮಿಸುವ ಗುರಿಯನ್ನು ೩೦೦ಕ್ಕೆ ಇಳಿಸಲಾಯಿತು. ಆದರೆ ೧೯೬೦–೬೧ರ ವೇಳೆಗೆ ನಿಜವಾಗಿ ರಾಜ್ಯದ ೮ ಕೈಗಾರಿಕಾನೆಲೆಗಳಲ್ಲಿ ೫೦.೮೦ ಲಕ್ಷ ರೂ.ಗಳನ್ನು ವೆಚ್ಚಮಾಡಿ ಕೆಳಗಿನಂತೆ ಕೇವಲ ೧೨೭ ಶೆಡ್ಡುಗಳನ್ನಷ್ಟೇ ನಿರ್ಮಿಸಲಾಗಿತ್ತು.

ಕೋಷ್ಟಕ ೪

ಅ. ಸಂಖ್ಯೆ	ನೆಲೆಯ ಸ್ಥಳ	ಶೆಡ್ಡುಗಳ ಸಂಖ್ಯೆ
೧	ಬೆಂಗಳೂರು	೪೯
೨	ಮೈಸೂರು	೧೬
೩	ಹುಬ್ಬಳ್ಳಿ	೨೨
೪	ಹರಿಹರ	೧೪
೫	ಬೆಳಗಾಂವ	೧೪
೬	ರಾಮನಗರಮ್	೪
೭	ಮಂಗಳೂರು	೮
೮	ಗುಲಬರ್ಗಾ	—
		ಒಟ್ಟು ೧೨೭

Source : Govt. of Mysore Third Five Year Plan—Programme for 1964-65, P. 178.

೧೯೬೪–೬೫ರ ವಾರ್ಷಿಕ ಯೋಜನೆಯಲ್ಲಿ ಗೋಕಾಕ, ಕಡೂರ, ಚಿತ್ರ-ದುರ್ಗ, ಶಹಬಾದ, ನಾಗಮಂಗಲ, ಹೊಸಪೇಟೆ, ಬೀದರ, ವಿರಾಜಪೇಟೆ, ಹಾಸನ, ಕೊಪ್ಪಳ, ಶಿವಮೊಗ್ಗಾ, ಕಾರವಾರ, ಗದಗ, ತುಮಕೂರು, ಮಂಡ್ಯ ಗಳಲ್ಲಿ ನೆಲೆಗಳನ್ನು ಸ್ಥಾಪಿಸಿ ತುಮಕೂರು ಮತ್ತು ಮಂಡ್ಯಗಳನ್ನುಳಿದು ಉಳಿದ ಪ್ರತಿಯೊಂದು ನೆಲೆಗಳಲ್ಲಿ ೭ರಂತೆ ಶೆಡ್ಡುಗಳನ್ನು ನಿರ್ಮಿಸುವದಾಗಿ ಯೋಜಿಸಿತು. ೧೯೬೧–೬೨ರಿಂದ ೧೯೬೩–೬೪ರ ವರೆಗಿನ ಅವಧಿಯಲ್ಲಿ ರಾಮ-ನಗರಮ್ (೧೨), ಬೆಂಗಳೂರು (೨೬), ಗುಲಬರ್ಗಾ (೧೬) ಮತ್ತು ಮಂಗ-ಳೂರಿನಲ್ಲಿ (೪), ಒಟ್ಟು ೫೮ ಶೆಡ್ಡುಗಳನ್ನು ನಿರ್ಮಿಸಲಾಯಿತು.

ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿಯೊಂದು ಜಿಲ್ಲೆಗೆ ಎರಡರಂತೆ—ಒಂದು ಜಿಲ್ಲೆಯ ಮುಖ್ಯ ಕಚೇರಿಯಿದ್ದ (Head-quarters)

---

13. Government of Mysore: Third Five Year Plan, Vol. No. II. Pp. 233 and 249.

ಸ್ಥಳದಲ್ಲಿ ಮತ್ತೊಂದನ್ನು ಆರಿಸಲ್ಪಟ್ಟ ಸಣ್ಣ ನಗರದಲ್ಲಿ ಅಥವಾ ತೀರ ಒಳ ಪ್ರದೇಶದಲ್ಲಿ—ಸ್ಥಾಪಿಸುವ ಧೋರಣೆಯನ್ನು ವ್ಯಕ್ತಪಡಿಸಿತು.[೧೪] ತೃತೀಯ ಪಂಚವಾರ್ಷಿಕ ಯೋಜನೆಯ ಕೊನೆಯ ವೇಳೆಯಲ್ಲಿ ಒಟ್ಟು ೩೮ ನೆಲೆಗಳು ಪೂರ್ಣವಾಗಬಹುದೆಂಬ ಗುರಿಯನ್ನು ಹೊಂದಿತ್ತು. ಆದರೆ ಯೋಗ್ಯವಾದ ಭೂಮಿಯನ್ನು ದೊರಕಿಸಲು ಹಾಗೂ ಸಾಕಷ್ಟು ಹಣಕಾಸಿನ ವ್ಯವಸ್ಥೆಯಾಗದ ತೊಂದರೆಗಳಿಗಾಗಿ ಕೇವಲ ವಿಜಾಪುರ, ಜಮಖಂಡಿ, ಶಿರಾಳಕೊಪ್ಪ, ಚಿಕ್ಕಮಗಳೂರು, ದಾಂಡೇಲಿ, ತುಮಕೂರು. ಕೆ. ಜಿ. ಎಫ್., ಬಳ್ಳಾರಿ, ಮರ್ಕೆರಾ ಮತ್ತು ಶಿವಮೊಗ್ಗ ಈ ಹತ್ತು ಹೊಸ ನೆಲೆಗಳಲ್ಲಿ ಪ್ರತಿಯೊಂದರಲ್ಲಿ ೬ ಶೆಡ್ಡುಗಳನ್ನು ನಿರ್ಮಿಸುವ ಕೆಲಸವನ್ನು ಕೈಗೊಳ್ಳಲಾಯಿತು. ಆದರೆ ತೃತೀಯ ಪಂಚವಾರ್ಷಿಕ ಯೋಜನೆಯ ಕೊನೆಗೆ ಒಟ್ಟು ೭೦·೧೦ ಲಕ್ಷ ರೂ.ಗಳನ್ನು ವೆಚ್ಚ ಮಾಡಿ ವಿಜಾಪುರ, ಜಮಖಂಡಿ, ಶಿರಾಳಕೊಪ್ಪ ಮತ್ತು ಮರ್ಕೆರಾಗಳಲ್ಲಿ ಮಾತ್ರ ಹೊಸ ನೆಲೆಗಳನ್ನು ಸ್ಥಾಪಿಸುವದರ ಜೊತೆಗೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸ್ಥಾಪಿಸಿದ ೮ ನೆಲೆಗಳಲ್ಲಿ ಸುಮಾರು ೬೫ ಶೆಡ್ಡುಗಳನ್ನು ಪೂರ್ಣಗೊಳಿಸಲಾಯಿತು. ಈ ಪ್ರಕಾರ ತೃತೀಯ ಯೋಜನೆಯ ಅಂತ್ಯದಲ್ಲಿ ನೆಲೆಗಳ ಸಂಖ್ಯೆ ೧೨ಕ್ಕೆ ಮತ್ತು ಇವುಗಳಲ್ಲಿ ನಿರ್ಮಿಸಿದ ಶೆಡ್ಡುಗಳ ಸಂಖ್ಯೆ ಕೆಳಗೆ ವಿವರಿಸಿದಂತೆ ೨೧೬ಕ್ಕೇರಿತು.

ಕೋಷ್ಟಕ ೫

ಅ. ಸಂಖ್ಯೆ	ನೆಲೆಯ ಸ್ಥಳ	ಪೂರ್ಣಗೊಳಿಸಿದ ಶೆಡ್ಡುಗಳ ಸಂಖ್ಯೆ
೧	ಬೆಂಗಳೂರು	೮೧
೨	ಬೆಳಗಾಂವ	೧೪
೩	ವಿಜಾಪುರ	೬
೪	ಗುಲಬರ್ಗಾ	೧೬
೫	ಹರಿಹರ	೧೪
೬	ಹುಬ್ಬಳ್ಳಿ	೨೩
೭	ಜಮಖಂಡಿ	೬
೮	ಮಂಗಳೂರು	೧೨
೯	ಮರ್ಕೆರಾ	೬
೧೦	ಮೈಸೂರು	೧೬
೧೧	ರಾಮನಗರಮ್	೧೬
೧೨	ಶಿರಾಳಕೊಪ್ಪ	೬
	ಒಟ್ಟು	೨೧೬

Source: A. P. Appanna: "Government Impetus to Small Industries" in Industrial Mysore, Deccan Herald Special Number, 1969, P. 5.

14. Government of Mysore: Third Five Year Plan: Programme for 1964–65, P. 152.

೧೯೬೬–೬೭ ರ ವಾರ್ಷಿಕ ಯೋಜನೆಯಲ್ಲಿ ೧೮·೩೫ ಲಕ್ಷ ರೂ. ವೆಚ್ಚ ಮಾಡಿ ತುಮಕೂರು, ಕೆ.ಜಿ.ಎಫ್., ಬೆಳಗಾಂವ ಮತ್ತು ದಾಂಡೇಲಿ ನೆಲೆಗಳಲ್ಲಿ ಪ್ರತಿಯೊಂದರಲ್ಲಿ ೬ರಂತೆ ಹಾಗೂ ಬೆಂಗಳೂರಿನಲ್ಲಿ ೬, ಹೀಗೆ ಒಟ್ಟು ೩೦ ಶೆಡ್ಡುಗಳನ್ನು ನಿರ್ಮಿಸಲಾಯಿತು.

೧೯೬೭–೬೮ರ ಯೋಜನೆಯಲ್ಲಿ ೧೫·೨೨ ಲಕ್ಷ ರೂ.ಗಳ ವೆಚ್ಚದಲ್ಲಿ ಬೀದರ (೬), ಚಿಕ್ಕಮಗಳೂರ (೬), ಬೆಂಗಳೂರು (೧೦), ಮರ್ಕೆರಾ (೨), ಮಂಗಳೂರು ಮತ್ತು ಹರಿಹರಗಳಲ್ಲಿ ಒಂದೊಂದರಂತೆ ಒಟ್ಟು ೨೬ ಶೆಡ್ಡುಗಳನ್ನು ನಿರ್ಮಿಸಲಾಯಿತು.

೧೯೬೮–೬೯ ರಲ್ಲಿ ೧೬ ಲಕ್ಷ ರೂ.ಗಳನ್ನು ಖರ್ಚು ಮಾಡಬೇಕೆಂದು ಅಂದಾಜು ಮಾಡಲಾಗಿತ್ತು. ಈ ಅವಧಿಯಲ್ಲಿ ಪ್ರತಿಯೊಂದು ಜಿಲ್ಲೆಗೆ ಎರಡು ಕೈಗಾರಿಕಾನೆಲೆಗಳು ಮತ್ತು ಒಂದು ಔದ್ಯಮಿಕ ಅಭಿವೃದ್ಧಿ ಕ್ಷೇತ್ರ (Industrial Development Area)ವನ್ನು ನಿರ್ಮಿಸುವದರ ಜೊತೆಗೆ ಅಪೂರ್ಣಗೊಳಿಸಿದ ನೆಲೆಗಳ ಕಾರ್ಯವನ್ನು ಪೂರ್ಣಗೊಳಿಸುವದಾಗಿ ನಿರ್ಧರಿಸಿತು. ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ಶೆಡ್ಡುಗಳಿಲ್ಲದ ಅಭಿವೃದ್ಧಿ ಕ್ಷೇತ್ರಗಳನ್ನು ಮೊದಲ ಹಂತದಲ್ಲಿ ನಿರ್ಮಿಸಿ ಸಣ್ಣ ಸಂಸ್ಥೆಗಳಿಗೆ ಪ್ಲಾಟುಗಳು, ಸಾರಿಗೆಸಂಪರ್ಕ, ಒಳಚರಂಡಿ, ನೀರು ಮತ್ತು ವಿದ್ಯುಚ್ಛಕ್ತಿ ಸೌಲಭ್ಯಗಳನ್ನೂ ಒದಗಿಸುವ ಹಾಗೂ ಇಂಥ ಕ್ಷೇತ್ರಗಳಲ್ಲಿ ಶೆಡ್ಡುಗಳಿಗೆ ಹೆಚ್ಚಿನ ಬೇಡಿಕೆ ಬಂದಲ್ಲಿ ರಾಜ್ಯಸರಕಾರವು ನಿರ್ಮಿಸುವದಾಗಿ ಆಲೋಚಿಸಿದೆ.

ಕೋಷ್ಟಕ ೬

ಅ. ಸಂ.	ಜಿಲ್ಹೆ	ಅಭಿವೃದ್ಧಿ ಕ್ಷೇತ್ರಕ್ಕೆ ಸ್ಥಳ	ಶರಾ
೧	ಬಳ್ಳಾರಿ	ಹೊಸಪೇಟೆ	ಔದ್ಯಮಿಕ ಅಭಿವೃದ್ಧಿಪಡಿಸಿದ ಕ್ಷೇತ್ರವೆಂದು ಮುಂದುವರೆಯುವದು
೨	ವಿಜಾಪುರ	ಬಾಗಲಕೋಟೆ	,,
೩	ಧಾರವಾಡ	ಗದಗ	,,
೪	ಹಾಸನ	ಹಾಸನ	,,
೫	ಮಂಡ್ಯ	ಮಂಡ್ಯ	,,
೬	ಮೈಸೂರು	ಕೊಳ್ಳೇಗಾಲ	,,
೭	ಉತ್ತರ ಕೆನರಾ	ಕಾರವಾರ	,,
		ಶಿರಸಿ	,,
೮	ರಾಯಚೂರು	ರಾಯಚೂರು	,,
		ಲಿಂಗಸೂಗೂರು	,,

Source: Government of Mysore: Fourth Five Year Plan– A Draft Outline, 1969-74, P. 118.

ಬೆಂಗಳೂರು, ಬೆಳಗಾಂವ ಮತ್ತು ಹುಬ್ಬಳ್ಳಿಗಳಲ್ಲಿ ಶೆಡ್ಡುಗಳಿಗೆ ವಿಪರೀತ ಬೇಡಿಕೆಯಿರುವದರಿಂದ ಬೆಂಗಳೂರಿನಲ್ಲಿ ಹೊಸದಾಗಿ ಮತ್ತೊಂದು ನೆಲೆಯನ್ನೂ ಹಾಗೂ ಹುಬ್ಬಳ್ಳಿ ಮತ್ತು ಬೆಳಗಾಂವಗಳಲ್ಲಿ ಹೆಚ್ಚಿಗೆ ಶೆಡ್ಡುಗಳನ್ನೂ ನಿರ್ಮಿಸುವ ವಿಚಾರವು ಸರಕಾರದ ತೀವ್ರಪರಿಶೀಲನೆಯಲ್ಲಿದೆ. ಚತುರ್ಥ ಪಂಚವಾರ್ಷಿಕ ಯೋಜನೆಯು ಕರಡಿನ ಪ್ರಕಾರ ೧೯೬೯–೭೪ರ ಅವಧಿಯಲ್ಲಿ ಕೈಗಾರಿಕಾನೆಲೆಗಳ ಸ್ಥಾಪನೆಗೆ ಹಾಗೂ ಅಪೂರ್ಣವಾದವುಗಳನ್ನು ಪೂರ್ಣಗೊಳಿಸಿ ಆವಶ್ಯಕ ಸೌಲಭ್ಯಗಳನ್ನು ಪೂರೈಸುವದರ ಸಲುವಾಗಿ ೧೭೫ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಬೇಕೆಂದು ಯೋಜಿಸಿತ್ತು. ಇತ್ತೀಚೆಗೆ ಕಾರ್ಯಪ್ರೇರಕ ನೆಲೆಗಳು (Functional Estates) ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿರುವದರಿಂದ ಬೆಂಗಳೂರು, ಭದ್ರಾವತಿ, ಬೆಳಗಾಂವ ಅಥವಾ ಹುಬ್ಬಳ್ಳಿ, ಹರಿಹರ ಅಥವಾ ದಾವಣಗೇರಿ ಮತ್ತು ಕೂರ್ಗಗಳಲ್ಲಿ ಒಂದರಂತೆ ಕಾರ್ಯಪ್ರೇರಕ ನೆಲೆಗಳನ್ನು ೪೦ ಲಕ್ಷ ರೂ.ಗಳ ವೆಚ್ಚದಿಂದ ನಿರ್ಮಿಸಿ ಪ್ರತಿಯೊಂದು ೧೫ ರಿಂದ ೨೦ ಶೆಡ್ಡುಗಳನ್ನು ಹೊಂದಿರುವದರ ಜೊತೆಗೆ ಆಡಳಿತ ಕಚೇರಿ, ಸಾಮಾನ್ಯ ಸೌಲಭ್ಯ ಕೇಂದ್ರಗಳು ಮತ್ತು ಅಂಚೆಕಚೇರಿಗಳ ವ್ಯವಸ್ಥೆಯನ್ನೂ ಕಲ್ಪಿಸಿಕೊಡಲು ನಿರ್ಧರಿಸಿದೆ. ಚತುರ್ಥ ಯೋಜನೆಯಲ್ಲಿ ಹಣಕಾಸಿನ ತೊಂದರೆಯಾಗಬಹುದೆಂಬ ವಿಚಾರದಿಂದ ಒಟ್ಟು ಮೊತ್ತವನ್ನು ೧೪೦ ಲಕ್ಷ ರೂ.ಗಳಿಗೆ ಇಳಿಸಿ ಕೆಳಗಿನಂತೆ ಖರ್ಚುಮಾಡಲು ಯೋಜಿಸಿದೆ.

ಕೋಷ್ಟಕ ೭

ಅ. ಸಂಖ್ಯೆ	ಖರ್ಚುಮಾಡುವ ವಿವರ	ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)
೧	ಹಿಂದಿನ ಯೋಜನೆಗಳಲ್ಲಿ ಅಪೂರ್ಣವಾದ ನೆಲೆಗಳನ್ನು ಪೂರ್ತಿಗೊಳಿಸುವದು.	೧೫·೦೦
೨	ಪೂರ್ತಿಯಾದ ಕ್ಷೇತ್ರಗಳಲ್ಲಿ ಆವಶ್ಯಕ ಸೌಲಭ್ಯಗಳನ್ನು ಒದಗಿಸುವದು.	೧೦·೦೦
೩	ಪೂರ್ತಿಯಾದ ನೆಲೆಗಳಲ್ಲಿ ಹೆಚ್ಚಿನ ಶೆಡ್ಡುಗಳನ್ನು ನಿರ್ಮಿಸುವದು.	೧೦·೦೦
೪	ಭೂಮಿಯನ್ನು ಖರೀದಿಮಾಡಲು ಮತ್ತು ಹೊಸ ಅಭಿವೃದ್ಧಿ ಕ್ಷೇತ್ರಗಳದ್ದು ನಿರ್ಮಿಸಲು ಕಾರ್ಯ-ಪ್ರೇರಕ ನೆಲೆಗಳಿಗಾಗಿ ಭೂಮಿಯನ್ನು ಕೊಳ್ಳುವದು.	೩೩·೦೦
೫	ಬೆಂಗಳೂರಿನಲ್ಲಿ ೫೦ ಶೆಡ್ಡುಗಳುಳ್ಳ ಮತ್ತೊಂದು ನೆಲೆಯನ್ನು ಸ್ಥಾಪಿಸುವದು.	೫೦·೦೦
೬	ಕೈಗಾರಿಕಾ ನೆಲೆಗಳಲ್ಲಿ ಸಾಧನ ಸಲಕರಣೆಗಳಿಗಾಗಿ ಕೋಣೆಗಳನ್ನು ಒದಗಿಸುವದು.	೨೦·೦೦
	ಒಟ್ಟು	೧೪೦·೦೦

Source : A. P. Appanna : " Government Impetus to Small Industries in Industrial Mysore, Deccan Hearld Special Number, 1960, P. 5.

ಕೋಷ್ಟಕ ೮

ನೆಲೆಗಳ ಹೆಸರು, ಕ್ಷೇತ್ರ ಮತ್ತು ಬೇರೆ ಬೇರೆ ಪ್ರಕಾರದ ಶೆಡ್ಡುಗಳು

ಅ. ನಂ.	ಕೈಗಾರಿಕಾ ನೆಲೆಯ ಹೆಸರು	ಪ್ರದೇಶ ಎ. ಗುಂ.	ಕ್ಷೇತ್ರ ಹಾಗೂ ಪ್ರತಿಯೊಂದು ನೆಲೆಯಲ್ಲಿಯ ಶೆಡ್ಡುಗಳ ಸಂಖ್ಯೆ												
			ಒಟ್ಟು ಶೆಡ್ಡುಗಳು	'A' type	'B' type	'C' type	'D' type	'E' type	'F' type	'MF' type	'G' type	'A' Super type	'B' Super type	'D' Super type	Special type
೧	೨	೩	೪	೫	೬	೭	೮	೯	೧೦	೧೧	೧೨	೧೩	೧೪	೧೫	೧೬
೧	ಬೆಂಗಳೂರು	೪೪·೦೦	೧೦೫	೧೧	೨೪	೨೬	೮	—	೧೬	—	—	೪	೨	೧೪	—
೨	ಹುಬ್ಬಳ್ಳಿ	೭೩·೦೦	೨೩	—	೬	೮	೯	—	—	—	—	—	—	—	೧
೩	ಬೆಳಗಾಂವ	೪೭·೩೫	೧೪	—	೬	೪	೪	—	—	—	—	—	—	—	—
೪	ಮಂಗಳೂರು	೧೭·೦೫	೧೩	—	—	೯	೪	—	—	—	—	—	—	—	—
೫	ಮೈಸೂರು	೧೭·೦೦	೧೬	—	—	—	೪	—	—	೧೨	—	—	—	—	—
೬	ರಾಮನಗರಮ್	೫·೦೨	೧೬	—	—	—	—	೧೬	—	—	—	—	—	—	—
೭	ಗುಲಬರ್ಗಾ	೨೦·೦೧	೧೬	—	—	೮	೮	—	—	—	—	—	—	—	—
೮	ಹರಿಹರ	೧೮·೩೨	೧೫	—	೬	೪	೪	—	—	—	—	—	—	—	೧
೯	ಮರ್ಕರಾ	೪·೦೭	೮	—	—	೪	೪	—	—	—					
೧೦	ವಿಜಾಪುರ	೧೯·೦೨	೬	—	—	೨	೪	—	—	—					
೧೧	ಜಮಖಂಡಿ	೧೯·೦೦	೬	—	—	—	—	—	—	೬					
೧೨	ತುಮಕೂರು	೧೫·೦೮	೬	—	—	೨	೪	—	—	—					
೧೩	ಕೆ.ಜಿ.ಎಫ್.	೧೫·೦೦	೬	—	—	೨	೪	—	—	—					
೧೪	ಬೀದರ	೧೧.೦೯	೬	—	—	೨	೪	—	—	—					
೧೫	ಬಳ್ಳಾರಿ	೨೦·೦೦	೬	—	—	೨	೪	—	—	—					
೧೬	ಚಿಕ್ಕಮಗಳೂರು	೧೨·೦೦	೬	—	—	೨	೪	—	—	—					
೧೭	ಕಡೂರು	೧೦·೦೦	೬	—	—	೨	೪	—	—	—					
೧೮	ಶಿವಮೊಗ್ಗಾ	೩೦·೦೦	೬	—	—	೨	೪	—	—	—					
೧೯	ಶಿರಾಳಕೊಪ್ಪ	೫·೦೦	೬	—	—	೨	೪	—	—	—					
೨೦	ದಾಂಡೇಲಿ	೧೯·೦೦	೬	—	—	೨	೪								
೨೧	ಶಿರಾ	೩·೯೧	೪	—	—	—	೪								

ಶೆಡ್ಡಿನ ಪ್ರಕಾರ	ಶೆಡ್ಡುಗಳ ಕ್ಷೇತ್ರ (ಚ. ಫೂಟುಗಳಲ್ಲಿ) ಉಪಯೋಗಿಸಿದ ಕ್ಷೇತ್ರ	ಕೆಲಸದ ಸಲುವಾಗಿ ಬಯಲು ಜಾಗೆ
A	೪೭೫೦	೪೦೦೦
B	೨೪೮೦	೨೪೦೦
C	೧೫೦೦	೧೨೦೦
D	೭೫೦	೧೦೫೦
E	೯೦೦	೨೩೦
F	೨೪೩೩	೧೨೩೦
G	೧೫೦೦	೧೦೫೦
MF	೧೫೦೦	೧೦೫೬
A Super	೫೬೬೮	೪೦೦೦
B Super	೨೬೦೦	೭೦೭೧
D Super	೪೭೯	೬೫೪

Source : L. N. Sampathkumar : A Review of Industrial Estates, Deccan

ಮೇಲಿನ ಕೋಷ್ಟಕವು ಇಲ್ಲಿಯವರೆಗೆ ಸಾಧಿಸಿದ ಪ್ರಗತಿನೋಟವನ್ನು ವಿವರಿಸುವದು. ಈ ೨೧ ಔದ್ಯಮಿಕ ನೆಲೆಗಳಲ್ಲಿ ಒಟ್ಟು ೨೯೬ ಶೆಡ್ಡುಗಳನ್ನು ಹಾಗೂ ೨೧೯ ಅಭಿವೃದ್ಧಿಪಡಿಸಿದ ಔದ್ಯಮಿಕ ಪ್ಲಾಟು (Developed Industrial plots)ಗಳನ್ನು ನಿರ್ಮಿಸಲಾಗಿದೆ. ಬೆಂಗಳೂರಿನ ನೆಲೆಯು ಒಟ್ಟು ಕ್ಷೇತ್ರವು ಹುಬ್ಬಳ್ಳಿ ಹಾಗೂ ಬೆಳಗಾಂವ ನಗರಗಳಲ್ಲಿಯ ನೆಲೆಯ ಕ್ಷೇತ್ರಕ್ಕಿಂತ ಕಡಿಮೆಯಿದ್ದರೂ ಶೆಡ್ಡುಗಳಿಗೆ ಹೆಚ್ಚಿನ ಬೇಡಿಕೆಯಿರುವದರಿಂದ ಅತಿ ಮಿತವ್ಯಯದಿಂದ ಅಲ್ಲಿ ಒಟ್ಟು ೧೦೫ ಶೆಡ್ಡುಗಳನ್ನು ನಿರ್ಮಿಸಲಾಗಿದೆ. ಬೆಂಗಳೂರಿನ ತರುವಾಯ ಹೆಚ್ಚು ಅಭಿವೃದ್ಧಿಪಟ್ಟ ನೆಲೆಯೆಂದರೆ ಹುಬ್ಬಳ್ಳಿಯದು. ಅನಂತರದಲ್ಲಿ ಮೈಸೂರು, ರಾಮನಗರಮ್, ಗುಲಬರ್ಗಾ, ಬೆಳಗಾಂವ ಮತ್ತು ಹರಿಹರಗಳ ನೆಲೆಗಳು ಬರುವವು. ಉಳಿದ ನೆಲೆಗಳಲ್ಲಿ ಸರಾಸರಿ ೬ ಶೆಡ್ಡುಗಳಿದ್ದು ಚಿಕ್ಕ ಗಾತ್ರಗಳುಳ್ಳವುಗಳಾಗಿವೆ. ಇಲ್ಲಿಯವರೆಗೆ ರಾಜ್ಯಸರಕಾರವು ಔದ್ಯಮಿಕ ನೆಲೆಗಳ ಯೋಜನೆಗೆ ಒಟ್ಟು ೧೭೭·೦೪ ಲಕ್ಷ ರೂ.ಗಳನ್ನು ವೆಚ್ಚಮಾಡಿದೆ. ಈಗ ಸ್ಥಾಪಿತವಾದ ಎಲ್ಲ ನೆಲೆಗಳಲ್ಲಿ ಎಲ್ಲ ಸೌಕರ್ಯಗಳನ್ನು ಒದಗಿಸಲಾಗಿದೆ.

ರಾಜಾಜಿನಗರ ಔದ್ಯಮಿಕ ನೆಲೆಯೆಂದು[15] ಹೆಚ್ಚು ಜನಪ್ರಿಯವಾದ ಬೆಂಗಳೂರಿನಲ್ಲಿ ನಿರ್ಮಿಸಿದ ನೆಲೆಯು ನಮ್ಮ ರಾಜ್ಯದಲ್ಲಿಯೇ ಅತಿ ದೊಡ್ಡದಾದ ಹಾಗೂ ಅತ್ಯುತ್ತಮವಾದ ನೆಲೆಯಾಗಿದೆ. ಇದನ್ನು ೧೯೬೦ರಲ್ಲಿ ಸ್ಥಾಪಿಸಲಾಯಿತು. ಇದರಲ್ಲಿ ಈಗ ಸದ್ಯ ೧೧೩ ಶೆಡ್ಡುಗಳಿವೆ. ಈ ನೆಲೆಯಲ್ಲಿ ನೂರಕ್ಕೆ ೭೦ರಷ್ಟು ಶೆಡ್ಡುಗಳಲ್ಲಿ ಇಂಜಿನಿಯರಿಂಗ ಉದ್ದಿಮೆಗಳೇ ಇರುವವು. ಇವು ನಗರದಲ್ಲಿರುವ ಭಾರಿ ಉದ್ದಿಮೆಗಳಿಗೆ ಸಹಾಯಕಾರಿಯಾಗಿ ಕೆಲಸಮಾಡುವವು. ಇವುಗಳಲ್ಲಿ ಕೆಲವು ಆಮದು ಬದಲಿಕೆ (Import Substitution) ಮತ್ತು ರಫ್ತುಪ್ರಯತ್ನಗಳಿಗೆ ಸಹಾಯಕಾರಿಯಾಗಿವೆ ಉದಾ : ಈ ನೆಲೆಯಲ್ಲಿಯ ಒಂದು ಪ್ಲಾಸ್ಟಿಕ್ ಘಟಕವು ಆಮದು ಬದಲಿಕೆಗೆ ಯೋಗ್ಯವಾದ ಪ್ಲಾಸ್ಟಿಕಿನ ವಸ್ತುಗಳನ್ನು ತಯಾರಿಸಿ ವರ್ಷಕ್ಕೆ ೨ ಲಕ್ಷ ರೂ.ಗಳ ಆಮದಿನ ಉಳಿತಾಯ ಮಾಡಿದೆ. ನಾನ್-ಫೆರಸ್ ಕುಲುಮೆ (Non-ferrous foundry) ಯೊಂದು ನಾನ್‌ಫೆರಸ್ ಭಾಗಗಳನ್ನು ತಯಾರಿಸಿ ವರ್ಷವೊಂದಕ್ಕೆ ೧೭ಲಕ್ಷ ರೂಪಾಯಿಯ ವಿದೇಶಿ ವಿನಿಮಯ(Foreign Exchange)ವನ್ನು ಉಳಿಸುತ್ತದೆ. ಎಲ್ಲ ಸಣ್ಣ ಘಟಕಗಳು ಸೇರಿ ಪ್ರತಿವರ್ಷಕ್ಕೆ ೨೪೫ ಲಕ್ಷ ರೂ.ಗಳ ಬೆಲೆಯ ವಸ್ತುಗಳನ್ನು ನಿರ್ಮಿಸುತ್ತದೆ.

---

15. ಈ ನೆಲೆಯ ಬಗ್ಗೆ ಹೆಚ್ಚಿನ ವಿವರ ಬೇಕಾದಲ್ಲಿ Commerce, 11th October, 1969 Supplement— "The State of Mysore— A Survey, P. 59." ನೋಡಿ.

ಬೆಂಗಳೂರು, ಬೆಳಗಾಂವ, ಹುಬ್ಬಳ್ಳಿ, ಮಂಗಳೂರು ಮತ್ತು ಗುಲಬರ್ಗಾಗಳಲ್ಲಿರುವ ನೆಲೆಗಳಿಗೆ ಉಳಿದೆಲ್ಲ ಸೌಕರ್ಯಗಳ ಜೊತೆಗೆ ಕಚ್ಚಾ-ಮಾಲುಗಳ ವಖಾರಗಳನ್ನು ಒದಗಿಸಲಾಗಿದೆ. ಮೈಸೂರು, ಹುಬ್ಬಳ್ಳಿ, ಬೆಳಗಾಂವ ಹಾಗೂ ಬೆಂಗಳೂರು ನೆಲೆಗಳಲ್ಲಿ ತಾಂತ್ರಿಕ ಮಾರ್ಗದರ್ಶನ ಮತ್ತು ವರ್ಕಶಾಪ್ ಸೌಲಭ್ಯಗಳನ್ನೊದಗಿಸುವ ಸಾಮೂಹಿಕ ಸೌಕರ್ಯ ಕೇಂದ್ರಗಳ (Common Facility Centres)ನ್ನು ತೆರೆಯಲಾಗಿದೆ. ಬೆಂಗಳೂರು ನೆಲೆಯಲ್ಲಿ ಸುಸಜ್ಜಿತವಾದ ತಾಂತ್ರಿಕ ಗ್ರಂಥಾಲಯು, ಇಲೆಕ್ಟ್ರಾನಿಕ್ ಮತ್ತು ವಿದ್ಯುಚ್ಛಕ್ತಿಯಿಂದ ಪರೀಕ್ಷಿಸಲಿಕ್ಕೆ ಅನುಕೂಲವಾಗುವಂಥ ಪ್ರಯೋಗಶಾಲೆ ಹಾಗೂ ವಖಾರದ ಸೌಲಭ್ಯವನ್ನೂ ಒದಗಿಸಲು ಯೋಜಿಸಲಾಗಿದೆ. ೫೦,೦೦೦ ರೂ.ಗಳನ್ನು ಗ್ರಂಥಾಲಯದ ಸಲುವಾಗಿ, ೧,೨೫,೦೦೦ ರೂ.ಗಳನ್ನು ಪ್ರಯೋಗಶಾಲೆಗಳಿಗಾಗಿ ವೆಚ್ಚಮಾಡಲು ಯೋಜಿಸಲಾಗಿದೆ.

ರಾಜ್ಯ ಸರಕಾರವು ಸಣ್ಣ ಸಂಸ್ಥೆಗಳಿಗೆ ಉತ್ತೇಜನವೀಯುವದಕ್ಕೆ ಸಹಾಯಧನವನ್ನು ಬಾಡಿಗೆರೂಪದಲ್ಲಿ ಕೊಡುವದು. ಸಣ್ಣ ಘಟಕಗಳಿಗೆ ಸಾಕಷ್ಟು ಹಣವಿಲ್ಲದಿದ್ದಲ್ಲಿ ಅವು ಶೆಡ್ಡುಗಳನ್ನೂ ಮೊದಲು ಲಾವಣಿರೂಪದಿಂದ ತೆಗೆದುಕೊಂಡು ಆಮೇಲೆ ಕಂತಿನ ಮೂಲಕ ಸರಕಾರಕ್ಕೆ ಹಣ ಮುಟ್ಟಿಸಿ ತಾವೇ ಮಾಲಿಕರಾಗಬಹುದೆಂಬ ಧೋರಣೆಯನ್ನೂ ಪ್ರಕಟಿಸಿದೆ. 'ಲಾವಣಿ ಮತ್ತು ಮಾರಾಟ' (Lease cum Sale) ಯೋಜನೆಯ ಆಧಾರದ ಮೇಲೆ ಎಷ್ಟೋ ಕಡೆಗಳಲ್ಲಿ ಬಯಲು ಜಾಗೆಯನ್ನು ಅಭಿವೃದ್ಧಿಪಡಿಸಿ ಉದ್ದಿಮೆದಾರರಿಗೆ ಕೊಟ್ಟಿರುವರು.

ರಾಜ್ಯದಲ್ಲಿಯ ಎಲ್ಲ ನೆಲೆಗಳು ಸುಮಾರು ೨೩೦ ಕೈಗಾರಿಕಾ ಸಂಸ್ಥೆಗಳನ್ನು ಪೋಷಿಸುತ್ತವೆಂದು ಅಂದಾಜು ಮಾಡಲಾಗಿದೆ. ಇವುಗಳಿಂದಾಗಿ ಬಂಡವಾಳ ತೊಡಗಿಸಿದ ಮೊತ್ತವು (Investment) ೨೨೫ ಲಕ್ಷ ರೂ.ಗಳಿಗೂ ಹೆಚ್ಚಿದೆಯೆಂದು ಅಂದಾಜು ಮಾಡಲಾಗಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಬಂಡವಾಳ ತೊಡಗಿಸಿದ್ದರಿಂದ ರಾಷ್ಟ್ರೀಯ ಉತ್ಪನ್ನವು ಸುಮಾರು ೩೫೦ ಲಕ್ಷ ರೂ. ಹೆಚ್ಚುತ್ತದಲ್ಲದೇ ೩೦೦೦ ಕ್ಕಿಂತಲೂ ಹೆಚ್ಚು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿದಂತಾಗುತ್ತದೆ. ಈ ಕೈಗಾರಿಕಾ ನೆಲೆಗಳ ಯೋಜನೆಯ ಪ್ರಾರಂಭದಿಂದ ನಮ್ಮ ರಾಜ್ಯವು ರಾಷ್ಟ್ರೀಯ ಉತ್ಪನ್ನಕ್ಕೆ ಸುಮಾರು ೧೫೦೦ ಲಕ್ಷ ರೂ.ಗಳನ್ನು ಕೂಡಿಸಿದೆಯೆಂದು ತರ್ಕಮಾಡಲಾಗಿದೆ. ಈ ಯೋಜನೆಯಿಂದ ಮಾರಾಟ ತೆರಿಗೆ, ಎಕ್ಸಾಯಿಜ ಡ್ಯೂಟಿ, ಆಕ್ಟ್ರಾಯ್ ಇತ್ಯಾದಿಗಳ ಮೂಲಕ ರಾಜ್ಯಸರಕಾರಕ್ಕೂ ಹಣವು ದೊರೆಯುವದು.

ದೋಷಗಳು :

ಔದ್ಯಮಿಕ ನೆಲೆಗಳಲ್ಲಿರುವ ಸಂಸ್ಥೆಗಳನ್ನು ಹೊರಗಿರುವ ಸಂಸ್ಥೆಗಳಿಗೆ ಹೋಲಿಸಿದಾಗ ಅವು ಅಷ್ಟೊಂದು ಪ್ರಗತಿ ಸಾಧಿಸಿಲ್ಲವೆಂಬುದು ಗೊತ್ತಾಗುವದು.[೧೬] ಕೈಗಾರಿಕಾನೆಲೆಗಳು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯನ್ನು, ಹಿಂದುಳಿದ ಪ್ರದೇಶಗಳ ಬೆಳವಣಿಗೆಯನ್ನು ಹಾಗೂ ಕೈಗಾರಿಕಾ ಅಭಿವೃದ್ಧಿಗಳ ವಿಕೇಂದ್ರೀಕರಣವನ್ನು ಅಷ್ಟು ಪರಿಣಾಮಕಾರಿಯಾಗಿ ಸಾಧಿಸಿಲ್ಲ. ಇದನ್ನು ಸಮರ್ಥಿಸುವದಕ್ಕಾಗಿ ಶ್ರೀ ಎನ್. ಸೋಮಶೇಖರ ಅವರು[೧೭] ರಾಮನಗರಮ್‌ದಲ್ಲಿಯ ಗ್ರಾಮೀಣ ನೆಲೆ, ಗುಲಬರ್ಗಾ ಮತ್ತು ಮಂಗಳೂರು ನೆಲೆಗಳಲ್ಲಿಯ ಕಾರ್ಯವನ್ನು ಪರಿಶೀಲಿಸಿ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಕೈಗಾರಿಕಾ ನೆಲೆಗೆ ಸಾಧಿಸಬೇಕಾದ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗದ್ದಕ್ಕೆ ಕೆಳಗಿನ ಕೆಲವು ಕುಂದುಕೊರತೆಗಳು ಮುಖ್ಯವಾಗಿವೆ.

(೧) ಔದ್ಯಮಿಕ ನೆಲೆಗಳ ಸ್ಥಳಗಳನ್ನು ಆರ್ಥಿಕ ಸಮೀಕ್ಷೆ (Economic Survey)ಯ ತಳಹದಿಯ ಮೇಲೆ ನಿರ್ಧರಿಸಲಾಗಿಲ್ಲ. ಪ್ರತಿಯೊಂದು ಜಿಲ್ಲೆಗೆ ಎರಡರಂತೆ ನೆಲೆಗಳನ್ನು ಸ್ಥಾಪಿಸುವ ಯೋಜನೆಯು ಇದೆಯೇ ಹೊರತು ಸ್ಥಾಪಿಸಬೇಕಾದ ಸ್ಥಳಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ಅತ್ಯವಶ್ಯವಿದ್ದ ಕಚ್ಚಾ-ಮಾಲು, ಕೌಶಲ್ಯ, ಕೆಲಸಗಾರರು, ಸಂಘಟಕರು ಹಾಗೂ ಸರಿಯಾದ ಮಾರು-ಕಟ್ಟೆಯ ವ್ಯವಸ್ಥೆ ಇದೆಯೋ ಇಲ್ಲವೋ ಎನ್ನುವದನ್ನು ಗಮನಕ್ಕೆ ತೆಗೆದುಕೊಳ್ಳಲಾಗಿಲ್ಲ.

(೨) ಕೈಗಾರಿಕಾನೆಲೆಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅತ್ಯವಶ್ಯ (Economic and Social overheads)ಗಳಾದ ಸಾರಿಗೆ ಸಂಪರ್ಕ, ಬ್ಯಾಂಕುಗಳು, ನೀರಿನ ಪೂರೈಕೆ, ವಿದ್ಯುಚ್ಛಕ್ತಿ ಸೌಕರ್ಯ ಮುಂತಾದವುಗಳನ್ನು ಸರಿಯಾಗಿ ಬೆಳೆಸಿಲ್ಲ. ಕಾರಣ ನಿರ್ಮಿಸಿದ ಶೆಡ್ಡುಗಳನ್ನು ಉಪಯೋಗಿಸಲಿಕ್ಕೆ ಕೇಳುವವರು ಸಹ ಸಿಕ್ಕದಂತಾಗಿದೆ. ಆದ್ದರಿಂದ ಕೇವಲ ಕೈಗಾರಿಕಾನೆಲೆಗಳನ್ನು ಸ್ಥಾಪಿಸಿದಾಕ್ಷಣವೇ ಔದ್ಯೋಗೀಕರಣವಾಗುತ್ತದೆನ್ನುವುದು ಶುದ್ಧ ತಪ್ಪು.

(೩) ಕೆಲವು ಸ್ಥಳಗಳಲ್ಲಿ ಪೂರ್ವೀಕ ಔದ್ಯೋಗಿಕ ವಾತಾವರಣವೇ ಇಲ್ಲದಿರುವದರಿಂದ ಔದ್ಯಮಿಕ ನೆಲೆಗಳ ಅಯಶಸ್ಸಿಗೆ ಕಾರಣವಾಗಿದೆ. ಉದಾ : ರಾಮನಗರಮ್, ಗುಲಬರ್ಗಾ ಹಾಗೂ ಮಂಗಳೂರು ನೆಲೆಗಳು.

---

16. N. Somasekhara: " Industrial Estates in India" in Artha Vijnana, September, 1956, p. 281.
17. N. Somasekhara : " The Effectiveness of Industrial Estates—An Analysis of Industrial Estates in Mysore " ಎಂಬ ವಿಷಯದ ಮೇಲೆ Ph.D. ಅಭ್ಯಾಸದ ಸಲುವಾಗಿ ಸಂಶೋಧನೆ ನಡೆಸಿ ಈ ನಿರ್ಣಯಕ್ಕೆ ಬಂದಿದ್ದಾರೆ.

(೪) ನೆಲೆಗಳಲ್ಲಿ ಕೆಲಸಮಾಡುವ ಎಷ್ಟೋ ಘಟಕಗಳು ಸಮಂಜಸ ಉತ್ಪಾದನಾಮಿತಿ (Optimum Production Point) ಗಿಂತ ಕಡಿಮೆ ಉತ್ಪಾದಿಸುವವು. ಯಾಕೆಂದರೆ ಈ ಘಟಕಗಳಿಗೆ ಮೇಲೆ ಹೇಳಿದ ಮಿತಿಯನ್ನು ಮುಟ್ಟಲಿಕ್ಕೆ ಬೇಕಾಗುವಷ್ಟು ಪ್ರಮಾಣದಲ್ಲಿ ಕಚ್ಚಾಸರಕುಗಳನ್ನು ಪೂರೈಸುವಲ್ಲಿ ರಾಜ್ಯಸರಕಾರವು ಅಶಕ್ತವಾಗಿರುವದು. ಇದರಿಂದ ಅನೇಕ ಯಂತ್ರಗಳು ಕೆಲಸವಿಲ್ಲದೇ ಉಳಿಯುತ್ತವೆ.

(೫) ನೆಲೆಗಳಲ್ಲಿ ಕಾರ್ಯಪ್ರವೃತ್ತವಾಗಿರುವ ಸಂಸ್ಥೆಗಳಿಗೆ ಸಾಕಷ್ಟು ಸೌಕರ್ಯಗಳನ್ನು ಕಲ್ಪಿಸಿಕೊಡುವದರಲ್ಲಿ ಸರಕಾರವು ಅಸಹಾಯಕವಾಗಿರುವದು. ಬಹುತರವಾಗಿ ಎಷ್ಟೋ ನೆಲೆಗಳಲ್ಲಿ ನೀರು ಹಾಗೂ ವಿದ್ಯುಚ್ಛಕ್ತಿಗಳನ್ನುಳಿದು ಬೇರೆ ಯಾವ ಸೌಲಭ್ಯಗಳೂ ದೊರಕದಿರುವದು ದುರ್ದೈವ. ಸಾಮೂಹಿಕ ತಾಂತ್ರಿಕ ಹಾಗೂ ವಾಣಿಜ್ಯ ಸೇವೆಗಳು (Common Technical and Commercial Services) ದೊರಕುವದಂತೂ ದೂರೇ ಉಳಿಯಿತು. ಹೀಗಾಗುವದಕ್ಕೆ ಎರಡು ಕಾರಣಗಳಿರುವವು: (ಅ) ಹೆಚ್ಚಾಗಿ ಔದ್ಯಮಿಕ ನೆಲೆಗಳು ತೀರ ಚಿಕ್ಕವಿರುವದರಿಂದ ಕೆಲವೇ ಸಂಸ್ಥೆಗಳಿಗೆ ಸ್ಥಳಾವಕಾಶವನ್ನು ಒದಗಿಸುವವು, (ಬ) ನೆಲೆಗಳಲ್ಲಿರುವ ಸಣ್ಣ ಸಂಸ್ಥೆಗಳ ಗುಂಪು ಸಜಾತಿಯ (Homogeneous) ವಿರುವದಿಲ್ಲ. ಇವೆರಡೂ ಸಂದರ್ಭಗಳಲ್ಲಿ ಎಲ್ಲರಿಗೂ ಎಲ್ಲ ಸೌಲಭ್ಯಗಳನ್ನೊದಗಿಸುವದು ಮಿತವ್ಯಯುವೆನಿಸಲಾರದು,

(೬) ರಾಷ್ಟ್ರೀಯ ಸಣ್ಣ ಕೈಗಾರಿಕೆಗಳು ಕಾರ್ಪೋರೇಶನ (The National Small Industries Corporation) ವು ಕೈಗಾರಿಕಾನೆಲೆಗಳಿಗೆ ಯಂತ್ರಸಾಮಗ್ರಿಗಳನ್ನು ಬಾಡಿಗೆ-ವಿಕ್ರಯ (Hire-purchase) ತಳಹದಿಯ ಮೇಲೆ ಧಾರಾಳವಾಗಿ ಪೂರೈಸುವದರಿಂದ ಎಲ್ಲ ಸಂಸ್ಥೆಗಳೂ ಅತ್ಯವಶ್ಯವಿದ್ದುದಕ್ಕಿಂತ ಹೆಚ್ಚು ಯಂತ್ರಗಳನ್ನು ಆಮದು (ಮಾಡಿದಂಥವುಗಳನ್ನೂ ಸಹ) ಪಡೆದಿರುವವು. ಆದರೆ ಅವುಗಳಿಂದ ಕೆಲಸ ತೆಗೆದುಕೊಳ್ಳಬೇಕೆಂದರೆ ಕಚ್ಚಾಮಾಲುಗಳ ಹಾಗೂ ಉಳಿದ ಸಹಕಾರಿ ಅಂಶಗಳ (Co-operating Factors) ಸರಬರಾಜು ಸರಿಯಾಗಿಲ್ಲ. ಆದ್ದರಿಂದ ಸಣ್ಣ ಕೈಗಾರಿಕೆಗಳು ನಮ್ಮ ಯೋಜಿತ ಗುರಿಗೆ ವಿರುದ್ಧವಾಗಿ ಬಂಡವಾಳ ಪ್ರಾಬಲ್ಯ (Capital-intensive) ವುಳ್ಳವುಗಳಾಗಿವೆ.

(೭) ಸ್ಟೇಟ ಬ್ಯಾಂಕ ಆಫ್ ಇಂಡಿಯಾ, ಸ್ಟೇಟ ಫಾಯಿನಾನ್ಸ ಕಾರ್ಪೋರೇಶನ್ (State Finance Corporation) ಮತ್ತು ವಾಣಿಜ್ಯ ಬ್ಯಾಂಕುಗಳು ಪೂರೈಸುವ ಹಣಕಾಸಿನ ನೆರವು ತೀರ ಕಡಿಮೆಯಾಗಿರುವದರಿಂದ ಸಣ್ಣ ಸಂಸ್ಥೆಗಳು ಕಾರ್ಯ ಬಂಡವಾಳ (Working Capital) ದ ಅಭಾವದಿಂದ ಸರಿಯಾಗಿ ಸೇವೆಸಲ್ಲಿಸಲು ಅಸಮರ್ಥವಾಗಿರುವವು.

(೮) ನಮ್ಮ ದೇಶದಲ್ಲಿ ಕೇವಲ ಸಣ್ಣ ಕೈಗಾರಿಕೆಗಳಿಗೆ ಸಹಾಯಮಾಡುವದಕ್ಕಾಗಿಯೇ ಜನ್ಮತಾಳಿದ ಎಷ್ಟೋ ಸಂಸ್ಥೆಗಳಿವೆ. ಉದಾ: The Directorate of Industries and Commerce (State Government), the Small Industries Service Institute (Government of India), the State Small Industries Corporation, the National Small Industries Corporation etc. ಆದರೆ ಇವುಗಳ ಕಾರ್ಯಕ್ರಮಗಳಲ್ಲಿ ಸರಿಯಾದ ಸಮನ್ವಯವಿಲ್ಲದಿರುವದರಿಂದ 'ಎತ್ತು ಎರೆಗೆ ಎಳೆಯಿತು, ಕೋಣ ಕೆರೆಗೆ ಎಳೆಯಿತು' ಎಂಬ ನಾಣ್ಣುಡಿಯಂತೆ ಆಡಳಿತ ವಿಲಂಬವುಂಟಾಗಿ ಸಣ್ಣ ಕೈಗಾರಿಕೆಗಳು ತೊಂದರೆಗಳನ್ನು ಅನುಭವಿಸಹತ್ತಿರುವವು.

(೯) ಗ್ರಾಮೀಣಪ್ರದೇಶದಲ್ಲಿ ಸ್ಥಾಪಿಸಬೇಕಾದ ನೆಲೆಗಳ ಬಗ್ಗೆ ಸರಕಾರವು ಸುಸ್ಪಷ್ಟ ನೀತಿಯನ್ನು ಹೊಂದಿಲ್ಲ. ಹಳ್ಳಿಯಲ್ಲಿ ಸ್ಥಾಪಿಸಬೇಕಾದ ನೆಲೆಯು ಕೇವಲ ಗಾತ್ರದಲ್ಲಿ ಪಟ್ಟಣದ ನೆಲೆಯ ಗಾತ್ರಕ್ಕಿಂತ ಸಣ್ಣದಿರುವದೇ ಹೊರತು ಹಳ್ಳಿಯ ವಾತಾವರಣಕ್ಕೆ ಹೊಂದಿಕೊಂಡು ಹೋಗುವ ಹಾಗೂ ಅಭಿವೃದ್ಧಿಪಡಿಸುವಂಥವು ಇರುವದಿಲ್ಲ. ಇದರಿಂದಾಗಿ ರಾಮನಗರದಲ್ಲಿರುವ ಗ್ರಾಮೀಣ ನೆಲೆಯು ಅಷ್ಟೊಂದು ಪ್ರಗತಿ ಸಾಧಿಸಿಲ್ಲ.[೧೮] ನಮ್ಮ ರಾಜ್ಯಸರಕಾರದ ಹತ್ತಿರ ಕೇವಲ ಅಸ್ಪಷ್ಟ ವಿಚಾರಗಳಿರುವವು.

(೧೦) ಈಗಾಗಲೇ ಸ್ಥಾಪಿಸಿದ ನೆಲೆಗಳಲ್ಲಿ ಎಲ್ಲ ಸಂಸ್ಥೆಗಳಿಗೆ ಬೇಕಾಗುವ ಸೌಲಭ್ಯಗಳನ್ನು ಪೂರೈಸಿ ಅವುಗಳ ಉತ್ಪಾದನಾಶಕ್ತಿಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡದೇ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ನೆಲೆಗಳನ್ನು ಹಾಗೂ ಶೆಡ್ಡುಗಳನ್ನು ನಿರ್ಮಿಸಿದರೆ ಹೆಚ್ಚಿನ ಪ್ರಗತಿಯನ್ನು ಸಾಧಿಸಿದಂತಾಗುವದೆಂಬ ಹುಚ್ಚು ಭ್ರಮೆಯು ನಮ್ಮ ಸರಕಾರವನ್ನು ಕಾಡಹತ್ತಿದೆ. ಕಾರಣ ಪ್ರಗತಿಯು ಪ್ರಮಾಣದಲ್ಲಿ ಹೆಚ್ಚಿರುವುದಲ್ಲದೇ ಗುಣಮಟ್ಟದಲ್ಲಿ ಅಲ್ಲ.

ನಿವಾರಣೋಪಾಯಗಳು :

ಈಗಿರುವ ದೋಷಗಳನ್ನು ಹೋಗಲಾಡಿಸಲು ಕೆಲವು ಸೂಚನೆಗಳನ್ನು ಮಾಡಬಹುದು :

(೧) ಪ್ರತಿಯೊಂದು ಜಿಲ್ಲೆಗೆ ಎರಡೆರಡರಂತೆ ನಮ್ಮ ರಾಜ್ಯಸರಕಾರದ ನೀತಿಯನ್ನು ಅನುಸರಿಸಿ ನೆಲೆಗಳನ್ನು ಸ್ಥಾಪಿಸದೇ, ಅವಶ್ಯಕತೆಗಳಿಗನುಗುಣವಾಗಿ ನೆಲೆಗಳ ಸ್ಥಾನವನ್ನು ಆರ್ಥಿಕ ತಳಹದಿಯ ಮೇಲೆ ನಿರ್ಧರಿಸಬೇಕು. ಅಂದರೆ

18. N. Somasekhara: "Industrial Estates in India", in Artha Vijnana, September, 1966, P. 284.

ವೆಚ್ಚ–ಲಾಭ(Cost-benefit)ದ ತತ್ವಕ್ಕನುಗುಣವಾಗಿ ಯಾವ ಸ್ಥಳದಲ್ಲಿ ಖರ್ಚು ಕಡಿಮೆ—ಲಾಭ ಹೆಚ್ಚು ದೊರಕುವದೋ ಆ ಸ್ಥಳದಲ್ಲಿ ನೆಲೆಯನ್ನು ಸ್ಥಾಪಿಸಬೇಕು. ಕೆಲವು ಸಲ ಯಾವುದೋ ಒಂದು ಪ್ರದೇಶದ ಅಭಿವೃದ್ಧಿಯು ಅತಿ ಮುಖ್ಯವಾದಾಗ ಈ ತತ್ವವನ್ನು ಅಕ್ಷರಶಃ ಪಾಲಿಸಲು ಸಾಧ್ಯವಾಗದಿರಬಹುದು. ಏನೇ ಆದರೂ ಪ್ರತಿಯೊಂದು ಪ್ರದೇಶದ ಆರ್ಥಿಕ ಸಮೀಕ್ಷೆಯು ಸ್ಥಳದ ನಿರ್ಣಯದಲ್ಲಿ ಹೆಚ್ಚಿಗೆ ಮಾರ್ಗದರ್ಶನ ಮಾಡಬಹುದು.

(೨) ದಕ್ಷಿಣ ಇಟಲಿಯಲ್ಲಿ ಅನುಸರಿಸಿದಂತೆ ಇಡೀ ರಾಜ್ಯವನ್ನೇ ಯೋಜನೆಯ ಘಟಕವೆಂದು ತಿಳಿದು ಅದನ್ನು ನೈಸರ್ಗಿಕ ಸಂಪತ್ತು ಮತ್ತು ಜನಸಂಖ್ಯೆಯ ಒತ್ತಡದ ಆಧಾರದ ಮೇಲೆ ಸಜಾತಿಯ (Homogeneous) ಕ್ಷೇತ್ರಗಳಲ್ಲಿ (Areas) ವಿಂಗಡಿಸಬೇಕು.[೧೯] ಆಮೇಲೆ ಆಯಾ ಕ್ಷೇತ್ರಗಳಿಗನುಗುಣವಾಗುವಂತೆ ಔದ್ಯಮಿಕ ನೆಲೆಗಳನ್ನು ಸ್ಥಾಪಿಸಿದರೆ ಪ್ರೊ. ಗುನ್ನಾರ ಮಿರ್ಡಾಲ (Gunnar Myrdal)ರ ಹಬ್ಬುವಿಕೆ ಅಥವಾ ವಿಸ್ತರಿಸುವಿಕೆಯ ಪರಿಣಾಮಗಳು (Spread Effects)[೨೦] ಹೆಚ್ಚು ಶಕ್ತಿಯುತವಾಗಿ ಬೆಳೆದು ನೆಲೆಗಳು ನೆಲೆಸಿದ ಪ್ರದೇಶದ ಅಭಿವೃದ್ಧಿಯೂ ಆಗಬಹುದೆಂಬ ವಿಶ್ವಾಸವನ್ನು ತಳೆಯಬಹುದು.

(೩) ಚಿಕ್ಕ ಗಾತ್ರದ ಹಲವಾರು ನೆಲೆಗಳನ್ನು ಸ್ಥಾಪಿಸಿದೆವೆಂದು ಹೆಮ್ಮೆಪಡುವದಕ್ಕಿಂತ ಇಂಗ್ಲಂಡ ದೇಶದಲ್ಲಿರುವಂತೆ ದೊಡ್ಡ ಗಾತ್ರದ ಕೆಲವೇ ನೆಲೆಗಳನ್ನು ಸ್ಥಾಪಿಸುವದು ಹಿಂದುಳಿದ ಪ್ರದೇಶಗಳ ಆರ್ಥಿಕ ರೋಗಗಳಿಗೆ ರಾಮಬಾಣವಿದ್ದಂತೆ. ಯಾಕಂದರೆ ಇದ್ದ ಕೆಲವೇ ಸಂಸ್ಥೆಗಳಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸುವದರಿಂದ ಅವುಗಳ ಉತ್ಪಾದನಾಶಕ್ತಿಯು ಹೆಚ್ಚುವದರಲ್ಲಿ ಸಂದೇಹವಿಲ್ಲ.

(೪) ಶೆಡ್ಡುಗಳನ್ನು ಅತಿ ಮಿತವ್ಯಯದಿಂದ ನಿರ್ಮಿಸಿ ಉಪಯೋಗಿಸಬೇಕು. ಬಹಳಷ್ಟು ಬಯಲು ಜಾಗೆಯನ್ನು ಉಪಯೋಗಿಸದೆ ಬಿಟ್ಟಿರುವದರಿಂದ ಶೆಡ್ಡುಗಳ ಸೌಂದರ್ಯ ಹೆಚ್ಚಾಗುವವೆಂಬ ಆಡಂಬರದ ಗೋಜಿಗೆ ಹೋಗದೆ ಪ್ರತಿಯೊಂದು ಅಂಗುಲ ಭೂಮಿಯನ್ನೂ ಉಪಯೋಗ ತೆಗೆದುಕೊಳ್ಳಬೇಕು. ಇದರಿಂದ ಬಾಡಿಗೆ ಕಡಿಮೆಮಾಡಿ ಸಂಘಟಕರಿಗೆ ಹೆಚ್ಚು ಪ್ರೋತ್ಸಾಹ ಕೊಡಲು ಅನುಕೂಲವಾಗುವದು.

(೫) ನೆಲೆಗಳಿಗೆ ಸ್ಥಳಗಳನ್ನು ಆರಿಸುವಾಗ ಮುಂದೆ ಬಂದು ನೆಲೆಸುವ ಸಂಸ್ಥೆಗಳ ದಕ್ಷತೆಯನ್ನು ಹೆಚ್ಚಿಸಲಿಕ್ಕೆ ವಾತಾವರಣವು ಯೋಗ್ಯವಿದೆಯೋ

19. United Nations : Establishment of Industrial Estates in Underdeveloped Countries, 1961, P. 13.

20. Gunnar Myrdal : Economic Theory and Underdeveloped Regions, 1958, Pp. 43–44.

ಇಲ್ಲವೋ ಎನ್ನುವ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು.[೨೧] ಸ್ವಲ್ಪರ ಮಟ್ಟಿಗೆ ಔದ್ಯೋಗೀಕರಣಗೊಂಡ ಪ್ರದೇಶಗಳಲ್ಲಿ ನೆಲೆಗಳನ್ನು ಸ್ಥಾಪಿಸುವದರಿಂದ ಹೆಚ್ಚಿನ ಔದ್ಯೋಗೀಕರಣಕ್ಕೆ ಬೇಕಾಗುವ ಸಂಘಟಕರು, ನೀರು, ವಿದ್ಯುಚ್ಛಕ್ತಿ, ಸಾರಿಗೆ–ಸಂಪರ್ಕ ಇತ್ಯಾದಿಗಳು ಇರುವದರಿಂದ ಯೋಗ್ಯ ವಾತಾವರಣವನ್ನು ಕಲ್ಪಿಸಿಕೊಡುವವು.

(೬) ಪ್ರತಿಯೊಂದು ಜಿಲ್ಲೆಗೆ ಇಷ್ಟು ನೆಲೆಗಳಿರಬೇಕೆನ್ನುವದಕ್ಕಿಂತ ಪ್ರತಿಯೊಂದು ಮುಖ್ಯ ಉದ್ದಿಮೆಗೆ ಒಂದೊಂದು ನೆಲೆ ಇರುವದು ಉತ್ತಮ. ಕೈಗಾರಿಕಾ ನೆಲೆಯೊಂದನ್ನು ಉದ್ದಿಮೆಗೆ ಜೋಡಿಸಿದಾಗ ನೆಲೆಗಳಲ್ಲಿಯ ಘಟಕಗಳು ಮುಖ್ಯ ಉದ್ದಿಮೆಗಳಿಗೆ ಬೇಕಾಗುವ ಸಾಧನ-ಸಲಕರಣೆಗಳನ್ನು ಒದಗಿಸುತ್ತ ಒಂದಕ್ಕೊಂದು ಪೂರಕವಾಗಿ ಕೆಲಸಮಾಡುವವು. ಉದಾ : ಬೆಂಗಳೂರಿನಲ್ಲಿಯ H.M.T. ನೆಲೆ.

(೭) ನೆಲೆಗಳಲ್ಲಿ ಸ್ಥಳಾವಕಾಶವನ್ನು ಒದಗಿಸುವಾಗ ಕೈಗಾರಿಕಾ ಘಟಕಗಳನ್ನು ಆರ್ಥಿಕ ತತ್ವದ ತಳಹದಿಯ ಮೇಲೆ ಅತಿ ಜಾಗರೂಕತೆಯಿಂದ ಆರಿಸಬೇಕು. ಮತ್ತು ಕೆಳಗಿನ ಅಂಶಗಳನ್ನು ಗಮನದಲ್ಲಿಡಬೇಕು.

ಸಜಾತಿಯ ಆರ್ಥಿಕ ಕ್ಷೇತ್ರದ ಅಭಿವೃದ್ಧಿಗೆ ಆರಿಸಲ್ಪಟ್ಟ ಕೈಗಾರಿಕೆಯು ಆವಶ್ಯಕತೆಯಿದೆಯೋ ಇಲ್ಲವೋ? ಇದೀ ಪ್ರದೇಶವು ಕೈಗಾರಿಕೆಗೆ ಬೇಕಾದ ಕಚ್ಚಾಮಾಲುಗಳನ್ನು ಪೂರೈಸುವದೋ ಇಲ್ಲವೋ? ಸ್ಥಾಪಿಸಿದ ಕೈಗಾರಿಕೆಯು ಪೂರ್ಣ ವಸ್ತುಗಳನ್ನು ಆ ಪ್ರದೇಶದ ಜನರಲ್ಲಿ ಕೊಂಡುಕೊಳ್ಳುವ ಯೋಗ್ಯತೆಯಿದೆಯೋ ಇಲ್ಲವೋ? ಮತ್ತು ಕೈಗಾರಿಕೆಗೆ ಬೇಕಾಗುವ ದಕ್ಷ ಕೆಲಸಗಾರರು ದೊರಕುವರೋ ಇಲ್ಲವೋ? ಇತ್ಯಾದಿಗಳನ್ನು ಪರಿಶೀಲಿಸಬೇಕು.

(೮) ಪ್ರತಿಯೊಂದು ನೆಲೆಯಲ್ಲಿ ಬೇಕಾಗುವ ಸೇವೆ, ಸೌಕರ್ಯಗಳನ್ನು ಪೂರೈಸುವಾಗ ನೆಲೆಯ ಗಾತ್ರ, ಶೆಡ್ಡುಗಳ ಸಂಖ್ಯೆ, ಕಾರ್ಯನಿರತವಾಗಿರುವ ಘಟಕಗಳ ಸಂಖ್ಯೆ ಮತ್ತು ಸ್ಥಳವನ್ನು ಗಣನೆಗೆ ತೆಗೆದುಕೊಳ್ಳದೇ ಎಲ್ಲ ಸೌಲಭ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಬೇಕು. ಹಾಗಾದಾಗ ಅಲ್ಲಿರುವ ಸಂಸ್ಥೆಗಳು ಸರಿಯಾಗಿ ಕೆಲಸಮಾಡುವವು.

(೯) ಸಾಮಾನ್ಯ ಔದ್ಯಮಿಕ ನೆಲೆಗಳನ್ನು ಸ್ಥಾಪಿಸುವದಕ್ಕಿಂತ ಕಾರ್ಯಪ್ರೇರಕ (Functional) ನೆಲೆಗಳನ್ನು ಸ್ಥಾಪಿಸುವದು ಯೋಗ್ಯ. ಇಂಥ ಕಾರ್ಯಪ್ರೇರಕ ನೆಲೆಗಳು ಒಂದು ಭಾರಿ ಉದ್ದಿಮೆಗೆ (Large Scale Industry)

---

21. P. N. Dhar and H. F. Lydall: The Role of Small Enterprises in Indian Economic Development, 1961, P. 45.

ಜೋಡಿಸಲ್ಪಟ್ಟಿದ್ದರೆ ಅವುಗಳಿಂದ ನಿರ್ಮಿತವಾದ ವಸ್ತುಗಳನ್ನು ಲಾಭದಾಯಕ ವಾಗಿ ಮಾರಬಹುದು.

(೧೦) ಗ್ರಾಮೀಣ ಪ್ರದೇಶಗಳಲ್ಲಿ ನೆಲೆಗಳನ್ನು ಸ್ಥಾಪಿಸುವಾಗ ಕೆಳಗಿನ ಕೆಲವು ಮುಖ್ಯ ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವದು ಒಳಿತು. ನೆಲೆಗಳಿಗೆ ಆರಿಸಬೇಕೆಂದಿರುವ ಸ್ಥಳಗಳಲ್ಲಿ (i) ಸಂಘಟಕರು ದೊರೆಯುಬೇಕು. (ii) ಪ್ರಾದೇಶಿಕ ಸಂಪನ್ಮೂಲಗಳನ್ನು (Local resources) ಕಚ್ಚಾಮಾಲೆಂದು ಘಟಕಗಳು ಉಪಯೋಗಿಸಬೇಕು. (iii) ಕರ್ಮಕುಶಲಿಗಳು ಹಾಗೂ ಕೆಲಸ ಗಾರರು ದೊರೆಯುಬೇಕು. (iv) ಉತ್ಪಾದಿಸಿದ ವಸ್ತುಗಳಿಗೆ ಸಾಕಷ್ಟು ಬೇಡಿಕೆ ಇರಬೇಕು. (v) ಸ್ಥಾಪಿಸಬೇಕೆಂದಿರುವ ಸಂಸ್ಥೆಗಳಿಗೆ ಹೆಚ್ಚಿನ ತಾಂತ್ರಿಕ ಜ್ಞಾನದ ಆವಶ್ಯಕತೆ ಇರಬಾರದು. (vi) ತಯಾರಿಸಿದ ವಸ್ತುಗಳಲ್ಲಿ ಬಂಡ-ವಾಳದ ಪ್ರಾಬಲ್ಯವಿರಬಾರದು. ಒಟ್ಟಿನಮೇಲೆ ಇಂಥ ನೆಲೆಗಳು ಬೇಸಾಯಕ್ಕೆ ಬೇಕಾಗುವ ಸಾಧನ–ಸಲಕರಣೆಗಳನ್ನು ಉತ್ಪಾದಿಸಬೇಕು. ಇದರಿಂದ ಕೃಷಿಯು ಉತ್ಪಾದನಾಶಕ್ತಿಯು ಹೆಚ್ಚುವದಲ್ಲದೇ, ಒಕ್ಕಲಿಗನ ಉತ್ಪನ್ನವು ಅಧಿಕ ವಾಗಿ ಚಿಕ್ಕ ಕೈಗಾರಿಕೆಗಳ ವಸ್ತುಗಳಿಗೆ ಬೇಡಿಕೆ ಹೆಚ್ಚಾಗುವದು. ಆಗ ಕೃಷಿ ಹಾಗೂ ಸಣ್ಣ ಕೈಗಾರಿಕೆಗಳು ಒಂದಕ್ಕೊಂದು ಪೂರಕವಾಗಿ ಅಭಿವೃದ್ಧಿ ಯಾಗುವವು.

ನಮ್ಮ ರಾಜ್ಯದಲ್ಲಿಯ ಔದ್ಯಮಿಕ ನೆಲೆಗಳು ಇನ್ನೂ ಶೈಶವಾವಸ್ಥೆಯಲ್ಲಿರು ವದರಿಂದ ಗಣನೀಯ ಪ್ರಗತಿ ಸಾಧಿಸಿಲ್ಲ. ಅವುಗಳಿಗೆ ಬೇಕಾಗುವ ಅನುಕೂಲತೆ ಗಳನ್ನು ಹಣಕಾಸಿನ ಹಾಗೂ ರಾಜಕೀಯ ತೊಂದರೆಗಳಿಂದಾಗಿ ಸಾಕಷ್ಟು ಒದಗಿಸಲಾಗಲಿಲ್ಲ. ಆದರೆ ಇದರಿಂದ ಅಧೈರ್ಯಪಡಬೇಕಾದ ಪ್ರಸಂಗವೇನೂ ಇಲ್ಲ. ರಾಜ್ಯಸರಕಾರವು ಪ್ರತಿಯೊಂದು ಹಂತದಲ್ಲಿ ದಕ್ಷತೆಯಿಂದ ಯೋಜನೆ ಗಳನ್ನು ರೂಪಿಸಿ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಲ್ಲಿ ತಂದರೆ ಕೈಗಾರಿಕಾನೆಲೆಗಳ ಕಾರ್ಯಕ್ರಮವು ಔದ್ಯೋಗಿಕ ಅಭಿವೃದ್ಧಿಗೆ ಯೋಗ್ಯ ಸಾಧನವಾಗುವದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ.

★ ಎಸ್. ಎಸ್. ಹಿರೇಮಠ

'-ತಮ್ಮ' ಕೊನೆಯಲ್ಲಿರುವ ಹೆಸರುಗಳು

ಕನ್ನಡ ನಾಡಿನ ಶಿಲ್ಪಿಗಳಲ್ಲಿ ಬಹು ಪ್ರಖ್ಯಾತರಾದವರು ಮಲ್ಲಿತಮ್ಮ ಮತ್ತು ಮಸಣಿತಮ್ಮರು. ಇವರ ಹೆಸರುಗಳ ಕೊನೆಯಲ್ಲಿರುವ ಪ್ರತ್ಯಯ '–ಅಮ್ಮ'[೧] ಎಂದು ಕೆಲವರು ಭಾವಿಸುತ್ತಾರೆ. ಇದನ್ನು ಒಪ್ಪಿಕೊಂಡರೆ '–ತ್–' ಎಂಬುದಕ್ಕೆ ವಿವರಣೆಯನ್ನು ಕೊಡುವುದು ಕಷ್ಟವಾಗುತ್ತದೆ. (ಮಲ್ಲಿ + ತ್ + ಅಮ್ಮ) ಹೆಸರಿನ ಕೊನೆಯಲ್ಲಿರುವುದು '–ಅಮ್ಮ' ಅಲ್ಲ, ಕಿರಿಯ ಸೋದರ ಎಂಬರ್ಥದ 'ತಮ್ಮ' ಎಂಬ ಪದ ಎಂದು ಭಾವಿಸಿದರೆ ಆಗ ಯಾವ ಸಮಸ್ಯೆಯೂ ಇಲ್ಲ. ಮಲ್ಲಿತಮ್ಮ < ಮಲ್ಲಿ + ತಮ್ಮ; ಮಸಣಿತಮ್ಮ < ಮಸಣಿ + ತಮ್ಮ ಹೀಗೆ ಬಾಂಧವ್ಯಸೂಚಕವಾದ ಪದಗಳನ್ನು ಹೆಸರಿನ ಕೊನೆಯಲ್ಲಿಟ್ಟುಕೊಳ್ಳುವುದು ಬಹು ಸಾಮಾನ್ಯವಾದ ಸಂಗತಿ. '–ಅಣ್ಣ' ಕೊನೆಯಲ್ಲಿರುವ ಹೆಸರುಗಳನ್ನು ಹಿಂದೆಯೂ ಇಟ್ಟುಕೊಳ್ಳುತ್ತಿದ್ದರು; ಈಗಲೂ ಆ ಪದ್ಧತಿ ಇದ್ದೇ ಇದೆ. ಆದ್ದರಿಂದ ಮಲ್ಲಿತಮ್ಮ ಮತ್ತು ಮಸಣಿತಮ್ಮ ಹೆಸರುಗಳು ರಚನೆಯ ದೃಷ್ಟಿಯಿಂದ ಮಲ್ಲಿಯಣ್ಣ ಮತ್ತು ಮಸಣಿಯಣ್ಣಗಳಿಗೆ ಸಮಾನವಾಗಿವೆ.

–ಅಣ್ಣ ಕೊನೆಯಲ್ಲಿರುವ ಹೆಸರುಗಳು ಪ್ರಾಯಶಃ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪ್ರಚಲಿತವಾಗಿದ್ದುವು. ಈಗಲೂ ಅಷ್ಟೇ. ಆದರೆ –ತಮ್ಮ ಕೊನೆಯಲ್ಲಿರುವ ಹೆಸರುಗಳಿಗೆ ಒಂದು ಮಿತವಾದ ವ್ಯಾಪ್ತಿ ಇದ್ದಂತೆ ಕಾಣುತ್ತದೆ. ಅಂತಹ ಹೆಸರುಗಳು ಎಲ್ಲೆಲ್ಲಿ ಸಿಕ್ಕಿವೆ ಎಂಬುದನ್ನು ಗಮನಿಸಿದರೆ, ಸ್ಥೂಲವಾಗಿ ಅವುಗಳು ಬಳಕೆಯಿದ್ದ ಪ್ರದೇಶವನ್ನೂ ನಿರ್ಧರಿಸಬಹುದು.

(೧) ತಿರುಮಕೂಡು ನರಸೀಪುರ ತಾಲೂಕಿನ ಸೋಮನಾಥಪುರದ ಕೇಶವ ದೇವಾಲಯದ (ಕ್ರಿ.ಶ. ೧೨೬೮) ಅನೇಕ ವಿಗ್ರಹಗಳನ್ನು ಮಲ್ಲಿತಮ್ಮ ಮತ್ತು ಮಸಣಿತಮ್ಮರು ಕೆತ್ತಿರುವುದು ಮಾತ್ರವಲ್ಲದೆ ಅನೇಕ ವಿಗ್ರಹಗಳ ಪೀಠಗಳ ಮೇಲೆ ತಮ್ಮ ಹೆಸರುಗಳನ್ನೂ ಕೊರೆದಿದ್ದಾರೆ. ಇದೇ ಮಲ್ಲಿತಮ್ಮ ಚನ್ನರಾಯಪಟ್ಟಣ ತಾಲೂಕಿನ ನುಗ್ಗೆಹಳ್ಳಿಯ

---

೧. 'ಅಮ್ಮನ್' ಎಂಬ ಪದಕ್ಕೆ ಹಳಗನ್ನಡದಲ್ಲಿ 'ತಂದೆ' ಎಂಬ ಅರ್ಥವಿದ್ದಿತು. ಇದು ಅನೇಕ ಪುರುಷರ ಹೆಸರುಗಳ ಕೊನೆಯಲ್ಲಿ ಕಾಣಿಸಿಕೊಳ್ಳುತ್ತದೆ. ಉದಾ.ಗೆ:— ಬಜೆಯಮ್ಮನ್ (Ec.V. Ag. 27, 915 A.D.); ದೋಯಿಲಮ್ಮನ್ (Ec II. 193, C. 950 A.D.); ಗಣರಮ್ಮನ್ (EI. XIII. P. 189, 888 A.D.)

ಲಕ್ಷ್ಮೀನರಸಿಂಹ ದೇವಾಲಯದ (ಕ್ರಿ.ಶ. ೧೨೪೯) ಹಲವು ವಿಗ್ರಹಗಳನ್ನೂ ಕೆತ್ತಿದ್ದಾನೆ. ಇವನ ಹೆಸರು ಎರಡು ಕಡೆ ಬರೀ 'ಮಲ್ಲಿ' ಎಂಬುದಾಗಿ ಸಿಗುತ್ತದೆ.[೨]

(೨) ಅದೇ ಚನ್ನರಾಯಪಟ್ಟಣ ತಾಲೂಕಿನ ಒಂದು ಶಾಸನದಲ್ಲಿ 'ಬಂಮಗೌಡಿಯ ಮಗ ಚಿಕ್ಕತಂಮ'ನ ಹೆಸರಿದೆ.[೩]

(೩) ಕೃಷ್ಣರಾಜಪೇಟೆ ತಾಲೂಕಿನ ಒಂದು ಶಾಸನದಲ್ಲಿ ಹಿಟಪ್ಪನ ಮಗ ಬೈರಿತಮ್ಮನ ಹೆಸರಿದೆ. ಕೇಶಿಯಣ್ಣ ಇವನ ತಮ್ಮ.[೪]

(೪) ಅರಕಲಗೂಡು ತಾಲೂಕಿನ ಎರಡು ಶಾಸನಗಳಲ್ಲಿ ಮಾರತಮ್ಮನ ಹೆಸರಿದೆ.[೫]

(೫) ಚಿಕ್ಕಮಗಳೂರು ತಾಲೂಕಿನಲ್ಲಿ ಮಸಣಿತಂಮ[೬] ಮತ್ತು ಚಿಕ್ಕತಂಮ[೭] ಎಂಬ ಎರಡು ಹೆಸರುಗಳು ದೊರಕುತ್ತವೆ. ಈ ಮಸಣಿತಂಮನ ತಂದೆಯ ಹೆಸರು ಹೆಮ್ಮಾಡಿಗೌಡ.

(೬) ಮಳವಳ್ಳಿ ತಾಲೂಕಿನಲ್ಲಿ ರಾಯತಮ್ಮ ಎಂಬ ಹೆಸರು ದೊರಕುತ್ತದೆ.[೮]

(೭) ಮಂಡ್ಯ ತಾಲೂಕಿನಲ್ಲಿ 'ಗಉಡಿತಂಮ'ನ ಹೆಸರಿದೆ.[೯]

(೮) ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲೂಕಿನಲ್ಲಿ 'ಚಿಕ್ಕತಮ್ಮ' ಎಂಬ ಹೆಸರು ದೊರಕುತ್ತದೆ.[೧೦] ಬೆಂಗಳೂರು ತಾಲೂಕಿನ ಒಂದು ಶಾಸನದಲ್ಲಿ 'ಕಾಳಿತಮ್ಮನ ಹಳ್ಳಿ' ಎಂಬ ಊರಿನ ಹೆಸರಿರುವುದೂ ಗಮನಾರ್ಹವಾದ ಸಂಗತಿ.[೧೧]

---

೨. R. Narasimhachar: Architecture and Sculpture in Mysore. No. 1 (The Keshava Temple at Somanathapur, 1917) PP. 5–6. Also see plates opposite P. 14.)

೩. Ec. V. Channarayapatna. 261, C. 1273 A.D.

೪. EC. IV. Krishnarajapet. 1, C. 1150 A.D.

೫. EC. V. Arakalgud. 87 & 39, 1285 A.D.

೬. EC. VI. Chikkamagalur. 4, 1140 A.D.

೭. Ibid. No. 17, 12 & 13th centuries.

೮. EC. III. Pt. 1. Malavalli. 115, C. 1250 A.D.

೯. Ibid. Mandya. 100, 1316 A. D.

೧೦. EC. IX. Hoskote. 91

೧೧. Ibid. Bangalore No. 24, 1342 A. D.

ನನ್ನ ಕಣ್ಣಿಗೆ ಬಿದ್ದಿರುವ ಈ ಉಲ್ಲೇಖಗಳನ್ನು ನೋಡಿದರೆ '–ತಮ್ಮ' ಕೊನೆಯಲ್ಲಿರುವ ಹೆಸರುಗಳು ಬಹುಮಟ್ಟಿಗೆ ದಕ್ಷಿಣ ಕರ್ನಾಟಕದಲ್ಲಿ, ಅದರಲ್ಲೂ ಬೆಂಗಳೂರು, ಮಂಡ್ಯ, ಮೈಸೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರಚಲಿತವಾಗಿದ್ದುವು ಎಂದು ಹೇಳಲು ಸಾಧ್ಯವಾಗುತ್ತದೆ. ಮಲ್ಲಿತಮ್ಮ ಮತ್ತು ಮಸಣಿತಮ್ಮರು ಜನ್ಮತಃ ಈ ಭಾಗಕ್ಕೆ ಸೇರಿದವರು.

'–ತಮ್ಮ' ಕೊನೆಯಲ್ಲಿರುವ ಹೆಸರುಗಳು ಬಹುಮಟ್ಟಿಗೆ ಈ ಭಾಗದಲ್ಲಿಯೂ ಮೇಲುವರ್ಗದ ಜನರಲ್ಲಿ ರೂಢಿಯಿಂದ ತಪ್ಪಿಹೋಗಿವೆ ನಿಜ. ಸಂಪ್ರದಾಯಗಳು, ಪದ್ಧತಿಗಳು ಅಷ್ಟು ಸುಲಭವಾಗಿ ಮರೆಯಾಗುವುದಿಲ್ಲ; ಮೇಲುವರ್ಗದ ಜನರಲ್ಲಿ ಅವು ಮರೆಯಾದರೂ ಅವಿದ್ಯಾವಂತರು, ಹಿಂದುಳಿದವರು ಅವುಗಳನ್ನು ಉಳಿಸಿಕೊಳ್ಳುತ್ತಾರೆ ಎಂಬುದಕ್ಕೆ ಪೋಷಕವಾಗಿ ಹಾಸನ ತಾಲೂಕು ಮತ್ತು ಹೆಗ್ಗಡದೇವನಕೋಟೆ ತಾಲೂಕಿನ ಹರಿಜನರು '–ತಮ್ಮ' ಕೊನೆಯಲ್ಲಿರುವ ಹೆಸರುಗಳನ್ನು ಈಗಲೂ ಇಟ್ಟುಕೊಳ್ಳುವ ಪದ್ಧತಿಯುಳ್ಳವರಾಗಿದ್ದಾರೆಂಬುದನ್ನು ಹೆಸರಿಸಬಹುದು.[೧೨] ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಒಕ್ಕಲಿಗರು, ಲಿಂಗಾಯತರು '–ತಮ್ಮ' ಕೊನೆಯಲ್ಲಿರುವ ಹೆಸರುಗಳಿಗೆ ಮತ್ತೆ –ಗೌಡ, –ಅಯ್ಯ, –ಅಣ್ಣಗಳನ್ನು ಸೇರಿಸುತ್ತಾರೆ. ಉದಾಹರಣೆಗೆ— ಹೆತ್ತನತಮ್ಮಣ್ಣ (ಹೆತ್ತೇಗೌಡ)[೧೩]; ಸಣ್ಣತಮ್ಮೇಗೌಡ; ದೊಡ್ಡತಮ್ಮಯ್ಯ; ದೊಡ್ಡತಮ್ಮಣ್ಣ. ಬಡಗಿ ಜಾತಿಯ ಒಬ್ಬ ವ್ಯಕ್ತಿಯ ಹೆಸರು ಕರಿತಮ್ಮ; ಆದರೆ ಬರೆಯುವಾಗ ತಮ್ಮಣ್ಣ ಎಂದೇ ಬರೆದುಕೊಳ್ಳುತ್ತಾನೆ. ಅವಿದ್ಯಾವಂತರಾದ ಹರಿಜನರು ಮಾತ್ರ ಸಣ್ಣತಮ್ಮ, ದೊಡ್ಡತಮ್ಮ, ಚಿಕ್ಕತಮ್ಮ ಎಂಬ ತಮ್ಮ ಹೆಸರುಗಳಲ್ಲೇ ವ್ಯವಹರಿಸುತ್ತಾರೆ.

ಹಾಸನ ತಾಲೂಕಿನಲ್ಲಿ ಹರಿಜನರು ಸಣ್ಣತಮ್ಮ, ಪುಟ್ಟತಮ್ಮ, ಬುಕ್ಕತಮ್ಮ (ಅಡ್ಡಹೆಸರು ಬುಕ್ಕ) ಎಂದೇ ಹೆಸರುಗಳನ್ನಿಟ್ಟುಕೊಂಡು ವ್ಯವಹರಿಸುತ್ತಾರೆ.

ಶಿವಮೊಗ್ಗ ಜಿಲ್ಲೆ ಶಿಕಾರಿಪುರಿ ತಾಲೂಕಿನಲ್ಲಿ ಈಗಲೂ ಮಾಯಿತಮ್ಮನ ಮುಚ್ಚಡಿ ಎಂಬ ಗ್ರಾಮವಿದೆ.[೧೪] ಆ ಗ್ರಾಮದ ಹೆಸರಿಗೂ ಮಾಯಿತಮ್ಮ

---

೧೨. ಈ ಹೆಸರುಗಳನ್ನು ಶ್ರೀ ಆಲನಹಳ್ಳಿ ಕೃಷ್ಣ ಮತ್ತು ಶ್ರೀ ಕಿ. ರಂ. ನಾಗರಾಜ ಅವರಿಂದ ಸಂಗ್ರಹಿಸಿದ್ದೇನೆ. ಈ ಪದ್ಧತಿಯನ್ನು ಮೊದಲು ತಿಳಿಸಿದವರೂ ಅವರೇ.

೧೩. ಅನೇಕ ಹೆಸರುಗಳ ಮಧ್ಯೆ ಕಂಡುಬರುವ –ಏ– ಎಂಬುದು 'ಅಯ್ಯ' ಎಂಬುದರ ಸಂಕ್ಷಿಪ್ತರೂಪ. ದೇವಯ್ಯಗೌಡ –> ದೇವೇಗೌಡ; ತಮ್ಮಯ್ಯಗೌಡ –> ತಮ್ಮೇಗೌಡ; ರಾಮಯ್ಯಗೌಡ > ರಾಮೇಗೌಡ.

೧೪. EC. VII. SK. 272–80. ಈ ಒಂಬತ್ತು ಶಾಸನಗಳು ಈ ಗ್ರಾಮದಲ್ಲಿವೆ. No. 278 ರಲ್ಲಿ (C. 700 A.D.) ಈ ಊರನ್ನು 'ಮುಟ್ಟುಂಡಿ' ಎಂದು ಕರೆದಿದೆ. ಇದೇ ಊರಿನ

ಎಂಬ ಹೆಸರಿನ ಯಾವನೋ ವ್ಯಕ್ತಿಗೂ ಸಂಬಂಧವಿರುವುದು ಸ್ಪಷ್ಟವಿದೆ. ಈ ಮಾಯಿತಮ್ಮ ಜನ್ಮತಃ ಯಾವ ಭಾಗಕ್ಕೆ ಸೇರಿದವಸು ಎಂಬುದು ಗೊತ್ತಾಗುವುದು ಸಾಧ್ಯವಿಲ್ಲವಾದ್ದರಿಂದ, ಇಂತಹ ಇತರ ಹೆಸರುಗಳು ಸಿಗುವವರೆಗೆ ಶಿವಮೊಗ್ಗ ಜಿಲ್ಲೆಯ ಪ್ರದೇಶದಲ್ಲಿ '–ತಮ್ಮ' ಕೊನೆಯಲ್ಲಿರುವ ಹೆಸರುಗಳು ಇದ್ದುವೆಂಬ ನಿರ್ಣಯಕ್ಕೆ ಬರುವುದು ಕಷ್ಟವಾಗುತ್ತದೆ.

ಸಂಬಂಧಸೂಚಕಪದಗಳು ಹೆಸರುಗಳ ಕೊನೆಯಲ್ಲಿ ಬಳಕೆಯಾಗುವುದು ಸರ್ವೇಸಾಮಾನ್ಯ ಎಂದು ಆಗಲೇ ಸೂಚಿಸಲಾಗಿದೆ. ಅವುಗಳನ್ನು ನೋಡೋಣ.

ಪುಲ್ಲಿಂಗ	ಸ್ತ್ರೀಲಿಂಗ
ಅಜ್ಜ (ಅಚ್ಚ)	ಅಜ್ಜಿ (ಅಚ್ಚಿ)[೧೫]
ತಂದೆ	ತಾಯಿ[೧೬]
ಅಮ್ಮನ್	ಅಬ್ಬೆ
ಅಯ್ಯ	ಅಪ್ಪೆ
ಅಪ್ಪ	ಅವ್ವ (ಅಮ್ಮ)
ಅಣ್ಣ	ಅಕ್ಕ
ತಮ್ಮ	—

ಈ ಪಟ್ಟಿ, ಒಂದೇ ಒಂದು ಕೊರತೆ ಬಿಟ್ಟರೆ, ಕ್ರಮಬದ್ಧವಾಗಿದೆ. –ತಂಗಿ ಕೊನೆಯಲ್ಲಿರುವ ಹೆಸರುಗಳು ನಮಗೆ ದೊರಕುವುದು ಒಂದು ಕೊರತೆಯಾಗಿ ಉಳಿಯುತ್ತದೆ.

★ ಎಂ. ಚಿದಾನಂದ ಮೂರ್ತಿ

ಹೆಸರಿನ ಪ್ರಾಚೀನ ರೂಪ. ಮುಂದೆ ಇದು ಮುಚುರ್ಂಡಿ ಎಂದಾಗಿ, ಕ್ರಿ.ಶ. ೧೦೮೬ ಕ್ಕಿಂತ ಈಚಿನ ಶಾಸನಗಳಲ್ಲಿ ಮುಚ್ಚುಂಡಿ (ಮುಚುಂಡಿ) ಎಂಬುದಾಗಿ ಕಾಣಿಸಿಕೊಳ್ಳುತ್ತದೆ. 'ಮಾಯಿತಮ್ಮನ ಮುಚ್ಚಡಿ' ಎಂಬ ಹೆಸರು ಹದಿನಾಲ್ಕನೇ ಶತಮಾನಕ್ಕಿಂತ ಈಚಿನದು.

೧೫. ಅಜ್ಜ, ಅಜ್ಜಿಗಳಿಗೆ ಸಮಾನಗಳಾದ ಅಚ್ಚ, ಅಚ್ಚಿಗಳು ಕನ್ನಡ ನಾಡಿನ ಒಂದೆರಡು ಹೆಸರುಗಳ ಕೊನೆಯಲ್ಲಿ ಕಾಣಿಸಿಕೊಳ್ಳುತ್ತವೆ. ಉದಾ: ರುಂದಿನಚ್ಚರ (EC. II. 35, C. 800 A.D.), ಕಾಡಚ್ಚಿ (EC. XI. DJ. 17, 889 A.D.).

೧೬. ವಚನಗಳಲ್ಲಿ, ಹರಿಹರನ ರಗಳೆಗಳಲ್ಲಿ, ಶೂನ್ಯಸಂಪಾದನೆಯಲ್ಲಿ ಬರುವ ಮಡಿವಾಳ ಮಾಚಿತಂದೆ, ಏಕಾಂತದ ರಾಮಿತಂದೆ, ಆಯ್ದಕ್ಕಿ ಮಾರಿತಂದೆ ಮುಂತಾದ ಹೆಸರುಗಳನ್ನು ನೋಡಿ. ಮಾಚಿ–, ರಾಮಿ–, ಮುಂತಾದುವು ಮಾಚಯ್ಯ, ರಾಮಯ್ಯ ಮುಂತಾದುವುಗಳ ರೂಪಾಂತರವೆಂಬುದು ಸ್ಪಷ್ಟವಾಗಿದೆ. –ತಾಯಿ ಕೊನೆಯಲ್ಲಿರುವ ಹೆಸರುಗಳನ್ನು ಈಗಿನ ಜಯದೇವಿತಾಯಿ, ಪ್ರೇಮಾತಾಯಿ, ಉಮಾತಾಯಿ ಮುಂತಾದುವುಗಳಲ್ಲಿ ನೋಡಬಹುದು.

ಧಾರವಾಡದ ಪದವೀಧರ ಮಹಿಳೆಯರು

ಯುಗಧರ್ಮಕ್ಕೆ ಅನುಗುಣವಾಗಿ ಬದಲಾವಣೆಯಾಗುವುದು ಸಮಾಜಗಳ ಸಾಮಾನ್ಯ ಗುಣ. ಸಂಪ್ರದಾಯಸ್ಥ ಸಮಾಜಗಳು ಮಂದಗತಿಯಿಂದ ಬದಲಾದರೆ, ಉಳಿದವು ತೀವ್ರಗತಿಯಿಂದ ಬದಲಾಗುತ್ತವೆ. ಇತ್ತೀಚಿನ ವರ್ಷಗಳಲ್ಲಿ ಸಮಾಜದಲ್ಲಾಗುತ್ತಿರುವ ರಾಜಕೀಯ, ಸಾಮಾಜಿಕ, ಆರ್ಥಿಕ ಮುಂತಾದ ಕ್ರಾಂತಿಕಾರಿ ಚಟುವಟಿಕೆಗಳಿಂದ ಎಲ್ಲ ಸಮಾಜಗಳೂ ಒಂದಲ್ಲ ಒಂದು ರೀತಿಯಲ್ಲಿ ತೀವ್ರಗತಿಯಿಂದ ಬದಲಾಗುತ್ತಿವೆ. ಕೆಲವು ಸಂಪ್ರದಾಯಸ್ಥ ಸಮಾಜಗಳು ಹೊರನೋಟಕ್ಕೆ ಬದಲಾದಂತೆ ಕಂಡುಬಂದರೂ ಅವು ತಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಮೌಲ್ಯಗಳಲ್ಲಿ, ಭಾವನೆಗಳಲ್ಲಿ ಬದಲಾಗಿರುವುದಿಲ್ಲ. ಇದರಿಂದ ಸಮಾಜದಲ್ಲಿ ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂಬಂಧ, ನಡೆವಳಿಕೆ ಮುಂತಾದ ವಿಷಯಗಳಲ್ಲಿ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಇಂಥ ಸಮಸ್ಯೆಗಳನ್ನು ಸಂಪ್ರದಾಯಸ್ಥ ಭಾರತ ಸಮಾಜದಲ್ಲಿಯೂ ಕಾಣಬಹುದು. ಇವುಗಳಲ್ಲಿ ಭಾರತದ ಮಹಿಳೆಯ ಸ್ಥಾನಮಾನಗಳು ಮೊದಲಿಂದಲೂ ಸಮಾಜಶಾಸ್ತ್ರಜ್ಞರನ್ನು ಒಂದು ಮೂಲಭೂತ ಪ್ರಶ್ನೆಯಾಗಿ ಕಾಡುತ್ತಿವೆ. ಇಂದು ಸ್ವತಂತ್ರ ಭಾರತದಲ್ಲಿ ನಮ್ಮ ರಾಜ್ಯಾಂಗದಂತೆ ಸ್ತ್ರೀಪುರುಷರು ಹಕ್ಕು ಬಾಧ್ಯತೆ ಮತ್ತಿತರ ಎಲ್ಲ ವಿಷಯಗಳಲ್ಲಿಯೂ ಸರಿಸಮಾನರು. ಹೀಗಾಗಿ ಅನೇಕ ಪ್ರಗತಿಶೀಲ ಮಹಿಳೆಯರು ಭರತ ದೇಶದಲ್ಲಿ ಕೀರ್ತಿಯ ತುತ್ತತುದಿಯನ್ನು ಮುಟ್ಟಿದ್ದಾರೆ. ಆದರೆ ಕೆಲವರು ತಮ್ಮ ಸ್ಥಾನಮಾನಗಳ ಅರಿವನ್ನು ಇನ್ನೂ ಪಡೆದಿಲ್ಲ. ಕೆಲವರು ಪಡೆದಿದ್ದರೂ ಅದನ್ನು ಉಪಯೋಗಿಸಿಕೊಂಡಿಲ್ಲ. ಈ ಎಲ್ಲ ಕಾರಣಗಳು ಅವರ ಜೀವನದಲ್ಲಿ ಅನೇಕ ಸಮಸ್ಯೆಗಳನ್ನು ತಂದಿವೆ, ತರುತ್ತಿವೆ. ಈ ಸಮಸ್ಯೆಗಳು ಯಾವುವು? ಇವುಗಳಿಗೆ ಕಾರಣವೇನು? ಇವುಗಳನ್ನು ನಿವಾರಿಸುವ ದಾರಿ ಯಾವುವು? ಎಂಬುವೇ ಈ ಸಂಶೋಧನೆಯ ಮುಖ್ಯ ಗುರಿ.

೧೯೬೪ನೆಯ ಮೇ ತಿಂಗಳಲ್ಲಿ ಧಾರವಾಡದಲ್ಲಿ ಸುಮಾರು ೨೮೦ ಜನ ಪದವೀಧರ ಮಹಿಳೆಯರ ಬಗ್ಗೆ ನಡೆಸಿದ ಸಂಶೋಧನೆಯ ಫಲ ಈ ಪ್ರಬಂಧ. ಸಂಶೋಧನೆಯ ವಿಷಯ, ಆಕಾರ ಮತ್ತಿತರ ವಿಷಯಗಳನ್ನು ಗಣನೆಗೆ ತೆಗೆದುಕೊಂಡು, ಈ ೨೮೦ ಜನ ಪದವೀಧರರಲ್ಲಿ ೧೮೦* ಜನರನ್ನು ಮಾತ್ರ ಈ ಸಂಶೋಧನೆಗೆ ಆರಿಸಿಕೊಳ್ಳಲಾಗಿತ್ತು. ಸಂಶೋಧನೆಯ ಮುಖ್ಯ ಗುರಿಯು

---

* ಕುಮಾರಿ ಶೀಲಾ ಆರ್. ಮುಕೀಕರ್(ಈಗ ಶ್ರೀಮತಿ ನಾಡಕರ್ಣಿ)ಯವರು ಧಾರವಾಡದ ಎಲ್ಲ ಮಹಿಳಾ ಪದವೀಧರರ ಹೆಸರು, ವಿಳಾಸಗಳನ್ನು ಸಂಗ್ರಹಿಸುವಲ್ಲಿ, ಪ್ರಶ್ನಾವಳಿಗಳನ್ನು ಹಂಚುವಲ್ಲಿ ನೀಡಿದ ನೆರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಪದವೀಧರ ಮಹಿಳೆಯರ ವಿವಿಧ ತೊಂದರೆಗಳನ್ನು ತಿಳಿದುಕೊಳ್ಳುವುದಾದ್ದರಿಂದ ಅವರ ಸರ್ವಸಾಮಾನ್ಯ ತೊಂದರೆಗಳಾವುವು ಎಂಬುದನ್ನು ನಿರ್ಧರಿಸಲು ಈ ಮೊದಲೇ ಹತ್ತು ಜನ ಮಹಿಳೆಯರೊಡನೆ ವಿವರವಾಗಿ ಚರ್ಚಿಸಲಾಗಿತ್ತು. ಈ ಚರ್ಚೆಯ ಅನುಭವದ ಆಧಾರದ ಮೇಲೆ ೯೩ ಪ್ರಶ್ನೆಗಳಿದ್ದ ಒಂದು ಪ್ರಶ್ನಾವಳಿಯನ್ನು ರಚಿಸಿ ಅದನ್ನು ೧೪೦ ಜನರಿಗೆ ಹಂಚಲಾಯಿತು. ಹಿಂತಿರುಗಿಸಲು ನಿರ್ದಿಷ್ಟಪಡಿಸಿದ್ದ ೧೦ ದಿನಗಳ ಕಾಲಾವಧಿಯಲ್ಲಿ ಬಂದ ೧೨೦ ಪ್ರಶ್ನಾವಳಿಗಳನ್ನು ಮಾತ್ರ ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ.

ನಿವೇದಿತರ ವೈಯಕ್ತಿಕ ಹಿನ್ನೆಲೆ :

ಪದವೀಧರ ಮಹಿಳೆಯರಿಂದ ಹಿಂತಿರುಗಿ ಬಂದ ಪ್ರಶ್ನಾವಳಿಗಳನ್ನು ಸಮಾಲೋಚಿಸಿದಾಗ ಗೊತ್ತಾದ ವಿಷಯಗಳು ಹೀಗಿವೆ : ಅವರಲ್ಲಿ ಸೇ. ೬೩ ಜನರು ಪ್ರಥಮ ಪದವಿಯನ್ನೂ, ಸೇ. ೩೭ ಜನರು ಸ್ನಾತಕೋತ್ತರ ಪದವಿಯನ್ನೂ ಪಡೆದವರು. ಸೇ. ೫೮ ಜನರು ಕಲಾವಿಷಯದಲ್ಲಿಯೂ, ಸೇ. ೪೨ ಜನರು ವಿಜ್ಞಾನ ವಿಷಯದಲ್ಲೂ ಪದವಿ ಪಡೆದವರು. ಇವರನ್ನು ವಯಸ್ಸಿನ ದೃಷ್ಟಿಯಿಂದ ನೋಡಿದರೆ ಸೇ. ೧೨ ಜನರು ೧೯–೨೨, ಸೇ. ೩೦ ಜನರು ೨೩–೨೬, ಸೇ. ೩೩ ಜನರು ೨೭–೩೦, ಸೇ. ೧೦ ಜನರು ೩೧–೩೪, ಸೇ. ೭ ಜನರು ೩೫–೩೮, ಸೇ. ೮ ಜನರು ೩೮ಕ್ಕೂ ಹೆಚ್ಚಿನ ವಯೋಮಿತಿಯ ಗುಂಪಿಗೆ ಸೇರಿದವರಾಗಿದ್ದಾರೆ. ಮತಧರ್ಮದ ಪ್ರಕಾರ ಸೇ. ೮೫ ಜನರು ಹಿಂದುಗಳು, ಸೇ. ೮ ಜನ ಕ್ರೈಸ್ತರು, ಸೇ. ೪ ಜನ ಮುಸಲ್ಮಾನರು ಮತ್ತು ಉಳಿದ ಸೇ. ೩ ಜನರು ಜೈನ, ಪಾರ್ಶಿ ಮತ್ತಿತರ ಧರ್ಮಕ್ಕೆ ಸೇರಿದವರು. ವಿವಾಹ ಮಾಹಿತಿಯಂತೆ ಸೇ. ೮೦ ಜನ ಅವಿವಾಹಿತರು, ಸೇ. ೨೦ ಜನ ವಿವಾಹಿತರು ಇದ್ದು ಒಬ್ಬಳು ಮಾತ್ರ ವಿಧವೆ.

ಇವರಲ್ಲಿ ಬಹುಸಂಖ್ಯಾಕರು ವಿದ್ಯಾವಂತ ಕುಟುಂಬಗಳಿಂದ ಬಂದವರು. ತಂದೆ ಹೆಚ್ಚಿನ ವಿದ್ಯಾವಂತ, ತರುವಾಯ ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು, ಅತಿ ಕಡಿಮೆ ವಿದ್ಯೆ ಪಡೆದವಳು ತಾಯಿ. ಗಣತಿಯಂತೆ ಸೇ. ೫೩ ಜನರ ತಂದೆಯರು ಸರಕಾರದ ನೌಕರಿಯಲ್ಲಿ, ಸೇ. ೨೦ ಜನರು ಜಮೀನದಾರರು, ಸೇ. ೨೦ ಜನರು ವಕೀಲಿ, ವೈದ್ಯಕೀಯ ವೃತ್ತಿಯವರು, ಸೇ. ೭ ಜನರು ವ್ಯಾಪಾರಿಗಳೆಂದು ತಿಳಿದುಬಂದಿದೆ. ಹೆಚ್ಚಾಗಿ ತಂದೆಯೊಬ್ಬನೇ ಗಳಿಸುವ ವ್ಯಕ್ತಿ. ಕೆಲವು ಕುಟುಂಬಗಳಲ್ಲಿ ತಂದೆಯ ಜೊತೆಗೆ ಅಣ್ಣ–ತಮ್ಮಂದಿರೂ ಅಕ್ಕ–ತಂಗಿಯರೂ ದುಡಿಯುತ್ತಿರುವದು ಕಂಡುಬರುತ್ತದೆ. ಕುಟುಂಬದ ವೃತ್ತಿಯಂತೆ ಅವರ ಆದಾಯದಲ್ಲಿಯೂ ಹೆಚ್ಚಿನ ವೈಪರೀತ್ಯ ಕಂಡುಬಂದು, ಇದು ವರ್ಷಕ್ಕೆ ೨,೮೦೦ ರೂಪಾಯಿಗಳಿಂದ ೨೫,೦೦೦ ರೂಪಾಯಿಗಳವರೆಗೂ ಇದೆ.

ಶಿಕ್ಷಣ :

ಈ ಸಂಸೋಧನೆಯ ಮುಖ್ಯ ಉದ್ದೇಶಗಳಲ್ಲಿ ಮಹಿಳೆಯರು ಪದವಿ ಪರೀಕ್ಷೆಯವರೆಗೆ ಓದಿದ ಉದ್ದೇಶ, ಇದರಿಂದ ಅವರಿಗಾದ ಲಾಭ-ನಷ್ಟ, ಈ ವಿದ್ಯೆಯಿಂದ ಅವರಿಗಾದ, ಆಗಬೇಕಾದ ಪ್ರಯೋಜನ ಎಂಬ ಅಂಶಗಳು ಸೇರಿವೆ. ಈ ಬಗ್ಗೆ ಕೆಲವು ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿತ್ತು. "ಮಹಿಳೆಯರು ಪಡೆದದ್ದು ತಮ್ಮ ಮುಂದಿನ ಜೀವನದಲ್ಲಿ ಅದರ ಉಪಯೋಗ ಪಡೆಯಲಲ್ಲ, ತಮ್ಮ ತಂದೆ–ತಾಯಂದಿರ ಮನಸಂತೋಷಕ್ಕೆ" ಎನ್ನುವ ಅಭಿಪ್ರಾಯ ಬಿದ್ದು ಹೋಯಿತು. ಕಾರಣ "ಪದವಿಯನ್ನೇಕೆ ಪಡೆದಿರಿ?" ಎಂಬ ಪ್ರಶ್ನೆಗೆ ಸೇ. ೪೮ ಜನರು "ನೌಕರಿಗೆ ಮತ್ತು ಮುಂದಿನ ಜೀವನಕ್ಕೆ ನಾಂದಿಯಾಗಲು" ಎಂದು, ಸೇ. ೧೨ ಜನರು "ಜ್ಞಾನಾರ್ಜನೆಗೆ" ಎಂದು, ಸೇ. ೨೦ ಜನರು ಮಾತ್ರ "ತಂದೆ–ತಾಯಂದಿರ ಮನಸಂತೋಷಕ್ಕೆ" ಎಂದು, ಸೇ. ೧೦ ಜನರು "ಮದುವೆಯಾಗುವ ವರೆಗೆ ಕಾಲ ಕಳೆಯಲೆಂದು", ಸೇ. ೮ ಜನರು "ಸ್ವಸಂತೋಷಕ್ಕೆಂದು", ಸೇ. ೨ ಜನರು "ಮದುವೆಗೆ ಅನುಕೂಲವಾಗಲಿ" ಎಂದು ತಿಳಿಸಿದ್ದಾರೆ.

"ಮಹಿಳೆಯರಿಗೆ ಪದವಿಮಟ್ಟದ ವಿದ್ಯೆಯ ಅವಶ್ಯಕತೆ ಇದೆಯೆ?" ಎಂಬ ಇನ್ನೊಂದು ಪ್ರಶ್ನೆಗೆ ಎಲ್ಲರೂ "ಇದೆ" ಎಂದಿದ್ದಾರೆ. ಅವರು ತಮ್ಮ ಉತ್ತರವನ್ನು ಸಮರ್ಥಿಸಲು ಕೊಟ್ಟ ಕಾರಣಗಳು ಹೀಗಿವೆ: ಸೇ. ೪೩ ಜನರು "ವಿದ್ಯೆಯು ಆಕೆಯ ಮುಂದಿನ ಜೀವನಕ್ಕೆ ನಾಂದಿ" ಎಂದು, ಸೇ ೩೭ ಜನರು "ಇದು ಆಕೆಯಲ್ಲಿನ ಅಧೈರ್ಯವನ್ನು ತೊಡೆದುಹಾಕಿ ಸಮಾಜದಲ್ಲಿ ಪುರುಷರೊಡನೆ ಸರಿಸಮಾನತೆಯಿಂದ ನಡೆದುಕೊಳ್ಳಲು ಸಹಾಯ ಮಾಡುತ್ತದೆ" ಎಂದು, ಉಳಿದ ಸೇ. ೨೦ ಜನರು "ಆಕೆಯ ವಿದ್ಯೆಯು ಸಮಾಜದ ಮತ್ತು ದೇಶದ ಜನತೆಯಲ್ಲಿನ ತಿಳುವಳಿಕೆ ಮಟ್ಟವನ್ನು ಹೆಚ್ಚಿಸುತ್ತದೆ" ಎಂದು ತಿಳಿಸಿದ್ದಾರೆ.

"ಹೆಚ್ಚಿನ ವಿದ್ಯೆ ಪಡೆಯಲು ನಿಮ್ಮನ್ನು ಯಾರು ಪ್ರೋತ್ಸಾಹಿಸಿದರು?" ಎಂಬ ಮತ್ತೊಂದು ಪ್ರಶ್ನೆಗೆ ಸೇ. ೬೯ ಜನರಿಗೆ ಅವರ ತಂದೆ, ಸೇ. ೨೮ ಜನರಿಗೆ ಅವರ ಸೋದರ–ಸೋದರಿಯರು, ಸೇ. ೩ ರಷ್ಟು ಜನರಿಗೆ ಅವರ ತಾಯಂದಿರು ಪ್ರೋತ್ಸಾಹಿಸಿದರೆಂದು ಉತ್ತರಗಳು ಬಂದಿವೆ. ಇವರಲ್ಲದೆ ಹತ್ತಿರದ ಸಂಬಂಧಿಗಳು, ಸ್ನೇಹಿತರು, ವಿದ್ಯಾಕೇಂದ್ರಗಳ ಮುಖ್ಯಸ್ಥರು ಮತ್ತಿತರರೂ ಪ್ರೋತ್ಸಾಹಿಸಿರುವುದಾಗಿ ತಿಳಿಸಿದ್ದಾರೆ. ಒಂದು ಗಣನೀಯ ವಿಷಯವೆಂದರೆ ತಂದೆಯರಾರೂ ತಮ್ಮ ಹೆಣ್ಣುಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅಡ್ಡಿ ಮಾಡಿಲ್ಲ. ಆದರೆ ಸೇ. ೮೦ ಜನ ತಾಯಂದಿರು "ಹೆಚ್ಚಿನ ವಿದ್ಯೆ ವಿವಾಹಕ್ಕೆ ಅಡ್ಡಿ" — ಎಂಬ ಹೆದರಿಕೆಯಿಂದ ವಿರೋಧಿಸಿದ್ದಾರೆ. "ನಮ್ಮ ಮಕ್ಕಳು ಆದಷ್ಟು ತೀವ್ರ ಮದುವೆಯಾಗಿ ಗಂಡನ ನೆರಳಿಗೆ ಹೋದರೆ ಮನೆಯ ಖರ್ಚು ಕಡಿಮೆಯಾಗುತ್ತದೆ ಮತ್ತು

ಸಮಾಜದ ಚುಚ್ಚು ಮಾತುಗಳೂ ನಿಲ್ಲುತ್ತವೆ" ಎಂಬುದು ಅವರ ವಾದ. ಸೇ. ೧೨ರಷ್ಟು ಜನ ಸಹೋದರರು ಮತ್ತು ಸೇ. ೮೮ ಜನ ಸೋದರಿಯರು ಉತ್ತೇಜನ ನೀಡಿದರಂತೆ. ಹೆಚ್ಚಿನ ಸಂಖ್ಯೆಯ ಸೋದರರು "ಮನೆಯಿಂದ ಸಿಗಬಹುದಾದ ಎಲ್ಲ ಸೌಲಭ್ಯಗಳೂ ಗಂಡು ಮಕ್ಕಳಾದ ತಮಗೇ ಬೇಕು" ಎಂದು ತಮ್ಮ ಸೋದರಿಯರ ಹೆಚ್ಚಿನ ವಿದ್ಯಾಭ್ಯಾಸವನ್ನು ವಿರೋಧಿಸಿದ್ದಾರೆ. ಮುಂದೆ ಜೀವನದಲ್ಲಿ ವಿದ್ಯೆ ಉಪಯೋಗಕ್ಕೆ ಬರಬಹುದೆಂದು ಹೆಚ್ಚಿನ ಸಂಖ್ಯೆಯಲ್ಲಿ ಸೋದರಿಯರು ಉತ್ತೇಜನ ನೀಡಿದರಂತೆ. ಸೇ. ೪೩ ಜನರಿಗೆ ತಂದೆಯ ಮಾತು ಮನೆಯಲ್ಲಿ ವೇದವಾಕ್ಯ. ಅವರ ಇಷ್ಟಕ್ಕೆ ವಿರುದ್ಧವಾಗಿ ನಡೆಯುವ ಧೈರ್ಯವಿಲ್ಲವೆಂದಿದ್ದಾರೆ. ಸೇ. ೨೮ ಜನರಿಗೆ ತಮ್ಮ ಕುಟುಂಬದಲ್ಲಿ ಯಾರ ವಿರೋಧವೂ ಇರಲಿಲ್ಲವಾದರೂ ಆರ್ಥಿಕ ತೊಂದರೆಗಳಿಂದ ತಮ್ಮ ಎಲ್ಲ ಹೆಣ್ಣು ಮಕ್ಕಳನ್ನು ಪದವಿಮಟ್ಟಕ್ಕೆ ಓದಿಸಲಾಗಲಿಲ್ಲವೆಂದು ತಿಳಿಸಿದ್ದಾರೆ.

ಈ ಸಂಶೋಧನೆಯ ಗಣನೆಯಂತೆ ನಿವೇದಿತರಲ್ಲಿ ಅನೇಕರು ಕಲಾಭಿರುಚಿ ಮತ್ತು ಕಲಾಕೌಶಲ್ಯ ಉಳ್ಳವರಾಗಿದ್ದಾರೆ. ಸೇ. ೪೭ ಜನರಿಗೆ ಚಿತ್ರಕಲೆ ಬರುತ್ತದೆ. ಕರಕೌಶಲ್ಯಗಳಲ್ಲಿ ಹೊಲಿಗೆ ಮತ್ತು ಹೆಣಿಕೆ ಮುಖ್ಯವಿದ್ದು ಸೇ. ೪೭ ಜನರು ಹೊಲಿಗೆ, ಸೇ. ೪೦ ಜನರು ಹೆಣಿಕೆ, ಸೇ. ೧೩ ಜನರು ಕಸೂತಿ ಕೆಲಸವನ್ನು ಕಲಿತಿರುವರು. ಈ ಕಲೆಗಳು ಸೇ. ೫೩ ಜನರಿಗೆ 'ವಿಲಾಸ'ದ ಸಾಧನವಾಗಿಯೂ, ಸೇ. ೨೭ ಜನರಿಗೆ ಭವಿಷ್ಯತ್ತಿನ ಆವಶ್ಯಕಗಳಾಗಿಯೂ ಪರಿಣಮಿಸಿವೆ. ಉಳಿದ ಸೇ. ೩೦ ಜನರಿಗೆ ಇದು ಕೇವಲ ಕಾಲಹರಣಕ್ಕೆ.

ತಮ್ಮ ವಿದ್ಯಾಭ್ಯಾಸದಲ್ಲಿ ವಿಷಯಗಳ ಆಯ್ಕೆಯು ಸರಿಯಾಗಿರಲಿಲ್ಲ ಎಂದು ಬಹುಜನ ನಿವೇದಿತರ ಅಭಿಪ್ರಾಯ. ಸೇ. ೬೧ ಜನರು ತಮ್ಮ ವಿದ್ಯಾಭ್ಯಾಸದ ಆಯ್ಕೆಗೆ ಹೆಚ್ಚಿನ ಅವಕಾಶವಿರಲಿಲ್ಲವೆಂದೂ, ಸೇ. ೩೦ ಜನರು ಸರಿಯಾದ ಮಾರ್ಗದರ್ಶನವಿರಲಿಲ್ಲವೆಂದೂ, ಸೇ. ೧೯ ಜನರು ತಮ್ಮ ಇಚ್ಛೆಗೆ ವಿರುದ್ಧವಾದುದನ್ನು ಕಲಿಸಿದರೆಂದೂ ನಿವೇದಿಸಿದ್ದಾರೆ. ಬಹುಜನ ನಿವೇದಿತರು ಆರ್ಥಿಕ ಸ್ಥಿತಿ ಉತ್ತಮವಿದ್ದ ಕುಟುಂಬಗಳಿಂದ ಬಂದವರಾಗಿದ್ದು ಇವರಲ್ಲಿ ಅನೇಕರು ಧಾರವಾಡದಲ್ಲಿಯೇ ಇರುವುದರಿಂದ ತಮ್ಮ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಖರ್ಚು ಮಾಡಲಿಲ್ಲವೆಂದಿದ್ದಾರೆ.

ಕೆಲವರು ಅನೇಕ ಕಾರಣಗಳಿಂದ ತಮ್ಮ ಓದನ್ನು ನಿಲ್ಲಿಸಬೇಕಾಯಿತು ಎಂದು ತಿಳಿಸಿದ್ದಾರೆ. ಸೇ. ೧೩ ಜನರಿಗೆ ಆರ್ಥಿಕ ತೊಂದರೆ, ಸೇ. ೮೭ ಜನರಿಗೆ ಕೌಟುಂಬಿಕ ಸದಸ್ಯರ ಅಡ್ಡಿ, ಸೇ. ೫ ಜನರಿಗೆ ಅನಾರೋಗ್ಯಗಳು ಕಾರಣವೆಂದು ತಿಳಿದುಬಂದಿತು. ಕೆಲವರು ನೌಕರಿ ಸಿಗದ ಕಾರಣ, ಮದುವೆ ಮುಂದೆ ಹೋದಕಾರಣ ತಮ್ಮ ಓದು ಮುಂದುವರಿಸಬೇಕಾಯಿತೆಂದೂ ತಿಳಿಸಿದ್ದಾರೆ.

ನೌಕರಿ :

ಸೇ. ೩೭ರಷ್ಟು ನಿವೇದಿತರು ನೌಕರಿಯಲ್ಲಿ, ಸೇ. ೧೦ ಜನರು ಸ್ನಾತಕೋತ್ತರ ಅಭ್ಯಾಸದಲ್ಲಿ, ಸೇ. ೮ ಜನ ಮನೆತನದ ಸ್ವತಂತ್ರ ಉದ್ಯೋಗಗಳಲ್ಲಿ ನಿರತರಾಗಿರುವದಾಗಿ ತಿಳಿದುಬಂದಿದೆ. ಸೇ. ೩೫ ಜನರು ನಿರುದ್ಯೋಗಿಗಳಾಗಿರುವರು. ನೌಕರಿ ಮಾಡುವವರಲ್ಲಿ ಸೇ. ೯೩ ಜನರು ಪೂರ್ಣಕಾಲದ ನೌಕರಿಯಲ್ಲಿಯೂ ಸೇ. ೭ ಜನರು ಅರ್ಧಕಾಲದ ನೌಕರಿಯಲ್ಲಿರುವರು. ಇವರಲ್ಲಿ ಸೇ. ೮೬ರಷ್ಟು ಜನರು ಧಾರವಾಡದ ವಿವಿಧ ಶಾಲೆ–ಕಾಲೇಜುಗಳಲ್ಲಿ ಉಪಾಧ್ಯಾಯ ವೃತ್ತಿಯನ್ನು, ಉಳಿದವರು ಕಾರಕೂನಿಕೆ ಮತ್ತು ಇತರ ನೌಕರಿಯನ್ನು ಅವಲಂಬಿಸಿರುವರು. ಸುಮಾರು ಸೇ. ೯೦ರಷ್ಟು ಜನರು ಉಪಾಧ್ಯಾಯ ವೃತ್ತಿಯ ಕಡೆಗೆ ಒಲವನ್ನು ತೋರಿಸಿದ್ದಾರೆ. ಉಳಿದವರಲ್ಲಿ ಸೇ. ೮ ಜನರು ಕಾರಕೂನ ಮತ್ತು ಇತರ ನೌಕರಿಗಳನ್ನು, ಸೇ. ೭ ಜನರು ಆಡಳಿತಾಧಿಕಾರ ಮೊದಲಾದವುಗಳನ್ನು ಇಷ್ಟಪಟ್ಟಿದ್ದಾರೆ. ಕೆಲವರು ತಮಗೆ ಉಪಾಧ್ಯಾಯವೃತ್ತಿ ಸಿಕ್ಕರೆ ತಾವು ಸಧ್ಯ ಇರುವ ನೌಕರಿಯನ್ನು ಬಿಟ್ಟು ಇದಕ್ಕೆ ಸೇರುವುದಾಗಿಯೂ ತಿಳಿಸಿದ್ದಾರೆ.

"ವಿವಾಹಿತ ಮಹಿಳೆಯರು ನೌಕರಿ ಮಾಡುವುದು ನಿಮಗೆ ಒಪ್ಪಿಗೆಯೆ?" ಎಂಬ ಪ್ರಶ್ನೆಗೆ ವಿವಿಧ ರೀತಿಯ ಉತ್ತರಗಳು ಬಂದಿವೆ. ಇವರಲ್ಲಿ ಸೇ ೭೮ ಜನರು "ಮಾಡಬಹುದು" ಎಂದೂ, ಸೇ. ೨೨ ಜನರು "ಕೂಡದು" ಎಂದೂ ಬರೆದಿದ್ದಾರೆ. "ಮಾಡಬಹುದು" ಎಂದು ಉತ್ತರಿಸಿದವರು ಕೊಟ್ಟ ಕಾರಣಗಳು ಬಹುವಾಗಿ "ಕುಟುಂಬದ ಆರ್ಥಿಕ ಸ್ಥಿತಿಗೆ ನೆರವಾಗುತ್ತದೆ" ಎಂದು. "ತಾವು ಕಲಿತ ವಿದ್ಯಾ-ಬುದ್ಧಿಯು ಸಮಾಜದ ಉದ್ಧಾರಕ್ಕೆ ವಿನಿಯೋಗವಾಗುತ್ತದೆ" ಎಂದು ವಾದಿಸಿದ್ದಾರೆ. ನೌಕರಿ ಮಾಡಕೂಡದು ಎನ್ನುವವರ ವಾದ ಹೀಗಿದೆ. "ಸ್ತ್ರೀಯು ಪದವೀಧರಳಿರಲಿ ಇಲ್ಲದಿರಲಿ ಆಕೆ ಮೊದಲಿಗೆ ಸ್ತ್ರೀಯೆ. ಆಕೆಯ ಜೀವನದ ಗುರಿ ಸುಖ-ಸಂಸಾರ. ನೌಕರಿ ಮಾಡುವ ಮಹಿಳೆಯು ತನ್ನ "ನೌಕರಿ" ಮತ್ತು "ಗೃಹಿಣಿ" ಕಾರ್ಯಗಳೆರಡನ್ನೂ ನಿರ್ವಹಿಸಲಾರಳು. ಹೀಗಾಗಿ ಎರಡೂ ಕಾರ್ಯಗಳಲ್ಲಿ ಆಕೆ ಸೋಲುತ್ತಾಳೆ. ಮಹಿಳೆಯರಿಗೆ ಕಳಂಕಪ್ರಾಯಳಾಗುತ್ತಾಳೆ." ಕೆಲವರಂತೂ ಒಂದು ಹೆಜ್ಜೆ ಮುಂದೆ ಹೋಗಿ "ವಿದ್ಯೆಯು ತಮ್ಮನ್ನು ಮನೆಯಿಂದ ಹೊರಗೆಳೆಯುವುದಾದರೆ ಅಂತಹ ವಿದ್ಯೆಯು ನಮಗೆ ಬೇಡ"ವೆಂದು ಹೇಳಿದ್ದಾರೆ. ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ನೆವದಲ್ಲಿ ನೌಕರಿ ಮಾಡುತ್ತಿರುವ ಕೆಲವರನ್ನು ಅವರು ಕಟುವಾಗಿ ಟೀಕಿಸಿ "ಅವರಿಗೆ ಬೇಕಾಗಿರುವದು ತಾವು ಗಳಿಸುವ ಹಣದಿಂದ ಬರುವ ಹೆಮ್ಮೆಯೇ ಹೊರತು ತೃಪ್ತಿಯಲ್ಲ. ತಮ್ಮ ಖರ್ಚಿಗೆ ಗಂಡನನ್ನು ಬೇಡಬೇಕಾಗುವುದಿಲ್ಲವೆಂದು ಅವರ ವಾದ. ಮನೆಗೆಲಸಗಳಿಂದ ದೂರ-

ವಾಗಿರುವುದೂ ಇವರ ಮುಖ್ಯ ಗುರಿ." ಒಬ್ಬರು ತಮ್ಮ ನೆರೆಹೊರೆಯವರನ್ನು ಉದಾಹರಿಸಿ "ಆಕೆ ಎಂದೂ ತನ್ನ ಗಳಿಕೆಯನ್ನು ತನ್ನ ಕುಟುಂಬದ ಮತ್ತು ಮಕ್ಕಳ ಕಲ್ಯಾಣಕ್ಕೆ ಉಪಯೋಗಿಸಿದ್ದನ್ನು ಕಾಣೆ. ಬಂದ ಹಣವನ್ನು ಬ್ಯಾಂಕಿನಲ್ಲಿಟ್ಟು ತನಗೆ ಬೇಕಾದ ದುಬಾರಿ ಸೀರೆ ಮತ್ತು ಒಡವೆ ವಸ್ತುಗಳನ್ನು ಕೊಳ್ಳಲು ಮಾತ್ರ ಉಪಯೋಗಿಸುತ್ತಾಳೆ. ಹೀಗಿದ್ದರೆ ಅವರು ನೌಕರಿ ಮಾಡಿ ಕುಟುಂಬಕ್ಕೆ ಸಹಾಯ ಮಾಡುತ್ತೇನೆ ಎಂಬುದರಲ್ಲಿ ಅರ್ಥವೇನಿದೆ?" ಎಂದು ನುಡಿದಿದ್ದಾರೆ.

"ನೌಕರಿ ಮಾಡುವ ಮಹಿಳೆಯರ ತೊಂದರೆಗಳಾವುವು?" ಎಂಬುದಕ್ಕೆ ಅನೇಕ ಬಗೆಯ ಉತ್ತರಗಳು ಬಂದಿವೆ. ಇವುಗಳಲ್ಲಿ "ಧಾರವಾಡದಲ್ಲಿಯೇ ನೌಕರಿ ಸಿಗದಿರುವುದು" ಒಂದಾಗಿದೆ. ಜಾತಿ, ಪ್ರಾಂತ ಮತ್ತು ಭಾಷೆಗಳು ತಮ್ಮ ನೌಕರಿಗೆ ಕೆಲವು ಸಲ ಅಡ್ಡಿಯಾಗಿವೆ ಎಂದು ತಿಳಿಸಿದ್ದಾರೆ. ಕೆಲವೆಡೆ ತಾವು ನೌಕರಿ ಸಂದರ್ಶನಕ್ಕೆ ಹೋದಾಗ ಅವರು ನಮ್ಮ 'ವಿವಾಹ–ಅವಿವಾಹ, ವೇಷ–ಭೂಷಣ, ಆಧುನಿಕ ಮೈತ್ರೀಭಾವ, ದೇಹಸೌಂದರ್ಯಗಳನ್ನು ನೋಡಿದರೆ ಹೊರತು ನಮ್ಮ ಮೆದುಳಿನ ಸೌಂದರ್ಯವನ್ನು ನೋಡಲಿಲ್ಲ"ವೆಂದು ಬರೆದಿದ್ದಾರೆ. ನೌಕರಿಯಲ್ಲಿರುವ ಕೆಲವರು, ತಮ್ಮ ಬಹುಸಂಖ್ಯೆ ಸಮಸ್ಯೆಗಳು ಮೇಲಧಿಕಾರಿ ಮತ್ತು ಸಹೋದ್ಯೋಗಿಗಳಿಂದ ಬಂದವೆಂದಿದ್ದಾರೆ. "ಇಲ್ಲದ ಅಪವಾದ ಹೊರಿಸುವುದು, ಕೆಲಸದಲ್ಲಿ ಸಹಕರಿಸದೆ ಇರುವುದು, ಮೈ ಮತ್ತು ಆಸನದ ಮೇಲೆ ಮಸಿ ಚೆಲ್ಲುವುದು, ಸಿನಿಮಾ ನಟಿಯರ ಹೆಸರಿಟ್ಟು ನಗೆಯಾಡುವುದು ಮುಂತಾದ ಕೀಟಲೆಗಳು ವಿಪರೀತ; ಈ ಕೀಟಲೆಗೆ ಕಾರಣ ತಾವು ಅಲ್ಪಸಂಖ್ಯೆಯಲ್ಲಿರುವುದೇ"—ಎಂದಿದ್ದಾರೆ. ಆದರೆ ೩೫ ವರ್ಷದ ಒಬ್ಬ ಪದವೀಧರ ಸಮಾಜ ಕಾರ್ಯಕರ್ತೆ "ಇದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ನಮ್ಮ ಪುರುಷರಿಗೆ ಪರಸ್ತ್ರೀಯರೊಡನೆ ವ್ಯವಹರಿಸುವುದು ಗೊತ್ತಿಲ್ಲ. ಎರಡನೆಯದಾಗಿ ಮಹಿಳೆಯರು ಅತಿ ಸೌಮ್ಯವಾಗಿರುತ್ತಾರೆ"—ಎಂದಿದ್ದಾರೆ. ೩೮ ವರ್ಷದ ಇನ್ನೊಬ್ಬ ನೌಕರಳು "ನಾನು ಕಚೇರಿಯನ್ನು ಪ್ರವೇಶಿಸುತ್ತಿದ್ದಂತೆ ಅನೇಕ ಹಸಿದ ಕಣ್ಣುಗಳು ನನ್ನತ್ತ ತಿರುಗುತ್ತಿದ್ದವು. ಇದು ಮುಂದುವರೆದು ಕುಚೇಷ್ಟೆಗೆ ಅವಕಾಶ ಮಾಡಿಕೊಟ್ಟಿತು. ಒಂದು ದಿನ ಒಬ್ಬ ಸಹೋದ್ಯೋಗಿಯನ್ನು ಛತ್ರಿಯಿಂದ ಥಳಿಸಿದೆ. ಅಂದಿನಿಂದ ನಮ್ಮ ಕಚೇರಿಯ ವಾತಾವರಣ ಪೂರ್ಣ ಬದಲಾಯಿತು"—ಎಂದು ಬರೆದಿರುವಳು.

ಇದಕ್ಕೆ ಮರುಸವಾಲೆಂಬುವಂತೆ ೨೮ ವರ್ಷದ ಪದವೀಧರ ನೌಕರಳು "ನನ್ನ ಸಹೋದ್ಯೋಗಿಗಳು ನನಗೆಂದೂ ತೊಂದರೆ ಕೊಡುವುದಿಲ್ಲ. ಪುರುಷರೊಡನೆ ವ್ಯವಹರಿಸಲು ಮತ್ತು ಅವರನ್ನು ಹತ್ತಿರದಿಂದ ಅಭ್ಯಸಿಸಲು ನೌಕರಿ ಒಂದು ಅವಕಾಶವೇ ಆಗಿದೆ" ಎಂದಿದ್ದಾಳೆ. ಮತ್ತೊಬ್ಬ ೪೦ ವರ್ಷದ ನೌಕರಳು

ತಮ್ಮ ಹಿಂದಿನ ದಿನಗಳನ್ನು ನೆನೆದು, "ಆ ಕಚೇರಿಗೆ ಹೋದ ಮೊಟ್ಟಮೊದಲ ನೌಕರಳಾದ ನನ್ನನ್ನು ಎಲ್ಲರೂ ಅಭಿನಂದಿಸಿ ಸ್ವಾಗತಿಸಿದರು. ನನ್ನ ಮೇಲಧಿಕಾರಿ ಮೊದಲುಗೊಂಡು ಎಲ್ಲರೂ ಮುಕ್ತಹಸ್ತದಿಂದ ಸಹಾಯ-ಸಹಕಾರ ನೀಡುತ್ತಿದ್ದರು. ಇಂದಿನ ಅನೇಕ ಮಹಿಳೆಯರು ತಮ್ಮ ನೌಕರಿಯಲ್ಲಿ ಸುಖವಾಗಿರದಿದ್ದರೆ ಇದಕ್ಕೆ ಅವರೇ ಕಾರಣರು" ಎಂದು ತಿಳಿಸಿರುವರು. ೨೨ ವರ್ಷದ ಮತ್ತೊಬ್ಬ ನೌಕರಳು "ನಾನು ಪುರುಷರಿಗೆ ಹೆದರುವುದಿಲ್ಲ. ಅವರೊಡನೆ ವ್ಯವಹರಿಸುವದೆಂದರ ನನಗೊಂದು ಮೋಜು. ಇಲ್ಲದ ಕೀಟಲೆ ಮಾಡಿ ಅವರಿಗೆ ತೊಂದರೆ ಕೊಡುವವಳೆಂದರೆ ನಮ್ಮ ಕಚೇರಿಯಲ್ಲಿ ನಾನೊಬ್ಬಳೆ! ಇಷ್ಟಾದರೂ ಆ ಪುರುಷರು ನನಗೇನೂ ತೊಂದರೆ ಮಾಡಿಲ್ಲ"—ಎಂದು ಬರೆದಿದ್ದಾರೆ.

ವಿವಾಹ :

ನಿವೇದಿತರಲ್ಲಿ ಸೇ. ೨೦ ರಷ್ಟು ಜನರು ವಿವಾಹಿತರು, ಉಳಿದ ಸೇ. ೮೦ ಜನರು ಅವಿವಾಹಿತರು. ಅವಿವಾಹಿತರ ಸರಾಸರಿ ವಯಸ್ಸು ೨೩ ವರ್ಷ. "ನಿಮ್ಮ ಅಭಿಪ್ರಾಯದಂತೆ ಸ್ತ್ರೀ-ಪುರುಷರು ವಿವಾಹವಾಗಲು ಸೂಕ್ತ ವಯಸ್ಸಾವುದು ?" ಎಂಬ ಪ್ರಶ್ನೆಗೆ ಉತ್ತರವಾಗಿ ಪುರುಷರಿಗೆ ೨೬ ವರ್ಷ, ಸ್ತ್ರೀಯರಿಗೆ ೨೨ ವರ್ಷಗಳ ಸರಾಸರಿ ವಯಸ್ಸನ್ನು ಸೂಚಿಸಿದ್ದಾರೆ. ಈ ಗಣನೆಯಲ್ಲಿ ಹೊರಬಿದ್ದ ಮೋಜಿನ ಸಂಗತಿಯೆಂದರೆ ಅನೇಕ ಅವಿವಾಹಿತ ಮಹಿಳೆಯರು ತಮ್ಮ ವಯಸ್ಸಿಗೆ ಒಂದು ವರ್ಷ ಹೆಚ್ಚಿಗೆ ಸೇರಿಸಿ ಅದನ್ನೇ ಸೂಕ್ತ ವಯಸ್ಸೆಂದು ಬರೆದ ಅನೇಕ ನಿದರ್ಶನಗಳಿವೆ. ಪದವೀಧರ ಮಹಿಳೆಯರೇಕೆ ತಡವಾಗಿ ವಿವಾಹವಾಗುತ್ತಾರೆ" ಎಂಬ ಪ್ರಶ್ನೆಗೆ ಸೇ. ೭೮ ಜನರ ಅಭಿಪ್ರಾಯದಂತೆ ಸಮಾಜ ಇಂದಿಗೂ ಪದವೀಧರ ಸೊಸೆಯಂದಿರನ್ನು ಅಪೇಕ್ಷಿಸುವದಿಲ್ಲ" ಎಂದು, ಸೇ. ೧೦ ಜನರು "ಇದು ಪದವೀಧರರ ತಪ್ಪಲ್ಲ, ವರದಕ್ಷಿಣೆ ಮುಂತಾದವು" ಎಂದು ಹೇಳಿದ್ದಾರೆ. ಸೇ. ೮ ಜನರು "ಗಂಡಸರಿಗೆ ಪದವೀಧರೆಯನ್ನು ಮದುವೆಯಾಗಲು ಮನಸ್ಸಿಲ್ಲ" ಎಂದು, ಸೇ. ೭ ಜನರು "ಕೆಲ ಮಹಿಳೆಯರು ತಮ್ಮ ಮೇಲಿರುವ ಕೌಟುಂಬಿಕ ಜವಾಬ್ದಾರಿಗಳಿಂದಾಗಿ ತಮ್ಮ ಮದುವೆಯನ್ನು ಮುಂದೂಡಬೇಕಾಯಿತು" ಎಂದು ತಿಳಿಸಿದ್ದಾರೆ. ಉಳಿದವರು "ಮಹಿಳೆಯರು ತಮ್ಮ ವಿದ್ಯಾಭ್ಯಾಸ ಮುಗಿದ ಕೂಡಲೇ ಸಂಸಾರ ತಾಪತ್ರಯಗಳಲ್ಲಿ ಮುಳುಗಲು ಇಚ್ಛಿಸುವದಿಲ್ಲ. ಕೆಲವರ್ಷಗಳಾದರೂ ನೌಕರಿ ಜೀವನದ ಸುಖವನ್ನು ಅನುಭವಿಸುವ ಆಸೆ ಇರುವವರಿಂದ ಮದುವೆಯನ್ನು ಮುಂದೂಡುತ್ತಾರೆ" ಎಂದು ಬರೆದಿರುವರು.

"ತಮ್ಮ ಜೀವನಸಂಗಾತಿಯನ್ನು ಆರಿಸುವುದರಲ್ಲಿ ತಾವು ಯಾವ ಯಾವ ವಿಷಯಗಳಿಗೆ ಮಹತ್ವ ಕೊಡುವಿರಿ ?" ಎಂಬ ಮತ್ತೊಂದು ಪ್ರಶ್ನೆಗೆ ಸೇ. ೮೦ ಜನರು "ಪುರುಷರ ಗಳಿಕೆಯ ಸ್ಥಿರತೆಗೆ", ಸೇ. ೪ ಜನರು "ಅವರ ಆರೋಗ್ಯ

ರೂಪಗಳಿಗೆ", ಸೇ. ೨ ಜನರು " ವರನಿಗೆ ತನ್ನ ಮಾತಾ-ಪಿತೃಗಳ ಬಗೆಗೆ ಇರುವ ಗೌರವಕ್ಕೆ ", ಸೇ. ೨ ಜನರು " ಅವರ ಕುಟುಂಬದ ಹಿನ್ನೆಲೆಗೆ ಮಹತ್ವ ಕೊಡುವುದಾಗಿ " ಬರೆದಿದ್ದಾರೆ. ಇನ್ನೊಂದು ಪ್ರಶ್ನೆ : " ನೀವು ನಿಮ್ಮ ವಿದ್ಯೆ, ಘನತೆ ಮತ್ತು ನೌಕರಿಗಳಿಗಿಂತಲೂ ಕಡಿಮೆ ಸ್ಥಾನದಲ್ಲಿರುವಾತನನ್ನು ಮದುವೆಯಾಗಲು ಒಪ್ಪುವಿರಾ? " ಎಂಬುದಕ್ಕೆ ಸೇ. ೯೮ ಜನರು " ಸಾಧ್ಯವಿಲ್ಲ " ಎಂದು, ಉಳಿದ ಸೇ. ೨ ಜನರು ಮಾತ್ರ " ಒಪ್ಪಿಗೆ " ಎಂದು ಸೂಚಿಸಿದ್ದಾರೆ. " ಒಪ್ಪಿಗೆ " ಎಂದವರು " ವರನ ನಡತೆ ಮತ್ತು ಗುಣಗಳನ್ನು ನಾವು ಗಮನಕ್ಕೆ ತಂದುಕೊಳ್ಳಬೇಕೇ ಹೊರತು ವಿದ್ಯೆ ಮತ್ತು ಗಳಿಕೆಗಳನ್ನಲ್ಲ " ಎಂದಿದ್ದಾರೆ. " ಸಾಧ್ಯವಿಲ್ಲ " ಎಂದು ಬರೆದವರು " ನಾವೇನಾದರೂ ಅಂಥವರನ್ನು ಮದುವೆಯಾದರೆ ಸಂಸಾರದಲ್ಲಿ ಸುಖವಿರುವುದಿಲ್ಲ. ನಾವು ಅವರಿಗೆ ಗೌರವ ಕೊಡದಿರಬಹುದು. ಒಂದುವೇಳೆ ಕೊಟ್ಟರೂ ಗಂಡಸರೇ ತಮ್ಮ ಹೆಂಡಂದಿರ ಬಗೆಗೆ ತಪ್ಪು ಭಾವನೆ ಹೊಂದಬಹುದು. ಈ ಎಲ್ಲಾ ಕಾರಣಗಳಿಂದ ಅಂಥವರನ್ನು ಮದುವೆಯಾಗದಿರುವದೇ ಲೇಸು "—ಎಂದಿದ್ದಾರೆ. ಕೆಲವರು " ತಾವು ಒಪ್ಪುವುದಾದರೂ ತಮ್ಮ ತಂದೆ-ತಾಯಿಗಳು ಖಂಡಿತ ಒಪ್ಪುವುದಿಲ್ಲ " ಎಂದು, ಇನ್ನು ಕೆಲವರು " ತಾವೇನಾದರೂ ಅಂಥವರನ್ನು ವಿವಾಹವಾದರೆ ತಮ್ಮ ಸ್ನೇಹಿತರು ಮತ್ತು ಸಮಾಜವು ಗತಿ ಇಲ್ಲದೆ ಅವನನ್ನು ಮದುವೆಯಾದಳೆಂದು ಅಣಕಿಸುತ್ತದೆ, ಆದ್ದರಿಂದ ಇಂತಹ ಸಾಹಸಕಾರ್ಯಕ್ಕೆ ಕೈಯಿಕ್ಕುವುದಿಲ್ಲ " ಎಂದು ಬರೆದಿದ್ದಾರೆ. ಇನ್ನೊಂದು ಪ್ರಶ್ನೆ : " ನಿಮ್ಮ ಮದುವೆಯು ಮುಖ್ಯವಾಗಿ ಯಾವ ವಿಷಯದ ಮೇಲೆ ನಿರ್ಣಯವಾಗಲಿದೆ ಅಥವಾ ಆಗಿದೆ ? " ಎಂಬುದಕ್ಕೆ ಸೇ. ೧೨ ಜನರು " ತಮ್ಮ ನೌಕರಿ " ಎಂದು, ಸೇ. ೫೦ ಜನರು " ತಮ್ಮ ತಂದೆ–ತಾಯಿಗಳ ನಿರ್ಧಾರದಂತೆ " ಎಂದು, ಸೇ. ೨ ಜನರು " ತಮ್ಮ ಪ್ರೀತಿ " ಎಂದು, ಉಳಿದ ಸೇ. ೨೦ ಜನರು " ವರದಕ್ಷಿಣೆ " ಮತ್ತಿತರ ಅನೇಕ ಕಾರಣ ತಿಳಿಸಿದ್ದಾರೆ.

ಜೀವನಕ್ರಮ :

ಪದವೀಧರ ಮಹಿಳೆಯರು ಹೇಗೆ ತಮ್ಮ ನಿತ್ಯಜೀವನವನ್ನು ಕಳೆಯುತ್ತಾರೆ, ಅವರ ಆಸೆ-ಆಕಾಂಕ್ಷೆಗಳಾವುವು ಮುಂತಾದ ವಿಷಯಗಳನ್ನು ತಿಳಿಯುವುದೇ ಇಲ್ಲಿಯ ಮುಖ್ಯ ಉದ್ದೇಶ. " ಯಾವಾಗಲಾದರೂ ನೀವು ಪಡೆದ ವಿದ್ಯೆಯು ಉಪಯೋಗವಿಲ್ಲದ್ದೆನಿಸಿದೆಯೆ ? " ಎನ್ನುವ ಪ್ರಶ್ನೆಗೆ ಸೇ. ೯೩ ಜನರು " ಇಲ್ಲ " ಎಂದು, ಸೇ. ೭ ಜನರು " ಅಹುದು " ಎಂದು ಹೇಳಿದ್ದಾರೆ. ಇಲ್ಲವೆಂದವರಲ್ಲಿ ಅನೇಕರು " ತಮ್ಮ ವಿದ್ಯೆಯು ತಾವು ನೌಕರಿ ಪಡೆಯಲು ಮತ್ತು ತಮ್ಮ ಕುಟುಂಬದ ಆರ್ಥಿಕ ರಂಗದಲ್ಲಿ ಸಹಾಯವಾಯಿತು " ಎಂದು ಬರೆದಿದ್ದಾರೆ. ನೌಕರಿ ಸಿಗದಿರುವ ಇನ್ನು ಕೆಲವರು ಸಹ " ತಮ್ಮ ಮುಂದಿನ

ಜೀವನವು ಈ ವಿದ್ಯೆಯಿಂದಲೇ ಸುಖಮಯವಾಗುವುದು" ಎಂದು ತಿಳಿಸಿದ್ದಾರೆ. ಮತ್ತೊಂದು ಪ್ರಶ್ನೆ—"ನಿಮ್ಮ ಹೆಚ್ಚಿನ ವಿದ್ಯೆಯಿಂದ ನಿಮಗಾದ ಪ್ರಯೋಜನಗಳಾವವು?–" ಎಂಬುದಕ್ಕೆ ಶೇ. ೬೬ ಜನರಿಗೆ ಇದು "ಮನಃಶಾಂತಿ ತಂದಿತಂತೆ," ಸೇ. ೧೪ ಜನರಿಗೆ "ತಮ್ಮ ಕೌಟುಂಬಿಕ ಜೀವನದಲ್ಲಿ ಸಹಾಯವಾಯಿತಂತೆ," ಸೇ. ೧೦ ಜನರಿಗೆ "ಜೀವನದಲ್ಲಿ ಸಂತೋಷ ಸಿಕ್ಕಿತಂತೆ." ಈ ಅಭಿಪ್ರಾಯಗಳಿಗೆ ವಿರುದ್ಧವಾಗಿ ಸೇ. ೨೮ ಜನರಿಗೆ ತಮ್ಮ ವೈವಾಹಿಕ ಜೀವನದಲ್ಲಿ ತೊಂದರೆಯಾಗಿದೆಯಂತೆ, ಸೇ. ೧೨ ಜನರು ತಮ್ಮ ಮನಃಶಾಂತಿಯನ್ನು ಕಳೆದುಕೊಂಡರಂತೆ, ಸೇ. ೩ ಜನರ ಆರೋಗ್ಯ ಕೆಟ್ಟಿತಂತೆ.

ಪದವೀಧರ ಮಹಿಳೆಯರು ತಮ್ಮ ಬಿಡುವಿನ ವೇಳೆಯನ್ನು ಯಾವ ರೀತಿಯಲ್ಲಿ ಉಪಯೋಗಿಸುತ್ತಾರೆ ಮತ್ತು ತಾವು ಯಾವುದಾದರೂ ಸಂಘ-ಸಂಸ್ಥೆಗಳಿಗೆ ಸದಸ್ಯರಿರುವರೇ ಎಂಬುದನ್ನು ತಿಳಿಯಲು ಪ್ರಶ್ನೆ ಕೇಳಲಾಗಿತ್ತು. ಸೇ ೯೩ ಜನರು ಯಾವದೊಂದು ಸಾಂಸ್ಕೃತಿಕ ಅಥವಾ ಸಾಮಾಜಿಕ ಸಂಘ-ಸಂಸ್ಥೆಗಳಿಗೆ ಸದಸ್ಯರಿಲ್ಲವೆಂದೂ; ಸೇ. ೫೩ ಜನರು ತಮ್ಮ ಒಲವಿಗೆ ಯೋಗ್ಯವೆನಿಸುವ ಸಂಘ-ಸಂಸ್ಥೆ ಈ ನಗರದಲ್ಲಿಲ್ಲವೆಂದೂ ತಿಳಿಸಿದ್ದಾರೆ. ಸೇ. ೪೦ ಜನರು ಇಂತಹ ಸಂಸ್ಥೆಗಳಿಗೆ ಸೇರಲು ಸಮಯವಿಲ್ಲವೆಂದು ಬರೆದಿದ್ದಾರೆ. ಸೇ. ೭ ಜನರು ಸದ್ಯ ಕಾರ್ಯ ಮಾಡುತ್ತಿರುವ ಸಂಘ-ಸಂಸ್ಥೆಗಳು ನಿರುಪಯೋಗಿ ಇರುವುದರಿಂದ ತಾವು ಸೇರಿಲ್ಲವೆಂದು ಬರೆದಿದ್ದಾರೆ.

"ಪದವೀಧರ ಮಹಿಳೆ ತನ್ನ ಕುಟುಂಬಕ್ಕೆ ಯಾವ ರೀತಿಯಲ್ಲಿ ಸಹಾಯಕಳಾಗಬಲ್ಲಳು?" ಎಂಬ ಪ್ರಶ್ನೆಗೆ ಸೇ. ೨೦ ಜನರು "ದುಡಿದು ತರಬಲ್ಲಳು" ಎಂದು, ಸೇ. ೫೩ ಜನರು "ತನ್ನ ಸಂಸಾರವನ್ನು ಚೊಕ್ಕಟವಾಗಿ ನಡೆಸಬಲ್ಲವಳೆಂದು", ಸೇ. ೨೭ ಜನರು "ಕುಟುಂಬಕ್ಕೆ ಗೌರವಪಾತ್ರಯಳೆಂದು" ಬರೆದಿದ್ದಾರೆ. "ತನ್ನ ಪತಿಗೆ ಪದವೀಧರ ಮಹಿಳೆಯು ಯಾವ ರೀತಿಯಲ್ಲಿ ಸಹಾಯಕಳಾಗಬಲ್ಲಳು?" ಎಂಬ ಪ್ರಶ್ನೆಗೆ ಸೇ. ೪೦ ಜನರು "ಕುಟುಂಬಕ್ಕೆ ಹಣ ಗಳಿಸುವದರಿಂದ" ಎಂದು, ಸೇ. ೪೦ ಜನರು "ಅವನಿಗೆ ಮೇಲ್ಮಟ್ಟದ ಸಹವಾಸವನ್ನು ನೀಡುವದರಿಂದ" ಎಂದು, ಸೇ. ೨೦ ಜನ "ಮನೆತನದ ಎಲ್ಲ ಜವಾಬ್ದಾರಿಯನ್ನು ವಹಿಸಿಕೊಂಡು ಅವನನ್ನು ಮನೆಯ ತೊಂದರೆಗಳಿಂದ ವಿಮೋಚನೆಗೊಳಿಸುವದರಿಂದ"— ಎಂದು ತಿಳಿಸಿದ್ದಾರೆ. "ನಿಮ್ಮ ಸದ್ಯದ ತೊಂದರೆಗಳಾವವು?" ಎನ್ನುವ ಪ್ರಶ್ನೆಗೆ, ಸೇ. ೪೩ ಜನರು "ಧಾರವಾಡದಲ್ಲಿಯೇ ತಮಗೆ ನೌಕರಿ ಸಿಗದಿರುವದು" ಎಂದು, ಸೇ. ೨೬ ಜನರು "ಇಲ್ಲಿ ತಮ್ಮ ಬುದ್ಧಿಯ ಮಟ್ಟದ ಸಹವಾಸ ಇಲ್ಲದಿರುವುದು'— ಎಂದು ಸೇ. ೩೧ ಜನರು "ವೇಳೆಯನ್ನು ಕಳೆಯುವುದು ಹೇಗೆ?" — ಇವು ತಮ್ಮ ಸದ್ಯದ ತೊಂದರೆ ಎಂದು ತಿಳಿಸಿರುವರು.

ಚರ್ಚೆ ಮತ್ತು ಸಮಾಪ್ತಿ :

ಇಂದು ಧಾರವಾಡವು ಮಹಾನಗರವೊಂದರ ಭಾಗವಾಗಿದೆ. ೧೯೬೧ ರ ಜನಗಣತಿಯಂತೆ ಈ ಮಹಾನಗರದ ಒಟ್ಟು ಜನಸಂಖ್ಯೆ ೨,೪೮,೪೯೯ ಇದ್ದು, ಧಾರವಾಡದಲ್ಲಿ ೭೭,೧೬೩ (೪೧,೦೭೭ ಪುರುಷರು, ೩೬,೦೮೬ ಸ್ತ್ರೀಯರು) ಜನರು ವಾಸವಾಗಿರುವರು. ಧಾರವಾಡದ ಅಕ್ಷರಸ್ಥರ ಸಂಖ್ಯೆ ಸಾವಿರ ಜನಕ್ಕೆ ೫೦೩ ಇದ್ದು (ಪುರುಷರು ಸಾವಿರಕ್ಕೆ ೩೬೭, ಸ್ತ್ರೀಯರು ೧೬೮) ಇದು ಮೈಸೂರು ದೇಶದ ಅಕ್ಷರಸ್ಥರ ಸಂಖ್ಯೆಗಿಂತ ಹೆಚ್ಚಿದೆ. ಇದಕ್ಕೆ ಕಾರಣ ಧಾರವಾಡದಲ್ಲಿ ಶಿಶುವಿಹಾರದಿಂದ ಸ್ನಾತಕೋತ್ತರ ತರಗತಿಗಳವರೆಗೆ ಅನೇಕ ವಿದ್ಯಾಕೇಂದ್ರಗಳಿರುವುದು. ಧಾರವಾಡವು ಜಿಲ್ಲೆಯ ಕೇಂದ್ರವಾದುದರಿಂದ ಜಿಲ್ಲಾಮಟ್ಟದ ಎಲ್ಲ ಸರಕಾರಿ ಕಚೇರಿಗಳು ಇಲ್ಲಿವೆ. ಇದು ನಿವೃತ್ತಿಹೊಂದಿದ ಅಧಿಕಾರಿಗಳ ನಿವಾಸಸ್ಥಳವೆಂದೂ ಹೆಸರಾಗಿದೆ. ಉತ್ತಮ ಹವೆ, ದಿನನಿತ್ಯದ ಕಡಿಮೆ ಖರ್ಚು, ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲತೆಗಳಿರುವುದರಿಂದ ನಿವೃತ್ತರಾದ ಅಧಿಕಾರಿಗಳು, ರಾಜಕಾರಣಿಗಳು, ಕಲಾವಿದರು, ಕವಿಗಳು ಇಲ್ಲಿ ನೆಲಸಿ, ಈ ನಗರ ಬುದ್ಧಿಜೀವಿಗಳ ಕೇಂದ್ರವಾಗಿ ಕಂಗೊಳಿಸುತ್ತಿದೆ.

ಇಂದಿನ ಧಾರವಾಡವು ಯೋಜನೆಯಂತೆ ಬೆಳೆದುದಲ್ಲ. ನಗರವು ಬೆಳೆದಂತೆ ಹತ್ತಿರದ ಹಳ್ಳಿಗಳು ಸೇರಿಕೊಂಡಿವೆ. ಈ ಕಾರಣದಿಂದ ಇಲ್ಲಿಯ ಮುಕ್ಕಾಲು ಪಾಲು ನಿವಾಸಿಗಳು ಇನ್ನೂ ಗ್ರಾಮಜೀವನದ ಹಿನ್ನೆಲೆಯನ್ನು ಹೊಂದಿದವರಾಗಿದ್ದಾರೆ. ಧಾರವಾಡದ ರಸ್ತೆಗಳಲ್ಲಿ ಎತ್ತು ಮತ್ತು ಎಮ್ಮೆಗಳು ಸರ್ವ-ಸಾಮಾನ್ಯವಾಗಿ ಕಂಡುಬರುತ್ತವೆ.

ಧಾರವಾಡದ ಒಂದೆರಡು ಉಪನಗರಗಳಲ್ಲಿ ಹೊರಗಿನಿಂದ ಬಂದ ನೌಕರರು, ವ್ಯಾಪಾರಸ್ಥರು ಮುಂತಾದವರು ನೆಲೆಸಿದ್ದಾರೆ. ಮಿಕ್ಕ ಭಾಗದಲ್ಲಿ ಈ ನಗರದ ಮೂಲನಿವಾಸಿಗಳೇ ವಾಸವಾಗಿದ್ದಾರೆ. ಈ ದೆಸೆಯಿಂದ ಧಾರವಾಡದ ನಿವಾಸಿಗಳನ್ನು ಸ್ಥಳಿಕರು ಮತ್ತು ಹೊರಗಿನಿಂದ ಬಂದವರು ಎಂದು ವಿಭಾಗಿಸ-ಬಹುದು. ಸ್ಥಳಿಕರಲ್ಲಿ ಇಂದಿಗೂ ಪರಸ್ಪರ ಪರಿಚಯ ಮತ್ತು ಸಂಬಂಧಗಳಿವೆ. ಇವು ಕಳ್ಳುಬಳ್ಳಿ, ಜಾತಿ, ಸಮಾಜ ಮತ್ತಿತರ ಸಾಂಪ್ರದಾಯಿಕ ನಿಬಂಧನೆಗಳಿಗೆ ಒಳಗಾದುವು. ಈ ಕಾರಣದಿಂದ ವೈದ್ಯ, ಉಪಾಧ್ಯಾಯ, ವ್ಯಾಪಾರಿ ಮುಂತಾದವರೊಂದಿಗೆ ಬಹುಕಾಲದಿಂದ ವ್ಯಾವಹಾರಿಕ ಸಂಪರ್ಕವನ್ನಿಟ್ಟುಕೊಂಡ ಈ ಸ್ಥಳಿಕರು ಇತರರೊಡನೆ ಸಂಪರ್ಕ ಬೆಳೆಸುವುದಿಲ್ಲ. ಹೊರಗಿನಿಂದ ಬಂದವರಿಗೆ ಇದು ಅನ್ವಯಿಸುವುದಿಲ್ಲ. ಧಾರವಾಡದ ಪದವೀಧರ ಮಹಿಳೆಯರಲ್ಲೂ ಈ ಗುಣಧರ್ಮ ಕಂಡುಬರುತ್ತದೆ.

ಧಾರವಾಡದ ಹಿನ್ನೆಲೆಯನ್ನು ಮತ್ತು ಮಹಿಳಾ ಪದವೀಧರರು ನೀಡಿರುವ ಉತ್ತರಗಳನ್ನು ವಿವೇಚಿಸಿದರೆ ಅಲ್ಲಿಯ ನಿವಾಸಿಗಳು ಭಾರತೀಯ ಸಂಸ್ಕೃತಿಯ

ಪೂರ್ಣ ನೆರಳಿನಲ್ಲಿದ್ದುದು ವ್ಯಕ್ತವಾಗುತ್ತದೆ. ಇವರ ಆಚಾರ-ವಿಚಾರ, ಭಾವನೆ–ಆಕಾಂಕ್ಷೆಗಳು ಈ ಸಂಪ್ರದಾಯದ ಹಿನ್ನೆಲೆಯಿಂದ ಬಂದವಾಗಿವೆ. ಈ ಭಾವನೆಯ ತಂದೆತಾಯಂದಿರು ತಮ್ಮ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸ, ನೌಕರಿ, ಆಧುನಿಕತೆಗೆ ಅಡ್ಡಿ ಮಾಡುವ ದೃಷ್ಟಿಯನ್ನು ಹೊಂದಿದ್ದಾರೆ.

ಧಾರವಾಡದ ಹೆಚ್ಚಿನ ಭಾಗವು ಇನ್ನೂ ಗ್ರಾಮೀಣ ಸ್ಥಿತಿಯಲ್ಲಿರುವುದರಿಂದ ಇಲ್ಲಿಯ ಅನೇಕ ಜನರಿಗೆ ನೇರ ಮತ್ತು ವ್ಯಕ್ತಿಗತ ಸಂಬಂಧಗಳಿರುವುದರಿಂದ ಜನರು ಜನಾಭಿಪ್ರಾಯಕ್ಕೆ ಅಂಜಿ ಬದುಕುವಮಾಡುತ್ತಾರೆ, ಇದನ್ನು ಲಕ್ಷಿಸದೆ ನಡೆಯಬೇಕೆಂಬ ಮನಸ್ಸಿದ್ದರೂ ಸುತ್ತಲಿನ ಸಮಾಜಕ್ಕೆ ಹೆದರಿ ಬದುಕುವ ಅನೇಕ ಉದಾಹರಣೆಗಳನ್ನು ಇಲ್ಲಿ ಕಾಣಬಹುದಾಗಿದೆ. ಸಿಂಗರಿಸಿಕೊಂಡು ಹೊರ ಬಂದರೆ, ಹೊಸ್ತಿಲ ಹೊರಗೆ ನಿಂತು ಪರ-ಪುರುಷರೊಡನೆ ಸಹಜವಾಗಿ ವ್ಯವಹರಿಸಿದರೆ ಸಂಪ್ರದಾಯಸ್ಥರು ದಿಗ್ಭ್ರಮೆಗೊಳ್ಳುತ್ತಾರೆ.

ಸಂಪ್ರದಾಯದ ಸೆರೆಯಲ್ಲಿ ಶತಮಾನಗಳನ್ನು ಕಳೆದ ಭಾರತದಲ್ಲಿ ಸ್ತ್ರೀಗೆ ಯಾವ ಸ್ಥಾನಮಾನಗಳೂ ಇರಲಿಲ್ಲ. ಆದರೆ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಅನೇಕ ಸಮಾಜಸುಧಾರಕರ ಇಚ್ಛೆಯಂತೆ ನಮ್ಮ ಮಹಿಳೆಯರು ಸಾರ್ವಜನಿಕ ಜೀವನವನ್ನು ಪ್ರವೇಶಿಸಿದರು. ಈ ದೆಸೆಯಿಂದಾಗಿ ಅನೇಕ ಮಹಿಳೆಯರು ಎಲ್ಲ ಕಾರ್ಯರಂಗದಲ್ಲಿಯೂ ಮುಂದು ಬಂದಿದ್ದಾರೆ. ಆದರೆ ಸಮಾಜದ ಒಂದೆರಡು ವರ್ಗಗಳನ್ನು ಬಿಟ್ಟರೆ ಉಳಿದ ವರ್ಗಗಳು ಹಳೆಯ ಹಾದಿಯಲ್ಲಿಯೇ ನಡೆದಿವೆ. ಈ ವಿರುದ್ಧ ಭಾವನೆಯ ಎರಡು ವರ್ಗಗಳನ್ನುಳ್ಳ ನಮ್ಮ ಸಮಾಜದ ವಿದ್ಯಾವಂತ, ನೌಕರಿ ಮಾಡುವ ಮತ್ತು ಸಮಾಜಕಾರ್ಯಗಳಲ್ಲಿ ದುಡಿಯುತ್ತಿರುವ ಮಹಿಳೆಯರು ಒಂದು ದೊಡ್ಡ ತೊಂದರೆಯನ್ನೇ ಎದುರಿಸಬೇಕಾಗಿ ಬಂದಿದೆ.

ಧಾರವಾಡದ ವಿದ್ಯಾವಂತ ಮಹಿಳೆಯರ ತೊಂದರೆಗಳು ಇಡೀ ಭಾರತದ ವಿದ್ಯಾವಂತ ಮಹಿಳೆಯರು ಅನುಭವಿಸುತ್ತಿರುವ ತೊಂದರೆಗಳಾಗಿವೆ. ಬೇರೆಲ್ಲ ಕಾರಣಗಳ ಜೊತೆಗೆ ಜಾತೀಯತೆ, ಪ್ರಾದೇಶಿಕತೆ, ಮತೀಯತೆ, ಮುಂತಾದವುಗಳು ಸೇರಿವೆ. ಒಂದು ಗುಂಪಿನವರು ಇನ್ನೊಂದು ಗುಂಪಿನವರನ್ನು ಕೆಣಕುವುದು, ತುಳಿಯಲು ಪ್ರಯತ್ನಿಸುವುದು ಮುಂತಾದವು ಸಮಾಜಕ್ಕೆ ಗಂಡಾಂತರಕಾರಿಯಾಗಿವೆ. ಈ ಕಾರಣಗಳಿಂದ ಅಂತರ್ಜಾತೀಯ ವಿವಾಹಗಳು ಸಾಧ್ಯವಿಲ್ಲ. ಹೀಗಾಗಿ ವಿವಾಹವಾಗಬೇಕೆಂದಿರುವ ಕೆಲವು ಸ್ತ್ರೀಯರು ತಮ್ಮ ವಿವಾಹದ ಬಗ್ಗೆ ಯಾವೊಂದು ಖಚಿತ ಭಾವನೆಯನ್ನು ತಳೆದಿಲ್ಲ. ಕೆಲವರು ಹಿರಿಯರ ಒತ್ತಾಯಕ್ಕೆ ಒಪ್ಪಿ ವಿವಾಹವಾಗಿದ್ದಾರೆ. ಇಂತಹ ವಿವಾಹಗಳಲ್ಲಿ ಸಹಜವಾಗಿ ವಧುವರರ ಪರಸ್ಪರ ಮನೆತನದ ಸ್ಥಿತಿ, ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯತ್ತಿನ ಲಾಭ-ನಷ್ಟಗಳನ್ನು ಬಿಟ್ಟರೆ ಉಳಿದ ವಿಷಯಗಳು ಅಷ್ಟು ಪ್ರಧಾನವಲ್ಲ.

ಅನೇಕ ವೇಳೆ ಮದುವೆಯಾಗುವ ಕನ್ಯೆ ವರನನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಿರಲಿ, ವಿವಾಹದ ಪೂರ್ವದಲ್ಲಿ ನೋಡುವುದೂ ಅಸಾಧ್ಯವಾಗಿದೆ. ಕಾರಣ ವಿವಾಹವಾಗುವ ವ್ಯಕ್ತಿಗಳು ತಮ್ಮ ಉತ್ತಮ ನಡತೆ, ಯೋಗ್ಯತೆ, ಆದರಪ್ರೀತಿಗಳಿಂದ ಒಬ್ಬರನ್ನೊಬ್ಬರು ಮೆಚ್ಚಿಸಬೇಕಾಗಿಲ್ಲ. ಅಲ್ಲದೆ ವರಗಳ ಅಭಾವದ ಕಾರಣವಾಗಿ ಮುಖ್ಯವಾದ ಒಂದೆರಡು ವಿಷಯಗಳಲ್ಲಿ ಸರಿ ಇದ್ದು, ಉಳಿದ ವಿಷಯಗಳಲ್ಲಿ ಸರಿಯಾಗಿರದಿದ್ದರೂ ಸಿಕ್ಕ ವರಗಳನ್ನು ಕೈಬಿಡುವ ಸಾಹಸವನ್ನು ವಧುವಿನ ತಂದೆ-ತಾಯಂದಿರು ಮಾಡುವುದಿಲ್ಲ. ಹೀಗಾಗಿ ತಮ್ಮ ಹೆಣ್ಣುಮಕ್ಕಳ ಮದುವೆಯು ತಂದೆ-ತಾಯಿಗಳಿಗೆ ಒಂದು ದೊಡ್ಡ ಸಮಸ್ಯೆಯಾಗಿದ್ದು ಯುವತಿಯರು ಅವರ ಕೈಗೊಂಬೆಗಳಾಗಿದ್ದಾರೆ, ನಿಸ್ಸಹಾಯಕರಾಗಿದ್ದಾರೆ.

ಪಾಶ್ಚಿಮಾತ್ಯರಲ್ಲಿ ವಿವಾಹವು ಸಾಮಾನ್ಯವಾಗಿ ಕಾಮಪೂರಿತವಾಗಿರದೆ ಒಬ್ಬರನ್ನೊಬ್ಬರು ಕೂಲಂಕಷವಾಗಿ ಅಭ್ಯಸಿಸಿ, ಪ್ರೀತಿಸಿ ಒಂದು ನಿರ್ಧಾರಕ್ಕೆ ಬಂದು ವರಿಸುವುದಾಗಿರುತ್ತದೆ. ತನ್ನ ಪಿತ್ರಾರ್ಜಿತ ಆಸ್ತಿ, ಮನೆತನದ ಹಿರಿಮೆ, ತಂದೆ-ತಾಯಂದಿರ ಅಭಿಪ್ರಾಯಗಳು ಸಾಮಾನ್ಯವಾಗಿ ಗೌಣ. ಹೀಗಾಗಿ ಯಾವೊಬ್ಬ ತರುಣ-ತರುಣಿಯೇ ಆಗಲಿ ಮತ್ತೊಬ್ಬರೊಡನೆ ಹೊಣಗೇಡಿಗಳಾಗಿ ನಡೆದುಕೊಳ್ಳುವುದಿಲ್ಲ. ತನ್ನ ಕೆಟ್ಟ ನಡವಳಿಕೆಗಳು ಎಲ್ಲಿ ತನ್ನ ಪ್ರಿಯತಮೆಗೆ ಮುಟ್ಟಬಿಡುವುವೋ ಎಂಬ ಹೆದರಿಕೆಯು ಅವರನ್ನು ಸದಾ ನಮ್ರನಡವಳಿಕೆಯವರನ್ನಾಗಿ ಮಾಡುತ್ತದೆ. ಇಂತಹ ಭಾವನೆ ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ಇಲ್ಲದಾದುದರಿಂದ ಭಾರತೀಯ ಮಹಿಳೆ ಅನೇಕ ಎಡರುಗಳನ್ನು ಅನುಭವಿಸುತ್ತಾಳೆ. ಅವಳ ತಂದೆ-ತಾಯಿಗಳೂ ಇಲ್ಲದ ಕೊರಗನ್ನು ಹಚ್ಚಿಕೊಳ್ಳುತ್ತಾರೆ.

ಮಹಿಳೆಯರಿಗೆ ತೊಂದರೆಗಳನ್ನು ತಂದ ಅನೇಕ ಕಾರಣಗಳಲ್ಲಿ ನಮ್ಮ ಸಮಾಜದಲ್ಲಿ ವಿವಾಹವಿಚ್ಛೇದನಕ್ಕೆ ಅವಕಾಶ ಇಲ್ಲದಿರುವುದೂ ಒಂದು. ನಾವು ಪಾಶ್ಚಾತ್ಯ ಸಮಾಜದಲ್ಲಾಗುತ್ತಿರುವ ವಿವಾಹವಿಚ್ಛೇದನಗಳ ಸಂಖ್ಯೆಯನ್ನು, ಅಲ್ಲಿಯ ಮುರಿದುಹೋದ ಕುಟುಂಬಗಳನ್ನು ಮತ್ತು ಅಂಥ ಕುಟುಂಬದ ಮಕ್ಕಳ ತೊಂದರೆಗಳನ್ನು ನೋಡಿದರೆ ನಮ್ಮ ಸಾಂಪ್ರದಾಯಿಕ ವಿವಾಹ-ಸಂಬಂಧವೇ ಮೇಲು ಎನ್ನಿಸುತ್ತದೆ. ಆದರೆ ಇಂತಹ ಕುಟುಂಬದಲ್ಲಿಯೂ ಅನೇಕ ತೊಂದರೆಗಳಿವೆ. ನಮ್ಮ ಸಮಾಜದಲ್ಲಿ ವಿದ್ಯಾವಂತ ಹಾಗು ಪ್ರಜ್ಞಾವಂತ ಮಹಿಳೆಯರ ಸಂಖ್ಯೆ ಕಡಿಮೆ. ಆರ್ಥಿಕವಾಗಿ, ಮಾನಸಿಕವಾಗಿ ಸ್ವತಂತ್ರರಾಗಿರುವವರು ಇನ್ನೂ ಕಡಿಮೆ. ಈ ಎಲ್ಲ ಕಾರಣಗಳಿಂದ ಗಂಡಸಿಗೆ "ತಾನು ದುಡಿದು ತರುವವ, ಆಕೆಯನ್ನು ಅನ್ನ-ಬಟ್ಟೆ ಕೊಟ್ಟು ಕಾಪಾಡುವವ" ಎನ್ನುವ ಹೆಮ್ಮೆ ಇರುತ್ತದೆ. ಈ ಒಂದು ಹೆಮ್ಮೆಯು ಅತಿಯಾದ ಕುಟುಂಬಗಳಲ್ಲಿ ಹೆಂಡತಿಯ ಬಾಳು ಗೋಳಿನದಾಗುತ್ತದೆ. "ತನ್ನ ಅನ್ನ-

ಬಟ್ಟೆಗೆ ಗಳಿಸುವ ಸ್ಥಿತಿ ತನಗೂ ಇದ್ದಿದ್ದರೆ" ಎಂದು ಆಕೆ ಕೊರಗುತ್ತಾಳೆ. ಕೆಲವು ಜನರು ಹೊರಗೆ ನೌಕರಿ ಹಿಡಿದು ದುಡಿಯುವ ಸ್ಥಿತಿಯಲ್ಲಿದ್ದರೂ ಅವರಿಗೆ ಅನೇಕ ಕಾರಣಗಳಿಂದ ಅವಕಾಶ ಇರುವುದಿಲ್ಲ. ನಮ್ಮ ಸಂಪ್ರದಾಯಸ್ಥ ಸಮಾಜದಲ್ಲಿ ಗಂಡನ ನೆರಳನ್ನು ಬಿಟ್ಟ ಮಹಿಳೆಗೆ ಸರಿಯಾದ ಜಾಗವಿಲ್ಲ. ಹೀಗಾಗಿ ಆಕೆಯು ಜೀವನದಲ್ಲಿ ಅಸಹಾಯಕಳು ಆಗುತ್ತಾಳೆ. ಈ ಒಂದು ಅವಕಾಶವನ್ನು ದುರುಪಯೋಗ ಮಾಡಿಕೊಂಡು ಅನೇಕ ಗಂಡಂದಿರು ದುರ್ಮಾರ್ಗಿಗಳಾಗಿದ್ದರೂ ಅವರಿಂದ ವಿವಾಹವಿಚ್ಛೇದನ ಪಡೆಯುವುದು ಸಾಧ್ಯ ವಾಗುವುದಿಲ್ಲ. ಪಡೆದರೂ ಸಮಾಜಾಭಿಪ್ರಾಯವು ವಿಪರೀತ ವಾತಾವರಣವನ್ನು ನಿರ್ಮಿಸುತ್ತದೆ. ಇದನ್ನರಿತ ಕೆಲ ಗಂಡಂದಿರು ಧಾರಾಳವಾಗಿ ತಮ್ಮ ಕೆಟ್ಟ ನಡವಳಿಕೆಗಳಲ್ಲಿಯೇ ಮುಂದುವರೆಯುತ್ತಾರೆ. ತಮ್ಮ ಮಗಳ ಬಾಳು ಹೀಗಾಗದೇ ಇರಲೆಂದು, ವಧುವಿನ ತಂದೆ-ತಾಯಿಗಳು ವಿವಾಹಪೂರ್ವದಲ್ಲಿಯೇ ಉತ್ತಮ ವರನಿಗಾಗಿ ಶ್ರಮಿಸುತ್ತಾರೆ. ಇದರಿಂದ ಹೆಣ್ಣುಮಕ್ಕಳ ವಿವಾಹ ತಡವಾಗಿ, ಸಮಾಜಕ್ಕೆ ಒಂದು ಸಮಸ್ಯೆಯಾಗಿದೆ. ತಮ್ಮ ತಂದೆ-ತಾಯಂದಿರ ತೊಂದರೆಯಲ್ಲಿ ನೆರವಾಗಲು ತಾವು ಏನನ್ನೂ ಮಾಡುವ ಸ್ಥಿತಿಯಲ್ಲಿಲ್ಲದುದಕ್ಕಾಗಿ ಮಹಿಳೆಯರು ದುಃಖಿತರಾಗುತ್ತಾರೆ. ಮದುವೆಯಾಗುವವರೆಗೆ ಕಾಲಹರಣ ಮಾಡುವುದು ಇವರಿಗೆ ಒಂದು ಸಮಸ್ಯೆಯಾಗುತ್ತದೆ. ಇದನ್ನರಿತ ಕೆಲ ಪ್ರಜ್ಞಾವಂತ ಮತ್ತು ಆರ್ಥಿಕ ಅನುಕೂಲತೆ ಇರುವ ತಂದೆ-ತಾಯಂದಿರು ತಮ್ಮ ಮಕ್ಕಳನ್ನು ಹೆಚ್ಚಿನ ಪದವಿಗೆ ಓದಲು ಹೇಳುತ್ತಾರೆ. ಓದಲು ಅನುಕೂಲವಿಲ್ಲದ ಅನೇಕರಿಗೆ ಹೊರಗೆ ಬಂದು ನೌಕರಿ ಮಾಡುವ ಅವಕಾಶ-ವಿರುವುದಿಲ್ಲ. ಒಬ್ಬಿಬ್ಬರು ಇಷ್ಟಪಟ್ಟರೂ ಧಾರವಾಡದಲ್ಲಿಯೇ ನೌಕರಿ ಸಿಗುವದಿಲ್ಲ. ಈ ಕಾರಣಗಳಿಂದ ಅನೇಕ ಪದವೀಧರ ಮಹಿಳೆಯರದು ಒಂದು ಗೋಳಿನ ಬಾಳಾಗಿದೆ.

ಇವೆಲ್ಲ ಬದಲಾಗುತ್ತಿರುವ ಸಮಾಜದ ಲಕ್ಷಣಗಳು ಮತ್ತು ಎದುರಿಸಲೇ ಬೇಕಾದ ಅಂಶಗಳು. ಅದಕ್ಕಾಗಿ ಜನತೆ ಕಾಲಕ್ಕನುಗುಣವಾಗಿ ತಮ್ಮ ಮನೋಧರ್ಮವನ್ನು ಬದಲಾಯಿಸದಿದ್ದಲ್ಲಿ ಪದವೀಧರ ಮಹಿಳೆಯರಂತೆ ನಮ್ಮ ಸಮಾಜದ ಮತ್ತಾವುದಾದರೊಂದು ವರ್ಗವು ತೊಂದರೆಗೀಡಾಗಬಹುದು.

★ ಕೆ. ಜಿ. ಗುರುಮೂರ್ತಿ

' ಆರ್+ಗೆ 'ಯೆಂದರೇನು ?

(೧) " ನೀನ್+ಆರ್+ಗೆ "ಯೆಂಬ ಹೆಸರಲ್ಲಿ ಶ್ರೀ ಎಂ. ಗೋವಿಂದ ಪೈಯವರು ೧೯೩೫ರ 'ಕಂಠೀರವ' ದಸರಾಂಕದಲ್ಲಿ ಬರೆದಿದ್ದರು.: ಹಲವಾರು ಗ್ರಂಥಗಳಲ್ಲಿ ಕಾಣುವ ಸರ್ವನಾಮ (ಆರ್‌ಗೆ) ಹಾಗೂ ಕ್ರಿಯಾಪದಗಳ (ನೋಡುಗೆ) ಜತೆಯ ' ಗೆ 'ಕಾರವು ' ಗಡ ' ಎಂಬರ್ಥದಲ್ಲಿ ಇರುತ್ತದೆ ; ಅದು ತೌಳವ ಭಾಷೆಯ ' ಗೆ 'ಕಾರದಂತಿದೆಯೆಂದು ಅವರು ವಿವರಿಸಿದ್ದರು.

(೨) ಸಂಸ್ಕೃತದಲ್ಲಿ ' ಕಸ್ಯ ' (ಯಾರ) ಎಂಬ ಪದವಿದೆ. ಅದು ಕನ್ನಡ-ದಲ್ಲಿ ಷಷ್ಠೀ ವಿಭಕ್ತಿಯಲ್ಲಿ ' ಯಾರ ' ಎಂದಾಗುತ್ತದೆ ; ಅದರ ಬದಲು ಚತುರ್ಥೀ ವಿಭಕ್ತಿರೂಪದ ' ಆರ್ಗೆ 'ಯೆಂಬುದಾಗಿ ಸರ್ವನಾಮದ ರೂಪವೇ ಇಲ್ಲಿ ಬಳಸಲಾಗಿದೆ ! 'ನೋಡುಗೆ' ಇತ್ಯಾದಿ ಕ್ರಿಯಾಪದಗಳಲ್ಲಿ ಹಾಗೂ ' ಎಲೆಗೆ ' ಇತ್ಯಾದಿ ಸಂಬೋಧನಾತ್ಮಕ ಅವ್ಯಯದಲ್ಲಿ ಸಂಸ್ಕೃತದ ' ಕ ' ಪ್ರತ್ಯ-ಯದಂತೆ ಕನ್ನಡದ ' ಗೆ 'ಕಾರವಿರಬೇಕೆಂದು ಕಾಣುತ್ತದೆಯೆಂದು ನನ್ನ ಲೇಖ-ದಲ್ಲಿ ಸೂಚಿಸಿದ್ದೆನು(೧೯೪೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ' ಪ್ರಬುದ್ಧ ಕರ್ಣಾಟಕ 'ದಲ್ಲಿಯೂ, ' ಸಾಹಿತ್ಯದ ಹಿನ್ನೆಲೆ 'ಯೆಂಬ ನನ್ನ ಲೇಖಗಳ ಸಂಕ-ಲನದಲ್ಲಿಯೂ ' ಗೆ ' ಪ್ರತ್ಯಯ ವಿಚಾರವೆಂಬುದನ್ನು ನೋಡಿರಿ. ಈ ಆಶಯ-ವನ್ನು ಶ್ರೀ. ತೀ. ನಂ. ಶ್ರೀ. ಅವರು ರನ್ನನ ಗದಾಯುದ್ಧ ಸಂಗ್ರಹದ ಟಿಪ್ಪಣಿ-ಯಲ್ಲಿ ಎತ್ತಿಹೇಳಿದ್ದಾರೆ).

(೩) ೧೯೬೭ರಲ್ಲಿ ಪ್ರಕಟವಾದ, ಶ್ರೀ ಡಿ. ಎಲ್. ನರಸಿಂಹಾಚಾರ್ಯರ ಸಂಭಾವನ ಗ್ರಂಥವಾದ ' ಉಪಾಯನ 'ದಲ್ಲಿ ' ವೈಯಾಕರಣಚೋದ್ಯ 'ವೆಂಬ ಬರೆಹದಲ್ಲಿ ಶ್ರೀ ಹೆಮ್ಮಿಗೆ ದೇಶಿಕಾಚಾರ್ಯರು ಈ ಬಗೆಗೆ ಬೇರೆ ಬಗೆತಕ್ಕೆಳಸಿ-ದ್ದಾರೆ. ಅದರ ಸಾರ ಬರೆದು, ತುಸ ವಿವೇಚನೆಗೆ ಇಲ್ಲಿ ತೊಡಗಿದ್ದೇನೆ.

ಹಲವಾರು ನುಡಿಗಳು ಕನ್ನಡ ಗ್ರಂಥಗಳಲ್ಲಿ ಬಳಕೆಯಿದ್ದರೂ, ಕನ್ನಡದ ಮೂವರು ವೈಯಾಕರಣಿಗಳು ಹೇಳಿಲ್ಲವೆಂಬ ಕೆಲವು ನುಡಿಗಳ ಪಟ್ಟಿಯಲ್ಲಿ ' ಆರ್ ' ಎಂಬುದೂ, ' ಗೆ 'ಯೆಂಬುದೂ ಬೇರೆಬೇರೆಯೆಂದು (ಆರ್ಗೆಯೆಂಬುದು ಆ ಮೂವರು ವೈಯಾಕರಣಿಗಳು ಹೇಳಿಲ್ಲವೆಂದು) ನಿರೂಪಿಸಲಾಗಿದೆ :

" ಸೋಜಿಗವಿನ್ನೊಂದು : ಆಮಂತ್ರಣ ಶಬ್ದಗಳು ಹಲವು ಕಡೆ ಹಲವು ಬಗೆ ಯಾಗಿರುವುದು ಸಾಮಾನ್ಯ ವಿಷಯ. " ಲಾ, ಲೇ, ಲೋ, ಎಲಾ, ಎಲೆ, ಎಲೇ, ಎಲೌ, ಅಮ್ಮಿ, ಅಮ್ಮಾ, ಅಯ್ಯ, ರೀ, ಸ್ವಾಮೀ, ಏ, ಓ " ಮುಂತಾದುವು. " ಬಾರೆಲಾ, ಹೋಗಲಾ, ಬಾರಮ್ಮಾ, ಹೋಗಯ್ಯ... ಬನ್ನಿರಿ, ನಿಲ್ಲಿರಿ, ಏನ್ರೆ,

ಹೇಳ್ರೀ, ಆಲ್ರೀ " ಮುಂತಾಗಿ ಆರಂಭದಲ್ಲಿ ಕ್ರಿಯಾಪದಗಳ ಕಡೆಗೆ ಅವ್ಯಯಗಳ ಸಂಗಡ ಕೂಡ ಈ ನುಡಿತುಣುಕುಗಳು ಅವಧಾನವನ್ನು ಸೆಳೆಯಲು ಸೇರುತ್ತವೆ. ಹಳಗನ್ನಡದಲ್ಲಿ ವಿಶೇಷವಾಗಿ " ಎ, ಐ, ಇರ, ಇರಾ " ಪ್ರತ್ಯಯಗಳು ನಾಮವಿಚಾರಗಳ ಜತೆಗೂ, " ಐನೆ, ಐನಿಂ, ಗಡಿಂ " ಮುಂತಾದ ವಿಶಿಷ್ಟರೂಪಗಳಲ್ಲಿ " ಇ, ಇಂ " ಅವ್ಯಯಗಳ ಕಡೆಗೂ ಬಳಕೆಯಾಗಿರುವುದು ವಿದಿತ. ಪ್ರಾಚೀನರಲ್ಲಿ ಈ ಕ್ರಮದಲ್ಲಿ ಒಂದು ವಿಶಿಷ್ಟವಾದ ಶಬ್ದ ಏಕ ಬಹುವಚನಗಳ ಭೇದವಿಲ್ಲದೆ ಬಳಕೆಯಲ್ಲಿದ್ದಿತು. ಅದು ' ಆರ್ ' ಎಂಬ ಪ್ರಶ್ನಾರ್ಥಕ ಸರ್ವನಾಮ, ಅವ್ಯಯಗಳು ಮತ್ತು ಮಧ್ಯಮಪುರುಷ ಕ್ರಿಯಾಪದಗಳ ಜತೆಗೆ ಸೇರಿ ಪ್ರಯೋಗಹೊಂದುತ್ತಿದ್ದಿತು. ಈ ಮುಂದಿನ ಉದಾಹರಣೆಗಳು ಅದನ್ನು ಸ್ಪಷ್ಟಪಡಿಸಿಯಾವು.

(i) ಸರ್ವನಾಮದ ಜೊತೆಗೆ –

' ನೀವಾರ್ಗೆನೆಂಬಿರೆಲ್ಲಿಂ ಬಂದಿರ್ ' (ವಡ್ಡಾ. ಪು. ೮೪–೧೬).

' ನೀವಾರ್ಗೆ ನಿಮ್ಮಂ ಪಳಯಿಸುವರಾರ್ಗೆ ' (ಆದಿ. ೨–೫೫).

' ಕುಡುವಂ ಗುರು ಪಡೆವರ್ ಪೆರ-
ರೆಡೆಯೊಳ್ ನೀವಾರ್ಗೆ ಅದೇಕೆ ಕೆಡೆನುಡಿದಪಿರ್ ' (ಆದಿ. ೯–೧೦).

' ನೀನಾರ್ಗೆನೆಂಬೆಯೇಕೆ ಬಂದೆ ' (ಪಂ.ಭಾ. ೨–೧೪ ವ).

' ಈ ಮರುಳುಂದಿದರಾರ್ಗೆ ' (ಪಂ.ಭಾ. ೨–೧೫ ವ)

' ಆರ್ಗೆ ಸತಿ ನೀಂ ಪೆಸರೇಂ ' (ಕಾದಂ. ಪೂ. ೬–೮೫).

' ನೀನಾರ್ಗೆಂದಾರುಮಱಿಯುರಂಗಾಧಿಪತೀ ' (ಗದಾ. ೫–೧೮).

' ನೀವಾರ್ಗೆ ಆವ ದೇಶದವರ್ ' (ಸುಕುಮಾ. ೨–೪೮ ವ).

' ಈ ಕೂಸಾರ್ಗೆ ನೀವಾರ್ಗೆ ' (ಸುಕುಮಾ. ೭–೪೦). *

(ii) ಅವ್ಯಯಗಳ ಜೊತೆಗೆ –

' ಮೃಗಮದಪತ್ರರೇಖೆಗಳಸೇಕೆಗೆ ತಾಳ್ದಿರ್ (ಪಂ.ಭಾ. ೪–೬೭).

' ಅಣಮೆಮೆಯಿಕ್ಕಿದೊಪ್ಪುಗುಮೆ ಕಣ್ಗಳರೆಂತುಗೆ ' (ಆದಿ. ೪–೪೭).

' ಕೇಣಕಾಱನದೇಕೆಗ ಕಾಪೆ ' (ಕಾವ್ಯಾವ. ೪೦೪).

---

* ಈಯೆಡೆಗಳಲ್ಲಿ ಆರ್ಗೆ ಎಂಬ ಮಾತು ಸಂಸ್ಕೃತದಲ್ಲಿನ ' ಕಸ್ಯ ' ಎಂಬುದರ ರೂಪಾಂತರವೆಂದು ಅಭಿಪ್ರಾಯಭೇದವುಂಟು. ಆದರೆ ಮುಂದಿನ ಹಲವು ಉದಾಹರಣೆಗಳನ್ನು ನೋಡಿದರೆ, ಹಾಗಲ್ಲವೆಂದು ಸ್ಪಷ್ಟವಾಗುವುದು.

'ನಲ್ಲಳಿರೆ ಪೆರರಡೀಕೆಗೆ' (ನೇಮಿನಾ. ೮-೫೩).*

'ಕೆಲಸಾರ್ದಂತಿರಲೇಕೆಗೆ' (ಜಗ. ವಿ. ೧೨-೯೨).

'ಸುರೂಪನ್ + ಇರವೆಂತುಗೆ' (ವರ್ಧಮಾ. ೧೩-೧೪).

'ಮದನನ ಕೂಡಿ ತಾಮುಮೆನಗೇಕೆಗೆ' (ಅನಂತ. ೮-೨೩).†

ಈ ಮುಂದಿನ ಪ್ರಯೋಗಗಳು ಕ್ರಿಯಾಪದದ ಮಧ್ಯಮಪುರುಷ ವಿಧಿರೂಪದ ಏಕವಚನದ ಜತೆಗೆ ಬಳಕೆಯಾದುವು. ಪ್ರೀತಿ, ಆದರ, ವಿಶ್ವಾಸ, ಅವಧಾರಣ ಮುಂತಾದ ಧ್ವನಿಗಳಿಗೆ ಸಾಧನವಾದ ಈ ಅವ್ಯಯ ಇಲ್ಲಿ ಮಧುರವಾಗಿ ಕಾಣುತ್ತದೆ:

'—ಕಾಣಗೆ ಮಾಯ್ದ ತುಂಬಿಗಳ್' (ಶಾಂತಿ. ೮-೮೭).

'ಪೊಸದಿಕ್ಕುಗೆ ಪಚ್ಚೆಗಾರನಂ' (ಲೀಲಾ. ೨-೧೦೭).

'ಕಾಣಗೆ ಶೀತಲಾಂಬುವಂ' (ಲೀಲಾ. ೧೧-೫೦).

'ತಪ್ಪದೆ ಸೂಳೆ ಕೆಳಗೇ' (ಚಂದ್ರಪ್ರ. ೮-೫೨).

'ಪೋಗುಗೆ ಪೊಡಮಡಲಕ್ಕ ನಿಮ್ಮ ಮಾವಂಗೆನುತಂ' (ವರ್ಧ. ಪು. ೫-೪೬).

'ನಗುಗೇ ಬಾಲಕಿ' (ಸೂಕ್ತಿಸು. ಪು. ೩೨೫-೨೨).

'ಸಿರಿಗೀ ಬಾರಗೆ ಬಾಗಿಲೊಳ್' (ಶಾಂತೇಶ್ವರ. ೧೧-೭೭).

ಇಂತಹ ಹಲವು ಉದಾಹರಣಗಳು ಇನ್ನೂ ಇದ್ದಾವು. ಪ್ರಮಾಣಪುರುಷರ ಪ್ರಚುರ ಪ್ರಯೋಗಗಳು ಹಲವಿದ್ದರೂ ಈ 'ಗೆ, ಗೇ' ವಿಚಾರದ ಹೆಸರನ್ನೇ ಮೂವರು ವ್ಯಾಕರಣಕಾರರು ಎತ್ತದಿರುವುದು ದಿಟವಾಗಿ ಚೋದ್ಯ. ಕೇಶಿರಾಜನು ಆಮಂತ್ರಣವಿಭಕ್ತಿಯ ಬಗೆಯನ್ನು ಪ್ರಸ್ತಾಪಿಸುತ್ತಾ (ಅಧ್ಯಾಹಾರ್ಯವಾದ ಮಧ್ಯಮಪುರುಷ ಸರ್ವನಾಮವನ್ನು ಬಿಟ್ಟು) ಆಮಂತ್ರಣದ ನಾಮವಾಚಕಗಳ ಜತೆಗೆ ಕ್ರಿಯಾಪದವು ನಿಜಧಾತು ಸ್ವರೂಪದಲ್ಲಿರುತ್ತದೆಂದು ನುಡಿದುಲ್ಲದೆ ಕೆಲವು ವೇಳೆ ಧಾತುವಿನ ಕಡೆಗೆ ಅಕಾರವು ಸೇರುತ್ತದೆಂದು ಸೂಚಿಸಿ,

'ಬಾರ ಮರಾಳಕಾಗಮನೆ—'

---

* 'ಪೆರರಡೀಕೆಗ' ಎಂದು ಮುದ್ರಿತವಾಗಿದೆ. 'ಏಕೆಗೆ' ಇದ್ದೀತೆಂದು ನನ್ನ ಎಣಿಕೆ.

† ಮುದ್ರಿತ ಪ್ರತಿಯಲ್ಲಿ 'ಈಕೆಗೆ' ಪಾಠವಿದೆ. ಅದು ಅಶುದ್ಧವಿರಬೇಕೆಂಬುದು ವಿಮರ್ಶಿಸಿದಾಗ ತಿಳಿಯಬಹುದಾಗಿದೆ.

ಎಂದು ಮುಂತಾದ ಪದ್ಯವನ್ನು ಉದಾಹರಿಸಿರುವನು (ಶ.ಮು.ದ. ಸೂತ್ರ ೧೨೫)* ಈ ಆಕಾರವನ್ನು ಮರೆಯದೆ ನಿರೂಪಿಸಿದ ಕೇಶವನಿಗೆ ಮೇಲೆ ಸೂಚಿಸಿದ ‘ ಗೆ ’ ದೃಷ್ಟಿಗೆ ಬೀಳಲಿಲ್ಲವೆ ? ಬಿದ್ದಿದ್ದರೂ ಮರೆತನೆ ? ನೆನಪಿದ್ದರೂ ಭಾವವಿಶೇಷ ದಿಂದ ಹೇಳದೆ ಬಿಟ್ಟನೆ ?—ಇದು ಯೋಚಿಸತಕ್ಕುದಾಗಿದೆ.

ವಿವೇಚನೆ :

ಇಲ್ಲಿ ‘ ಆರ್ಗೆ ’ಯೆಂದು ಸರ್ವನಾಮದೊಡನೆ ಹೇಳಿದ ಉದಾಹರಣಗಳ ಮುಂದಿನ ಪದ್ಯ-ವಚನದಲ್ಲಿ, ಈ ಪ್ರಶ್ನೆಗೆ ನೇರ ಹಾಗೂ ಸಾಜ ಮರುನುಡಿ ಯಾಗಿ ಹೇಳುವಲ್ಲಿ, ತಾನಾರ ಮಗ (ಮಗಳು) ಅಥವಾ ಹೆಂಡತಿ ಹಾಗೂ ಶಿಷ್ಯ ಇತ್ಯಾದಿ ಸಂಬಂಧಸೂಚಕ ವಿವರಣಗಳನ್ನೆ ತಪ್ಪದೆ ಕಾಣುತ್ತೇವೆ. ಹಾಗಾದರೆ, ಆ ಅಡಿಟಿಪ್ಪಣಿಯಲ್ಲಿ ಅಭಿಪ್ರಾಯಭೇದವೆಂದು—ಆ ಲೇಖನ ಲೇಖನಕಾರರನ್ನೆ ಹೆಸರಿಸದೆ ನಮೂದಿಸಿದ ವಿಚಾರವನ್ನು (‘ ಕಸ್ಯ ’ ಎಂದು ಪ್ರಶ್ನಾರ್ಥಕವಾಗಿ ಸಂಸ್ಕೃತಸಾಹಿತ್ಯದ ಅನೇಕ ಗ್ರಂಥಗಳಲ್ಲಿರುವುದನ್ನು, ಅಂತೆ ಕೆಲವೆಡೆ ಕನ್ನಡ ದಲ್ಲಿ ಆ ಷಷ್ಠಿಯ ಬದಲು ಚತುರ್ಥಿ ವಿಭಕ್ತಿಯನ್ನು ಬಳಸಿ ‘ ಆರ್ಗೆ ’ಯೆಂದಾ- ಗಿರಬಹುದೆಂಬುದನ್ನು) ನಾವು ಮರೆಯಲಾಗದು ; ಅಲ್ಲಗಳೆಯಲಾಗದು.

ಶ್ರೀ ಹೆಮ್ಮಿಗೆ ದೇಶಿಕಾಚಾರ್ಯರು ತಮ್ಮ ಬರೆಹದಲ್ಲಿ ‘ ಆರ್ ’ ಎಂಬುದು ಪ್ರತ್ಯೇಕ-ಪ್ರತ್ಯಯ ವಿಶೇಷವೆಂಬ ಪ್ರಶ್ನೆಗೇಕೆ ತೊಡಗಿದರು ಎಂಬುದೇ ಪ್ರಶ್ನಾತ್ಮಕವಾಗಿದೆ !

ಈ ಮೇಲಿಂದ ಒಂಬತ್ತು ಸಂದರ್ಭಗಳಲ್ಲಿ ‘ ಆರ್ಗೆ ’ಯೆಂಬಲ್ಲಿ ‘ ಆರ್ ’ ಎಂಬುದು ಬೇರೆ, ‘ ಗೆ ’ಯೆಂಬುದು ಬೇರೆಯೆಂದು ಅಲ್ಲಿ ಭಾವಿಸಿರಬೇಕು. ಹಾಗಾದರೆ, ‘ ಆರ್ ’ ಎಂಬ ಪ್ರಶ್ನಾರ್ಥಕ ಸರ್ವನಾಮದ ನುಡಿಯೊಂದು ವೈಯಾಕರಣಿಗಳಿಗೆ ನುಸುಳಿ, ಉಳಿದಿರುವಂತಿದೆಯೆಂದು ಅಲ್ಲಿ ಹೇಳಿರುವುದು ಸಾಜವಾದೀತೇ ? ಆದರೆ, ಶ್ರೀ ಹೆಮ್ಮಿಗೆ ದೇಶಿಕಾಚಾರ್ಯರೇ ಹೇಳಿರುವಂತೆ ಇವೆಲ್ಲೆಡೆಯು ‘ ಆರ್ ’ ಎಂಬುದು ಸ್ವತಂತ್ರವಾದ ಸಂಬೋಧನಾತ್ಮಕ ಶಬ್ದ ವಾಗಿದೆ. ಆ ಪ್ರಶ್ನಾತ್ಮಕ ವಾಕ್ಯಗಳ ಉತ್ತರದಲ್ಲಿ ಸಂಬಂಧಸೂಚನೆಯನ್ನು ಮಾಡಿರುವುದು (ಹೇಳಿರುವುದು) ಅಸಂಬದ್ಧವಾಗುವುದಿಲ್ಲವೇ ?

‘ ಆರ್ ’ ಎಂಬುದು ಸರ್ವನಾಮ. ಅದರ ಚತುರ್ಥೀ ವಿಭಕ್ತಿಯಲ್ಲಿ ‘ ಆರ್ಗೆ ’ಯೆಂದು ತಾನೆ ಬರುತ್ತದೆ. ಆ ‘ ಆರ್ಗೆ ’ಯೆಂದರೆ ‘ ಆರಿಗೆ (ಯಾರಿಗೆ) ’ ಎಂದೇ ಬರಬೇಕಲ್ಲದೆ, ಸಂಬೋಧನಾತ್ಮಕವಾಗಲಾರದಲ್ಲವೇ ? ‘ ನೀನಾರ್ಗೆ,

---

* ಇಲ್ಲಿ ಧಾತುವಿನ ಕಡೆಗೆ ಸೇರುವ ಅಕಾರ ಪ್ರತ್ಯತಿಶಯ, ಆದರ ಮುಂತಾದ ಭಾವ ವಿಶೇಷಗಳನ್ನು ಸೂಚಿಸುವ ಅನ್ವಯವಾಗಬಹುದು. ‘ ಗೆ ’ಕಾರವೂ ಅಂತೆಯೇ ಪ್ರೀತ್ಯಾದರಸೂಚಕವಾದ ಸಂಬೋಧನೆಯೆನ್ನಬಹುದು. [ಉಪಾಯನ ಪು.೧೨೨-೧೨೬]

ನಿನ್ನಂ ಪಳಯಿಸುವರಾರ್ಗೆ' ಎಂಬಲ್ಲಿ, ' ಈ ಕೂಸಾರ್ಗೆ, ನೀವಾರ್ಗೆ 'ಯೆಂಬಲ್ಲಿ ಒಂದೇ ನುಡಿತದಲ್ಲಿ ಇಮ್ಮಡಿಯಾಗಿ, ಬೇರೆ ಬೇರೆ ಕರ್ತೃಗಳನ್ನು ಕುರಿತು ಹೇಳುವಂತಿದೆ. ಇವುಗಳಲ್ಲಿ ' ಆರ್ ' ಎಂಬ ಸಂಬೋಧನೆಯ ರೀತಿ ಹೇಗೆ ಸಾಂಗತ್ಯವಾಗುತ್ತದೆ? ಪರಂತು, ನಾನೆಂದಂತೆ, ' ಕಸ್ಯ ' ಎಂಬ ಪ್ರಾಚೀನ ಸಂಸ್ಕೃತ ರೀತಿಯನ್ನು ಅನುಸರಿಸಿ, ಕನ್ನಡದಲ್ಲಿ ಷಷ್ಠೀವಿಭಕ್ತಿಯ ರೂಪಾದ ' ಆರ ' ಎಂಬುದಕ್ಕೆ ಬದಲಾಗಿ ' ಆರ್ಗೆ 'ಯೆಂಬ ಚತುರ್ಥೀ ವಿಭಕ್ತಿ ಏಕೆ ಸರಿಯಲ್ಲವೆಂದು ಆ ಬರೆಹದಲ್ಲಿ–ಟಿಪ್ಪಣಿಯಲ್ಲಿ ಬರೆದಿಲ್ಲ. ಈ ಬಗೆಗೆ ಸ್ಪಷ್ಟಿಸಿ ವಿವರಿಸಲು ಬೇರೆ ಕಾರಣಗಳೇನೆಂಬುದೂ ಅವರಿಗೆ ಹೊಳೆಯಲಿಲ್ಲ. ಈ ಒಂಬತ್ತು ಉದಾಹರಣಗಳಿಂದ ಆದಾವ ಬೇರೆ ಆಶಯವೂ ಮೂಡಿಲ್ಲ. ಆದುದರಿಂದ, ಈ ಎಲ್ಲೆಡೆಗಳಲ್ಲಿ (ಬೇರೆ ಕಡೆಗಳಲ್ಲಿ) ಈ ಮೊದಲು ಸೂಚಿಸಿದ ನನ್ನ ಬರೆಹದಲ್ಲಿರುವಂತೆ ' ಆರ್ಗೆ = ಯಾರ (ಸಂಬಂಧಿ) ' ಎಂದು ತಿಳಿಯುವುದು ಸಾಧುವಾಗಿದೆ !

ಇನ್ನು, ' ನೀನಾರ್ ' ಎಂಬಲ್ಲಿ (ಗೆ ಯೆಂದು ಹೆಚ್ಚಳವೆಂದಾದರೆ), ಕೇವಲ ಆ ವ್ಯಕ್ತಿಯ ಹೆಸರನ್ನಾಗಲೀ, ಸ್ಥಾನಸಂಪತ್ತಿಯನ್ನಾಗಲೀ ತಿಳಿಯಲು ಪ್ರಶ್ನಿಸುವಂತಿದೆ. ಅಲ್ಲಿ ಕೇವಲ ಸಂಬೋಧನಾರ್ಥಕವಾಗಿ ' ನೀನ್ಯೆ' ಎಂದು ಮೊದಲಾಗಿ ಧ್ವನಿತವಾಗುವಂತಿಲ್ಲ. ಈ ಪ್ರಶ್ನೆಯ ಉತ್ತರದಲ್ಲಿಯೂ ಕೇವಲ ವ್ಯಕ್ತಿಯ ಹೆಸರಾಗಲಿ, ಸ್ಥಾನಸಂಪತ್ತಿಯಾಗಲಿ ಹೇಳಿರದೆ, ಸಂಬಂಧಸೂಚಕವೇ ಇದೆ! ಆದುಕಾರಣ, ' ಆರ್ಗೆ 'ಯೆಂದರೆ ' ಯಾರ (ಯಾರಿಗೆ) ' ಎಂಬ ಪ್ರಶ್ನೆ ಹಾಗೂ ಸಂಬಂಧಸೂಚಕವಾದ ಉತ್ತರಗಳ ಸಾಂಗತ್ಯವಿರುವ ಈ ಪ್ರಯೋಗಗಳಲ್ಲಿ ' ಆರ್ಗೆ 'ಯೆಂದರೆ ಸಂಬೋಧನಾರ್ಥಕವೆನ್ನಲೆಡೆಯಿಲ್ಲ !

' ನೀನಾರ್(+ಗೆ) 'ಯೆಂಬುದಕ್ಕೆ ಬೇರೆ ವಿಶೇಷಾರ್ಥವೇನನ್ನೂ ಹೇಳದ ಕಾರಣವೂ ಶ್ರೀ ದೇಶಿಕಾಚಾರ್ಯರ ಬರಹದ ಸಾರ್ಥಕ್ಯವೇನೂ ಕಾಣುವುದಿಲ್ಲ !

ಅವ್ಯಯಗಳ ಜತೆಗೆ ' ಕ 'ಕಾರವು ಸಂಸ್ಕೃತದಲ್ಲಿ ಬಳಸಿರುವಂತೆ ' ಏಕೆಗೆ ' ಇತ್ಯಾದಿಗಳಲ್ಲೂ ' ಗೆ 'ಕಾರವಿದೆ. ಮತ್ತೆ ಮಧ್ಯಮಪುರುಷ ಕ್ರಿಯಾಪದದಲ್ಲಿ-ಯಾದರೋ ಸಂಸ್ಕೃತದ ಅನುಸರಣದಂತಿದೆ (ಕನ್ನಡ ಕೈಪಿಡಿ ೧–೫೬). ಇದು, ಅವ್ಯಯದ ಜೊತೆಗೆ ಹಾಗೂ ಕ್ರಿಯಾಪದದ ಜೊತೆಗೆ ಬಂದ ' ಗೆ 'ಕಾರವು ' ಗಡ '(ಗಳ)ವೆಂಬುದರ ರೂಪಾಂತರವಾಗಿರಬಹುದು. ಅಥವಾ ' ಕ 'ಕಾರದ ರೂಪಾಂತರವಿರಬಹುದು.

' ನೀನಾರ್ಗೆ 'ಯೆಂಬುದು ' ನೀನಾರ ' ಎಂಬಾಶಯದಲ್ಲಿ (ಷಷ್ಠಿಯ ಬದಲು ಚತುರ್ಥೀ ವಿಭಕ್ತಿಯಾಗಿ) ಬಳಸಿದೆ. ಈ ಬಗೆಗೆ ಬೇರೇನೂ ಹೇಳಸಲ್ಲವೆಂದೇ ಕಾಣುತ್ತದೆಯಲ್ಲವೇ ?

★ ಕೆ. ವೆಂಕಟರಾಯಾಚಾರ್ಯ

ಸಸ್ಯಪ್ರೇರಕಗಳು
PLANT HORMONES

"ಪ್ರೇರಕಗಳು ಸಜೀವಿಯ ದೇಹದ ಯಾವುದೇ ಒಂದು ಭಾಗದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಸೇಂದ್ರಿಯ ವಸ್ತುಗಳ ರೂಪದಲ್ಲಿ ಉತ್ಪನ್ನವಾಗುತ್ತವೆ; ಮುಂದೆ ಅವು ದೇಹದ ಮತ್ತೊಂದು ಭಾಗಕ್ಕೆ ವರ್ಗಾಯಿಸಲ್ಪಟ್ಟು, ಅಲ್ಲಿ ಯಾವುದೇ ಒಂದು ಬಗೆಯ ವಿಶಿಷ್ಟ ಜೈವಿಕ ಕ್ರಿಯೆಗಳನ್ನು ಉದ್ದೀಪನಗೊಳಿಸುತ್ತವೆ." 'ಬೇಲಿಸ್' (Bayliss) ಮತ್ತು 'ಸ್ಟಾರ್ಲಿಂಗ್' (Starling) ಎಂಬ ಇಬ್ಬರು ನಿಷ್ಣಾತರು ಪ್ರೇರಕ ಅಥವಾ ಉದ್ದೀಪಕಗಳ ಬಗೆಗೆ ಕೊಡುವ ವಿವರಣೆ ಇದು.

ಈ ಪ್ರೇರಕಗಳು ರಾಸಾಯನಿಕ ದೂತರಂತೆ ವರ್ತಿಸುವ (Chemical messengers) ಲಕ್ಷಣವನ್ನು ಹೊಂದಿರುತ್ತವೆಯೆಂತಲೂ ಹೇಳಬಹುದು. ಇದರಿಂದ ಯಾವುದೇ ಒಂದು ಅಂಗದ ಜೈವಿಕ ಕ್ರಿಯಾಶೀಲತೆಯನ್ನು ಮತ್ತೊಂದು ಕ್ರಿಯಾಚಟುವಟಿಕೆಯೊಡನೆ ಸಂಯೋಜಿಸುವುದು ಸಾಧ್ಯವಾಗುತ್ತದೆ.

ಕಳೆದ ೨೫ ವರ್ಷಗಳಿಂದೀಚೆಗೆ ಸಸ್ಯಗಳ ಬೆಳವಣಿಗೆಯು ಕೆಲಮಟ್ಟಿಗೆ ಅಲ್ಪಪ್ರಮಾಣದ ಸೇಂದ್ರಿಯ ವಸ್ತುಗಳಿಂದ ನಿಯಂತ್ರಿಸಲ್ಪಡುತ್ತದೆ ಎಂದು ಸಿದ್ಧವಾಗಿದೆ. ಅಂತಹವುಗಳಿಗೆ ಉದ್ದೀಪಕಗಳೆಂತಲೂ, 'ಹಾರ್ಮೋನ್' ಗಳೆಂತಲೂ, ಬೆಳವಣಿಗೆಯ ವೃದ್ಧಿ ಕಾರಕಗಳೆಂತಲೂ, ಸಸ್ಯಪ್ರೇರಕಗಳೆಂತಲೂ 'ಆಕ್ಸಿನ್' (Auxin)ಗಳೆಂತಲೂ, ವಿಧವಿಧವಾಗಿ ಹೆಸರಿಡಲಾಗಿದೆ. ಈ ವಸ್ತುಗಳಲ್ಲಿ ಬಹುತರ ಎಲ್ಲವೂ ಸಸ್ಯಜೀವಕೋಶದೊಳಗೇ ಸಂಯೋಜನೆಗೊಂಡು ಉತ್ಪನ್ನವಾಗುತ್ತವೆ.

ಪ್ರೇರಕಗಳನ್ನು ಸಾಮಾನ್ಯವಾಗಿ ಈ ಕೆಳಗಿನಂತೆ ವರ್ಗೀಕರಿಸುವುದುಂಟು:

೧. **ಬೇರಿನ ಬೆಳವಣಿಗೆಗೆ ಸಂಬಂಧಿಸಿದ ಪ್ರೇರಕಗಳು:** ಈ ಬಗೆಯ ಪ್ರೇರಕಗಳನ್ನು ಬೇರುಗಳೇ ನೇರವಾಗಿ ಉತ್ಪಾದಿಸಿ ಸಂಯೋಜಿಸಲಾರವು. ಆದರೂ ಅವು ಬೇರಿನ ಬೆಳವಣಿಗೆಗೆ ಅತ್ಯವಶ್ಯವಿರುತ್ತವೆ. ಉದಾ:— ಥಯಾಮಿನ್ (Thiamin), ಪೈರಿಡಾಕ್ಸಿನ್ (Pyridoxin) ಇತ್ಯಾದಿ.

೨. **ಎಲೆಗಳ ಬೆಳವಣಿಗೆಗೆ ಸಂಬಂಧಿಸಿದ ಪ್ರೇರಕಗಳು:** ಇವು ಅಪೂರ್ಣ ಅಥವಾ ಅಪಕ್ವ ಎಲೆಗಳು ಪೂರ್ಣ ಬೆಳವಣಿಗೆ ಹೊಂದಲು ಅವಶ್ಯವಿರುತ್ತವೆ. ಉದಾ:—ಅಡೆನಿನ್ (Adenine.)

೩. **ಕಾಂಡಗಳ ಬೆಳವಣಿಗೆಗೆ ಸಂಬಂಧಿಸಿದ ಪ್ರೇರಕಗಳು:** ಇವು ಕಾಂಡದ ಉದ್ದ ಅಥವಾ ಎತ್ತರ ಬೆಳವಣಿಗೆಯನ್ನು ನಿಯಂತ್ರಿಸುತ್ತವೆ. ಉದಾ:– 'ಇಂಡೋಲ್ ಅಸೆಟಿಕ್ ಆಮ್ಲ' (Indole Acetic Acid-IAA). ಅವುಗಳಿಗೆಲ್ಲ ಸಾಮೂಹಿಕವಾಗಿ 'ಆಕ್ಸಿನ್ಸ್' (Auxins) ಎಂದು ಹೇಳುವುದುಂಟು.

೪. ಘಾಯುಗಳಿಗೆ ಸಂಬಂಧಿಸಿದ ಪ್ರೇರಕಗಳು : ಇವು ಘಾಯುಗಳನ್ನು ವಾಯಿಸಲು ಮುಖ್ಯಪಾತ್ರವಹಿಸುವ ಪ್ರೇರಕಗಳು. ಒಂದು ಗಡ್ಡೆಯನ್ನು (Tuber) ಕತ್ತರಿಸಿದಾಗ ತೆರೆದ ಭಾಗವು ಕ್ರಮೇಣ ಬೂಚಿನಂತಹ ಕೋಶಗಳಿಂದ (corky layer) ಆವರಿಸ್ಪಡುತ್ತದೆ. ಆದರೆ ಆ ರೀತಿ ಕತ್ತರಿಸಿದ ಗಡ್ಡೆಯನ್ನು ನೀರಿನಲ್ಲಿ ತೊಳೆದಮೇಲೆ ಹೀಗಾಗುವುದಿಲ್ಲ. ಘಾಯುಗೊಂಡ ಕೋಶಗಳಲ್ಲಿ ಉತ್ಪನ್ನವಾಗುವ ವಸ್ತುಗಳು ರಕ್ಷಣೆಯೀಯಲು ಹೊಸ ಕೋಶಗಳನ್ನು ಉತ್ಪಾದಿಸುವುದರ ಮೂಲಕ ಒಂದು ಬಗೆಯ ಬೆಳವಣಿಗೆಯನ್ನು ಆರಂಭಿಸುತ್ತದೆ. ಅಂತಹ ವಸ್ತುಗಳಿಗೆ 'ಹೇಬರ್ ಲಾಂಟ್' (Haber Landt) ಎಂಬಾತನು 'ಘಾಯುದ ಪ್ರೇರಕಗಳು' (wound hormones) ಎಂದು ಹೆಸರಿಟ್ಟನು. ಸಸ್ಯಗಳಲ್ಲಿ ಉಂಟಾಗುವ ಈ ಬಗೆಯ ಪ್ರೇರಕ ಅಥವಾ 'ಹಾರ್ಮೋನ್' (Hormone)ಗಳಿಗೆ ಸಸ್ಯಪ್ರೇರಕ (Phyto-hormone) ಗಳೆಂದು ಹೆಸರು. ಅಮೇರಿಕದ ಸಸ್ಯಜೀವವಿಜ್ಞಾನಿಗಳ ಸಂಸ್ಥೆಯು ವಿವಿಧ ಬಗೆಯ ಸಸ್ಯಪ್ರೇರಕಗಳಿಗೆ ಈ ರೀತಿ ಹೆಸರುಗಳನ್ನು ಸೂಚಿಸಿದೆ :

೧. ಸಸ್ಯಗಳ ನಿಯಂತ್ರಕಗಳು (Plant Regulators) **:** ಇವು ಪೋಷಕ ವಸ್ತುಗಳನ್ನು ಬಿಟ್ಟು ಉಳಿದೆಲ್ಲ ಸೇಂದ್ರಿಯ ಘಟಕಗಳನ್ನು ಒಳಗೊಳ್ಳುತ್ತವೆ. ಇವು ಅತ್ಯಲ್ಪಪ್ರಮಾಣದಲ್ಲಿ ಕೆಲವು ಜೈವಿಕ ಕ್ರಿಯೆಗಳನ್ನು ಆರಂಭಿಸುವ ಇಲ್ಲವೆ ವರ್ಧಿಸುವ ಕಾರ್ಯ ಮಾಡಬಲ್ಲವು.

೨. ಬೆಳವಣಿಗೆಯ ನಿಯಂತ್ರಕಗಳು (Growth regulators or promoters) **:** ಇವು ಸಸ್ಯಗಳ ಬೆಳವಣಿಗೆಯನ್ನು ನಿಯಂತ್ರಿಸುವುವು.

೩. ಪುಷ್ಪಗಳ ನಿಯಂತ್ರಕಗಳು (Flowering regulators) **:** ಇವು ಪುಷ್ಪಗಳ ಬೆಳವಣಿಗೆಗೆ ಸಂಬಂಧಿಸಿದಂತಹವು.

೪. ಸಸ್ಯ ಪ್ರೇರಕಗಳು ಅಥವಾ 'ಫೈಟೊ ಹಾರ್ಮೋನ್'ಗಳು : ಇವು ಸಸ್ಯಗಳಲ್ಲಿ ಉಂಟಾಗುವ ಪ್ರೇರಕಗಳಾಗಿದ್ದು ಅತ್ಯಲ್ಪ ಪ್ರಮಾಣದಲ್ಲಿ ಅವು ಸಸ್ಯಗಳ ಜೈವಿಕ ಕ್ರಿಯೆಗಳನ್ನೆಲ್ಲ ನಿಯಂತ್ರಿಸುತ್ತವೆ.

೫. ಆಕ್ಸಿನ್ಸ್ (Auxins) **:** ಈ ಘಟಕಗಳು ಕಾಂಡದ ಕೋಶ ಬೆಳವಣಿಗೆಯನ್ನು ಪ್ರೇರೇಪಿಸುತ್ತವೆ. ಅವು ಒಂದು ಬಗೆಯ ಆಮ್ಲ (Indole Acetic Acid–IAA) ಆಗಿರುತ್ತವೆ.

೬. ಆಕ್ಸಿನ್ ಪೂರ್ವ ನಿಯೋಜಿತಗಳು (Auxin precursors) **:** ಇವು ಕೆಲವು ವಿಶಿಷ್ಟ ಘಟಕಗಳನ್ನು ಆಕ್ಸಿನ್ ರೂಪಕ್ಕೆ ಪರಿವರ್ತಿಸುತ್ತವೆ.

೭. ಪ್ರತಿ ಆಕ್ಸಿನ್ (Anti-auxin) **:** ಈ ಘಟಕಗಳು ಆಕ್ಸಿನ್‌ನ ಕ್ರಿಯೆಗಳನ್ನು ಸ್ಪರ್ಧಾತ್ಮಕವಾಗಿ ಎದುರಿಸಿ ಅವುಗಳನ್ನು ಮೊಟಕುಗೊಳಿಸ


ಲೆತ್ನಿಸುತ್ತವೆ. ಇವುಗಳಿಗೆ 'ಬೆಳವಣಿಗೆಯನ್ನು ತಡೆಹಿಡಿಯುವ ಪ್ರೇರಕ' (Growth inhibitors) ಗಳೆಂತಲೂ ಹೆಸರು.

ಒಟ್ಟಿನಲ್ಲಿ ಈ ವೃದ್ಧಿಕಾರಕ ಅಥವಾ ಪ್ರೇರಕಗಳು ಸಸ್ಯದ ಒಂದು ಅಂಗದಲ್ಲಿ ರಾಸಾಯನಿಕ ಬದಲಾವಣೆಗಳ ಮೂಲಕ ಸಂಶ್ಲೇಷಣೆಗೊಂಡು, ಮತ್ತೊಂದು ಅಂಗಕ್ಕೆ ಸಾಗಿ, ಅಲ್ಲಿ ನಿರ್ದಿಷ್ಟ ಬಗೆಯ ಮತ್ತು ರಾಸಾಯನಿಕ ದೂತರಂತೆ ವರ್ತಿಸುವ ಘಟಕಗಳ ಬಳಕೆಯಿಂದಾಗಿ ಜೈವಿಕ ಕ್ರಿಯೆಗಳು ವರ್ಧನಗೊಳ್ಳುತ್ತವೆ. ಹೀಗಾಗಿ ಒಂದು ಅಂಗದ ಜೈವಿಕ ಕ್ರಿಯಾಚಟುವಟಿಕೆಗಳು ಇನ್ನೊಂದು ಅಂಗದ ಕ್ರಿಯೆಗಳೊಡನೆ ವಿಲೀನವಾಗಿ ಒಂದಕ್ಕೊಂದು ಪೂರಕವಾಗಿ ಕಾರ್ಯಮಾಡುವಂತಾಗುತ್ತವೆ.

ಪ್ರೇರಕದ ಕಲ್ಪನೆ (Hormone concept)

ಕೆಲವು ಸಸ್ಯಗಳ (Avena) ಎಳೆಯ ಕಾಂಡದ ತುದಿಯಲ್ಲಿ (Coleoptile) ಏಕಪಾರ್ಶ್ವದಿಂದ ಬರುವ ಬೆಳಕಿನ ಪರಿಣಾಮವಾಗಿ ಉಂಟಾಗುವ ಬಾಗುವಿಕೆಯು ಆ ಭಾಗದಲ್ಲಿ ಉತ್ಪತ್ತಿಯಾಗುವ ಪ್ರೇರಕದ ಪರಿಶೋಧನೆಗೆ ಕಾರಣವಾಯಿತು. ೧೮೮೦ ರಲ್ಲಿ 'ಡಾರ್ವಿನ್' ಮತ್ತು ೧೯೧೩ ರಲ್ಲಿ 'ಬಾಯ್ಸನ್-ಜೆನ್ಸನ್' (Boysen-Jensen) ಮೊದಲಾದವರು ಕಾಂಡದ ಎಳೆಯ ತುದಿಯಲ್ಲಿ ಒಂದು ವಿಚಿತ್ರ ರಾಸಾಯನಿಕ ವಸ್ತು ಉತ್ಪಾದನೆಯಾಗುವುದೆಂತಲೂ ಆ ವಸ್ತು ಸ್ವಲ್ಪ ಕೆಳಗೆ ಸರಿದು ಒಂದು ಕಡೆ ಸಂಗ್ರಹವಾಗಿ ಕಾಂಡದ ತುದಿಯು ಬೆಳಕಿನ ಕಡೆ ಬಾಗುವುದಕ್ಕೆ ಪ್ರೇರೇಪಿಸುವುದೆಂತಲೂ ವಿವರಿಸಿದರು.


ಚಿತ್ರ-೧



A ಕೋಲಿಯಾಪ್ಟೈಲ್‌ನ ಮೊದಲ ಹಂತ.
B ಕೋಲಿಯಾಪ್ಟೈಲ್ ಬೆಳಕಿನ ಕಡೆಗೆ ಬಾಗುವುದು.
C ಕೋಲಿಯಾಪ್ಟೈಲ್ ತುದಿಯನ್ನು ತೆಗೆದಮೇಲೆ ಯಾವ ಪ್ರತಿಕ್ರಿಯೆ(ಚಲನೆ)ಯೂ ಇಲ್ಲ.

["ಅವೆನಾ" ಸಸ್ಯದ "ಕೋಲಿಯಾಪ್ಟೈಲ್" ಮೇಲೆ ಡಾರ್ವಿನ್ನನು ನಡೆಸಿದ ಪರಿಶೋಧನೆಗಳು]

ಚಿತ್ರ-೨



A


ಬೆಳಕಿಲ್ಲದ ಕಡೆ ಮೈಕ್ ತಗಡನ್ನು ಇಟ್ಟರೆ ಚಲನೆ ಅಥವಾ ಬಾಗುವಿಕೆ ಉಂಟಾಗುವುದಿಲ್ಲ.

B

ಬೆಳಕು ಇರುವ ಕಡೆ ಮೈಕ್ ತಗಡನ್ನು ಇಟ್ಟರೆ ಚಲನೆ ಅಥವಾ ಬಾಗುವಿಕೆ ಉಂಟಾಗುತ್ತದೆ.

["ಅವೆನಾ" ಸಸ್ಯದ "ಕೋಲಿಯಾಪ್ಟೈಲ್" ಮೇಲೆ ಬಾಯ್ಸೆನ್-ಜೆನ್‌ಸನ್‌ರು ನಡೆಸಿದ ಪರಿಶೋಧನೆಗಳು]

ಚಿತ್ರ-೩




A B C

A. 'ಅವೆನಾ' ಸಸ್ಯದ ತುದಿಯನ್ನು ತೆಗೆದುಹಾಕಿದಮೇಲೆ ಬೆಳವಣಿಗೆ ನಿಂತುಹೋಗುವುದು.

B. ಸಾದಾ 'ಅಗರ್ ಬ್ಲಾಕನ್ನು' ಕೂಡಿಸುವುದರಿಂದ ಬೆಳವಣಿಗೆಯ ಮೇಲೆ ಯಾವ ಪರಿಣಾಮವೂ ಇಲ್ಲದಿರುವುದು.

C. ಕತ್ತರಿಸಿದ ತುದಿಯಲ್ಲಿದ್ದ ರಸವನ್ನು ಒಳಗೊಂಡ 'ಅಗರ್ ಬ್ಲಾಕನ್ನು' ಜೋಡಿಸಿದಾಗ ಮತ್ತೆ ಬೆಳವಣಿಗೆ ಪ್ರಾರಂಭವಾಗುವುದು.




D

ತುದಿಯಲ್ಲಿ ಇದ್ದ 'ಹಾರ್ಮೋನ್'ನನ್ನು ಅಗರ್ ಬ್ಲಾಕ್‌ಗಳಿಗೆ ವರ್ಗಾಯಿಸುವುದು.



E

ಬೆಳಕಿಲ್ಲದ ಬದಿಯಲ್ಲಿ ಅಗರ್ ಬ್ಲಾಕನ್ನು ಜೋಡಿಸಿದಾಗ ಬಾಗುವಿಕೆ ಆರಂಭವಾಗುವುದು.



F

'ಹಾರ್ಮೋನ್' (ಪ್ರೇರಕ ಅಥವಾ ಉದ್ದೀಪಕ) ಗಳ ಪ್ರಮಾಣ(ಸಾಂದ್ರತೆ)ಗಳಿಗೆ ಅನುಗುಣವಾಗಿ ಬೆಳವಣಿಗೆಯ ವೇಗಮಿತಿ ಕಂಡುಬರುವುದು.



[" ಅವೆನಾ " ಸಸ್ಯದ " ಕೋಲಿಯಾಪ್ಟೈಲ್ " ಮೇಲೆ " ವೆಂಟ್ " (Went) ನಡೆಸಿದ ಪರಿಶೋಧನೆಗಳು]

೧೯೨೮ ರಲ್ಲಿ ' ವೆಂಟ್ ' (F. W. Went) ಎಂಬಾತನು ಈ ಪ್ರೇರಕವನ್ನು ಅಗರ್ ಬ್ಲಾಕ್‌ಗಳಲ್ಲಿ (Agar Block) ಪ್ರತ್ಯೇಕವಾಗಿ ಸಂಗ್ರಹಿಸಿದನು. ಈ ಪ್ರೇರಕಕ್ಕೆ ' ಆಕ್ಸಿನ್ ' (Auxin) ಎಂದು ಹೆಸರಿಡಲಾಯಿತು. ೧೯೩೪ರಲ್ಲಿ ಕೆಲವು ಜೀವರಸಾಯನತಜ್ಞರು ಸಸ್ಯಗಳಿಂದ ಕೆಲವು ಬಗೆಯ ಪ್ರೇರಕ ಅಥವಾ ' ವರ್ಧನಕಾರಕ 'ಗಳನ್ನು ಬೇರ್ಪಡಿಸಿ ಹೊರತೆಗೆದರು. ಅದಕ್ಕೆ ' ಇಂಡೋಲ್ ಅಸೆಟಿಕ್ ಆಮ್ಲ ' ಎಂತಲೂ ಹೆಸರಿಟ್ಟರು.

ಆಕ್ಸಿನ್‌ಗಳ ಉತ್ಪಾದನೆ : ಸಾಮಾನ್ಯವಾಗಿ ವರ್ಧನ ಸ್ಥಿತಿಯಲ್ಲಿರುವ ಕೋಶಗಳು ಹೆಚ್ಚಾಗಿ ಈ ಆಕ್ಸಿನನ್ನು ಉತ್ಪಾದಿಸಿ ಸಂಗ್ರಹಿಸುವುವು. ಇದರ ಜೊತೆಗೆ ' ಆಕ್ಸಿನ್ ' ಎಂಬುದು ಎಲೆ, ಹೂ, ಕಾಯಿ, ಗಂಟು, ಗಡ್ಡೆ ಇತ್ಯಾದಿ ಗಳಲ್ಲಿಯೂ ಇರುವುದುಂಟು. ಆಕ್ಸಿನ್ ಸಾಮಾನ್ಯವಾಗಿ ೨ ಸ್ಥಿತಿಯಲ್ಲಿರಬಲ್ಲದು.

(a) **ಬಿಡಿ (ಸ್ವತಂತ್ರ) ಆಕ್ಸಿನ್ :** ಈ ಸ್ಥಿತಿಯಲ್ಲಿ ಆಕ್ಸಿನ್ ಎಂಬುದು ಪ್ಯಾರೆನ್‌ಕೈಮಾ ಕೋಶಗಳ ಮೂಲಕವಾಗಿ, ಅಗರ್ ಬ್ಲಾಕ್‌ಗಳಲ್ಲಿ ಬಂದು ಕೂಡಿಕೊಳ್ಳಬಹುದು. ಅದು ' ಡೈ ಈಥೈಲ್ ಈಥರ್ ' (Di-ethyl ether) ನಲ್ಲಿ ಕರಗಬಲ್ಲದು.

(b) **ಕೂಡಿದ ಆಕ್ಸಿನ್** (Bound auxin) : ಈ ಸ್ಥಿತಿಯಲ್ಲಿ ಆಕ್ಸಿನ್ ಎಂಬುದು 'ಆಕ್ಸಿನ್-ಪ್ರೋಟೀನ್-ಕಾಂಪ್ಲೆಕ್ಸ್' (Auxin-protein-complex) ಎಂಬ ರೂಪದಲ್ಲಿ ಇರುತ್ತದೆ.

ವರ್ಧನಸ್ಥಿತಿಯ ಕೋಶಗಳಲ್ಲಿ (Meristematic tissue) ಸಂಶ್ಲೇಷಣಾ ರೀತಿ ಉತ್ಪನ್ನವಾಗುವ ಆಕ್ಸಿನ್‌ಗಳು. ಬೆಳಕು, ಕೋಶಗಳ ಬೆಳವಣಿಗೆ, ವಯಸ್ಸು, ಇತ್ಯಾದಿ ಬಾಹ್ಯಪ್ರೇರಕಗಳಿಂದ ಪ್ರಭಾವಿತವಾಗುತ್ತವೆ. ಸಾಮಾನ್ಯ

ವಾಗಿ ಆಕ್ಸಿನ್‌ನ ಮಟ್ಟ ಬೆಳಕಿನಲ್ಲಿ ಏರಿಕೆ ಮತ್ತು ಕತ್ತಲೆಯಲ್ಲಿ ಇಳಿಕೆಯಾಗುವುದುಂಟು. ಸತುವಿನ ಅಭಾವವಿದ್ದರೆ ಆಕ್ಸಿನ್‌ನ ಉತ್ಪಾದನೆ ಕುಂಠಿತವಾಗುತ್ತದೆ.

ಆಕ್ಸಿನ್‌ನ ಉತ್ಪಾದನೆ ಅಥವಾ ಸಂಶ್ಲೇಷಣೆ ಹಂತಹಂತವಾಗಿ ಈ ರೀತಿ ಸಾಗುವುದುಂಟು.

(೧) ಅಮೈನೊ ಆಸಿಡ್ ಟ್ರಿಪ್ಟೊಫಾನ್
(Amino Acid Tryptophan)
↓
ಇಂಡೋಲ್ ಪೈರೂವಿಕ್ ಆಮ್ಲ (Indole pyruvic acid) | ಟ್ರಿಪ್ಟೊಮೈನ್ (Tryptomine)
↓
ಇಂಡೋಲ್ ಅಸೆಟಾಲ್ ಡಿಹೈಡ್ರೈಡ್
(Indole Acetal dehydride)
↓
ಇಂಡೋಲ್ ಅಸೆಟಿಕ್ ಆಮ್ಲ
(Indole Acetic Acid – IAA)
↓
(೨) ಇಂಡೋಲ್ ಅಸೆಟೊ ನೈಟ್ರೈಟ್
(Indole Aceto Nitrite)
↓
ಇಂಡೋಲ್ ಅಸೆಟಮೈಡ್
(Indole Acetamide)
↓
ಇಂಡೋಲ್ ಅಸೆಟಿಕ್ ಆಸಿಡ್
(Indole Acetic Acid - IAA)

ಈ ಆಕ್ಸಿನ್ ಸಂಶ್ಲೇಷಣೆಗೊಳ್ಳುತ್ತಿರುವಾಗ ಇನ್ನೂ ಕೆಲವು ಬೇರೆ ಕ್ರಿಯೆಗಳು ಸಾಗುತ್ತಿರುತ್ತವೆ. ಆದರಿಂದ ಒಮ್ಮೊಮ್ಮೆ ಆಕ್ಸಿನ್‌ನ ವಿನಾಶ ಇಲ್ಲವೆ ಆದರ ಕಾರ್ಯಗತಿ ಮಂದವಾಗುವ ಸಂಭವವಿರುತ್ತದೆ. ಮುಖ್ಯವಾಗಿ ಉತ್ಕರ್ಷಣ (Oxidation) ವಿಧಾನವೇ ಅದಕ್ಕೆ ಕಾರಣೀಭೂತವಾಗಿರುವುದುಂಟು.

ಇಂಡೋಲ್ ಅಸೆಟಿಕ್ ಆಸಿಡ್ —ಉತ್ಕರ್ಷಣ→ (ಇಂಡೋಲ್ ಅಸೆಟಿಕ್ ಆಸಿಡ್, ಆಕ್ಸಿಡೇಸ್ ಎಂಬ ಎನ್‌ಸೈಮ್) ಇಂಡೋಲ್ ಆಲ್ಡಿಹೈಡ್ + ಕಾರ್ಬನ್ ಡೈ ಆಕ್ಸೈಡ್

ಗಾಲ್ಸ್ಟನ್ (Galston) ಮತ್ತು ಡಾಲ್ಬರ್ಗ್ (Dalberg) ಎಂಬವರ ಹೇಳಿಕೆಯ ಪ್ರಕಾರ (೧೯೫೪), ಕೋಶ ನೀಳವಾಗುವುದು, IAA ಪ್ರಮಾಣದ ಹೆಚ್ಚಳದ ಮೇಲೆ ಅವಲಂಬಿಸಿರುತ್ತದೆ. ಇದರಿಂದ ಅನಿವಾರ್ಯವಾಗಿ IAA ಆಕ್ಸಿಡೇಸ್ ಎನ್‌ಸೈಮ್ ಹೆಚ್ಚಾಗುತ್ತದೆ. ಅದು ಕಡೆಗೆ ಆಕ್ಸಿನ್‌ನ ವಿನಾಶನಕ್ಕೆ ಹಾದಿಮಾಡಿಕೊಡುತ್ತದೆ.

' ಆಕ್ಸಿನ್ ' ಎಂಬುದು ಪ್ರೇರಕ ಅಥವಾ ಉದ್ದೀಪಕಗಳ (Hormones) ಒಂದು ಸಮೂಹವೇ ಆಗಿದ್ದು, ಅದರಲ್ಲಿ ಮೂರು ಘಟಕಗಳಿರುತ್ತವೆ. ಅವು— (೧) ಆಕ್ಸಿನ್ A, (೨) ಆಕ್ಸಿನ್ B ಮತ್ತು (೩) ಹೆಟಿರೊ–ಆಕ್ಸಿನ್.

ಆಕ್ಸಿನ್ A ಎಂಬುದು ಹೆಚ್ಚು ಉಷ್ಣತೆ ಮತ್ತು ಬೆಳಕನ್ನು ತಾಳಿಕೊಳ್ಳಬಲ್ಲದು. ಆಮ್ಲಗಳಲ್ಲಿ ಕರಗದೆ ಇದ್ದು, ಕ್ಷಾರೀಯ ಮಾಧ್ಯಮದಲ್ಲಿ (Alkaline medium) ಛಿದ್ರಗೊಳ್ಳುತ್ತವೆ. ಅದು ಶುದ್ಧಸ್ಥಿತಿಯಲ್ಲಿದ್ದಾಗ ಯಾವ ಬಾಹ್ಯಪ್ರಚೋದನೆಯೂ ಇಲ್ಲದೆ ತೀವ್ರವಾಗಿ ಜಡತ್ವಹೊಂದುತ್ತದೆ.

ಆಕ್ಸಿನ್ B ಎಂಬುದಕ್ಕೆ ' ಆಕ್ಸನಲಾಮಿಕ್ ಆಸಿಡ್ ' (Auxenolomic acid) ಎಂತಲೂ ಹೆಸರು. ಅದು ಬೆಳಕು ಮತ್ತು ಉಷ್ಣತೆಯನ್ನು ತಾಳಿಕೊಳ್ಳಬಲ್ಲದು. ಅದು ಸಂಗ್ರಹವಾಗಿದ್ದಾಗ—ಶುದ್ಧ ಸ್ಥಿತಿಯಲ್ಲಲ್ಲ—ಜಡತ್ವವನ್ನು ಹೊಂದುತ್ತದೆ.

' ಹೆಟಿರೊ–ಆಕ್ಸಿನ್ ' ಎಂಬುದರ ರಾಸಾಯನಿಕ ಘಟಕದಲ್ಲಿ ಇಂಗಾಲ (C), ಜಲಜನಕ (H), ಮತ್ತು ಆಮ್ಲಜನಕ(O)ಗಳಿರುವುದರ ಜತೆಗೆ ಸಾರಜನಕ (N) ಕೂಡ ಇರುತ್ತದೆ. ಇದು ಆಮ್ಲೀಯ ಪರಿಸ್ಥಿತಿಯಲ್ಲಿ ಛಿದ್ರಗೊಳ್ಳುವುದು. ಆದರೆ ಕ್ಷಾರೀಯ ಮಾಧ್ಯಮದಲ್ಲಿ ಸ್ಥಿರವಾಗಿರುತ್ತದೆ.

ಸ್ಥೂಲವಾಗಿ ಹೇಳುವುದಾದರೆ, ಪ್ರೇರಕಗಳು ವಿವಿಧ ರಾಸಾಯನಿಕ ಘಟಕಗಳಾಗಿರುತ್ತವೆ. ಕೆಲವು ಪ್ರೋಟೀನಿನಿಂದಾಗಿಯೂ ಕೆಲವು ಅಮೈನೊ ಆಮ್ಲಗಳಿಂದಲೂ ಮತ್ತೆ ಕೆಲವು ಇತರ ಬಗೆಯ ರಾಸಾಯನಿಕ ಅಂಶಗಳಿಂದಲೂ ಆಗಿರುತ್ತವೆ. ಇವರಿಂದಲೇ ಪ್ರೇರಕಗಳನ್ನು ಬೆಳವಣಿಗೆಯ ' ವರ್ಧಕ ' ಗಳೆಂದೂ, ನಿಯಂತ್ರಕಗಳೆಂದೂ ಕರೆಯಲಾಗುತ್ತದೆ.

ಆಕ್ಸಿನ್‌ಗಳ ಪರಿಣಾಮ :

' ಇಂಡೋಲ್ ಅಸೆಟಿಕ್ ಆಸಿಡ್ ' ಅಥವಾ ' ಆಕ್ಸಿನ್ ' ಎಂಬುದು ಸಸ್ಯ ಬೆಳವಣಿಗೆಯಲ್ಲಿ ಅನೇಕ ತರಹದ ಪರಿಣಾಮಗಳನ್ನುಂಟುಮಾಡುತ್ತದೆ. ಅವು (೧) ಎಳೆಯ ಕಾಂಡದ ತುತ್ತ ತುದಿ (Coleoptile), ಕಾಂಡಗಳು, ಪತ್ರ ನರಗಳು ಮತ್ತು ಪತ್ರಕಾಂಡ ಮುಂತಾದುವುಗಳಲ್ಲಿ ಕೋಶಗಳು ನೀಳವಾಗುವುದಕ್ಕೆ ಸಹಾಯಕಾರಿಯಾಗುತ್ತವೆ.

(೨) ಆಗಂತುಕ ಬೇರುಗಳು, ಫಲಗಳು, ಘಾಯ ಮಾಯಿಸಲು ಉಂಟಾಗುವ 'ಕ್ಯಾಲಸ್' (Callus) ಮತ್ತು ವರ್ಧನ ಸ್ಥಿತಿಯಲ್ಲಿರುವ ಕೋಶಗಳು, ಮುಂತಾದುವುಗಳಲ್ಲಿ ಕೋಶವಿಭಜನೆ ತೀವ್ರವಾಗುವುದಕ್ಕೆ ಪ್ರೋತ್ಸಾಹ ನೀಡುತ್ತವೆ.

(೩) ಬೇರು ನೀಳವಾಗುವಿಕೆ, ಬೇರಿನ ತುದಿ ಮತ್ತು ಕಾಂಡದ ತುದಿ ತಮ್ಮ ದಿಶೆಯನ್ನು ಸ್ಥಿರಪಡಿಸಿಕೊಳ್ಳುವುದು, ಮುಂತಾದುವುಗಳಲ್ಲಿ ಅನವಶ್ಯಕ ಬೆಳವಣಿಗೆಯನ್ನು ನಿಯಂತ್ರಿಸುವುದರಲ್ಲಿ ಸಹಾಯಕವಾಗುವುವು.

ಬೆಳವಣಿಗೆಯ ವರ್ಧಕ ಮತ್ತು ಮರ್ದಕಗಳು
(Growth Promoters and Inhibitors)

ಸಸ್ಯಗಳ ಬೆಳವಣಿಗೆಯಲ್ಲಿ ಈ ಆಕ್ಸಿನ್ ಅಥವಾ ಇಂಡೋಲ್ ಅಸೆಟಿಕ್ ಆಸಿಡ್‌ನ ಪ್ರಭಾವವನ್ನು ಕೆಲವು ರಾಸಾಯನಿಕ ವಸ್ತುಗಳಿಂದ ವರ್ಧಿಸಬಹುದು, ಇಲ್ಲವೆ ಕುಂಠಿತಗೊಳಿಸಬಹುದು. ಆ ರೀತಿ ಬೆಳವಣಿಗೆಯನ್ನು ವರ್ಧಿಸಬಹುದಾದುವು—2, 3, 5 ಟ್ರೈ-ಅಯಡೊ ಬೆಂಸೋಯಿಕ್ ಆಮ್ಲ (Tri-iodo benzoic acid), ಕಿಲಿಡೊನಿಕ್ ಆಮ್ಲ (Chelidonic acid), ಥಲಾಮಿಕ್ ಆಮ್ಲ (Phthalamic acid) ಮುಂತಾದುವು. ಇವುಗಳಿಗೆ 'ಆಕ್ಸಿನ್ ಪೋಷಕ'ಗಳೆಂತಲೂ (Auxin synergists) ಹೆಸರು. ಇವುಗಳ ಪ್ರಮಾಣ ಒಂದು ಎಲ್ಲೆ ಮೀರಿದರೆ, ಅವೇ ಬೆಳವಣಿಗೆಯನ್ನು ಕುಂಠಿತಗೊಳಿಸಲೂ ಬಹುದು. ಸಾಮಾನ್ಯವಾಗಿ ಬೆಳವಣಿಗೆಯನ್ನು ಅರ್ಥಾತ್ ಆಕ್ಸಿನ್ ಪ್ರಭಾವವನ್ನು ಕುಂಠಿತಗೊಳಿಸುವಂತಹವು—ಫಿನೈಲ್ ಲ್ಯೂಟಿರಿಕ್ ಆಮ್ಲ (Phenyle lutyric acid), ಟ್ರಾನ್ಸಿನಾಮಿಕ್ ಆಮ್ಲ (Transcinnamic acid), 2–4–6 ಟ್ರೈ-ಕ್ಲೋರೊಫಿನಾಕ್ಸಿ ಅಸೆಟಿಕ್ ಆಮ್ಲ (2-4-6. Tri-chloro phenoxy acetic acid) ಮತ್ತು 2–4 ಟ್ರೈಕ್ಲೋರೊ ಅನಿಸೋಲ್ (2–4 Trichloro anisole) ಇತ್ಯಾದಿ. ಇಂತಹವುಗಳಿಗೆ 'ಪ್ರತಿ ಆಕ್ಸಿನ್ಸ್' (anti-auxins) ಎಂತಲೂ ಹೆಸರು.

ಬೆಳವಣಿಗೆಯ ವರ್ಧಕಗಳು
(Growth Promoters or Regulators)

ಈ 'ಇಂಡೋಲ್ ಅಸೆಟಿಕ್ ಆಸಿಡ್'ಗಳಲ್ಲದೆ ಇನ್ನೂ ಕೆಲವು ಸಸ್ಯಗಳ ಬೆಳವಣಿಗೆಯನ್ನು ನಿಯಂತ್ರಿಸಬಲ್ಲವು. ಅವುಗಳಲ್ಲಿ ಸಾಮಾನ್ಯವಾದುವು ಇಂತಿವೆ :

(೧) **ರೈಸೊ ಕಾಲಿನ್** (Rhizo cauline) : ಇದು ಬೇರಿನ ಬೆಳವಣಿಗೆಯನ್ನು ಆರಂಭಿಸುವುದಾಗಿದ್ದು, ಅದು ಎಲೆಗಳಲ್ಲಿ ಉತ್ಪತ್ತಿಯಾಗುತ್ತದೆ.

(೨) **ಕಾಲೊಕಾಲಿನ್** (Caulocaline) : ಇದು ಕಾಂಡದ ಬೆಳವಣಿಗೆಗೆ ಅವಶ್ಯವಿದ್ದು, ಬೇರಿನಲ್ಲಿ ಉತ್ಪತ್ತಿಯಾಗುತ್ತದೆ.

(೩) **ಫಿಲ್ಲೊ ಕಾಲಿನ್** (Phyllo caline) : ಇದು ಎಲೆಗಳ 'ಮೀಸೊಫಿಲ್' (Mesophyll) ಕೋಶಗಳ ಉತ್ಪಾದನೆಗೆ ಅವಶ್ಯ.

(೪) **ಜೀವಸತ್ವಗಳು** (Vitamins) : ಕೆಲವು ಜೀವಸತ್ವಗಳೆನಿಸಿದ ಥಯಾಮಿನ್ (ವಿಟಮಿನ್ B_1), ಪೈರಿಡಾಕ್ಸಿನ್ (ವಿಟಮಿನ್ B_6) ಮತ್ತು ನಿಕೊಟಿನಿಕ್ ಆಮ್ಲ (Nicotinic acid) ಮುಂತಾದುವು ಸಸ್ಯಗಳ ಬೆಳವಣಿಗೆಗೆ ಅವಶ್ಯ. ಇವೆಲ್ಲ ಎಲೆಗಳಲ್ಲಿ ಉತ್ಪತ್ತಿಯಾಗಿ, ಅವು ಬೇರಿನ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತವೆ.

(೫) **ಟ್ರೊಮಾಟಿಕ್ ಆಮ್ಲ** (Traumatic acid) : ಇದು ಘಾಯದ ಪ್ರದೇಶಗಳಲ್ಲಿ ಉತ್ಪತ್ತಿಯಾಗಿ, ಘಾಯ ಮಾಯಿಸಲು 'ಕ್ಯಾಲಸ್' (Callus) ಎಂಬ ಕೋಶಗಳನ್ನು ಉತ್ಪತ್ತಿ ಮಾಡಲು ಸಹಾಯಕವಾಗುತ್ತವೆ.

(೬) **ಅಡೆನಿನ್** (Adenine) : ಇದು ವಿವಿಧ ಮೊಗ್ಗುಗಳ ಬೆಳವಣಿಗೆಯನ್ನು ನಿಯಂತ್ರಿಸುವಲ್ಲಿ ಸಹಾಯಕವಾಗಿದ್ದು, ಎಲೆಗಳಲ್ಲಿ ಉತ್ಪತ್ತಿಯಾಗುತ್ತದೆ.

(೭) **ಜಿಬೆರೆಲಿನ್ಸ್** (Gibberellins) : ಇವು ಅಮೇರಿಕನ್ ಮತ್ತು ಬ್ರಿಟಿಷ್ ತಜ್ಞರ ಪರಿಶೋಧನೆಗಳಿಂದ ಇತ್ತೀಚಿತ್ತಲಾಗಿ ಬೆಳಕಿಗೆ ಬಂದ ಸಸ್ಯ ಬೆಳವಣಿಗೆಯ ನಿಯಂತ್ರಕಗಳು. ಇವು 'ಜಿಬೆರೆಲಾ ಫ್ಯೂಜಿಕೊರೋಯಿ' (Gibberela fugikurroi) ಎಂಬ ಬೂಸ್ಟಿನಿಂದ ಸಿದ್ಧವಾದ ಪ್ರೇರಕಗಳು.

ಬೆಳವಣಿಗೆಯ ಕೃತಕ ನಿಯಂತ್ರಕಗಳು
(Synthetic Growth Regulators)


೧೯೩೪ ರಿಂದೀಚೆಗೆ ಸಸ್ಯಬೆಳವಣಿಗೆಯನ್ನು ನಿಯಂತ್ರಿಸಬಲ್ಲ ಹಲವು ಸೇಂದ್ರಿಯ ಘಟಕಗಳನ್ನು ಸಂಶ್ಲೇಷಿಸಲಾಗಿದೆ. ಅವು ಸಾಮಾನ್ಯವಾಗಿ 'ಇಂಡೋಲ್ ನಾಫ್ತಲಿನ್' (Indole Napthalene), ಫೆನಾಕ್ಸಿ ಅಸೆಟಿಕ್ ಆಸಿಡ್ (Phenoxy acetic acid), ಬೆಂಸೋಇಕ್ ಆಸಿಡ್ (Benzoic acid), ಫೆನೈಲ್ ಅಸೆಟಿಕ್ ಆಸಿಡ್ (Phenyl acetic acid) ಮುಂತಾದವುಗಳ ಉತ್ಪನ್ನ ಅಥವಾ ಉಪವಸ್ತುಗಳಾಗಿರುತ್ತವೆ.

ಬೆಳವಣಿಗೆಯ ತಾಂತ್ರಿಕ ಸ್ವರೂಪ :

ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳ ಸಹಾಯದಿಂದ ನಡೆಸಿದ ಪರಿಶೋಧನೆಗಳ ಪರಿಣಾಮವಾಗಿ ಕೋಶಗಳ ಭಿತ್ತಿಯಲ್ಲಿ ಹೆಣೆದುಕೊಂಡ ಹಾಗೂ 'ಸೆಲ್ಯುಲೋಸ್'(Cellulose)ನಿಂದಾದ ಸೂಕ್ಷ್ಮ ಎಳೆಗಳಿರುತ್ತವೆಯೆಂದು ಕಂಡು ಬಂದಿದೆ. ಆದರಿಂದ ಹೊಸ ಹೊಸ ಎಳೆಗಳು ಸಂಗ್ರಹವಾದಂತೆ ಕೋಶಭಿತ್ತಿಯ ಕ್ಷೇತ್ರವೂ ಹೆಚ್ಚುತ್ತಹೋಗುತ್ತದೆ.

೧೯೫೨ರಲ್ಲಿ ಫ್ರೆ. ವಿಸ್ಲಿಂಗ್ (Frey Wyssling) ಎಂಬಾತನು ಕೋಶ-ಭಿತ್ತಿಯು ನೀಳವಾಗುವುದಕ್ಕೆ ಸೂಕ್ಷ್ಮ ಎಳೆಗಳು ಪರಸ್ಪರ ವಿರುದ್ಧ ದಿಕ್ಕಿನಿಂದ ಬಂದು ಕೂಡಿಕೊಳ್ಳುವುದೇ ಕಾರಣವೆಂದು ಸೂಚಿಸಿದ್ದಾನೆ. ಇದಕ್ಕೆ ಕೋಶದೊಳಗೆ ಸಾಕಷ್ಟು ಪ್ರಮಾಣದ ಆಕ್ಸಿನ್ ಸಂಗ್ರಹವಿರುವುದು ಅವಶ್ಯವೆಂದು ಭಾವಿಸಲಾಗಿದೆ. ಹೀಗಾಗಿ ಸೂಕ್ಷ್ಮ ಎಳೆಗಳ (Microfibrics) ಸಂಶ್ಲೇಷಣೆಯಲ್ಲಿ ಆಕ್ಸಿನ್ ಎಂಬುದು ಒಂದು 'ಸಹ-ಎನ್‌ಸೈಮ್' (Co-enzyme) ನಂತೆ ವರ್ತಿಸುತ್ತದೆ. ಅಂತೆಯೇ ಕೋಶಗಳು ನೀಳವಾಗಿ ಬೆಳೆಯುವ ಸಂದರ್ಭಗಳಲ್ಲಿ ಅಲ್ಲಿ ಇರುವ ಆಕ್ಸಿನ್, ಸೇಂದ್ರಿಯ ಆಮ್ಲಗಳ ಸಂವರ್ಧನ ಕ್ರಿಯೆ, ಉಸಿರಾಟದ ಕ್ರಿಯೆ ಮುಂತಾದುವುಗಳ ವೇಗವನ್ನು ನಿಯಂತ್ರಿಸುತ್ತದೆ. ಜೊತೆಗೆ, ಆಕ್ಸಿನ್ ಎಂಬುದು ಫಾಸ್ಫೇಟ್ ಎನ್‌ಸೈಮ್, ಶಕ್ತಿವರ್ಗಾವಣೆ, ಕೋಶಕೇಂದ್ರದಲ್ಲಿ DNA ಮತ್ತು RNA ಎಂಬ ಆಮ್ಲಗಳ ಸಂಶ್ಲೇಷಣೆ ಇತ್ಯಾದಿಗಳನ್ನೆಲ್ಲ ನಿಯಂತ್ರಿಸುತ್ತದೆ.

ಒಟ್ಟಿನಲ್ಲಿ ಸಸ್ಯಗಳ ಬೆಳವಣಿಗೆಯ ಕಾಲಕ್ಕೆ ಆಕ್ಸಿನ್ ಎಂಬುದು 'ತುಪಾಕಿನ ಬಾಪು'(Trigger agent) ವಿನಂತೆ ಕೆಳಕಂಡ ರೀತಿ ಕಾರ್ಯಮಾಡುತ್ತದೆ :



ಆಕ್ಸಿನ್‌ನ ಬಹುಮುಖ ಪ್ರಯೋಜನಗಳು :

(೧) ಇವು ಸಸ್ಯಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ.

(೨) ಇವು, ಕೋಶಗಳು ನೀಳವಾಗುವುದು, ಬೇರು ಕಾಂಡಗಳು ಉದ್ದ ಬೆಳೆಯುವುದು ಮತ್ತು ಫಲಪುಷ್ಪಗಳ ಉತ್ಪಾದನೆ ಮುಂತಾದುವುಗಳ ಮೇಲೆ ಪ್ರಭಾವ ಬೀರುತ್ತವೆ.

(೩) ಆಕ್ಸಿನ್ ಪಾರ್ಶ್ವಮೊಗ್ಗುಗಳ ಬೆಳವಣಿಗೆಯನ್ನು ನಿಯಂತ್ರಿಸುತ್ತವೆ. ಇದರಿಂದ ಸಸ್ಯಗಳು ಬೇರು ಕಾಂಡಗಳಿಂದು ಲಂಬ ಹಾಗೂ ಊರ್ಧ್ವ ಮುಖವಾಗಿ ಬೆಳೆಯಬಲ್ಲವು.

(೪) ಆಕ್ಸಿನ್ ಎಂಬುದು ಎಲೆಗಳ ಬುಡದಲ್ಲಿ 'ಅಬ್‌ಸಿಷನ್ ಲೇಯರ್' (Abscission layer) ಎಂಬ ಪದರು ಉಂಟಾಗುವುದನ್ನು ತಡೆಗಟ್ಟಿ ಎಲೆ ಮತ್ತು ಫಲಗಳು ವಾಯಿದೆಗೆ ಮುಂಚೆಯೇ ಅಕಾಲಿಕವಾಗಿ ಉದುರಿ ಬೀಳುವುದನ್ನು ತಡೆಯಬಲ್ಲದು.

(೫) ಆಕ್ಸಿನ್ 'ಕೇಂಬಿಯಂ' (Cambium) ಮತ್ತು ಇತರ ವರ್ಧನ ಸ್ಥಿತಿಯ ಕೋಶಗಳ ಚಟುವಟಿಕೆಯನ್ನೂ ಬೆಳವಣಿಗೆಯನ್ನೂ ವರ್ಧಿಸಬಲ್ಲದು.

(೬) ಕಾಂಡ ಮತ್ತು ಬೇರುಗಳ ತುದಿಗಳು ಏಕಪಾರ್ಶ್ವದಿಂದ ಬರುವ ಬೆಳಕು ಮತ್ತು ಗುರುತ್ವಾಕರ್ಷಣೆಯಂತಹ ಬಾಹ್ಯ ಪ್ರಭಾವ ಹಾಗೂ ಪ್ರಚೋದನೆಗಳಿಗೆ ಅನುಗುಣವಾಗಿ ಸೂಕ್ತ ಚಲನೆ ಮತ್ತು ಪ್ರತಿಕ್ರಿಯೆಯನ್ನು ತೋರುವಂತೆ ನಿರ್ದೇಶಿಸುತ್ತವೆ.

(೭) ಆಕ್ಸಿನ್, ಕಾಂಡಗಳಲ್ಲಿ ಬೆಳವಣಿಗೆಯನ್ನು ವರ್ಧಿಸುವಂತೆಯೂ, ಬೇರುಗಳಲ್ಲಿ ಬೆಳವಣಿಗೆಯನ್ನು ಕುಗ್ಗಿಸುವಂತೆಯೂ ಕಾರ್ಯಮಾಡುತ್ತದೆ.

(೮) ಆಕ್ಸಿನ್, ಕಾಂಡಗಳ ಗಣಿಕೆಯ (Internode) ಭಾಗದಲ್ಲಿ ಬೆಳವಣಿಗೆಯನ್ನು ನಿಯಂತ್ರಿಸುತ್ತದೆ

(೯) ಆಕ್ಸಿನ್‌ನ ಪ್ರಮಾಣ ಮತ್ತು ಪೂರೈಕೆ ಕಡಿಮೆಯಾದರೆ ಸಸ್ಯಗಳಲ್ಲಿ ಗಿಡ್ಡುತನ ಉದ್ಭವಿಸುತ್ತದೆ.

(೧೦) ಸಸ್ಯದ ಯಾವುದೇ ಭಾಗಕ್ಕೆ ಆಕ್ಸಿನ್‌ನನ್ನು ಸವರಿದರೆ ಆ ಭಾಗದಲ್ಲಿ ಗಂಟು (gall) ಉಂಟಾಗುತ್ತದೆ. ಅದಕ್ಕೆ ಆ ಭಾಗದಲ್ಲಿ ಕೋಶಗಳ ವಿಶೇಷ ತೀವ್ರತರದ ವಿಭಜನೆ ಮತ್ತು ಬೆಳವಣಿಗೆಯುಂಟಾಗುವುದೇ ಕಾರಣ.

(೧೧) 'ಇಂಡೋಲ್ ಅಸೆಟಿಕ್ ಆಸಿಡ್' (Indole Acetic Acid-IAA) ಮತ್ತು 'ಇಂಡೋಲ್ ಪ್ರೋಪಿಯೊನಿಕ್ ಆಸಿಡ್' (Indole Propionic

Acid-IPA)ಗಳಂತಹ ಆಕ್ಸಿನ್‌ಗಳನ್ನು ಪುಷ್ಪಗಳ ಶಲಾಕೆ ಮತ್ತು ಶಲಾಕಾಗ್ರಕ್ಕೆ ಬಳಿದರೆ, ಮುಂದೆ ಬೀಜಗಳಿಲ್ಲದ ಫಲಗಳನ್ನು ಉತ್ಪಾದಿಸ ಬಹುದು. 'ಗಸ್ಟಾಫ್‌ಸನ್' (Gustafson) ಎಂಬಾತ ಯಶಸ್ವಿಯಾಗಿ ಇದನ್ನು ಮಾಡಿ ತೋರಿಸಿದ್ದಾನೆ. ಆದರಿಂದ ಈಗ ಫಲ ದೊರಕಿಸಲು ಅವಶ್ಯ ವಿರುವ ಪರಾಗಸಂಪರ್ಕಕ್ರಿಯೆಯೇ ಇಲ್ಲದೆಯೂ ಫಲೋತ್ಪತ್ತಿ ಉಂಟು ಮಾಡಬಹುದು. ಇದು ಸಸ್ಯತಳಿನಿರ್ಮಾಣಕಾರ್ಯದಲ್ಲಿ ಬಹು ಮುಖ್ಯ ವಾದುದು.

(೧೨) ಕಾಂಡಗಳ ತುಂಡುಗಳಿಗೆ 'α ನ್ಯಾಫ್ಥಲಿನ್ ಅಸೆಟಿಕ್ ಆಸಿಡ್' (α-Naphthalene acetic acid) ಮತ್ತು 'β-ಇಂಡೋಲ್ ಬ್ಯುಟಿರಿಕ್ ಆಸಿಡ್' (β-Indole Butyric acid) ಗಳಂತಹ ಆಕ್ಸಿನ್‌ಗಳನ್ನು ಸವರಿ ಭೂಮಿ ಯಲ್ಲಿ ನೆಟ್ಟರೆ ಬೇರುಗಳು ಯಶಸ್ವಿಯಾಗಿ ಬೇಗ ಹೊರಬರುವುವು.

(೧೩) 'PP ಟೊಮ್ಯಾಟೊ ಸೆಟ್' ಎಂಬುದು ಒಂದು ಪ್ರೇರಕ ತಯಾ ರಿಕೆಯಾಗಿದ್ದು (hormone product) ಸಸ್ಯಗಳಲ್ಲಿ ಪುಷ್ಪಗಳು ಅಕಾಲಿಕವಾಗಿ ಉದುರುವುದನ್ನು ತಡೆಗಟ್ಟಬಹುದು. ಇದರಿಂದ ಫಲೋತ್ಪತ್ತಿ ಅನಿರ್ಬಂಧವಾಗಿ ಸಾಗುವುದೆಂದು ಬೇರೆ ಹೇಳಬೇಕಾಗಿಲ್ಲ. ಅದನ್ನು ದೊಡ್ಡ ಗಾತ್ರದ ಹಾಗೂ ಬೀಜಗಳೇ ಇರದ ಫಲಗಳನ್ನು ಉಂಟುಮಾಡಲು ಸಹ ಬಳಸಲಾಗುತ್ತದೆ.

(೧೪) ಆಕ್ಸಿನ್‌ನನ್ನು ಕಸ, ಕಳೆ ಮುಂತಾದ ಗಿಡಗಳನ್ನು ನಿಯಂತ್ರಿ ಸಲೂ ಬಳಸಲಾಗುತ್ತದೆ. ಆರ್ಥಿಕ ದೃಷ್ಟಿಯಿಂದ ಮಹತ್ವವಿರುವ ಸಸ್ಯಗಳ ಬೆಳವಣಿಗೆಗೆ ಕಾಲ್ತೊಡಕಾಗಿರುವ ಕಸ, ಕಳೆ ಮುಂತಾದ ಗಿಡಗಂಟಿಗಳು ಭೂಮಿಯಿಂದ ಉಪಯುಕ್ತ ಲವಣಗಳನ್ನು ಹೀರಿಕೊಳ್ಳುವುವಲ್ಲದೇ, ಧಾನ್ಯದ ಬೆಳೆಗಳಿಗೆ ಮಾರಕವಾದ ಕೆಲವು ಪಿಡುಗು ರೋಗಗಳಿಗೆ ತವರುಮನೆಯಾಗಿ ಆಶ್ರಯ ನೀಡುತ್ತವೆ. ಇಂತಹ ಅನಪೇಕ್ಷಿತ ಗಿಡಮೂಲಿಕೆಗಳನ್ನು '2-4- ಡೈಕ್ಲೋರೊ ಆಸೆಟಿಕ್ ಆಸಿಡ್'ನಂತಹ ಆಕ್ಸಿನ್‌ಗಳನ್ನು ಬಳಸಿ ನಾಶಪಡಿಸ ಬಹುದು.

ಒಟ್ಟಿನಲ್ಲಿ ಈ 'ಫೈಟೋ-ಹಾರ್ಮೋನ್' (Phyto-hormones) ಅಥವಾ ಸಸ್ಯಪ್ರೇರಕಗಳು ಕೃಷಿಕರಿಗೆ ಮತ್ತು ತೋಟಗಾರರಿಗೆ ಬಹು ಉಪಯು ಕ್ತವೂ ಮಹತ್ವದವೂ ಆಗಿರುವುವು. ಆದ್ದರಿಂದ ಅವುಗಳ ಪ್ರಾಮುಖ್ಯತೆ ಯನ್ನು ಇಂದು ಯಾರೂ ಅಲ್ಲಗಳೆಯಲಾರರು.

(ವಿವಿಧ ಆಧಾರಗಳಿಂದ)

★ ಎಂ. ಎಸ್. ಎಸ್. ರಾವ್

ಎಂಟುಹಿಟ್ಟು

ಕನ್ನಡನಾಡಿನ ಶಿಲಾಶಾಸನ, ತಾಮ್ರಶಾಸನ ಮತ್ತು ಸಾಹಿತ್ಯಕೃತಿಗಳಲ್ಲಿ 'ಎಂಟುಹಿಟ್ಟು' ಎಂಬ ಪದ ಅನೇಕ ಸಲ ಕಂಡುಬರುತ್ತದೆ. ಸಂಸ್ಕೃತ ಶಾಸನಗಳಲ್ಲಿ ಬಳಸಲ್ಪಟ್ಟಿರುವ 'ಅಷ್ಟಪಿಷ್ಟ' ಎಂಬುದು 'ಎಂಟುಹಿಟ್ಟು' ಎಂಬ ಪದದ ಸಂಸ್ಕೃತರೂಪವಾಗಿದೆ. ಕೆಲವು ಶಾಸನಗಳಲ್ಲಿ 'ಹನ್ನಿಹಿಟ್ಟು' ಎಂಬ ಉಲ್ಲೇಖವೂ ಮತ್ತೆ ಕೆಲವು ಶಾಸನಗಳಲ್ಲಿ ಕೇವಲ 'ಹಿಟ್ಟು', 'ಹಿಟ್ಟುದೆಱೆ' ಎಂಬ ಪದಗಳೂ, ಇನ್ನು ಕೆಲವು ಶಾಸನಗಳಲ್ಲಿ 'ಹಿಟ್ಟುಕಾಱ', ಹಿಟ್ಟಿನ ಎಂಬ ವಿಶೇಷ ರೂಪಗಳೂ ಬಳಸಲ್ಪಟ್ಟಿವೆ.

ರಾಜರು, ಮಾಂಡಲಿಕರು ಮತ್ತು ಪ್ರಮುಖ ವ್ಯಕ್ತಿಗಳು, ದೇವಾಲಯ, ಅಗ್ರಹಾರ ಇಲ್ಲವೆ ಸಂಸ್ಥೆಗಳಿಗೆ ದತ್ತಿ ನೀಡುವ ಸಮಾರಂಭದಲ್ಲಿ ಉಪಸ್ಥಿತರಿರುತ್ತಿದ್ದ ಪ್ರಮುಖರನ್ನು ಹೆಸರಿಸುವಾಗ 'ಎಂಟುಹಿಟ್ಟು' ಎಂಬ ಉಲ್ಲೇಖ ಬರುವುದು ಸಾಮಾನ್ಯ. ಕೆಲವು ಪ್ರಸಂಗಗಳಲ್ಲಿ 'ಎಂಟುಹಿಟ್ಟು' ಸ್ವತಃ ದತ್ತಿ ಬಿಟ್ಟ ಉದಾಹರಣೆಗಳಿವೆ.

ಈ ಉಲ್ಲೇಖಗಳಿಂದ ಹಿಟ್ಟು ಎನ್ನುವದು ಸ್ಥಾನಿಕ ಆಡಳಿತದಲ್ಲಿ ಮಹತ್ವದ ಪಾತ್ರವಾಡುತ್ತಿದ್ದ ಪ್ರಾತಿನಿಧಿಕ ಸಂಸ್ಥೆಯಾಗಿರಬೇಕೆನಿಸುತ್ತದೆ. 'ಎಂಟುಹಿಟ್ಟು' ಎಂಟು ಸಂಸ್ಥೆ(Guilds)ಗಳಾಗಿರಬಹುದೆಂದು ಡಾ. ಫ್ಲೀಟ್ ಅವರು ಊಹಿಸಿದ್ದಾರೆ.[1] 'ಎಂಟುಹಿಟ್ಟು', ಸ್ಥಾನಿಕ ಆಡಳಿತದ ಅಂಗವಾಗಿದ್ದಿತೆಂದು ಡಾ. ಜಿ. ಎಸ್. ದೀಕ್ಷಿತ ಅವರು ಸೂಚಿಸಿದ್ದಾರೆ.[2] ಆದರೆ, ವಿಶಿಷ್ಟಾರ್ಥದಂತೆ, ಹಿಟ್ಟು ಪದದ ನಿಷ್ಪತ್ತಿಯೇನು? ಆ ವಿಶಿಷ್ಟಾರ್ಥ ಬಂದ ಬಗೆ ಏನು? ಅವು ಸಂಸ್ಥೆ (Guild) ಗಳಾಗಿದ್ದವೆಂಬ ಡಾ. ಫ್ಲೀಟ್ ಅವರ ಊಹೆ ನಿಜವೇ? ಅವರು ಊಹಿಸಿರುವಂತೆ ಅವು ಎಂಟು ಬೇರೆಬೇರೆ ಸಂಸ್ಥೆಗಳೇ ಅಥವಾ ಎಂಟು ಅಂಗಗಳನ್ನುಳ್ಳ ಒಂದೇ ಸಂಸ್ಥೆಯೇ? ಸಂಸ್ಥೆಯಾಗಿದ್ದರೆ, ಅದರ ಸ್ವರೂಪವೇನು? ಅದರ ಸದಸ್ಯರಾರು? ಅವು ಎಂಟು ಬೇರೆಬೇರೆ ಸಂಸ್ಥೆಗಳಾಗಿದ್ದರೆ, ಆ 'ಎಂಟುಹಿಟ್ಟು'ಗಳಾವವು? ಹನ್ನಿಹಿಟ್ಟು, ಎಂಟುಹಿಟ್ಟುಗಳ ಪರಸ್ಪರ ಸಂಬಂಧವೇನು? ಸಮಾಜಕ್ಕೆ ಅವು ಯಾವ ರೀತಿ ಸೇವೆ ಸಲ್ಲಿಸಿವೆ? ಯಾವ ರೀತಿ ಉತ್ಕ್ರಾಂತಿಹೊಂದಿವೆ?— ಎಂಬಿವೇ ಮುಂತಾದ ಸಮಸ್ಯೆಗಳಿಗೆ ಸಮಾಧಾನಕಾರಕ ಉತ್ತರ ಸಿಕ್ಕುವದಿಲ್ಲ. ಕೆಲವೊಂದು ಶಾಸನಗಳು ಮಾತ್ರ ಈ ವಿಷಯಕವಾಗಿ, ಅವ್ಯಕ್ತವಾದರೂ,

---

1. Journal of the Bombay Branch of Royal Asiatic Society, X, p. 257 & n.
2. G. S. Dikshit, Local Self-Government in Mediaeval Karnataka (Karnatak University, Dharwar, 1964), pp. 59-61.

ಅತ್ಯುಪಯುಕ್ತವಾದ ವಿವರಗಳನ್ನು ಒದಗಿಸುತ್ತಿದ್ದು, ಅವುಗಳ ಆಧಾರವನ್ನವಲಂಬಿಸಿ ಮೇಲಿನ ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಹಿಡಿಯಲು ಇಲ್ಲಿ ಪ್ರಯತ್ನಿಸಲಾಗಿದೆ.

ವಿಶಿಷ್ಟಾರ್ಥದಲ್ಲಿ 'ಹಿಟ್ಟು' ಪದದ ನಿಷ್ಪತ್ತಿ: ಧಾರವಾಡ ಜಿಲ್ಲೆಯ ಹೊಸೂರ ಗ್ರಾಮದ, ಕ್ರಿ.ಶ. ೧೧೮೬ ರ ಶಿಲಾಶಾಸನದಲ್ಲಿ,[3] "........... ಬಡಗಿ ಕಲೋಜ ಮೋರಕೇಶ್ವರ ದೇವರ ತೋಟ ಕೆಯಿ ಮನೆಯುಗೆಯಿದ ಕೂಲಿಯನಿ-ತುಂಟನಿತುಮಂ ದೇವರ ನೀವೇದ್ಯಕ್ಕೊ ವ್ಮಾನ ಅಕ್ಕಿಯ ನಡೆವಂತಾಗಿ ತನ್ನ ಪುತ್ರ ಪೌತ್ರರಾದಿಯಾಗಿ........ಕೊಟ್ಟ ಯಿಲ್ಲಿ ಬಡಗಿತನಕ್ಕಾರು ನಿಂದವರು ಹಿಟ್ಟುಕಾಱ ಬಡಗಿ ಕಲೋಜ ಬಿಟ್ಟ ಧರ್ಮಮಂ ಏಳು ನೂರ್ವರುಂ ಪ್ರಜೆ ಮಹಾಬಳಗಾವುಂಡನುಂ ಪ್ರತಿಪಾಲಿಸುವನು" ಎಂದು ಹೇಳಲಾಗಿದೆ. ಅದೇ ರೀತಿಯಾಗಿ, ಹೊಯ್ಸಳ ಬಲ್ಲಾಳರಾಯನ ಕಾಲದ ಕ್ರಿ.ಶ. ೧೧೦೩ ರ ಕೊಲ್ಲಾಪುರದ ತಾಮ್ರಶಾಸನದಲ್ಲಿ[4] "...... ಆ ಊರಿಂಗೆ ಹಿಟ್ಟಿನ ತಲವಾರಿ ಮಾರನಾಯಕ ಆಗಂಗೆ ಮತ್ತರು ೬........ಹಿಟ್ಟಕಾರೆ ಬಡಗಿ ಹಿಲೇಜಗೆ ಮತ್ತರು ೪ ಹಿಟ್ಟಿನ ಕಂಮ್ಮಾರ ದೇವೋಜಂಗೆ ಮತ್ತರು ೪ ಹಿಟ್ಟಿನ ಅಕ್ಕಸಾಲೆ ಪಾರಿಸೋಜಂಗೆ ಮತ್ತರು ೪........" ಎಂದು ಮುಂತಾಗಿ ಭೂಮಿ ದಾನ ಪಡೆದವರ ವಿವರಗಳಿವೆ. ಕ್ರಿ.ಶ. ೧೧೩೫ ರ ಧಾರವಾಡ ಜಿಲ್ಲೆಯ ಚಿಕ್ಕಹಂದಿ-ಗೋಳ ಗ್ರಾಮದ ಶಿಲಾಶಾಸನವನ್ನು ಬರೆದವನು ಹಿಟ್ಟಿನ ಸೇನಬೋವ.[5] ಈ ಶಾಸನಗಳಿಂದ ಬಡಗಿ, ಕಮ್ಮಾರ, ಅಕ್ಕಸಾಲೆ, ಸೇನಬೋವ, ತಲವಾರಿ ಮುಂತಾದವರಿಗೆ 'ಹಿಟ್ಟಿನ' ಹಾಗೂ 'ಹಿಟ್ಟುಕಾಱ' ಎಂಬ 'ಹಿಟ್ಟು' ಪದದ ವಿಶೇಷಣ ರೂಪಗಳನ್ನು ಬಳಸಲಾಗುತ್ತಿದ್ದಿತೆಂದು ತಿಳಿದುಬರುತ್ತದೆ. ಬಡಗಿ, ಕಮ್ಮಾರ, ಅಕ್ಕಸಾಲಿಗ ಮುಂತಾದ ಕುಶಲ ಕೆಲಸಗಾರರು ಗ್ರಾಮಸ್ಥರ ನಿತ್ಯ ಜೀವನಕ್ಕೆ ಅವಶ್ಯವಾದ ಸೇವೆಯನ್ನು ಸಲ್ಲಿಸಿ ತಮ್ಮ ಉಪಜೀವನ ಸಾಗಿಸುತ್ತಿದ್ದರು. ಸೇನಬೋವ, ತಲವಾರಿ ಮುಂತಾದವರು ಗ್ರಾಮದ ಆಡಳಿತದ ಅಂಗವಾಗಿದ್ದರು. ಇವರಿಗೆ ಶಾಸನಗಳಲ್ಲಿ 'ಹಿಟ್ಟುಕಾಱ' ಇಲ್ಲವೆ 'ಹಿಟ್ಟಿನ' ಎಂಬ ವಿಶೇಷಣಗಳನ್ನು ಬಳಸಿರುವದರ ಉದ್ದೇಶವೇನು ಎಂಬುದು ಈಗ ವಿವೇಚಿಸಬೇಕಾದ ಪ್ರಶ್ನೆ.

3. South Indian Inscriptions, XV, No. 69.
4. K. G. Kundangar, Inscriptions in Northern Karnatak and the Kolhapur State, No. 37, pp. 115–119.
5. Annual Reports of South Indian Epigraphy, Bombay Karnatak Inscriptions, No. 150 of 1926-27.

ರೆ. ಕಿಟೆಲ್ ಅವರ ಅರ್ಥಕೋಶದಲ್ಲಿ 'ಹಿಟ್ಟು' ಎಂಬ ಪದಕ್ಕೆ ಆಹಾರ ಅಂದರೆ ಜೀವನಾಧಾರ ಎಂದೂ ಅರ್ಥವಿದೆ. ಮೇಲೆ ಹೇಳಿದ ಕುಶಲ ಕೆಲಸಗಾರರು ಹಾಗೂ ಆಡಳಿತವರ್ಗದವರು ಜನರ ಸೇವೆಗೆಯ್ದು ಅವರಿಂದ ಉಪಜೀವನಕ್ಕಾಗಿ ಆಹಾರಧಾನ್ಯವನ್ನು ಅಂದರೆ ಹಿಟ್ಟನ್ನು ಪಡೆಯುತ್ತಿದ್ದ ಕಾರಣಕ್ಕಾಗಿಯೇ ಅವರಿಗೆ 'ಹಿಟ್ಟಿನ' ಅಥವಾ 'ಹಿಟ್ಟುಕಾಱ' ಎಂಬ ವಿಶೇಷಣಗಳನ್ನು ಬಳಸಿದಂತೆ ತೋರುತ್ತದೆ.

ಹಳ್ಳಿಯ ಕುಶಲ ಕೆಲಸಗಾರರಿಗೆ ಮತ್ತು ಆಡಳಿತವರ್ಗದವರಿಗೆ ಅವರ ಸೇವೆಗೆ ಪ್ರತಿಯಾಗಿ ಧಾನ್ಯವನ್ನು ಕೊಡುವ ಪದ್ಧತಿ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಮರಾಠಾ ಕಾಲದ ಮಹಾರಾಷ್ಟ್ರದಲ್ಲಿ ರೂಢಿಯಲ್ಲಿದ್ದ 'ಬಾರಾಬಲೂತ' ಎಂಬ ಪದ್ಧತಿಗನುಗುಣವಾಗಿ ಹಳ್ಳಿಯ ಶ್ರಮಜೀವಿಗಳ ಹಾಗೂ ಆಡಳಿತಗಾರರ ಹನ್ನೆರಡು ವರ್ಗಗಳವರು, ಜನತೆಯ ಅಗತ್ಯಗಳನ್ನು ಪೂರೈಸಿಕೊಟ್ಟು ರಾಶಿಯ ಸಮಯದಲ್ಲಿ ತಮ್ಮ ಪಾಲಿನ ಧಾನ್ಯವನ್ನು ಪಡೆದು ತನ್ಮೂಲಕ ಉಪಜೀವನ ಸಾಗಿಸುತ್ತಿದ್ದರು.[೬] ವಿಜಯನಗರದ ಅರಸರ ಕಾಲದಲ್ಲಿ ರೂಢಿಯಲ್ಲಿದ್ದ 'ಆಯಗಾರ' ಪದ್ಧತಿಯೂ ಇದೇ ಸ್ವರೂಪದ್ದಾಗಿದ್ದಿತು.[೭] ವಿಜಯನಗರಸಾಮ್ರಾಜ್ಯಸ್ಥಾಪನೆಗೆ ಮುಂಚೆಯೂ ಕರ್ನಾಟಕದಲ್ಲಿ ಕುಶಲ ಕೆಲಸಗಾರರಿಗೆ ಅವರ ಸೇವೆಗೆ ಪ್ರತಿಯಾಗಿ ಧಾನ್ಯರೂಪದಲ್ಲಿ ಕೂಲಿಯನ್ನು ಕೊಡಲಾಗುತ್ತಿದ್ದ ವಿಷಯ ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಮೇಲೆಹೇಳಿದ ಹೊಸೂರಿನ ಶಿಲಾಶಾಸನದಲ್ಲಿ,[೮] "ಹಿಟ್ಟುಕಾಱ, ಬಡಿಗ, ಕಲೋಜ ಮೋರಕೇಶ್ವರ ದೇವರ ತೋಟ, ಕೆಯ್ಯ, ಮನೆಯಾಗೆಯ್ದ ಕೂಲಿಯೊಳಿತುಂಟ ನಿತುಮಂ ದೇವರ ನಿವೇದ್ಯಕ್ಕೊಮ್ಮಾನ ಅಕ್ಕಿಯ ನಡೆವಂತಾಗಿ........ಕೊಟ್ಟ" ಎಂದು ಹೇಳಲಾಗಿದೆ. ಕೂಲಿಯ ರೂಪದಲ್ಲಿ ತನಗೆ ದೊರೆತ ಅಕ್ಕಿಯೆಲ್ಲವನ್ನೂ ದೇವರ ನೈವೇದ್ಯಕ್ಕೆಂದು ಬಡಗಿ ಕಲೋಜನು ದಾನಕೊಟ್ಟ ವಿಷಯ ಈ ಶಿಲಾಶಾಸನದಿಂದ ತಿಳಿದುಬರುತ್ತದೆ. ಅದರಿಂದ, ಬಡಗಿ ಕಲೋಜನಿಗೆ, ಆತನ ಸೇವೆಗೆ ಪ್ರತಿಯಾಗಿ ಧಾನ್ಯರೂಪದಲ್ಲಿ ಕೂಲಿ ಸಿಕ್ಕುತ್ತಿದ್ದಿತೆನ್ನುವ ವಿಷಯ ಸ್ಪಷ್ಟವಾಗುತ್ತದೆ. ಅದೇ ರೀತಿಯಾಗಿ, ಲಕ್ಕುಂಡಿಯ ಶಿಲಾಶಾಸನದಲ್ಲಿ[೯] ಜೆಳ್ಳಿಗಮ್ಮಟದ ವ್ಯಕ್ತಿಯೊರ್ವನು ಹಣದ ರೂಪದಲ್ಲಿಯೂ ಬಡಗಿ ಮತ್ತು ಕಮ್ಮಾರರು ಧಾನ್ಯರೂಪದಲ್ಲಿಯೂ ದಾನವನ್ನು ಕೊಟ್ಟರೆಂದು ಹೇಳಿದುದು ಗಮನಾರ್ಹವಾಗಿದೆ.

6. A. S. Altekar, A History of Village Communities in Western India (1927), p. 89.
7. N. Venkata Ramanayya, Studies in the History of the Third Dynasty of Vijayanagara, pp. 160–161.
8. South Indian Inscriptions, XV, No. 69, p. 95.
9. Ibid., No. 67, pp. 92–94.

ಬಡಗಿ ಹಾಗೂ ಕಮ್ಮಾರರ ಸಂಪಾದನೆ ಧಾನ್ಯರೂಪದಲ್ಲಿ ಇದ್ದಿತೆನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ತೀರ ಪ್ರಾಚೀನ ಕಾಲದಲ್ಲಿಯೂ ಈ ಪದ್ಧತಿ ಯಿದ್ದಿತೆಂದು ಮನುಸ್ಮೃತಿಯಿಂದ, ವಿಷ್ಣುಪುರಾಣದಿಂದ, ಹಾಗೂ ಕೌಟಿಲ್ಯನ ಅರ್ಥಶಾಸ್ತ್ರದಿಂದ ತಿಳಿದುಬರುವುದಾಗಿ ಡಾ. ಎ. ಎಸ್. ಅಳತೇಕರ ಅವರು ಅಭಿಪ್ರಾಯಪಡುತ್ತಾರೆ[೧೦]. ಈ ಎಲ್ಲ ಉದಾಹರಣೆಗಳಿಂದ, ಕರ್ನಾಟಕದಲ್ಲಿ ಕುಶಲ ಕೆಲಸಗಾರರಿಗೆ, ಅವರ ಸೇವೆಗೆ ಪ್ರತಿಯಾಗಿ ಗ್ರಾಮಸ್ಥರು ಧಾನ್ಯ ರೂಪದಲ್ಲಿ ಕೂಲಿಯನ್ನು ಕೊಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದಿತೆಂದು ತಿಳಿದುಬರುತ್ತದೆ. ಈ ರೀತಿ ಕೂಲಿಯ ರೂಪದಲ್ಲಿ ಸಂಪಾದಿಸಿದ ಧಾನ್ಯವು ಕುಶಲ ಕೆಲಸಗಾರರ ಜೀವನಾಧಾರವಾದುದರಿಂದ, ಧಾನ್ಯರೂಪದಲ್ಲಿ ಕೂಲಿಯನ್ನು ಸಂಪಾದಿಸುತ್ತಿದ್ದ ಕುಶಲ ಕೆಲಸಗಾರರನ್ನು 'ಹಿಟ್ಟುಕಾಱ'ರೆಂದು ಕರೆದಿರಬಹುದೆಂದು ತೋರುತ್ತದೆ.

ಕೆಲವೊಂದು ಶಿಲಾಶಾಸನಗಳಲ್ಲಿ 'ಪಿಟ್ಟುಕಾರ' ಎಂಬ ಉಲ್ಲೇಖಗಳು ಬರುತ್ತಿದ್ದು, ಅಲ್ಲಿ ಪಿಟ್ಟುಕಾರ ಎಂದರೆ 'ವೃತ್ತಿ'ಯನ್ನು ಹೊಂದಿದವ ಅಥವಾ ವತನದಾರ ಎಂದು ಅರ್ಥವಾಗಬಹುದು ಎಂದು ಡಾ. ದೀಕ್ಷಿತ ಅವರು ಅಭಿಪ್ರಾಯಪಟ್ಟಿದ್ದಾರೆ.[೧೧] ಇಲ್ಲಿ 'ಪಿಟ್ಟುಕಾರ' ಎನ್ನುವುದು 'ಹಿಟ್ಟುಕಾಱ' ಎಂಬ ಕುಶಲ ಕೆಲಸಗಾರರಿಗೆ ಅನ್ವಯಿಸಲ್ಪಡುತ್ತಿದ್ದ ವಿಶೇಷಣದ ಇನ್ನೊಂದು ರೂಪವಾಗಿದೆಯಲ್ಲದೆ, ಅದಕ್ಕೆ ವಿಶೇಷ ಅರ್ಥವಿರಲಿಕ್ಕಿಲ್ಲವೆಂದು ತೋರುತ್ತದೆ. ಆದರೆ, 'ಹಿಟ್ಟುಕಾಱ'ರು 'ವೃತ್ತಿ'ಜಮೀನನ್ನು ಅಂದರೆ ವತನಭೂಮಿಯನ್ನು ಹೊಂದಿರುತ್ತಿದ್ದುದು ಅಸಂಭವವೇನಲ್ಲ. ಸಾರ್ವಜನಿಕ ಕಾರ್ಯಗಳನ್ನು ಪೂರೈಸಿಕೊಟ್ಟಾಗ, ಅವರಿಗೆ ಸಲ್ಲಬೇಕಾಗಿದ್ದ ದೊಡ್ಡ ಪ್ರಮಾಣದ ಕೂಲಿ ಯನ್ನು ಧಾನ್ಯರೂಪದಲ್ಲಿ ಕೊಡುವ ಬದಲು ಭೂಮಿಯನ್ನೇ ವತನ ಹಾಕಿ ಕೊಡುವ ರೂಢಿಯೂ ಇದ್ದಿರಬೇಕು. ಮೇಲೆ ಹೇಳಿದ ಕೊಲ್ಲಾಪೂರದ ತಾಮ್ರಶಾಸನದಲ್ಲಿ 'ಹಿಟ್ಟಿನ ತಲವಾರಿ,' 'ಹಿಟ್ಟಿನ ಅಕ್ಕಸಾಲೆ,' 'ಹಿಟ್ಟುಕಾರೆ ಬಡಗಿ,' 'ಹಿಟ್ಟಿನ ಕಂಮಾರ' ಮುಂತಾದವರಿಗೆ ಭೂಮಿಯನ್ನು ಸರ್ವನಮಸ್ಯ ವಾಗಿ ಬಿಟ್ಟುಕೊಟ್ಟ ಉಲ್ಲೇಖವಿದೆ[೧೨]. ಅಲ್ಲದೆ, ಕುಶಲ ಕೆಲಸಗಾರರಿಗೆ ಸಲ್ಲಬೇಕಾಗಿದ್ದ ಧಾನ್ಯದಲ್ಲಿನ ಪಾಲನ್ನು ನಿಯಮಿತ ವತನದಂತೆಯೇ ಗಣಿಸ ಲಾಗುತ್ತಿದ್ದಿತೆಂದು, 'ಎಂಟುಹಿಟ್ಟು' ಪದ್ಧತಿಗೆ ತೀರ ಅನುಗುಣವಾದ 'ಬಾರಾ

---

10. A. S. Altekar, A History of Village Communities in Western India, pp. 93–94.
11. G. S. Dikshit, Local Self-Government in Mediaeval Karnataka (Dharwar, 1964), p. 60.
12. K. G. Kundangar, Inscriptions in Northern Karnatak of the Kolhapur State (Kolhapur), No. 37, pp. 115–119.

ಬಲೂತೆ' ಪದ್ಧತಿಯ ವಿಷಯಕವಾಗಿ ವಿವರಿಸುವಲ್ಲಿ ಡಾ. ಆಳತೆಕರ ಅವರು ಅಭಿಪ್ರಾಯಪಟ್ಟಿದ್ದಾರೆ[೧೩].

ಹಿಟ್ಟು ಪದದ ವಿಶಿಷ್ಟಾರ್ಥ : ಈ ರೀತಿಯಾಗಿ, 'ಹಿಟ್ಟು' ಎಂಬ ಪದ ಆರಂಭದಲ್ಲಿ ಆಹಾರ ಅಥವಾ ಜೀವನಾಧಾರ ಎಂಬ ಅರ್ಥದಲ್ಲಿಯೇ ಬಳಸಲ್ಪಡುತ್ತಿದ್ದಿತು. ಆದರೆ, ಕಾಲಾನುಕ್ರಮದಲ್ಲಿ ಆ ಪದವು ತೀರ ಭಿನ್ನ ಅರ್ಥಗಳನ್ನು ಹೊಂದುತ್ತಬಂದಿರುವಂತೆ ತೋರುತ್ತದೆ. ಶಿಲಾಶಾಸನಗಳಲ್ಲಿ ಬರುವ ರೀತಿಯಿಂದ 'ಹಿಟ್ಟು' ಎಂದರೆ, ಶ್ರಮ, ಕೆಲಸ, ಕಸುಬು ಎಂದು ಮುಂತಾಗಿ ಅರ್ಥವಾಗುತ್ತದೆ. ಆರ್. ರಾಮರಾವ ಅವರು, 'ಶಾಸನಗಳ ಪರಿಭಾಷೆ' ಎಂಬ ತಮ್ಮ ಲೇಖನದಲ್ಲಿ[೧೪] 'ಹಿಟ್ಟು' ಎನ್ನುವುದು "ಒಂದು ಜೀವಿಕೆ ಅಥವಾ ಕಸಬು ಎಂದು ಸ್ಪಷ್ಟವಾಗುತ್ತದೆ" ಎಂದು ಹೇಳಿದ್ದಾರೆ. ಕಡೂರ ಜಿಲ್ಲೆಯ ಸೋಮನಹಳ್ಳಿಯ ಶಿಲಾಶಾಸನದಲ್ಲಿ ಬರುವ 'ತನ್ನ ಅಕ್ಕಸಾಲೆಯ ಹಿಟ್ಟು' ಎಂಬಲ್ಲಿ 'ಹಿಟ್ಟು' ಎಂದರೆ "ಉದ್ಯೋಗ ಎಂದು ಅರ್ಥವಾಗುವುದು" ಎಂದು ಡಾ. ದೀಕ್ಷಿತ ಅವರು ಹೇಳಿದ್ದಾರೆ.[೧೫] ಅಲ್ಲದೆ, 'ಹಿಟ್ಟುಬಿಟ್ಟಿ' ಎಂಬ ಪದದ ಅರ್ಥವನ್ನು ವಿವರಿಸುವಲ್ಲಿ ರೆ. ಕಿಟೆಲ್ ಅವರು, 'ಹಿಟ್ಟುಬಿಟ್ಟಿ' ಎಂದರೆ, forced labour ಎಂದು ಅರ್ಥವಾಗುವುದಾಗಿ ಹೇಳಿ, ಉದಾಹರಣೆ ಸಹಿತ ವಿವರಣೆಯಿತ್ತಿದ್ದಾರೆ. 'ಬಿಟ್ಟಿ' ಎಂಬುದು 'ವಿಷ್ಟಿ' ಎಂಬ ಸಂಸ್ಕೃತ ಪದದ ತದ್ಭವ ರೂಪವಾಗಿದೆ. 'ವಿಷ್ಟಿ' ಎಂದರೆ, ಒತ್ತಾಯದ ದುಡಿಮೆ ಎಂದು ಅರ್ಥ. 'ಹಿಟ್ಟುಬಿಟ್ಟಿ' ಎಂದರೂ ಒತ್ತಾಯದ ದುಡಿಮೆ ಎಂದೇ ಅರ್ಥವಾಗುವುದರಿಂದ ಇಲ್ಲಿ 'ಹಿಟ್ಟು' ಎಂಬ ಪದವನ್ನು ಶ್ರಮ, ಉದ್ಯೋಗ, ದುಡಿಮೆ ಎಂಬ ಅರ್ಥದಲ್ಲಿ ಬಳಸಲಾಗಿರುವುದು ಸ್ಪಷ್ಟವಾಗುತ್ತದೆ. ಈ ರೀತಿ 'ಹಿಟ್ಟು' ಎಂಬ ಪದವು ಆರಂಭದಲ್ಲಿ ಆಹಾರಧಾನ್ಯ ಅಥವಾ ಜೀವನಾಧಾರ ಎಂಬ ಅರ್ಥದಲ್ಲಿ ಬಳಸಲ್ಪಟ್ಟುದು, ಕಾಲಕ್ರಮದಲ್ಲಿ 'ಜೀವನಾಧಾರವಾದ ಉದ್ಯೋಗ' ಎಂಬ ಅರ್ಥವನ್ನು ಹೊಂದಿತು.

ಆದರೆ 'ಹಿಟ್ಟು' ಎಂಬ ಪದದ ಅರ್ಥ 'ಜೀವನಾಧಾರವಾದ ಉದ್ಯೋಗ' ಎಂಬುದಕ್ಕೂ ಸೀಮಿತವಾಗಿ ಉಳಿಯಲಿಲ್ಲ. ಕೆಲಕಾಲದನಂತರ 'ಹಿಟ್ಟು' ಎಂಬ ಪದ ಕುಶಲಕೆಲಸಗಾರರ ಸಂಘ ಅಥವಾ ಶ್ರೇಣಿ ಎಂಬ ವಿಶೇಷಾರ್ಥವನ್ನು ಹೊಂದಿದಂತೆ ತೋರುತ್ತದೆ. ಡಾ. ಫ್ಲೀಟ್ ಅವರು, ಎಂಟುಹಿಟ್ಟು

---

13. A. S. Altekar, A History of Village Communities in Western India (1927), pp. 92–93.
14. ಸಂಭಾವನೆ (ಬಿ. ಎಂ. ಶ್ರೀ.ಯವರಿಗೆ ಅರ್ಪಿಸಿದ್ದು), ಪುಟ ೨೧೩.
15. G. S. Dikshit, Local Self Government in Mediaeval Karnataka (1964), p. 60.

ಎಂಬವು ಎಂಟು ಶ್ರೇಣಿಗಳಾಗಿರಬಹುದೆಂದು ಹೇಳಿದ್ದಾರೆ. ಧಾರವಾಡ ಜಿಲ್ಲೆಯ ಶಿಸುವಿನಹಳ್ಳಿ ಗ್ರಾಮದ ಶಿಲಾಶಾಸನದಲ್ಲಿ,[೧೬] 'ಎಂಟುಹಿಟ್ಟು' ಉಳಿದವರೊಡನೆ 'ಮಹಾನಾಡಾ'ಗಿ ಸೇರಿ ಮಲ್ಲಯ ನಾಯಕನಿಗೆ ಭೂಮಿಯನ್ನು ದಾನ ಕೊಟ್ಟ ವಿಷಯವನ್ನು ಹೇಳಲಾಗಿದೆ. 'ಮಹಾನಾಡು' ಎನ್ನುವುದು ಬೇರೆ ಬೇರೆ ಶ್ರೇಣಿ(Guild)ಗಳ ಸಮುದಾಯವಾಗಿದ್ದಿತೆಂದು ಡಾ. ದೀಕ್ಷಿತ ಅವರ ಅಭಿಪ್ರಾಯ.[೧೭] ಮೇಲೆ ಹೇಳಿದ ಶಿಸುವಿನಹಳ್ಳಿ ಗ್ರಾಮದ ಶಿಲಾಶಾಸನದಿಂದ 'ಎಂಟುಹಿಟ್ಟು', 'ಮಹಾನಾಡು' ಎಂಬ ಶ್ರೇಣಿಗಳ ಸಮುದಾಯಸಂಸ್ಥೆಯ ಸದಸ್ಯನಾಗಿರಬೇಕೆಂದು ತೋರುವುದರಿಂದ, 'ಎಂಟುಹಿಟ್ಟು' ಎನ್ನುವುದೂ ಸಂಸ್ಥೆ ಅಥವಾ ಸಂಸ್ಥೆಗಳಾಗಿರಬೇಕೆಂದು ಊಹಿಸಬಹುದು.

ಆದರೆ, ಡಾ. ಫ್ಲೀಟ್ ಅವರು ಊಹಿಸಿರುವಂತೆ, ಎಂಟುಹಿಟ್ಟು, ಎಂಟು ಉದ್ಯೋಗಗಳ ಎಂಟು ಸ್ವತಂತ್ರವಾದ ಸಂಘಗಳೇ ಅಥವಾ ಎಂಟೂ ಉದ್ಯೋಗಗಳಿಗೆ ಸಂಬಂಧಿಸಿದ ಪ್ರತಿನಿಧಿಗಳನ್ನೊಳಗೊಂಡ ಒಂದೇ ಸಂಸ್ಥೆಯೇ ಎಂಬ ಸಮಸ್ಯೆ ತಲೆದೋರುತ್ತದೆ. ಶಿಲಾಶಾಸನಗಳಲ್ಲಿ 'ಎಂಟುಹಿಟ್ಟು' ಎಂಬ ಏಕವಚನದ ರೂಪ ಮಾತ್ರ ಕಂಡುಬಂದಿದೆ. ಆದರಿಂದ, ಅದು ಎಂಟು ಪ್ರತಿನಿಧಿಗಳನ್ನೊಳಗೊಂಡ ಒಂದೇ ಸಂಸ್ಥೆಯಾಗಿರಬೇಕೆಂದು ತೋರುವುದಾದರೂ, ಕೆಲವೊಂದು ಶಿಲಾಶಾಸನಗಳಲ್ಲಿ 'ಸಮಸ್ತ ಎಂಟು ಹಿಟ್ಟುಂ'[೧೮] ಎಂಬ ಉಲ್ಲೇಖಗಳು ಬರುತ್ತಿದ್ದು, ಅಲ್ಲಿ ಎಲ್ಲ ಎಂಟುಹಿಟ್ಟುಗಳು ಎಂಬ ಅರ್ಥ ಅಡಕವಾಗಿದೆ. ಸೋಮನಹಳ್ಳಿಯ ಶಿಲಾಶಾಸನದಲ್ಲಿ[೧೯] ಕಲ್ಲೋಜ ಎಂಬಾತನು ತನ್ನ ಅಕ್ಕಸಾಲೆಯ ಹಿಟ್ಟಗೆ ಸಂಬಂಧಿಸಿದ ಭೂಮಿಯನ್ನು ದಾನಕೊಟ್ಟ ವಿಷಯ ಉಲ್ಲೇಖವಾಗಿದೆ. ಈ ಶಾಸನದಿಂದ ಅಕ್ಕಸಾಲಿ ಉದ್ಯೋಗದವರದೇ ಆದ ಸ್ವತಂತ್ರ ಶ್ರೇಣಿ ಅಥವಾ ಸಂಘ ಇದ್ದ ವಿಷಯ ಸ್ಪಷ್ಟವಾಗುತ್ತದೆ. ಈ ಉದಾಹರಣೆಗಳ ಆಧಾರವನ್ನಲಂಬಿಸಿ, ಎಂಟುಹಿಟ್ಟು ಎಂಬವು ಉದ್ಯೋಗಮೂಲವಾದ ಜಾತಿಗಳಿಗೆ ಸಂಬಂಧಿಸಿದ ಎಂಟು ಬೇರೆ ಬೇರೆ ಸಂಘಗಳಾಗಿದ್ದವೆಂದು ಹೇಳಬಹುದು.

ಕೆಲವು ಶಾಸನಗಳಲ್ಲಿ, ಇಂತಹ 'ಎಂಟುಹಿಟ್ಟು'ಗಳ ಬಗೆಗೆ ಉಲ್ಲೇಖಗಳು ಸಿಗುತ್ತಿದ್ದರೆ, ಇನ್ನು ಕೆಲವು ಶಾಸನಗಳಲ್ಲಿ 'ಹನ್ನಿಹಿಟ್ಟು'[೨೦] ಅಂದರೆ ಹನ್ನೆರಡು ಹಿಟ್ಟುಗಳು ಇದ್ದ ಬಗೆಗೆ ಉಲ್ಲೇಖಗಳು ಸಿಗುತ್ತವೆ. ಆರಂಭದಲ್ಲಿ ಎಂಟು ಇದ್ದ ಹಿಟ್ಟುಗಳು ಕಾಲಾನುಕ್ರಮದಲ್ಲಿ ಹನ್ನೆರಡಾಗಿ ಬೆಳೆದಿರಬಹುದೆಂದು

---

16. South Indian Inscriptions, XV, No. 638, p. 408.
17. G. S. Dikshit, Local Self Government in Mediaeval Karnataka (1964) p. 29.
18. South Indian Inscriptions, XX, No. 135, p. 172.
19. Epigraphia Carnatica, VI, Kaḍur Taluka No. 107.
20. South Indian Inscriptions, IX, pt. i, No. 374.

ತೋರುವುದಾದರೂ, ಶಾಸನಗಳ ಅಭ್ಯಾಸದಿಂದ ಈ ತೆರನ ಬೆಳವಣಿಗೆ ತೀರ ವ್ಯತಿರಿಕ್ತ ರೀತಿಯುಲ್ಲಾದಂತೆ ತೋರುತ್ತದೆ. ಕ್ರಿ.ಶ. ೧೧೯೩ರಷ್ಟು ಹಳೆಯದಾದ ಶಾಸನದಲ್ಲಿ ಹನ್ನೆರಡು ಹಿಟ್ಟುಗಳ ಉಲ್ಲೇಖ ಸಿಗುತ್ತಿದ್ದರೆ,[21] ವಿಜಯನಗರದ ಆಳಿಕೆಗೆ ಸಂಬಂಧಿಸಿದ ಇತ್ತೀಚಿನ ಶಾಸನದಲ್ಲಿ ಎಂಟುಹಿಟ್ಟುಗಳ ಉಲ್ಲೇಖ ಸಿಗುತ್ತದೆ.[22] ವಿಜಯನಗರ ಕಾಲದ 'ಆಯಗಾರ' ಪದ್ಧತಿ ಮತ್ತು ಮರಾಠಾ ಕಾಲದ 'ಬಾರಾಬಲೂತ' ಪದ್ಧತಿಯ ಮೂಲವನ್ನು ಹನ್ನೆರಡು ಹಿಟ್ಟುಗಳಲ್ಲಿ ಅರಸುವುದಾದರೆ, 'ಎಂಟುಹಿಟ್ಟು' ಮತ್ತು 'ಹನ್ನಿಹಿಟ್ಟು'ಗಳಲ್ಲಿ ಯಾವುದು ಮೊದಲು ಯಾವುದು ನಂತರ ಎಂಬುದನ್ನು ನಿರ್ಧರಿಸುವುದು ಸುಲಭವಲ್ಲ. ಬಹುತರವಾಗಿ, ಗ್ರಾಮಸ್ಥರ ಬೇಡಿಕೆಗಳಿಗನುಗುಣವಾಗಿ, ಕೆಲವು ಗ್ರಾಮಗಳಲ್ಲಿ ಹನ್ನೆರಡು ಹಿಟ್ಟುಗಳು ಇದ್ದಿರಬಹುದೆಂದು ತೋರುತ್ತದೆ.

ಈಗ, ಈ ಎಂಟು ಅಥವಾ ಹನ್ನೆರಡು ಹಿಟ್ಟುಗಳು ಯಾವವು ಎಂಬುದನ್ನು ನಿರ್ಧರಿಸಬೇಕು. ಆದರೆ, ಅದಕ್ಕಿಂತಲೂ ಮುಂಚೆ, ಯಾವ ಯಾವ ಉದ್ಯೋಗದವರ ಸಂಘಗಳು ಈ ತೆರನ ಹಿಟ್ಟುಗಳಲ್ಲಿ ಗಣಿಸಲ್ಪಡುತ್ತಿರಲಿಲ್ಲ ಎಂಬುದನ್ನು ನಿರ್ಧರಿಸುವುದೂ ಅಷ್ಟೇ ಅವಶ್ಯಕ. ಶಾಸನಗಳಲ್ಲಿ ಎಂಟುಹಿಟ್ಟುಗಳ ಉಲ್ಲೇಖದೊಡನೆ, ವ್ಯಾಪಾರಸ್ಥರು, ಗಾಣಿಗರು ಹಾಗೂ ನೇಕಾರರ ಸಂಘಗಳ ಉಲ್ಲೇಖಗಳೂ[23] ಬರುವುದನ್ನು ಗಮನಿಸಿದರೆ, ಅವು ಹಿಟ್ಟುಗಳೆಂದು ಗಣಿಸಲ್ಪಡುತ್ತಿದ್ದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಒಕ್ಕಲಿಗರ ನಿತ್ಯಜೀವನದಲ್ಲಿ ವ್ಯಾಪಾರಸ್ಥರು, ಗಾಣಿಗರು ಹಾಗೂ ನೇಕಾರರು ಬಹು ಮುಖ್ಯ ಪಾತ್ರವಹಿಸುತ್ತಿದ್ದರಾದರೂ, ಅವರು ಪೂರೈಸುವ ವಸ್ತುಗಳ ಬೆಲೆಗಳಲ್ಲಿ ಆಗಾಗ ಗಣನೀಯ ವ್ಯತ್ಯಾಸಗಳಾಗುವ ಸಾಧ್ಯತೆಯಿರುವುದರಿಂದ, ಅವರು ತಮ್ಮ ವಸ್ತುಗಳನ್ನು ಒಕ್ಕಲಿಗರಿಗೆ ಬೇಕಾಗುವಷ್ಟು ಪ್ರಮಾಣದಲ್ಲಿ, ನಿರ್ದಿಷ್ಟಪಡಿಸಿದ ಬೆಲೆಯಲ್ಲಿ ವರ್ಷವಿಡೀ ಪೂರೈಸುವುದು ಅವ್ಯಾವಹಾರಿಕವಾದುದೆಂಬ ಕಾರಣದಿಂದ ಈ ಮೂರು ಉದ್ಯೋಗ ವರ್ಗಗಳು ಹಿಟ್ಟುಗಳೆಂದು ಗಣಿಸಲ್ಪಡುತ್ತಿದ್ದಿಲ್ಲವೆಂದು ತೋರುತ್ತದೆ. ಇನ್ನು ಬಾವಿ ತೋಡುವವರು, ಮನೆ ಕಟ್ಟುವವರು ಮುಂತಾದವರ ಅವಶ್ಯಕತೆ ಬೀಳುವದು ಅನೇಕ ವರ್ಷಗಳಲ್ಲಿ ಒಮ್ಮೆ. ಅಂಥವರಿಗಾಗಿ ಪ್ರತಿವರ್ಷ ಧಾನ್ಯ ಕೊಡುವುದೂ ಅವ್ಯಾವಹಾರಿಕ. ಆದುದರಿಂದ ಅವರ ಸಂಘಗಳೂ ಹಿಟ್ಟುಗಳೆಂದು ಗಣಿಸಲ್ಪಡುತ್ತಿರಲಿಕ್ಕಿಲ್ಲ.

---

21. Ibid., No. 86.

22. Ibid., XX, No. 229, p. 278.

23. Ibid, No. 118, p. 155 ಮತ್ತು K. G. Kundangar Inscriptions in Northern Karnatak and the Kolhapur State, No. 34, p. 114.

ಇನ್ನು ಗ್ರಾಮಸ್ಥರ ಅದರಲ್ಲೂ ವಿಶೇಷತಃ ಒಕ್ಕಲಿಗರ ನಿತ್ಯಜೀವನದಲ್ಲಿ ಅತ್ಯುಪಯುಕ್ತವಾದ ಔದ್ಯೋಗಿಕ ವರ್ಗಗಳೆಂದರೆ, ಬಡಗಿ, ಕಮ್ಮಾರ, ಚಮ್ಮಾರ, ಮಾಂಗ, ನಾಪಿತ, ಅಕ್ಕಸಾಲಿಗ, ಅಗಸ, ಕುಂಬಾರ, ಪುರೋಹಿತ ಮುಂತಾದವುಗಳು. ಅಲ್ಲದೆ, ಸೇನಬೋವ, ತಳವಾರ, ಓಲೆಕಾರ, ಗಾವುಂಡ ಮುಂತಾದ ಆಡಳಿತವರ್ಗದವರು ಸಾರ್ವಜನಿಕ ಅಗತ್ಯಗಳನ್ನು ಪೂರೈಸುವವರಾಗಿದ್ದರು. ಇವರೆಲ್ಲರ ಸೇವೆಗೆ ಪ್ರತಿಯಾಗಿ, ಒಕ್ಕಲಿಗರು ರಾಶಿಯ ಸಮಯದಲ್ಲಿ, ತಮ್ಮ ಉತ್ಪಾದನೆಗೆ ಅನುಗುಣವಾಗಿ ಹಾಗೂ ಆ ಆ ವರ್ಗಗಳವರ ಸೇವೆಯನ್ನು ಅನುಲಕ್ಷಿಸಿ ಧಾನ್ಯವನ್ನು ಕೊಡುತ್ತಿದ್ದರು. ಆದುದರಿಂದ, ಈ ಎಲ್ಲ ಕುಶಲಕೆಲಸಗಾರರ ವರ್ಗಗಳು ಹಾಗೂ ಕಾಲಕ್ರಮದಲ್ಲಿ ಅವರು ನಿರ್ಮಿಸಿಕೊಂಡ ಸಂಘಗಳು 'ಹಿಟ್ಟು' ಎಂಬ ಹೆಸರಿನಿಂದ ಕರೆಯಲ್ಪಟ್ಟವೆಂದು ತೋರುತ್ತದೆ. ಆದರೆ ಬಡಿಗ, ಕಮ್ಮಾರ, ಅಕ್ಕಸಾಲಿಗ, ತಳವಾರ ಹಾಗೂ ಸೇನಬೋವ ಇವರ ಉದ್ಯೋಗಗಳಿಗೆ ಸಂಬಂಧಿಸಿದ ಸಂಘಗಳಿಗೆ ಮಾತ್ರ 'ಹಿಟ್ಟು' ಎಂಬ ಪದಪ್ರಯೋಗ ಮಾಡಿರುವ ಬಗೆಗೆ ಶಾಸನಾಧಾರಗಳು ದೊರೆತಿವೆ.

ಮೇಲಿನ ವಿವರಣೆಯಿಂದ, ಹಿಟ್ಟುಗಳು, ಉದ್ಯೋಗಮೂಲವಾದ ಜಾತಿಗಳ ಸಂಘ ಅಥವಾ ಶ್ರೇಣಿಗಳಾಗಿದ್ದವೆಂಬುದು ಸ್ಪಷ್ಟವಾಗುತ್ತದೆ. ಆ ಕಾರಣದಿಂದ, ಇಂತಹ ಸಂಘಗಳ ಸದಸ್ಯತ್ವದ ಸ್ವರೂಪವನ್ನು ಅರಿತುಕೊಳ್ಳುವದು ಕಠಿಣವಾಗಲಾರದು. ಯಾಜ್ಞವಲ್ಕ್ಯ ಸ್ಮೃತಿಯ ಮೇಲಿನ ಭಾಷ್ಯವಾದ ಮಿತಾಕ್ಷರ ಎಂಬ ಗ್ರಂಥದಲ್ಲಿ, ವಿಜ್ಞಾನೇಶ್ವರನು, ಒಂದೇ ಬಗೆಯ ಉದ್ಯೋಗದಲ್ಲಿ ತೊಡಗಿದ ಜನರ ಸಂಘಟನೆಯೇ ಶ್ರೇಣಿ ಎಂದು ಹೇಳಿದ್ದಾನೆ.[೨೪] 'ಹಿಟ್ಟು'ಗಳು ಉದ್ಯೋಗಮೂಲವಾದ ಜಾತಿಗಳ ಸಂಘಟನೆಗಳಾಗಿದ್ದವಾದುದರಿಂದ ಆ ಆ ಉದ್ಯೋಗವನ್ನವಲಂಬಿಸಿದ ಜನರೆಲ್ಲ, ತಮ್ಮ ಜಾತಿಗೆ ಸಂಬಂಧಿಸಿದ ಸಂಘ ಅಥವಾ ಶ್ರೇಣಿಯ ಸದಸ್ಯತ್ವಹೊಂದಿರುತ್ತಿದ್ದರು.

ಇನ್ನು ಇಂತಹ ಸಂಘಟನೆಗಳ ಆವಶ್ಯಕತೆ, ಉದ್ದೇಶ, ಕರ್ತವ್ಯ, ಕಾರ್ಯನಿರ್ವಹಣೆ, ಹಕ್ಕುಗಳ ಕುರಿತು ವಿವೇಚಿಸೋಣ. ಇಂತಹ ಸಂಘಟನೆಗಳ ಆವಶ್ಯಕತೆ ಏನು ಎಂಬುದನ್ನು ೧೪ನೆಯ ಶತಮಾನದ ಮಾಧವಾಚಾರ್ಯರ 'ಪರಾಶರ ಮಾಧವ'[೨೫] ಎಂಬ ಕೃತಿಯಲ್ಲಿ ಚೆನ್ನಾಗಿ ವಿವರಿಸಲಾಗಿದೆ. "At the time when some harm occurs to the *grāma*, companies of artisans, *pāsaṇḍas* and the *Naigamas*, as well as in good

24. Vijnaneshvara quoted by K. V. Rangaswami Aiyangar, Aspects of Ancient Indian Economic Thought (Benares, 1934), p. 184.
25. Madhavacharya, Paraśara Madhava, III, p. 248.

time when *dharma* is performed, the removing of the danger, as well as the performance of Dharma are not possible without all agreeing to one course of action. Therefore, let all agree to one course of action and act accordingly." ಈ ರೀತಿಯಾಗಿ, ಗ್ರಾಮಕ್ಕೆ ಸಂಕಟ ಪ್ರಾಪ್ತವಾದಾಗ, ಸಂಕಟ ನಿವಾರಣೆಯೂ, ಧರ್ಮಕಾರ್ಯಾಚರಣೆಯ ಪ್ರಸಂಗದಲ್ಲಿ ಧರ್ಮಕಾರ್ಯವೂ, ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲದಂತೆ ಎಲ್ಲರೂ ಒಮ್ಮತದಿಂದ, ಅಥವಾ ಶಾಸನಗಳ ಪರಿಭಾಷೆಯಲ್ಲಿ ಹೇಳುವುದಾದರೆ, 'ತಮ್ಮೊಳೇಕಸ್ತರಾಗಿ' ಕಾರ್ಯಪ್ರವೃತ್ತರಾಗದೇ ಸಾಧ್ಯವಿಲ್ಲ. ಆದುದರಿಂದ ಗ್ರಾಮದಲ್ಲಿ ಒಮ್ಮತದ ವಾತಾವರಣವನ್ನು ನಿರ್ಮಿಸುವ ಉದ್ದೇಶದಿಂದ ಇಂತಹ ಸಂಘಗಳನ್ನು ಸಂಘಟಿಸಲಾಗುತ್ತಿದ್ದಿತು. ಅಲ್ಲದೆ, ಇಂತಹ ಸಂಘಟನೆಗಳ ಆವಶ್ಯಕತೆಯನ್ನು ಹೆಚ್ಚಿಸಿದ ಹೆಚ್ಚಿನ ವ್ಯಾವಹಾರಿಕ ಕಾರಣಗಳೂ ಇದ್ದವು. ತಮ್ಮ ತಮ್ಮ ಉದ್ಯೋಗಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸುವದು, ಆಯಾ ಉದ್ಯೋಗಗಳ ಉತ್ಪಾದನೆಯ ಗುಣಮಟ್ಟವನ್ನು ಕಾಯುವದು, ಸದಸ್ಯರಲ್ಲಿನ ತಂಟೆಗಳಿಗೆ ಪರಿಹಾರ ಸೂಚಿಸುವದು, ಮತ್ತು ತಮ್ಮ ತಮ್ಮ ಔದ್ಯೋಗಿಕ ವರ್ಗಗಳನ್ನು ಪ್ರತಿನಿಧಿಸುವದೇ ಮುಂತಾದ ಉದ್ದೇಶಗಳಿಂದಲೂ ಇಂತಹ ಸಂಘಟನೆಗಳು ರೂಪುಗೊಂಡಿದ್ದವು.

ಈ ರೀತಿ, ಆದರ್ಶ ಹಾಗೂ ಅಷ್ಟೇ ವ್ಯಾವಹಾರಿಕ ಉದ್ದೇಶಗಳಿಂದ ರಚಿತವಾದ ಹಿಟ್ಟುಗಳು ತಮ್ಮ ಪಾಲಿನ ಕರ್ತವ್ಯಗಳನ್ನು ಸಮರ್ಥ ರೀತಿಯಲ್ಲಿ ಪೂರೈಸುತ್ತ ಬಂದಿರುವುದಕ್ಕೆ ಸಾಕಷ್ಟು ಶಾಸನಾಧಾರಗಳಿವೆ. ಬಳ್ಳಾರಿ ಜಿಲ್ಲೆಯ ಓರುವಾಯಿ ಗ್ರಾಮದ ಶಿಲಾಶಾಸನದಲ್ಲಿ,[೨೬] ಕೆಲವೊಂದು ಮಂದಿರಗಳನ್ನು ನಿರ್ಮಿಸಲು ಕಾರಣೀಭೂತರಾದವರನ್ನು ಹೆಸರಿಸುವಲ್ಲಿ 'ಎಂಟುಹಿಟ್ಟು'ಗಳ ಉಲ್ಲೇಖ ಬಂದಿದೆ. ಕ್ರಿ.ಶ. ೧೧೮೭ ರ ಶಿಲಾಶಾಸನದಲ್ಲಿ[೨೭], ವಿಜಾಪೂರ ಜಿಲ್ಲೆಯ ಕುಮ್ಮಟಗಿ ಗ್ರಾಮದ ಮಹಾಜನರು ಮತ್ತು 'ಎಂಟುಹಿಟ್ಟು'. ಚನ್ನಬ್ರಹ್ಮೇಶ್ವರ ದೇವರ ಪೂಜೆಗಾಗಿ ಭೂಮಿಯನ್ನು ದತ್ತಿ ಬಿಟ್ಟ ಉಲ್ಲೇಖವಿದೆ. ಬಳ್ಳಾರಿ ಜಿಲ್ಲೆಯ ಚೀಮನಹಳ್ಳಿಯ, ಕ್ರಿ.ಶ. ೧೩೬೫ರ ಶಾಸನದಿಂದ, 'ಎಂಟು ಹಿಟ್ಟು', ವಿಶ್ವಸ್ತ ಮಂಡಳಿಯಾಗಿ ಕಾರ್ಯನಿರ್ವಹಿಸಿದ ವಿಷಯ ತಿಳಿದು ಬರುತ್ತದೆ. ಧಾರವಾಡ ಜಿಲ್ಲೆಯ ಬೆನಕನಗೊಂಡ ಗ್ರಾಮದ ಶಿಲಾಶಾಸನದಿಂದ,[೨೯] ಆ ಗ್ರಾಮದ ಕೆರೆಯನ್ನು ಚಿರಸ್ಥಾಯಿಯಾಗಿ ಸುಧಾರಿಸುವುದಕ್ಕಾಗಿ

26. South Indian Inscriptions, IX, pt. i, No. 25 .
27. Annual Reports of South Indian Epigraphy, Bombay Karnatak Inscriptions No. 113 of 1935–36.
28. South Indian Inscriptions, IX, pt. i, No. 374.
29. Annual Reports of South Indian Epigraphy, Bombay Karnatak Inscriptions, No. 7 of 1934-35.

ಭೂಮಿ ಮತ್ತು ಮನೆಯ ನಿವೇಶನವನ್ನು ದಾನ ಕೊಟ್ಟವರಲ್ಲಿ ಹನ್ನಿಹಿಟ್ಟುಗಳು ಇದ್ದವೆಂಬುದು ತಿಳಿದುಬರುತ್ತದೆ.

ಅದೇ ರೀತಿಯಾಗಿ, ಗ್ರಾಮದ ಸಾಮಾನ್ಯ ಆಡಳಿತದಲ್ಲೂ ನ್ಯಾಯ ಸಂಬಂಧೀ ಆಡಳಿತದಲ್ಲೂ 'ಹಿಟ್ಟು'ಗಳು ಮಹತ್ವದ ಪಾತ್ರವಾಡುತ್ತಿದ್ದವು. ಹಿಟ್ಟುಗಳು ಗ್ರಾಮಸಭೆಗಳ ಕಾರ್ಯಕಾರಿ ಸಮಿತಿಯ ಸದಸ್ಯತ್ವಹೊಂದಿದ್ದವು ಎಂಬುದಾಗಿ ಡಾ. ದೀಕ್ಷಿತ ಅವರು ಅಭಿಪ್ರಾಯಪಟ್ಟಿದ್ದಾರೆ.[೩೦] ಅದುದರಿಂದ ಗ್ರಾಮದ ಪ್ರತಿಯೊಂದು ಮಹತ್ವದ ಕಾರ್ಯಕ್ಕೂ 'ಹಿಟ್ಟು'ಗಳ ಸಮ್ಮತಿ ಅವಶ್ಯವಿದ್ದಿತು. ಗ್ರಾಮಸಭೆಯ ಕಾರ್ಯಕಲಾಪಗಳಲ್ಲೂ ಗ್ರಾಮದ ಮಹತ್ವದ ಸಮಾರಂಭಗಳಲ್ಲೂ ಭಾಗವಹಿಸಲು ಪ್ರತಿಯೊಂದು 'ಹಿಟ್ಟು' ತನ್ನ ಪ್ರತಿನಿಧಿಯನ್ನು ಕಳುಹುತ್ತಿದ್ದಂತೆ ತೋರುತ್ತದೆ.

ಕುಶಲಕೆಲಸಗಾರರ ಶ್ರೇಣಿಗಳು ತಮ್ಮ ಸದಸ್ಯರಲ್ಲಿ ತಲೆದೋರುತ್ತಿದ್ದ ತಂಟೆಗಳನ್ನು ನಿವಾರಿಸುವದರ ಜೊತೆಗೆ, ಗ್ರಾಮದ ನ್ಯಾಯದಾನಪದ್ಧತಿಯಲ್ಲಿನ ಒಂದು ಮಹತ್ವದ ಹಂತವಾಗಿದ್ದ ವಿಷಯ ಬೃಹಸ್ಪತಿ ಸಂಹಿತದಿಂದ ತಿಳಿದು ಬರುತ್ತದೆ.[೩೧] ಗುಪ್ತಕಾಲದ ಶಿಲಾಶಾಸನಗಳಲ್ಲಿ ಬರುವ 'ಅಷ್ಟಕುಲಾಧಿಕರಣ' ಎಂಬವು ನ್ಯಾಯಸಂಬಂಧೀ ಆಡಳಿತದ ಅಂಗವಾಗಿದ್ದವೆಂದು ಡಿ. ಸಿ. ಸರಕಾರ ಹಾಗೂ ಆರ್. ಸಿ. ಮಜುಮದಾರ ಅವರು ಅಭಿಪ್ರಾಯಪಟ್ಟಿದ್ದಾರೆ.[೩೨] ಗುಪ್ತಕಾಲದ ಅಷ್ಟಕುಲ ಹಾಗೂ ಕರ್ನಾಟಕದ ಈ 'ಎಂಟುಹಿಟ್ಟು' ಒಂದೇ ಸ್ವರೂಪದ ಸಂಸ್ಥೆಗಳಾಗಿದ್ದವೆಂದು ತೋರುತ್ತದೆ. ಹಾಗಿದ್ದಪಕ್ಷದಲ್ಲಿ ಎಂಟು ಹಿಟ್ಟು ಕೂಡ, ಗ್ರಾಮದ ನ್ಯಾಯದಾನದಲ್ಲಿ ಮಹತ್ವದ ಪಾತ್ರವಹಿಸುತ್ತಿದ್ದವೆಂದು ಹೇಳಬಹುದು. ಪ್ರಭುದೇವರ ಒಂದು ವಚನದಲ್ಲಿ[೩೩] ಎಂಟುಹಿಟ್ಟು ಹಾಗೂ ಪಂಚಮಠಗಳ ಉಲ್ಲೇಖವಿದೆ.[೩೪] 'ಸಟೆ ದಿಟವಾದಲ್ಲಿ' ಎಂದು ಆರಂಭವಾಗುವ ಈ ವಚನ ತತ್ಕಾಲೀನ ನ್ಯಾಯವಿಧಾನಕ್ಕೆ ಸಂಬಂಧಿಸಿದ ವಿಷಯವನ್ನು

---

30. G. S. Dixit, Local Self Government in Mediaeval Karnataka (1964) p. 59.
31. Brihaspati quoted by Dr. A. S. Altekar, A History of Village Communities in Western India (1927), p. 40.
32. D. C. Sircar, Select Inscriptions, vol I, p. 281 4 n. R. C. Majumdar, Corporate Life in Ancient India (1922), p. 64.
33. ಈ ವಚನದೆಡೆಗೆ ನನ್ನ ಗಮನವನ್ನು ಸೆಳೆದು, ಈ ಲೇಖನವನ್ನು ಸಿದ್ಧಪಡಿಸುವಲ್ಲಿ ವಿಶೇಷ ಆಸಕ್ತಿವಹಿಸಿ, ಸಹಕರಿಸಿದ ಪ್ರೊ. ಎಂ. ಎಂ. ಕಲಬುರ್ಗಿಯವರ ಉಪಕಾರವನ್ನಿಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.
34. ಎಲ್. ಬಸವರಾಜು, ಅಲ್ಲಮನ ವಚನಚಂದ್ರಿಕೆ, ವ. ಸಂಖ್ಯೆ 398, ಪು. 89, ಮಹಲಿಂಗದೇವಕೃತ 'ಅಲ್ಲಮನ ಟೀಕಿನ ವಚನ'ದಲ್ಲಿ ಎಂಟುಹಿಟ್ಟೆಂದರೆ, ಅಷ್ಟಮದಂಗಳು ಎಂಬ ಅರ್ಥವಿದೆ.

ಸೂಚಿಸುವಂತೆ ತೋರುತ್ತಿದ್ದು, ಆ ಸಂದರ್ಭದಲ್ಲಿ ಎಂಟುಹಿಟ್ಟು ಹಾಗೂ ಪಂಚ ಮಠಗಳ ಉಲ್ಲೇಖವು, ನ್ಯಾಯದಾನದಲ್ಲಿ ಅವುಗಳ ಪಾತ್ರವನ್ನು ಸೂಚಿಸುವಂತಿದೆ.

ಎಂಟುಹಿಟ್ಟುಗಳು ಗ್ರಾಮದ ಸಾರ್ವಜನಿಕ ಆಡಳಿತ, ಹಾಗೂ ನ್ಯಾಯ ಸಂಬಂಧೀ ಆಡಳಿತದಲ್ಲಿ ಮಹತ್ವದ ಪಾತ್ರವಹಿಸುತ್ತಿದ್ದರೂ, ತಾವಾಗಿ ವಿಶೇಷ ಹಕ್ಕುಬಾಧ್ಯತೆಗಳನ್ನು ಹೊಂದಿದ್ದಂತೆ ತೋರುವುದಿಲ್ಲ. ಏಕೆಂದರೆ, ವಿಜಾಪೂರ ಜಿಲ್ಲೆಯ ಕಲ್ಲೆವಾಡ ಗ್ರಾಮದ ಕ್ರಿ. ಶ. ೧೧೬೮ರ ಶಿಲಾಶಾಸನದಿಂದ,[೩೫] ಮಹಾಮಂಡಳೇಶ್ವರ ಸಿಂಗಿದೇವರಸನು, ಅಲ್ಲಿಯ ಸ್ವಯಂಭು ಸೋಮನಾಥ ದೇವರ ಆಚಾರ್ಯರಾದ ಸೋಮರಾಶಿ ದೇವರಿಗೆ ಸರ್ವನಮಸ್ಯವಾಗಿ ಬಿಟ್ಟು ಕೊಟ್ಟ ಕಾಣಿಕೆಗಳಲ್ಲಿ ' ಹಿಟ್ಟುದೆಜಿ 'ಯೂ ಒಂದಾಗಿದ್ದಿತು ಅದರಿಂದ ಹಿಟ್ಟುಗಳೂ ಅರಸನಿಗೆ ತಮ್ಮ ಪಾಲಿನ ತೆರಿಗೆಯನ್ನು ಕೊಡುತ್ತಿದ್ದರೆಂಬುದು ತಿಳಿದು ಬರುತ್ತದೆ.

ತಮ್ಮ ತಮ್ಮ ಉದ್ಯೋಗಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲು ರಚಿತವಾದ ಹಿಟ್ಟುಗಳು, ಗ್ರಾಮದ ಸಾಮಾನ್ಯ ಆಡಳಿತದಲ್ಲಿಯೂ, ನ್ಯಾಯಸಂಬಂಧೀ ಆಡಳಿತದಲ್ಲೂ ಮಹತ್ವದ ಪಾತ್ರವಹಿಸುವ ಮೂಲಕ ಜನತೆಯ ಸೇವೆಗೈದು, ಗ್ರಾಮದಲ್ಲಿ ಧರ್ಮಕಾರ್ಯಗಳನ್ನು ನೆರವೇರಿಸಿ, ಸಾರ್ವಜನಿಕ ನಿಧಿಯ ವಿಶ್ವಸ್ಥ ಮಂಡಳಗಳಾಗಿ ಕಾರ್ಯನಿರ್ವಹಿಸಿ ಜನತೆಯ ಪ್ರೀತಿವಿಶ್ವಾಸಗಳಿಗೆ ಪಾತ್ರವಾದ ಸಂಸ್ಥೆಗಳಾಗಿದ್ದವು.

★ ಎಸ್. ಜಿ. ಘಟಪಣದಿ

---

35. South Indian Inscriptions, XX, No 151, p. 193.

ಕಸಿ-ಹೃದಯ ಕಣ್ದೆರೆದಿತ್ತು*

(ರೇಡಿಯೊ ನಾಟಕ)

(ಆ್ಯಂಬುಲನ್ಸ್ ಒಂದು ಹಠಾತ್ತನೆ ಬಂದು ನಿಲ್ಲುತ್ತದೆ.)

ನರ್ಸ್—The patient seems to have collapsed, Doctor, on the way.

ಡಾಕ್ಟರ್—Oh ! ಪ್ರೇಮಕುಮಾರ್ ! ಮತ್ತೆ ಹಾರ್ಟ್ ಅಟ್ಯಾಕ್ ! ಎಮರ್ಜನ್ಸಿ ವಾರ್ಡಿಗೆ ಸಾಗಿಸಲಿಕ್ಕೆ ಹೇಳ್ರಿ.

ನರ್ಸ್—ಸರಿ, ಡಾಕ್ಟರ್....ಬಾಯ್, ಎಮರ್ಜನ್ಸಿ ವಾರ್ಡ್....ಇದು ಸೆಕಂಡ್ ಅಟ್ಯಾಕೇ, ಡಾಕ್ಟರ್ ?

ಡಾಕ್ಟರ್—Oh-no ! ಇದು ಮೂರನೆಯದ್ದು....ಎಷ್ಟು ದಿನಗಳ ಮೇಲೆ ಬಂತಂತೆ ಈ ಅಟ್ಯಾಕು ?

ನರ್ಸ್—ಸುಮಾರು ದಿನಗಳಾಗಿರಬೇಕು. ಅಲ್ಲಾ....

ಡಾಕ್ಟರ್—(ತನ್ನೊಳಗೆ) There is no other go....ಬಹುಶಃ ಇದೇ ನನ್ನ ಮೊದಲನೆಯ heart transplantation case ಆಗಬಹುದು.

ನರ್ಸ್—ಏನು ಡಾಕ್ಟರ್ ?

ಡಾಕ್ಟರ್—ಅದೇ, ಎಮರ್ಜನ್ಸಿ ವಾರ್ಡಿಗೆ ಕಳಿಸಿದಿರಲ್ಲವೆ ?

ನರ್ಸ್—ಹೌದು.

(ಕಾಲ್ನಡಿಗೆಯ ಶಬ್ದ.)

ಅನೌನ್ಸರ್—ಆಕಾಶವಾಣಿ

ವಿಶೇಷ ತ್ರೈಮಾಸಿಕ ನಾಟಕ.

ಕಸಿ-ಹೃದಯ ಕಣ್ದೆರೆದಿತ್ತು

ರಚನೆ :

ಎನ್ಕೆ

---

* Heart-transplantation (ಹೃದಯದ ಕಸಿ)ಗೆ ಸಂಬಂಧಿಸಿದ ನವೀನ ವೈಜ್ಞಾನಿಕ ಕಲ್ಪನೆಯನ್ನು ಸಾಹಿತ್ಯಕ್ಕಾಗಿ ಬಳಸಿಕೊಂಡ ಈ ನಾಟಕ ಬಹುಶಃ ಪ್ರಥಮ ಪ್ರಕಾರ ಎಂದು ತೋರುತ್ತದೆ. ಅದಕ್ಕಾಗಿ ಒಂದು ಮಾದರಿಯೆಂದು ಈ ರೇಡಿಯೊ ನಾಟಕವನ್ನು ಅದರ ಪ್ರಸಾರರೂಪ ಇದ್ದಕಿದ್ದಂತೆಯೆ ವಾಚಕರ ಕೈಗೆ ಸಾದರಪಡಿಸುತ್ತಿದ್ದೇವೆ.

—ಸಂ.

ಡಾಕ್ಟರೊಬ್ಬರು ನಡೆಸಿದ ಅಪೂರ್ವ ಶಸ್ತ್ರಕ್ರಿಯೆಗಾಗಿ ಪ್ರಮುಖವಾಗಿ
ಹೆಸರುಗಳಿಸಿದ ಆಸ್ಪತ್ರೆಯೊಂದರಲ್ಲಿ—

(ಬೂಟುಗಳ ಶಬ್ದ. ಗಡಿಯಾರದಲ್ಲಿ ಹನ್ನೆರಡು ಗಂಟೆ ಬಾರಿಸುವ ಶಬ್ದ.)

" ಕಸಿ-ಹೃದಯ ಕಣ್ದೆರೆದಿತ್ತು."

ವಾರ್ಡ್‌ಬಾಯ್—(ಆಕಳಿಸುವ ಶಬ್ದ).... ಬಾರಾ ಬಜಗಯಾ (ಮತ್ತೆ ಆಕಳಿಕೆ) (ಬೂಟಿನ ಶಬ್ದ)

ಆಳು— (ಗಡಬಡಿಸಿ) ಸಲಾಂ ಸಾಬ್ !

(ಬಾಗಿಲು ತೆರೆಯುವುದು. ಬೂಟಿನ ಶಬ್ದ)

ಡಾಕ್ಟರ್—ಸಿಸ್ಟರ್.

ನರ್ಸ—ಯಸ್ ಡಾಕ್ಟರ್.

ಡಾಕ್ಟರ—ಬೇಗನೆ ಮಾರ್ಫಿನ್ ಇಂಜಕ್ಷನ್ ಕೊಡಿ—ಎಕ್ಸರೇ ಅರೇಂಜಮೆಂಟ್ಸ ಮಾಡಿ.

ನರ್ಸ—ಯಸ್ ಡಾಕ್ಟರ್.

ಡಾಕ್ಟರ—ಹಾಗೇ.... ಹೂಂ ಇರಲಿ, ಆಮೇಲೆ ನೋಡೋಣ. (ತನ್ನೊಳಗೆ) I must use this opportunity for heart transplantation.

ನರ್ಸ—ಏನಂದ್ರೀ ಡಾಕ್ಟರ್ ?

ಡಾಕ್ಟರ—ಏನಿಲ್ಲ, ಇಂಜಕ್ಷನ್ ಕೊಡಿ, ಎಕ್ಸರೇ ಮಾಡಿ—

ನರ್ಸ—ಯಸ್ ಡಾಕ್ಟರ್.

ಡಾಕ್ಟರ—ಹೊರಡಿ ಹಾಗಾದರೆ .. (ಹೆಜ್ಜೆಯ ಶಬ್ದ) Oh !. . . . But !. . heart ? ಹೃದಯವೊಂದು ಸಿಕ್ಕಬೇಕಲ್ಲ. It is all a gift of Providence ! ಹೌದು, ದೈವೀಸಂಕಲ್ಪದಿಂದ ಎಲ್ಲಾ ಕೂಡಿಬರಬೇಕು. ಅಷ್ಟೆ.

(Bridge Music.)

ನರ್ಸ—ಡಾಕ್ಟರ, ಪೇಶಂಟಿಗೆ ಪ್ರಜ್ಞೆ ಬಂದಿದೆ. ಆದರೆ ಬಹಳ ಬಳಲಿದ್ದಾನೆ, ಮಾತ್ರ. He needs complete rest.

ಡಾಕ್ಟರ—ಆಫ್ ಕೋರ್ಸ್ ವಿಜಿಟರ್ಸ್ ಯಾರನ್ನೂ ಬಿಡಬೇಡಿ.

ನರ್ಸ—ಯಸ್ ಡಾಕ್ಟರ—ಪೇಶಂಟ್ನ ಈಗ ಪರೀಕ್ಷಿಸತೀರಾ ?

ಡಾಕ್ಟರ—ಹೌದು. ಬಂದ್ಬಿಟ್ಟೆ!

(ಬೂಟುಗಳ ಸಪ್ಪಳ)

ನರ್ಸ—ಎಲ್ಲಿ ಮಿಸ್ಟರ ಪ್ರೇಮಕುಮಾರ....

ಪ್ರೇ. ಕು.—(ಕ್ಷೀಣಧ್ವನಿಯಲ್ಲಿ) ಆಂ ?....

ಡಾಕ್ಟರು—ಹ್ಯಾಗಿದ್ದೀರಾ ಮಿಸ್ಟರ ಪ್ರೇಮಕುಮಾರ ?

ಪ್ರೇ.—ಥ್ಯಾಂಕ್ಸ್ ಡಾಕ್ಟರ್....

ಡಾ.— ಈ ಹಿಂದೆ ನಿಮಗೆ ಅಟ್ಯಾಕ್ ಯಾವಾಗ ಆಗಿತ್ತು ? ಹೇಳಿ.

ಪ್ರೇ.—(ನೆನಸಿಕೊಳ್ಳುತ್ತ) ಹಾ....ನನ್ನ ಕಾವ್ಯಸಂಗ್ರಹಕ್ಕೆ ಪ್ರೆಸಿಡೆಂಟ್ಸ ಅವಾರ್ಡ ಸಿಕ್ಕಿತ್ತಲ್ಲ....ಯಸ್ ಯಸ್—ಆ ವರುಷ....ಇದೇ ಮಾರ್ಚ ತಿಂಗಳಲ್ಲಿ.... ಒಂದು, ಎರಡು....

ಡಾ.—ಸರಿ ಪರವಾಗಿಲ್ಲ....So you are a poet !—Award-winner poet ! Good !....ಮತ್ತೇನು ಬರೆದಿದ್ದೀರಿ ಮಿಸ್ಟರ ಪ್ರೇಮಕುಮಾರ ?

ಪ್ರೇ.—ಯೋಗ-ಯಾಗ ವಿಚಾರದಲ್ಲಿ ಒಂದು Treatise—

ಡಾ.—Good, Good—So you are a philosopher too !

ಪ್ರೇ.—And a professor of......

ಡಾ.—Oh I see ! ಅಬ್ಸೆಂಟ ಮೈಂಡೆಡ್ ಆಗಿರೋದಕ್ಕೆ ಎಷ್ಟು ಬೇಕೋ ಅಷ್ಟೆಲ್ಲಾ. ಹ-ಹ-ಹ 'ಏಕೈಕಪ್ಯನರ್ಥಾಯ ಕಿಮು ಯತ್ರ ಚತುಷ್ಟಯಂ' ಅನ್ನೋ ಹಾಗೆ....

ಪ್ರೇ.—ಓ ಡಾಕ್ಟರ, ನಿಮಗೆ ಸಂಸ್ಕೃತ ಬರುತ್ತದೇನು ?

ಡಾ.—ಏನೋ ಶಾಲೆಯಲ್ಲಿ ಕಲಿತದ್ದು.

ಪ್ರೇ.—ನನ್ನ ಯೋಗ-ಯಾಗದ ಗ್ರಂಥದಲ್ಲಿ ನಮ್ಮ ಜೀವನವೇ ಒಂದು ಯೋಗ, ನಮ್ಮ ಕರ್ಮಗಳೇ ಒಂದು ಯಾಗ ಅಂತ....(ಬಳಲಿ ನಿಟ್ಟುಸಿರು ಬಿಡುವನು).

ಡಾ.—ಹೂಂ ಹೂಂ, ಬಹಳ ಆಯಾಸ ಮಾಡಿಕೊಳ್ಳಬೇಡಿ.

ಪ್ರೇ.—ಇಲ್ಲಾ ಡಾಕ್ಟರ, ನಿಮ್ಮ ಜೊತೆಗೆ ಒಂದಿಷ್ಟು ಆತ್ಮೀಯವಾಗಿ ಮಾತನಾಡಿದರೆ ಎಷ್ಟೋ ರಿಲೀಫು.

ಡಾ.—ನಿಮ್ಮ ಕಾವ್ಯದ ಮುಖ್ಯ ಲಕ್ಷಣಗಳೇನು, ಮಿಸ್ಟರ ಪ್ರೇಮಕುಮಾರ ?

ಪ್ರೇ.—ನವ್ಯ ಮತ್ತು ರೋಮ್ಯಾಂಟಿಸಿಜಂ ಇವುಗಳ ಮಧ್ಯೆ ನನ್ನದು ನಡುವಿನ ದಾರಿ. ಸಮನ್ವಯ ಮಾರ್ಗ.

ಡಾ.—ಓ ಬ್ಯೂಟಿಫುಲ್....ಮಿಸ್ಟರ ಕುಮಾರ್, ನೀವು ಹಾಗಾದರೆ ಭಾವನಾಜೀವಿಗಳು.

ಪ್ರೇ.—ಎಲ್ಲಾ ಕವಿಗಳೂ ಭಾವನಾಜೀವಿಗಳು.

ಡಾ.—Are you married, Mr. Kumar ?

ಪ್ರೇ.—ಓ–ಡಾಕ್ಟರ....(ಕುಸಿಯುವನು)

ನರ್ಸ—ಬಹಳ ಬಳಲಿಕೆ ಅಂತ ಕಾಣುತ್ತದೆ.

ಡಾ.—ಹೂಂ.

ನರ್ಸ—ಅವರ್‍ನ ಅಷ್ಟೊಂದು ಮಾತನಾಡಿಸಬಾರದಾಗಿತ್ತೊ ಏನೋ ?

ಡಾ.—That is not the thing..are you married ಅಂದೇಟಿಗೆ Please hold him. ಇನ್ನೊಂದು ಇಂಜಕ್ಶನ್ ಕೊಡಿ....Now I know the reason.

ನರ್ಸ—Mr. Kumar, I believe he is a bachelor, Doctor.

ಡಾ.—How does it interest you ?

(ಇಬ್ಬರೂ ನಗುವರು.)

(Bridge Music)

ನರ್ಸ— ಅಟ್ಯಾಕ್ ಸ್ವಲ್ಪ ಜೋರಾಗೇ ಬಂತು.

ಡಾ.—I know, I know. (ಸ್ವ) Transplantation of the heart is the only remedy..(ಪ್ರಕಾಶವಾಗಿ) ಸಿಸ್ಟರ್—ಅವರ ಪೈಕಿ ಯಾರು ಬಂದಿದ್ದಾರೆ ?

ನರ್ಸ—ಬಂದವರು ಅವರ ಬಂಧುಗಳು ಯಾರೂ ಅಲ್ಲಾಂತ ಕಾಣುತದೆ.

ಡಾ.—ಪಾಪ, ಇಲ್ಲಿ ಒಬ್ಬರೇ ಇರತಾರೆ ಅಂತ ಕಾಣುತದೆ.

ಡಾ.—ಅವರು ಬಹಳ ಭಾವನಾಜೀವಿ......ಜೀವನದಲ್ಲಿ emotional shocks ಅನುಭವಿಸಿರಬೇಕು ಅವರು.

ನರ್ಸ—ಯುೂ ಆರ್ ರೈಟ್, ಡಾಕ್ಟರ.

ಡಾ.—ನಿಮಗೆ ಹ್ಯಾಗೆ ಗೊತ್ತಿ ?

ನರ್ಸ—ಅಂದರೆ heart attackಗೆ ಭಾವನಾವೇಗ ಹೆಚ್ಚು conducive ಆಗಿರುತ್ತದಲ್ಲವೇನು ?

ಡಾ.—ಆದರೆ ಅದೊಂದೇ ಕಾರಣ ಆಗಿರಲಾರದು....Professor ಅಂದಮೇಲೆ he must also be a chain smoker—ಇನ್ನೂ ಏನೇನು ಚಟಗಳೋ.... ....ಬೌದ್ಧಿಕ ಜೀವನ, ಭಾವನಾಜೀವನ........

ನರ್ಸ—ಮದ್ವೆ ಆದರೆ ಸರಿಹೋಗಬಹುದು ಅಂತೀರೇನು ?

ಡಾ. —How does it interest you again ?

(ಇಬ್ಬರೂ ನಗುವರು.)

(Bridge Music.)

ಡಾ.—ಏನು ಮಿಸ್ಟರ ಪ್ರೇಮ್, ಸಾರಿ, ಪ್ರೊಫೆಸರ್ ಪ್ರೇಮಕುಮಾರ, How are you?

ಪ್ರೇ.—ನೀವು ಹೇಳಬೇಕು, ಡಾಕ್ಟರ?

ಡಾ.—ಡಾಕ್ಟರ ಹೇಳಿದ್ದನ್ನು ಸಹಿಸಿ ಕೊಡುತೀರಾ?

ಪ್ರೇ.—ಅಂದರೆ?

ಡಾ.—ಈಗಿದ್ದ ಹೃದಯದ ಯಂತ್ರ ಸರಿಯಾಗಿ ನಡೆಯೋದು ಸ್ವಲ್ಪ ಕಷ್ಟ. ಅದಕ್ಕೆ ಹೊಸ ಹೃದಯ ಬೇಕು. ಕಸಿಹೃದಯ ಬೇಕು. ಅಂದರೆ ಹೊಸ ಮನುಷ್ಯರೇ ಆಗಿಬಿಡ್ತೀರಿ.

ಪ್ರೇ.—ಹಾಗಾದ್ರೆ—ಡಾಕ್ಟರ—ನಾನೂ ಹೊಸ ಮನುಷ್ಯನಾಗಬಹುದೆ?

ಡಾ.—ಹಾಗೆ ಭಾವನಾವಶರಾಗಬೇಡಿ ಪ್ರೊಫೆಸರ ಪ್ರೇಮಕುಮಾರ—ಮನುಷ್ಯ ಯಾವಾಗಲೂ ಸ್ತಿಮಿತ ಮನಸ್ಸಿನಿಂದ ಇರಬೇಕು. ಸರಿ. ದಾರ್ಶನಿಕನಿಗೆ ಡಾಕ್ಟರ ಬೋಧೆ.

ಪ್ರೇ.—ನಿಜ 'ಸಮತ್ವಂ ಯೋಗ ಉಚ್ಯತೇ'—ಅದು ಸರಿ. ಆದರೆ ನಿಮಗೆ ಹೊಸ ಹೃದಯ ಎಲ್ಲಿಂದ ದೊರೆಯಬೇಕು, ಡಾಕ್ಟರ?

ಡಾ.—ದೇವರ ದಯೆ ಇದ್ದರೆ We may get it out of nothingness, ದೇವರೇ ದಾನಿಗಳನ್ನು ಕಳಿಸಿಕೊಡ್ತಾನೆ.

ಪ್ರೇ.—ಓ! ಕವಿಗಳಿಗಿಂತಲೂ ನೀವೇ ಕನಸುಗಳಾಗಿದ್ದೀರಿ.

ಡಾ.—Why not?

ಪ್ರೇ.—ಅಲ್ಲಾ ಡಾಕ್ಟರ, ಈಗಿನ ಕಾಲದೊಳಗೆ ಹೃದಯದ ದಾನ ಯಾರು ಮಾಡತಾರೆ ಹೇಳಿ.

ಡಾ.—ಹೃದಯದಾನ ಯಾರು ಮಾಡೋದೂ ಇಲ್ಲ. ಶಾಯಲಾಕನ ಹಾಗೆ ಯಾರು ಬೇಡೋದೂ ಇಲ್ಲ. ಹಾಗೆ ಹೇಳಲಿಲ್ಲ ನಾನು. ಕರ್ಮಧರ್ಮ ಸಂಯೋಗದಿಂದ ಒಳ್ಳೆ ಹೃದಯ ಇಟ್ಟುಕೊಂಡಿರೋ ವ್ಯಕ್ತಿಯೊಂದು ಇನ್ನಾವುದಾದರೂ ಕಾಯಿಲೆಯಿಂದಲೊ, ಆಕಸ್ಮಿಕದಿಂದಲೊ—

ಪ್ರೇ.—ಸಾಯದಿರಲಿ ಡಾಕ್ಟರ, ಹಾಗಾಗಿ ಸಾಯದಿರಲಿ; ನನಗಾಗಿ ಒಂದು ಜೀವ ವ್ಯರ್ಥವಾಗಿ ಪ್ರಾಣ ನೀಗೋದು ಬೇಡ....ನನಗಾಗಿ ಯಾರೂ ಸಾಯೋದು ಬೇಡ. ನನಗಾಗಿ........(ನರಳುವನು)

ಡಾ.—Oh ! this indicates something. (ಸ್ವ) ಇವರಿಗೆ ಪ್ರೇಮನಿರಾಶೆಯೇ ಪಾಶವಾಗಿರಬೇಕು.....No doubt about it.

ಪ್ರೇ.—ಡಾಕ್ಟರ, ನೀವು ಹೇಳೋ ಮಾತೆಲ್ಲಾ 'ರೇ' ಸಾಮ್ರಾಜ್ಯದ್ದು. ಆ ಸಾಮ್ರಾಜ್ಯದ ಕಲ್ಪವೃಕ್ಷ ಕಾಮಧೇನು ತರ್ತೇನೆ ಅಂತೀರಾ ?

ಡಾ.—ಮಿಸ್ಟರ ಪ್ರೇಂ ಕುಮಾರ್, ಡಾಕ್ಟರ ಎಂತಹ ನಾಸ್ತಿಕ ಅಂದ್ರೂ, ಜೀವನದಲ್ಲಿ ಎಂತಹ ಅನುಭವ ಅನಿಸೋ ಅಂಥಾದ್ದೂ ಸಂಭವಿಸಿಬಿಡ್ತದೆ ಅನ್ನೋದನ್ನ ನಂಬಲೇಬೇಕು.

ಪ್ರೇ.—ನಿಜ. ನನ್ನಷ್ಟು ನೀವು ಜೀವನದಲ್ಲಿ ವ್ಯಥೆಪಟ್ಟಿಲ್ಲ. ಅಂತೇ ನಿಮ್ಮ Attitude ಇಷ್ಟೊಂದು healthy ಆಗಿದೆ.

ಡಾ.—ಡಾಕ್ಟರರು healthy ಆಗಿರದಿದ್ದರೆ dose ಕೊಡೋದು ಹ್ಯಾಗ್ರಿ ? ಹೇಳಿ ಮಿಸ್ಟರ ಪ್ರೇಮ, ಈಗ ನಿಮಗೆ ಅಚ್ಚುಕಟ್ಟಾಗಿ ಸರಿಹೋಗುವಂತಹ ಒಂದು ಹೃದಯ ಬಂತೂನ್ನಿ—

ಪ್ರೇ.—(ನಕ್ಕು) ಏನು ಡಾಕ್ಟರ್ ? ಪ್ರೇಮಪತ್ರ ಕೂಡ ಹಾಗೆ ಹಾರಿಬರಲಾರದ್ದು, ಗಾಳಿಯಿಂದ. ನೀವು ಹೃದಯಾನೇ ಹಾರಿಬರಬಹುದು ಅನ್ನೋ ತರಹ ಹೇಳ್ತೀರೀ.

ಡಾ.—ಕಸಿಹೃದಯದ ಪ್ರಯೋಗ ಅನ್ನೋದು ಯಶಸ್ವಿ ಆಗ್ಬೇಕಾದ್ರೆ ಹೀಗೆ ಒಂದು ಹೃದಯ ದೇವಪ್ರೇಷಿತವಾಗಿ ಹಾರಿ ಬರ್ಬೇಕು. ಇಲ್ಲಿಲ್ಲಾಂದ್ರೆ heart transplantation has no meaning........ನೀವು ಬೇಕಾದಷ್ಟು ಇದರ ಬಗ್ಗೆ ಓದಿದ್ದಿರಬಹುದಲ್ಲಾ, ಮಿಸ್ಟರ ಕುಮಾರ ?

ಪ್ರೇ.—ಅದೇ Capetownನಲ್ಲಿ ನಡೆದ ಆ ಮಹಾಪ್ರಯೋಗ—

ಡಾ.—ದೇವಪ್ರೇಷಿತ ಅಲ್ಲದೆ ಮತ್ತೇನು ಹೇಳಿ. ಈ ಜೀವನದಲ್ಲಿ everything is God-sent, man is God-sent, woman is God-sent. A particular woman is God-sent for a particular man.

ಪ್ರೇ.—(ಜೋರಾಗಿ ನಗುತ್ತಾನೆ.)

ನರ್ಸ—(ಧಾವಿಸುತ್ತ) ಡಾಕ್ಟರ, ಡಾಕ್ಟರ—

ಡಾ.—ಏನ್ರಿ ? ನೀವೂ ತುಂಬಾ excited ! ಯಾವಾಗಲೂ. Remember, a nurse has to be calm always.

ನರ್ಸ—ಹಾಗಲ್ಲ ಡಾಕ್ಟರ—Serious accident.

ಡಾ.—ಅಂ ?

ನರ್ಸ—ಹೌದು ಡಾಕ್ಟರ್—ಪರಿಸ್ಥಿತಿ ತುಂಬಾ precarious.

ಡಾ.—ಏನ್ರಿ ಅದು ಪರಿಸ್ಥಿತಿ ?

ನರ್ಸ—ಡಾಕ್ಟರ, ಪ್ಲೀಜ್ ಈ ಕಡೆ (ಕಿವಿಯಲ್ಲಿ) ಈ ಎರಡನೆಯ ಪೇಶಂಟು ribsಉ....ಎಲ್ಲಾ ಫ್ರಾಕ್ಚರ್ಡ್ ಆಗಿರೋ ಹಾಗೆ ಕಾಣುತ್ತೆ. Survive ಆಗೋ ಸಂಭವ ನಾನೇನೂ ಕಾಣೆ.

ಡಾ.—Ribs fractured ! Where is the patient ?

ನರ್ಸ—Emergency wardನಲ್ಲಿ Dr. Ramesh is attending to her.

ಡಾ.—Attending to her ? ಹೆಂಗಸೇನು ?

ಡಾ.—ಹೌದು ಡಾಕ್ಟರ್—ಚಿಕ್ಕ ಪ್ರಾಯದವರ ಹಾಗೆ ಕಾಣಿಸ್ತಾರೆ.

ಡಾ.—(ತನ್ನೊಳಗೆ) ಎಲ್ಲವೂ ದೇವಪ್ರೇಷಿತ. A Healthy body must contain a healthy heart....(Exits)

(Bridge Music.)

(Operation Theatre—Necessary sound effects)

ಡಾ.—ಆಪರೇಷನ್‌ಗೆ ಎಲ್ಲಾ ರೆಡಿ ತಾನೆ ?

ನರ್ಸ—ಯಸ್ ಡಾಕ್ಟರ.

ಡಾ.—Gown...Gloves—mask.

(Sound of washing hands, tap running in sink.)

ಡಾ.—ಅವರ ತಂದೆ ತಾನೆ ಬಂದಿದ್ದವರು ?

ನರ್ಸ—ಹೌದು, ಅವರೇ ಸೈನ್ ಮಾಡಿದ್ದಾರೆ.

ಡಾ.—ಸಿಸ್ಟರ, ಸ್ವಲ್ಪ ಪ್ರೇಮಕುಮಾರ ಕಡೇನೂ ಗಮನ ಇರ್ಲಿ.

ನರ್ಸ—ಯಸ್ ಡಾಕ್ಟರ. (Exits)

(Operation is in progress.)

ಡಾ.—Oh! ribs are smashed...Nurse! Retractor; lungs have collapsed....

ನರ್ಸ—Survival chance...ಇಲ್ಲವಾ, ಡಾಕ್ಟರ ?

ಡಾ.—Short-lived beauty ! ಅವರ ತಂದೆ ಎಲ್ಲಿ ?

ನರ್ಸ—ಹೊರಗಡೆ wait ಮಾಡ್ತಾ ಇದ್ದಾರೆ.

ಡಾ.—Let me consult him (Exits) Oxygen continuously ಕೊಡತಾ ಇರಿ,—ಏನಾದ್ರೂ ಬದಲಾವಣೆ, ಆದ್ರೆ report ಮಾಡಿ.

(Stepts receding and approaching the patient's father)

ತಂದೆ—ಹ್ಯಾಗಿದೆ ಡಾಕ್ಟರ ?

ಡಾ.—ತಮ್ಮ ಹೆಸರು ?

ತಂದೆ—ರಾವ್ ಅಂತ.

ಡಾ.—ನೋಡಿ ಮಿಸ್ಟರ ರಾವ, ತಂದೆಹೃದಯ ಏನು ನಾನು ಊಹಿಸಬಲ್ಲೆ. ನೀವು ಧೈರ್ಯ ತಂದ್ಕೋಬೇಕು. ಜಖಂ ಬಹಳ ತೀವ್ರವಾಗಿದೆ. ಸಾಧ್ಯ ವಿದ್ದದ್ದನ್ನೆಲ್ಲಾ ಮಾಡ್ತಾ ಇದ್ದೇವೆ.

ತಂದೆ—ಅಂದ್ರೆ ? ನನ್ನ ಮಗಳು....

ಡಾ.—ನಿಮ್ಮ ಮಗಳ ಹೆಸರು ಏನಂದ್ರಿ ?

ತ.—ಕಮಲಾ ಅಂತ.

ಡಾ.—ಸರಿಯಾದ ಹೆಸರು. ಹಗಲು ಕಮಲ ರಾತ್ರಿಹೊತ್ತಿಗೆ....

ತ.—ಅಂದ್ರೆ ? ನನ್ನ ಕಮಲೂ ಬದುಕೋದಿಲ್ಲ ಅನ್ನಿ.

ಡಾ.—ಸ್ವಲ್ಪ ಧೈರ್ಯ ತಂದ್ಕೊಳ್ಳಿ, ಮಿಸ್ಟರ ರಾವ್.

ತ.—ಎಂಥಾ ಧೈರ್ಯ ತಂದ್ಕೊಳ್ಳಿ ಡಾಕ್ಟರ ? ಮಗಳು ಬದುಕೋದಿಲ್ಲ ಅಂತ ಹೇಳ್ತೀರಿ, ಧೈರ್ಯ ತಂದ್ಕೊ ಅಂತೀರಿ. (ದುಃಖ ಹುಚ್ಚಬರುವುದು.)

ನರ್ಸ—ಡಾಕ್ಟರ್—

ಡಾ.—ಯಸ್—

ನರ್ಸ—Pulse is failing.

ಡಾ.—Oxygen continnue ಮಾಡಿ.

(Nurse exits)

ಡಾ.—ಕಣ್ಣೀರು ಹಾಕ್ಬೇಡಿ, ಮಿಸ್ಟರ ರಾವ್.

ತ.—ಕಣ್ಣೀರು ಹಾಕೋದಕ್ಕೂ ಸ್ವಾತಂತ್ರ್ಯ ಇಲ್ಲವೆ? ಆಸ್ಪತ್ರೆ ಅಂದ್ರೆ ಹೀಗೇನೆ ?

ಡಾ.—ನಿಜ....ನಿಮ್ಗೆ ನಿಮ್ಮ ಕಮಲು ಒಬ್ಬಳೇ ಮಗಳು. ನನಗೆ ನೋಡಿ, ಇಷ್ಟೆಲ್ಲಾ ವಾರ್ಡಿನ ಪೇಶಂಟ್ಸು ಮಕ್ಕಳು.

ತ.—ನಿಮ್ಮ ದೃಷ್ಟಿ ದೊಡ್ಡದು. ನಿಮ್ಮ ಹೃದಯ ವಿಶಾಲ.

ಡಾ.—ನಿಮ್ಮ ಹೃದಯಾನೂ ವಿಶಾಲವಾಗಿರಬೇಕು ಮಿಸ್ಟರ ರಾವ್....

ನರ್ಸ—ಹೇಳಿ ಮಿಸ್ಟರ ರಾವ ಒಂದು ಔದಾರ್ಯದ ಕಾರ್ಯ ಮಾಡ್ತೀರಾ ?

ತ.—ನಿಮ್ಮ ಮಾತು ಅರ್ಥವಾಗ್ಲಿಲ್ಲ.

ಡಾ.—ನಿಮ್ಮ ಕಮಲು ಈ ದೇಹದಲ್ಲಿ ಆಲ್ಲದಿದ್ದರೂ ಇನ್ನೊಂದು ದೇಹದಲ್ಲಿ ಬದುಕಿರೋದಕ್ಕೆ ಅನುಕೂಲ ಮಾಡಿಕೊಡಿ.

ತ.—ನನಗರ್ಥಾನೇ ಆಗ್ಲಿಲ್ಲಾ, ಡಾಕ್ಟರ.

ನ.—Doctor, rapid breathing.

ಡಾ.—Heart ok ?

ನ.—Yes, Doctor.

ಡಾ.—ಮಿಸ್ಟರ ರಾವ, ನಿಮ್ಮ ಕಮಲೂ ಇನ್ನಿಲ್ಲ ಅಂತೇ ತಿಳೀರಿ.

ತ.—ಅಂ ?

ಡಾ.—ಆದ್ರೆ ಅವಳ ಹೃದಯ ಮಾತ್ರ ಯಾವ ಇಂದಾನೊ ಇನ್ನೂ ತುಡೀತಾ ಇದೆ.

ತ.—ಹೃದಯ ಒಂದೇ ಬದುಕ್ಕೊಂಡು ನನ್ನ ಕಮಲೂ ಹೋಗ್ಬಿಡ್ಬೇಕು ಅಂದ್ರೆ....ಎಂಥಾ ಆ್ಯಕ್ಸಿಡೆಂಟ ಓ ಏನೊ.

ಡಾ.—ಮಿಸ್ಟರ ರಾವ, ಈ ಜೀವನಾನೇ ಒಂದು ಆ್ಯಕ್ಸಿಡೆಂಟು. ಈ ಜನ್ಮದಲ್ಲಿ ಮಾತ್ರ ನಿಮ್ಮ ಕಮಲು ನಿಮ್ಗೆ ಮಗಳಾಗಿ ಬಂದಳು. 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ' ಅನ್ನೋ ಹಾಗೆ ಅವಳ ದೇಹ ಜರ್ಜರಿತವಾಗಿ ಜೀರ್ಣ ವಾಗಿಹೋಯ್ತು. ದೇಹ ಅಂದ್ರೆ ಜೀವ ತೊಟ್ಕೊಳ್ಳೋ ಹೊಸ ಬಟ್ಟೆ ಇದ್ದ ಹಾಗೆ

ತ.—ನೀವು ಎಂಥಾ ಜ್ಞಾನಿಗಳಿದ್ದೀರಿ, ಡಾಕ್ಟರ್.

ಡಾ.—ಜ್ಞಾನದ ಬೆಳಕ್ನಿಂದ ಅಜ್ಞಾನದ ಕೇಡು. ಮಿಸ್ಟರ ರಾವ್, ಡಾಕ್ಟರ ಅಂದ್ರೆ ಅನಾಸಕ್ತಿಯಿಂದ ಫಿಲಾಸಫರ ಅನ್ನಿಸ್ಕೊಂಡ್ರೂ, ಮಾನವತೆಯ ಹಿತದ ದೃಷ್ಟಿಯಿಂದ, ಎರಡು ಜೀವ ಹೋಗೊ ಹಾಗಿದ್ರೆ, ಒಂದನ್ನಾದರೂ ಬದುಕಿಸ್ಕೊಳ್ಬೇಕು ಅಂತಾನೆ.

ನರ್ಸ—ಡಾಕ್ಟರ, She is gasping she is almost–

ಡಾ.—Oh ! no hopes–

ತ.—ನನ್ನ ಕಮಲೂನ ಬದುಕಿಸ್ತೀರಾ, ಡಾಕ್ಟರ.

ಡಾ.—ಕಮಲೂ ಇನ್ನೊಂದು ಜೀವಾನ ಬದುಕಿಸಬೇಕಾಗಿದೆ ಈಗ.

ತ.—ಸ್ಪಷ್ಟವಾಗಿ ಹೇಳ್ಬಿಡಿ.

ಡಾ.—ಕಮಲೂನ ಹೃದಯ ಇನ್ನೊಬ್ಬ ಪೇಶಂಟಗೆ ಕಸಿ ಮಾಡೋದಕ್ಕೆ ಮಾನವ ಕರುಣೆಯಿಂದ ಅನುಮತಿ ಕೊಡಿ. ಪ್ಲೀಜ್. ದೇವಪ್ರೇಷಿತ ಅನ್ನೊ ಹಾಗೆ, ಕಮಲು ಇಲ್ಲವಾಗಿ, ಆಕೆಯ ಹೃದಯ ಮಾತ್ರ ಬಂದಿದೆ. ನೀವು ಅನುಮತಿ ಕೊಟ್ಟರೆ, ಇನ್ನೊಂದು ಬಡ ಜೀವ ಬದುಕಿಕೊಳ್ಳಬಹುದು.

ತ.—(ನಿಟ್ಟುಸಿರು, ಕಣ್ಣೀರು) ನನ್ನ ಕಮಲೂನ ಹೃದಯ ಯಾರಿಗೆ ಕೊಡ್ತೀರಾ, ಡಾಕ್ಟರ?

ಡಾ.—ಹೃದಯ ಒಂದೇ ನಿರುಪಯೋಗಿ ಆಗಿರೊ ಯೋಗ್ಯ ಪೇಶಂಟ ಒಬ್ಬರಿದ್ದಾರೆ. ಆದರೆ ಇನ್ನು ೪೮ ಗಂಟೆ ಒಳಗಾಗಿ ಅವರಿಗೆ ಇನ್ನೊಂದು ಬದಲಿ ಹೃದಯ ಹಾಕ್ದಿದ್ದರೆ, ಒಂದಕ್ಕೆ ಎರಡು ಜೀವಗಳ ನಷ್ಟ ಆಗ್ಬಹುದು.

ತ.—ಅರ್ಥವಾಯ್ತು ಡಾಕ್ಟರ್. ದೇವರ ಸಂಕಲ್ಪ. ನನ್ನ ಕಮಲೂನ ಹೃದಯ ಇನ್ನೊಂದು ಹೃದಯವನ್ನು ಕಾಪಾಡ್ಕೊಂಡು ಬರಲಿ. ಇದೇ ಆಕೆ ಮಾಡೋ ಮಾನವಸೇವೆ ಆಗಲಿ.

ಡಾ.—ಥ್ಯಾಂಕ್ಸ್—ನಿಮಗೆ ಮಾನವತೆಯ ಪರವಾಗಿಯೂ ಅಭಿವಂದನೆ ಸಲ್ಲಿಸುತ್ತೇನೆ. ಈ ನನ್ನ ಪ್ರಯೋಗ ಯಶಸ್ವಿ ಆದ್ರೆ ಮಾನವತೆ ನಿಮ್ಮ ಕಮಲೂಗೆ ಕೃತಜ್ಞವಾಗಿ ಉಳಿಯುತ್ತದೆ. ನಿಮ್ಮ ಸ್ವ-ಸಂತೋಷದ ಸಮ್ಮತಿ ಅಂತ ತಿಳೀಬಹುದು ತಾನೆ?

ತ.—ಇದ್ಕೂ ಸಮ್ಮತಿಪತ್ರಕ್ಕೆ ಸಹಿ ಹಾಕ್ಬೇಕೇನು?

ಡಾ.—ಇಕೊಳ್ಳಿ.

ತ.—(ಸಹಿ ಹಾಕಿ ಕಣ್ಣೀರು ತೊಡೆದುಕೊಂಡು) ಬರ್ತೀನಿ ಡಾಕ್ಟರ, ನಿಮ್ಮ ಯಶಸ್ವೀ ಪ್ರಯೋಗವನ್ನು ಅಭಿನಂದಿಸೋದಕ್ಕಾಗಿ ಆಮೇಲೆ ಬರ್ತೀನಿ. ನಿಮಗೆ ಗೆಲುವಾಗಲಿ.

ನರ್ಸ—ನೋ ಹೋಪ್.

ಡಾ.—ನಮಸ್ಕಾರ—(ತನ್ನೊಳಗೆ) ಪ್ರಥಮ ಕಸಿಹೃದಯ ಪ್ರಯೋಗ.

(ತ.—ಬರ್ತೀನಿ—ನಿಮಗೆ ಗೆಲುವಾಗಲಿ—ಎಂಬ ಶಬ್ದಗಳು ಪ್ರತಿಧ್ವನಿಸುತ್ತಿರುತ್ತವೆ.)

[Bridge Music]

ಪ್ರೇ—ಸಿಸ್ಟರ, ಡಾಕ್ಟರ ಯಾಕೊ ಇನ್ನೂ ಬರಲಿಲ್ಲ.

ನರ್ಸ—ನೋಡಿ, ದೇವರು ಕಳಿಸಿದ ಹಾಗೆ ಬಂದ್ರು.

ಪ್ರೇ.—ದೇವಪ್ರೇಷಿತ.

ಡಾ.—ದೇವಪ್ರೇಷಿತ ಹೃದಯ ಬಂದಿದೆ, ಮಿಸ್ಟರ ಪ್ರೇಮಕುಮಾರ. ನನಗೆ ಎಷ್ಟು ಸಂತೋಷವಾಗಿದೆ ಅನ್ನೋದನ್ನ ಊಹಿಸಬಲ್ಲಿರಾ ?

ಪ್ರೇ.—ನೀವೆ ನನ್ನ ಹೃದಯವಾಗಿ ಮಾತ್ನಾಡ್ತಾ ಇರೋ ಹಾಗಿದೆ.

ಡಾ.—ಡಾಕ್ಟರನಾದ್ರೂ ನಾನು ನಾಸ್ತಿಕ ಅಲ್ಲ ನೋಡಿ. ಈ ದೇಹ ಅಂದ್ರೆ ಬರೀ ಮನುಷ್ಯನ ರಚನೆ ಅಲ್ಲಾರಿ. ಹೃದಯ ಒಂದು, ರಕ್ತನಾಳದಲ್ಲಿ ರಕ್ತ ಪಂಪ್ ಮಾಡುತ್ತೆ. ಬ್ರೈನ್ ಅನ್ನೋ ವಸ್ತು, ವಿಚಾರ ಮಾಡುತ್ತೆ. ಲಿವರ್ ಅನ್ನೊ ಟಿಸ್ಸು ಅನ್ನವನ್ನು ಜೀರ್ಣಿಸುತ್ತದೆ, ಹೀಗಂದ್ಬಿಟ್ರೆ ಆಯ್ತು? ಮನುಷ್ಯನ ಜೀವ ಅಂದ್ರೆ ಬರಿ ಮಾಂಸದ ಒಂದು ಯಂತ್ರ ಅಲ್ಲ. ಇದಕ್ಕೂ ಮೀರಿದ್ದು ಇದೆ. ಬ್ರೈನ್‌ಎ ಯಾಕೆ ವಿಚಾರ ಮಾಡ್ಬೇಕು, ಹೃದಯ ಯಾಕೆ ಪಂಪ್ ಮಾಡ್ಬೇಕು? ಅದು ಹೋಗ್ಲಿ, ಕೇನೋಪನಿಷತ್ತಿನಲ್ಲಿ ಏನ್ಹೇಳಿದೆ?

ಪ್ರೇ.—ಯಾವ ಶಕ್ತಿಯಿಂದ ಈ ಕಣ್ಣುಗಳು ನೋಡುತ್ತವೆಯೋ, ಯಾವ ಶಕ್ತಿಯಿಂದ ಈ ಮೂಗು ಮೂಸುತ್ತದೆಯೊ, ಈ ನಾಲಗೆ ರುಚಿಸುತ್ತದೆಯೊ, ಈ ತ್ವಚೆ ಸ್ಪರ್ಶಿಸುತ್ತದೆಯೊ, ಆ ಶಕ್ತಿಯೇ ದೇವರು.

ಡಾ.—ಅಂದ್ಮೇಲೆ ಬರಿ ನೇಚರ್ ಮಾತ್ರ ಅಲ್ಲ ಈ ಜೀವ ಅಂದ್ರೆ. ನೇಚರಗೂ ಮೀರಿದ್ದಿದೆ, ಮಿಸ್ಟರ ಪ್ರೇಂ.

ಪ್ರೇ.—ಹೌದು, ಅದೇ ಪರಾಪ್ರಕೃತಿ. ಡಾಕ್ಟರ ಕೂಡ ಈ ಪರಾಪ್ರಕೃತಿಯನ್ನು ನಂಬತಾ ಇರೋದು ಆಶ್ಚರ್ಯ.

ಡಾ.—ಆಶ್ಚರ್ಯ ಏನು ?

ಪ್ರೇ.—ನೀವು ನನ್ನ ಬರವಣಿಗೆಗೆ ಒಳ್ಳೆ ವಸ್ತು ಕೊಡ್ತಾ ಇದ್ದೀರಿ.

ಡಾ.—ಮೊದ್ಲು ನೀವು ಬದುಕೋದಕ್ಕೆ ಒಳ್ಳೆ ವಸ್ತು ಕೊಡ್ತೀನಿ. ಆಮೇಲೆ ನಿಮ್ಮ ಬರವಣಿಗೆ—

ಪ್ರೇ.—ಇದೆಲ್ಲಾ ಸಾಂಕೇತಿಕ ನೋಡಿ, ಡಾಕ್ಟರ.

ಡಾ.—ಸರಿ, ನೀವೂ ಕಾವ್ಯ ಅಂದ್ರೆ ಬರೀ ಸಂಕೇತ ಪ್ರತಿಮೆ ಅನ್ನೋರು ಅಸ್ರಿ.

ಪ್ರೇ.—ಕಾವ್ಯ ಅಷ್ಟೇ ಯಾಕೆ? ನಮ್ಮ ಮಾತಾನಾಡೋ ಭಾಷೆ ಹಿಂದೆ ಒಂದೊಂದು ಪ್ರತಿಮೆ ಮಾಡ್ಕೊಂಡು ಬರುತ್ತದೆ.

ಡಾ.—ಅಂದ್ರೆ?

ಪ್ರೇ.—ನಾನು ಆಶ್ಚರ್ಯ ಅಂತ ಹೇಳ್ದೆ. ಆಶ್ಚರ್ಯ ಅಂದ್ರೇನು? ಅದರ ಹಿಂದೆ ಒಂದು image ಇದೆ ಅಲ್ಲವೆ? ಆಹಾ ಚರ್ಯೆಯೇ ಆಶ್ಚರ್ಯ. 'ಆಹಾ' ಅಂತ ಉದ್ಗಾರ ತೆಗೆದು ಅಭಿನಯಿಸುವ ಚಿತ್ರವನ್ನು ಕಣ್ಮುಂದೆ ತಂದ್ಕೊಳ್ಳಿ.

ಡಾ.—ಓಹೋ! ಅದು ಆಶ್ಚರ್ಯ ಅಂತೀರೋ? Onomatopoeia.

ಡಾ.—ಪ್ರತಿಮೆ ಅನ್ನಿ ಸಾಕು, ಸಾಹಿತ್ಯ ಅನ್ನೋದು ಈ ಪ್ರತಿಮೆ.

ಪ್ರೇ.—ಜೀವನಾನೂ ಒಂದು ಪ್ರತಿಮೇನೆ. ಹೃದಯಾನೂ ಒಂದು ಪ್ರತಿಮೇನೆ.

ಪ್ರೇ.—ಹೌದು, ಶತಶಃ ಹೌದು.

ಡಾ.—ಹಾಗಾದ್ರೆ ಹೊಸದೊಂದು ಪ್ರತಿಮೆಯನ್ನು ನಿಮ್ಮ ಹೃದಯಮಂದಿರದಲ್ಲಿ ಪ್ರತಿಷ್ಠಾಪನೆ ಮಾಡೋಣವೇನು?

ಪ್ರೇ.—ದೇವಪ್ರೇಷಿತ ಪ್ರತಿಮೆ, ದೇವರೇ ಆಗಿರ್ಬೇಕು.

ಡಾ.—ಇದು ದೇವರಲ್ಲ–ದೇವತೆ, Not God but Angel.

ಪ್ರೇ.—ಡಾಕ್ಟರ, ನೀವ್ಯಾಕೋ ಬಹಳ ಅರ್ಥಪೂರ್ಣವಾಗಿ, ಜ್ಯೋತಿಷಿ ಹಾಗೆ ಮಾತನಾಡ್ತಾ ಇದ್ದೀರಲ್ಲಾ.

ಡಾ.—ಹಾಗಾದ್ರೆ ಹೇಳಿ. ನಿಮಗೊಂದು ಲೌವ ಡಿಸಅಪಾಯಿಂಟಮೆಂಟ ಆಗಿರಬೇಕು, ಅಲ್ಲವೇ?

ಪ್ರೇ.—(ನಿಟ್ಟುಸಿರು ಆಲೋಚನೆಗಳನಂತರ) ಹೂಂ, ಹೌದು.

ಡಾ.—ಆ ನಿಮ್ಮ ಪ್ರೇಮನಿರಾಶೆ, ಪ್ರೇಮಪಿಪಾಸೆ ಈಗ ಈಡೇರಿದ್ರೆ?

ಪ್ರೇ.—ನೀವೇನೊ ಒಗಟು ಹಾಕಿ ಮಾತಾಡ್ತಾ ಇದ್ದೀರಿ.

ಡಾ.—ನಿಮ್ಮ ಸಮ್ಮತಿ ಇದೆ ತಾನೆ? ನಿಮಗೆ ಒಂದು ದೇವತಾಹೃದಯವನ್ನು ಕಸಿ ಮಾಡ್ಬೇಕು ಅಂತಿದ್ದೀನಿ.

ಪ್ರೇ.—ಹೆಣ್ಣುಹೃದಯಾನಾ?

ಡಾ.—ಹೌದು–With all its delicacy.

ಪ್ರೇ.—ಪುರುಷದೇಹ, ಹೆಣ್ಣುಹೃದಯ.

ಡಾ.—ಅರ್ಧನಾರೀನಟೇಶ್ವರ ಶಿವಶಕ್ತಿಯರ ಸಮ್ಮೇಳನವೇ ಅದು. ನಿಮಗೆ ಒಪ್ಪಿಗೆ ತಾನೇ?

ಪ್ರೇ.—ಒಪ್ಪಿಗೆ ಡಾಕ್ಟರ್–ನನಗೆ ಬೇಕಾದ ಹೃದಯ ನನ್ನ ಜೀವನದಲ್ಲಿ ದೊರಕಲಿಲ್ಲ. ಅಂದ್ಮೇಲೆ ನೆಲೆ ಇಲ್ಲದೆ ದೇವಾಲಯಕ್ಕಾಗಿ ಹುಡುಕ್ತಾ ಇರೋ ಆ

ಪ್ರತಿಮೆಗೆ ಆದ್ರೂ, ನನ್ನ ಈ ದೇಹ ಮಂದಿರವಾಗಲಿ—ಆ ಹೃದಯ, ಈ ದೇಹದ ದೇವಾಲಯದಲ್ಲಿ ಬಂದು ನೆಲಸಲಿ. (ನಿಟ್ಟುಸಿರು) ದೇವಾಲಯವಿಲ್ಲದ ಆ ಪ್ರತಿಮೆಗೆ ನಾನೊಂದು ಮಂದಿರ ಮಾತ್ರ—ಓ! ನೋವು.

ಡಾ.—ನೀವಿನ್ನು ವಿಶ್ರಾಂತಿ ತೊಗೊಳ್ಳಿ. ಅಂದ್ಹಾಗೆ ಈ ಕಾಗದಕ್ಕೆ ಸಹಿ ಹಾಕ್ತೀರಾ? ಬೇಕಾದರೆ ಇನ್ನೂ ಸ್ವಲ್ಪ ಹೊತ್ತು ಅವಧಿ ಕೊಡ್ತೀನಿ. ಆಲೋಚನೆ ಮಾಡಿ ಹೇಳಿ.

ಪ್ರೇ.—ಅವಧಿ ಯಾಕೆ ?—Go ahead—ಕಾಗದ ತನ್ನಿ.

ಡಾ.—ಸಿಸ್ಟರ–

ನರ್ಸ—ಯಸ್ ಡಾಕ್ಟರ್.

ಡಾ.—ಓ ! ಮೂರು ಹೊಡದ್ಹೋಗಿದೆ. ಸರಿಯಾಗಿ ೬ ಗಂಟೆಗೆ ಆಪರೇಷನ್‌ಗೆ ಎಲ್ಲಾ ಸರ್ಜನ್ಸ್‌ರು ಬರಬೇಕು. ಅವರವರ ಸ್ಥಳಗಳಿಗೇ ಹೇಳಿ ಕಳಿಸಿ. Prepare the patient for the operation. At any cost, the operation must begin by dawn. Heart, lung machine ಸರಿಯಾಗಿ ಇಟ್ಟಿರಿ. ಕಸಿಹೃದಯಾನ ಬೇರ್ಪಡಿಸಿ ಆ ಮೇಷಿನಲ್ಲಿ ಇಟ್ಟಿದ್ದನ್ನ ಸರಿಯಾಗಿ ನೊಡ್ಕೊಬೇಕು.

ನರ್ಸ—O.K. ಡಾಕ್ಟರ.

(Bridge Music)

(ಪ್ರೇಂಕುಮಾರ ತನ್ನ ಮಂಚದ ಮೇಲೆ ಆಲೋಚನಾಪರನಾಗಿ ಎವೆಯಿಕ್ಕದೆ ಏನೋ ಶೂನ್ಯ ನೋಟವನ್ನು ಬೀರುತ್ತಾ ಕಲ್ಪನಾಲೋಕದಲ್ಲಿದ್ದಾನೆ.)

ಪ್ರೇ.—(ಅರ್ಧ ಎಚ್ಚರ ಅರ್ಧ ನಿದ್ರೆ—ಅರ್ಧ ಬಳಲಿಕೆ ಅರ್ಧ ಉತ್ಸಾಹ, ಅರ್ಧ ಆಸೆ ಅರ್ಧ ನಿರಾಶೆ) ಕಸಿ ಹೃದಯ—ಹೊಸ ಹೃದಯ—ಹೃದಯ ಕಸಿ ಆಗೋದಕ್ಕೆ ಮೊದ್ಲು ಕೃಷಿಯಾಗಬೇಕು. ಕೃಷಿ ಇಲ್ಲದ ಹೃದಯಗಳು ಹ್ಯಾಗೆ ಒಂದುಗೂಡುವುದಕ್ಕೆ ಸಾಧ್ಯ ?—-ಹಹಹಹ—ಹೃದಯಗಳ ಮಿಲನ ಅಂದ್ರೆ, ಅಭಿರುಚಿ, ಆಸಕ್ತಿ, ಆದರ್ಶ ಎಲ್ಲಾನೂ ಒಂದುಗೂಡಬೇಕು. ಒಂದು ಮಣ್ಣಿನ ವಿಚಾರ, ಇನ್ನೊಂದು ಮುಗಿಲಿನ ವಿಚಾರ ಅಂದ್ರೆ—ಅವೆರಡನ್ನೂ ಕೂಡಿಸುವ ಕ್ಷಿತಿಜ ಒಂದು ಇಲ್ಲವೆ ಇಲ್ಲವಲ್ಲಾ ?—ಗಂಡುದೇಹ, ಹೆಣ್ಣು ಹೃದಯ ಕಾಂತಾಸಮ್ಮಿತಿ. ಪುರುಷನ ನಾಲಿಗೆ, ನುಡಿಯುವ ಹೃದಯ ಮಾತ್ರ ಸುಕುಮಾರವಾದದ್ದು. ಪುರುಷನ ಬಾಯಲ್ಲಿ ಕಾಂತಾಸಮ್ಮಿತಿಯ ಮಾತು—ಬರಬಹುದೆ? ಕವಿ ಹೃದಯಾನೂ ಕಾಂತಾಸಮ್ಮಿತಿಯೆ. ಹೆಣ್ಣು ಹೃದಯ ಎಲ್ಲಾನೂ ಕೋಮಲ ಅನ್ನೋದಕ್ಕೆ ಆಗದು. ಹೆಣ್ಣು ಹೃದಯ ಕೊಲೆ ಮಾಡುವಷ್ಟು

ಕಠಿಣವೂ ಆಗಬಹುದು, ಲೇಡಿ ಮ್ಯಾಕ್‌ಬೆತ್ ಹಾಗೆ. ಆ ಹೃದಯ ದೊರಕದೆ ಹೋಯ್ತು. ಬೇರೆ ಆಗೋದಕ್ಕೇನೆ ಹೃದಯಗಳು ಕೂಡೋದು ಉಂಟೆ? ಆಕೆ ನುಡಿದಿದ್ದಳಲ್ಲಾ—' ನಿಮ್ಮದು ಕನಸಿನ ಲೋಕ, ನನ್ನದು ಮಣ್ಣಿನ ಲೋಕ '—ನಿಮ್ಮದು ಕಾವ್ಯ, ನನ್ನದು ವಿಜ್ಞಾನ; ನೀವು ಕನಸುಂಡು ಜೀವಿಸುವ ಕವಿಗಳು, ನಾನು ಕೈಯಿಂದ ಗಳಿಸಿ ಉಣ್ಣುವ ಬುದ್ಧಿಜೀವಿ—ಹೌದು, ಆಕೆ ಬುದ್ಧಿಜೀವಿ, ನಾನು ಭಾವನಾಜೀವಿ—ಆಕೆ ವಿಜ್ಞಾನಿ, ನಾನು ದಾರ್ಶನಿಕ—ವಿಜ್ಞಾನವೂ ಕೂಡ ತತ್ವಜ್ಞಾನದ ಒಂದು ಸ್ತರ. ಇದನ್ನೇ ಆಕೆ ಅರಿತುಕೊಳ್ಳಲಿಲ್ಲ. ಆಕೆಯ ಕಣ್ಣಲ್ಲಿ ವಿಜ್ಞಾನ ಅಂದ್ರೆ ಬರಿ ಭೌತಿಕತೆ. ಮನುಷ್ಯನ ಯಾಂತ್ರೀಕರಣ. ಪ್ಲಾಸ್ಟಿಕ್ ಯುಗ. ಪ್ಲಾಸ್ಟಿಕ್ ಸರ್ಜರಿ. ದೇಹ ಅಂದ್ರೆ ಒಂದು ಗಡಿಯಾರ. ಹೆಣ್ಣು ಗಂಡು ಅಂದ್ರೆ ಎರಡು ಬೊಂಬೆಗಳು. ಅನ್ನ ಆಹಾರ ಅಂದ್ರೆ tinned foodಉ. ನಮ್ಮ ಋಷಿಗಳು ನದೀತೀರದ ಆಶ್ರಮಗಳಲ್ಲಿ, ಗಡ್ಡೆಗೆಣಸು ತಿಂದ್ಕೊಂಡು ಗಾಯತ್ರಿ ಮಂತ್ರ ಹೇಳ್ಕೊಂಡು ಸೂರ್ಯೋದಯದಲ್ಲಿ ಸತ್ಯದ ಸಾಕ್ಷಾತ್ಕಾರ ಕಂಡರು. ಪ್ರಕೃತಿಯಲ್ಲಿ ವಿಶ್ವೇಶ್ವರನ ಪ್ರತಿಬಿಂಬ ಕಂಡರು. ಇಂದಿನ ವಿಜ್ಞಾನದಲ್ಲಿ ಮನುಷ್ಯತ್ವ ಮಣ್ಣಾಗ್ತಾ ಇದೆ. ಯಂತ್ರವಾಗ್ತಾ ಇದೆ. ಪ್ರಕೃತಿಯ ರಹಸ್ಯಗಳನ್ನು ಭೇದಿಸಿದ ಮಾನವ ದೇವರ ರಹಸ್ಯವನ್ನು ಮಾತ್ರ ತಿಳಿದುಕೊಳ್ಳದೆ ಅಸಮರ್ಥನಾದ. ದೇವರನ್ನು ಕಾಣುವುದಕ್ಕೆ ದ್ರಷ್ಟಾರನ ಕಣ್ಣು ಬೇಕು. ಎರಡು ಕಣ್ಣುಗಳು! ಒಂದು ಅಂತಶ್ಚಕ್ಷು. ಇನ್ನೊಂದು ಗಾಗಲ್ಸ್ ಹಾಕಿದ ಕಪ್ಪು ಕಣ್ಣು. ಇದೇ ಎರಡು ಕಣ್ಣಿನ ಅಂತರ. ಈ ಎರಡು ಕಣ್ಣು ಕೂಡದೆ ಹೋದವು. (ನಿರಾಶೆಯ ನಗೆ) ಆದರೆ ಕೂಡಬೇಕು ಅಂತ ಸಮೀಪ ಯಾಕೆ ಬಂದ್ವೊ ಕಾಣೆ....

(ಫ್ಲಾಶ್ ಇಫೆಕ್ಟ್)

ಪ್ರೇ.—ಕೊನೇಗೂ ಸೈನ್ಸ್ಏ ತೊಗೊಂಡ್ರೇನ್ರಿ?

ಆಕೆ—ಶಿಕ್ಷಣ ಅಂದ್ರೆ ಒಂದು ಕೆರಿಯರ್‌ಗಾಗಿ ಇರ್ಬೇಕು. ಅಲ್ಲವಾ ಸರ್? ಪೊಯಿಟ್ರಿ, ಫಿಲಾಸಫಿ ಇದೆಲ್ಲಾ ಕೆರಿಯರ್‌ಗಾಗಿ ಅಲ್ಲ ನೋಡಿ.

ಪ್ರೇ.—ಹೆಣ್ಣು ಮಕ್ಕಳಲ್ಲಿ ಕೆರಿಯರ್‌ಗಿಂತ್ಲೂ ಕಲೆಯಲ್ಲಿ ಆಸಕ್ತಿ ಹೆಚ್ಚು ಇರುತ್ತದೆ ಅಂತ ನನ್ನ ನಂಬಿಕೆ. ನಿಮ್ಮ ತಂದೆ ಒತ್ತಾಯಕ್ಕೆ ಏನಾದ್ರೂ, ಸೈನ್ಸ ತೊಗೊಳ್ತಾ ಇದ್ದೀರೇನು? ಐಚ್ಛಿಕ ವಿಷಯಗಳಲ್ಲಿ ಒತ್ತಾಯ ಅಡ್ಡಬರ್ಬಾರ್ದು ನೋಡಿ. After all ಹೆಂಗಸರು careerಉ technology, scienceಉ ಅಂತ ಕಟ್ಟಿಕೊಂಡ್ರೆ ನಮ್ಮ ದೇಶದಲ್ಲಿ ಕಲೆ ಅಧೋಗತಿಗೆ ಇಳೀತು ಅಂತ಼್ೇ ಹೇಳ್ಬೇಕು.

ಆಕೆ—ಕಲೆಗಾಗಿ ನನ್ನಲ್ಲೂ ಬೇಕಾದಷ್ಟು ಗೌರವ ಇದೆ.

ಪ್ರೇ.—ಗೌರವ ಕಟ್ಕೊಂಡು ಏನ್ಮಾಡೋದು? ಅಂತರಿಕವಾದ ಆಸಕ್ತಿ ಬೇಕು.

ಆಕೆ—ಕಲೆಗಾಗಿ ಗೌರವ ಅಂದ್ರೆ ಕವಿಗಳಿಗಾಗಿ ಗೌರವ ಇದೆ ಅಂತ ಹೇಳ್ದೆ.

ಪ್ರೇ.—ನನಗೊತ್ತು—ನನಗೆ ಅವಾರ್ಡ್ ಸಿಕ್ಕ ದಿನ ನೀವೇ ನನಗೆ ಮೊದಲು ಮಾಲೆ ಹಾಕಿದವರು.

ಆಕೆ—ಮತ್ತೇ? ನಿಮ್ಮ ಮೊದಲ ಕವನ ನಾನು ವೇದಿಕೆಯಿಂದ ಹೇಳಿದಾಗ ನಿಮ್ಮ ಅವಾರ್ಡ್‌ನಲ್ಲಿ ಎರಡೂವರೆ ಸಾವಿರ ನನಗೆ ಸಲ್ಲಬೇಕು ಅಂತ ಹೇಳಿದ್ರಲ್ಲಾ.

ಪ್ರೇ.—ನಿಜ, ಕವಿ ಒಬ್ಬ ಹೇಳ್ತಾನೆ: 'ಪೂವಿನ ಪೊಸ ಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೆ' ಅಂತ. ವೀಣೆ ಇರ್ತದೆ. ನುಡಿಸುವವರೇ ಇಲ್ಲದಿದ್ದರೆ ಮಾಡ್ಬೇಕೇನು? ಕವಿಯು ಕವನಸಂಗ್ರಹ ಅಂದ್ರೆ ವೀಣೆ ಇದ್ದ ಹಾಗೆ, ಗಾಯಕಿ ಅಂದ್ರೆ ವೈಣಿಕ ಇದ್ದ ಹಾಗೆ.

ಆಕೆ—ಕವಿಯೆ ವೈಣಿಕ ಆಗ್ಬಿಡ್ಬೇಕು.

ಪ್ರೇ.—ಅದೇ ಅರ್ಧನಾರೀನಟೇಶ್ವರ ಅಂದ ಹಾಗೆ (ಇಬ್ಬರೂ ನಗುತ್ತಾರೆ). ಮುಖ್ಯವಾಗಿ ಇಂದು ನಮಗೆ ಕಲೇನೂ ಬೇಕು, ವಿಜ್ಞಾನಾನೂ ಬೇಕು. What we want is, a marriage of arts and science !!

ಆಕೆ—ಇದರ ಮೇಲೇ ಒಂದು ಕವಿತಾ ಬರೆದ್ಬಿಡಿ ಮತ್ತೆ.

ಪ್ರೇ.—ಬರೆಯಬೇಕಾದ ಕಾವ್ಯ ಅಲ್ಲ ಇದು. ಬದುಕಿ ತೋರಿಸಬೇಕಾದ ಕಾವ್ಯ. ಶ್ರೇಷ್ಠವಾದ ಸೈನ್ಸ ಯಾವುದು ಅಂದರೆ ಬದುಕೋ ಶಾಸ್ತ್ರವನ್ನ ಕಲಿಸುವಂಥಾದ್ದು; ಶ್ರೇಷ್ಠ ಕಲೆ ಯಾವುದು ಅಂದರೆ ಬದುಕೋ ಕಲೆಯನ್ನ ಕಲಿಸುವಂಥಾದ್ದು. ಟಾಲ್‌ಸ್ಟಾಯ್ ಏನು ಹೇಳ್ತಾನೆ ಗೊತ್ತಿಲ್ವೆ? True science and true arts are the products of sacrifice and not of certain material advantages. Science ಆಗ್ಲಿ art ಆಗ್ಲಿ, ಸ್ವಂತದ ಉಪಯೋಗಕ್ಕಾಗಿ ಅಲ್ಲ—

ಆಕೆ—ಸರ್, ನೀವಿಲ್ಲಿ ಒಬ್ಬರೆ ಇರ್ತೀರಾ?

ಪ್ರೇ.—ಇದೇನು? ಒಮ್ಮೆಗಲೇ ವಿಷಯಾಂತರ ಆಯ್ತು?

ಆಕೆ—ಹಾಗೇ ವಿಚಾರಿಸ್ದೆ.

ಪ್ರೇ.—ಹೌದು, ನಾನಿರೋದೇನೊ ಒಬ್ಬನೆ. ಆದ್ರೆ ನನ್ನ ಜೊತೆ ಸಾವಿರಾರು ಸಹಚರಿಯರು.

ಆಕೆ—(ಬೆರಗು ಮತ್ತು ನಗೆ) ಸಹಚರಿಯರು ಅಂದ್ರೆ ಸೇವಕಿಯರೊ ಇಲ್ಲಾ ಶ್ರೀಕೃಷ್ಣನ ಹಾಗೆ—

ಪ್ರೇ.—ನಮ್ಮ ರೂಮಿಗೆ ಬನ್ನಿ. ನನ್ನ ಸಹಚರಿಯರು ನಾನು ಮುಂದೆ ನೀ ಮುಂದೆ ಅಂತ ನನ್ನ ಪಾರುಪತ್ಯ ವಹಿಸ್ಲಿಕ್ಕೆ ಸಾಲುಸಾಲಾಗಿ ನಿಂತ್ಬಿಟ್ಟಿರ್ತಾರೆ. ಒಂದು ಐದು ನಿಮಿಷ ಒಬ್ಬ ಸಹಚರಿ ಬರ್ತಾಳೆ. ನನ್ನ ಹೃದಯಕ್ಕೆ ಸಮೀಪ ವಾಗಿ ನಿಂತ್ಕೋತಾಳೆ—

ಆಕೆ—(ಬಂದಿಷ್ಟು ತಾಳ್ಮೆಗೆಟ್ಟು) ಇದೇನು ಸಾರ್ ನೀವ್ಮಾತ್ನಾಡೋದು?

ಪ್ರೇ.—ಅಯ್ಯೋ ಬನ್ನಿ ಮೇಡಂ ನನ್ನ ರೂಮಿನವರೆಗ್ಗೂ. ನನ್ನ ಸಹಚರಿಯರು ನನಗಾಗಿ ಎಷ್ಟೊಂದು ಸೇವಾಭಾವದಿಂದ ಕೈಜೋಡಿಸಿಕೊಂಡು ನಿದ್ದರಾಗಿ ರ್ತಾರೆ ಅನ್ನೋದನ್ನ ನೋಡೀರಂತೆ.

ಆಕೆ—ನೀವು ಹೇಳೋ ಮಾತು ಶುದ್ಧ ಸುಳ್ಳು. ಸಭ್ಯತೆಗೂ ಮೀರಿದ ಮಾತುಗಳಿವು.

ಪ್ರೇ.—ನಾನೇನಾದ್ರೂ ನಿಮಗೆ ಕೈಜೋಡಿಸಿ ನಿಂತ್ಕೊಳ್ಳಿ ಅಂತ್ಹೇಳಿದ್ನೆ, ಸಭ್ಯ ತೆಗೆ ಮೀರಿದ್ದು ಅನ್ಲಿಕ್ಕೆ?

ಆಕೆ—ದೊಡ್ಡ ಕವಿಗಳು, ಮೇಧಾವಿಗಳು, ವೈಚಾರಿಕರು, ದ್ರಷ್ಟಾರರು, ಇನ್ನೂ ಏನೇನೊ ಅಂತ, ನಾನು ನಿಮ್ಮ ಬಗ್ಗೆ ಗೌರವ ಇಟ್ಕೊಂಡಿದ್ದೆ. ಆ ಗೌರವದ ಗೋಪುರಾನ ನಿಮಿಷಾರ್ಧದಲ್ಲಿ smash ಮಾಡ್ಬಿಟ್ರಿ.

ಪ್ರೇ.—ಇಲ್ಲಾರಿ—ನನ್ನ ರೂಮಿಗೆ ಬಂದು ನೋಡಿದ್ರೆ ಆ ಗೋಪುರಕ್ಕೆ ಇನ್ನೊಂದು ಮಹಡಿ ಕಟ್ತೀರಿ.

ಆಕೆ—ಸುಮ್ನೆ ನನ್ನ ತಾಳ್ಮೆಗೆಡಿಸ್ಬೇಡಿ. ನಿಮ್ಮ ಬಗ್ಗೆ ಇರೋ ಗೌರವ, ಆತ್ಮೀಯ ಭಾವನೆ ಕೆಡಿಸ್ಕೋಬೇಡಿ. ಸ್ಪಷ್ಟವಾಗಿ ಹೇಳಿ. ಈ ನಿಮ್ಮ ಸಾವಿರ ಸಹಚರಿ ಯರು ಯಾರು?

ಪ್ರೇ.—ಸಾವಿರ ಸಹಚರಿಯರು ಅಂದ್ರೆ, ಸಾವಿರದ ಸಹಚರಿಯರು. They are all immortal beings! ನಮ್ಮ ಸರಸಮ್ಮ ಬಳಗ ಅವರೆಲ್ಲಾ.

ಆಕೆ—ಸರಸಮ್ಮ?

ಪ್ರೇ.—ಹೂಂ—ಅರ್ಥವಾಗ್ಲಿಲ್ಲವೇನು? ಸರಸ್ವತಿ.

ಆಕೆ—ಸರಸ್ವತಿಯ ಬಳಗ—ಪುಸ್ತಕ ಅಂತ್ಲೇ?

ಪ್ರೇ.—ನೋಡಿ, ಕವಿಗೆ ಕ್ಷಣದಲ್ಲಿ ಹೊಳೆದ್ರೆ, ವಿಜ್ಞಾನಿಗೆ—

ಆಕೆ—(ಜೋರಾಗಿ ನಕ್ಕು) ಒಳ್ಳೆ ತಮಾಷೇರಿ ನಿಮ್ದು.

ಪ್ರೇ.— ಈ ಸ್ವಾರಸ್ಯ ನಿಮ್ಮ ಸೈನ್ಸ ಕ್ಲಾಸನಲ್ಲಿ ಸಿಗುತ್ತೇನ್ರಿ?

ಆಕೆ—ಅಭ್ಯಾಸದ ಮಟ್ಟಿಗೆ ಸೈನ್ಸ ಕ್ಲಾಸಗೆ ಹೋದ್ರೂ ಅಭಿರುಚಿಗಾಗಿ ನಿಮ್ಮ ಬಳಿಗೇ ಬರ್ತೀನಿ. (ನಗೆ) ಒಳ್ಳೇದು, ಬರ್ತೀನಿ.

(ಗಡಿಯಾರದಲ್ಲಿ ಗಂಟೆ ಐದು)

ನರ್ಸ—ಬಾಬೂ, ಪೇಶಂಟ ರೆಡಿ ಏನಪಾ? ಎನಿವಾ, ಶೇವು ಎಲ್ಲಾ ಪೂರೈಸಿದೆ ತಾನೆ?

ಬಾಬೂ—ಎಲ್ಲಾ ಆಯಿತ್ರವ್ವ—ಪೇಶಂಟ ಮಾತ್ರ ಯಾಕೋ ಸುಸ್ತಾಗೆ ಇದ್ದಾರವ್ವ.

ನರ್ಸ—ಹೂಂ ಇರಬೇಕು–ಬಟ್ಟೆ ಎಲ್ಲಾ ಹದಿನಾರು ಕ್ಲಾತ್ ಪೀಸಿಸ್ sterilize ಮಾಡಿಟ್ಟಾಗಿದೆ. So the operation theatre is ready.

ನರ್ಸ—ಕ್ಯಾಂಪ್ಸ, ರಿಟ್ರ್ಯಾಕ್ಟರ್ಸ, ಚಾಕು–ಓ ಚೀಫ್ ಸರ್ಜನ ಬಂದ್ಬಿಟ್ರೇನು?

(ದೂರದಿಂದ ಬೂಟಿನ ಶಬ್ದ)

ಬಾಬೂ—ನಮ್ಮ ಡಾಕ್ಟರ ಇನ್ನೂ ಬಂದಿಲ್ರಮ್ಮ–ಉಳಿದ ಡಾಕ್ಟರ ಜನಗೋಳು.

ನರ್ಸ—ಪೇಶಂಟಗೆ ಬಟ್ಟೇನೆಲ್ಲಾ ತೊಡಿಸಿದ್ದೀಯಾ?

ಬಾಬೂ—ಎಲ್ಲಾ ರೆಡಿ.

ಪ್ರೇ.—ಸಿಸ್ಟರ–

ನರ್ಸ—ಏನ್ಬೇಕಿತ್ತು, ಮಿಸ್ಟರ ಕುಮಾರ.

ಪ್ರೇ.—ಬಾಯಾರಿಕೆ.

ನರ್ಸ—ಸ್ವಲ್ಪ ಹೊತ್ತು ತಡ್ಕೊಳ್ಳಿ.

ಪ್ರೇ.—ತಡ್ಕೊಳ್ಳೋದು ತಡ್ಕೊಳ್ಳೋದು! ನನ್ನ ಬದುಕೆಲ್ಲಾ ತಡ್ಕೊಳ್ಳೋದೇ ಆಗ್ಬಿಟ್ಟದೆ ನೋಡಿ.

ನರ್ಸ—ನಿಮ್ಮದೂ ತಾಳ್ಮೆ ದೊಡ್ಡದು. ಮಾಡೋದೇನು ಮಿಸ್ಟರ್ ಕುಮಾರ.

ಪ್ರೇ.—ಸಿಸ್ಟರ್, ಈ ಆಪರೇಷನ್ ಬಹಳ ಹೊತ್ತು ತೊಗೊಳ್ಳಹುದಲ್ವೆ?

ನರ್ಸ—ಆದರ ಯೋಚ್ನೆ ನೀವು ಬಿಟ್ಬಿಡಿ.

ಪ್ರೇ.—ಅದ್ಸರಿ, ಏನ್ಮಾಡ್ತಿರ್ತೀರಿ ಅಂತ ನಂಗೆ ಪ್ರಜ್ಞೆ ಇದ್ದರೆ ತಾನೆ?

ನರ್ಸ—(ನಕ್ಕು) ಯೋಗಕ್ಷೇಮಂ ವಹಾಮ್ಯಹಂ.

ಪ್ರೇ.—ಓ! ಇಲ್ಲಿ ಎಲ್ಲರೂ ಸಂಸ್ಕೃತ ಪಂಡಿತರೇ ಅಂತ ಕಾಣ್ತದೆ.

ನರ್ಸ್—ಎಲ್.ಐ.ಸಿ. ಫೋಟ್ಸೊ ತಾನೆ ಅದು?

ಪ್ರೇ.—ಅಲ್ಲ, ಭಗವಾನ ಶ್ರೀಕೃಷ್ಣನ ಫೋಟ್ಸೊ.

ನರ್ಸ್—ಅದನ್ನೇ ನಾವೆಲ್ಲಾ ಹೇಳೋದು.

ಪ್ರೇ.—ಹೌದು, ನೀವು ಆತನ ಪ್ರತಿನಿಧಿಗಳು ತಾನೆ?

ನರ್ಸ್—ಚೆನ್ನಾಗಿ ಹೇಳಿದ್ರಿ.

ಪ್ರೇ.—ಸಿಸ್ಟರ.

ನರ್ಸ್—ಏನು?

ಪ್ರೇ.—(ಅನುಮಾನಿಸುತ್ತಾ) ಆ ಹೃದಯ ಅಂತೀರಲ್ಲಾ ಒಂದು ಕ್ಷಣ ನೋಡ್ಬಹುದೆ?

ನರ್ಸ್—ಛಿ ಛಿ ಛಿ! ಅದನ್ನ ಹಾಗೆ ಹೊರಕ್ಕೆ ಎತ್ಕೊಂಡು ತರೋಕೆ ಸಾಧ್ಯವೆ?

ಪ್ರೇ.—ಸಿಸ್ಟರ, ಈ ಹೃದಯ ಯಾರದು?

ನರ್ಸ್—God-sent. ಯಾವ್ದಾದ್ರೇನು? ತಮ್ಮ ಜೀವನಕ್ಕೆ ಸಾಧನ ಅದ್ರೆ ಸಾಕು.

ಪ್ರೇ.—ಇಂತಹ ಒಂದು ಹೃದಯ ನನ್ನಿಂದ ದೂರವಾಗಿ ಹೋಗಿದೆ.

ನರ್ಸ್—ಅಂದ್ರೆ?

ಪ್ರೇ.—ಆಗ ಆ ಹೃದಯ ನನ್ನನ್ನು ಅಗಲಿ ಹೋಗ್ತಾ ಇರೋ ಆ ಹೃದಯ ನುಡಿದಿತ್ತು—'ಎಂದಾದರೂ ಒಂದು ದಿನ ನಾನು ನಿಮ್ಮ ಹೃದಯದಲ್ಲಿ ವಾಸವಾಗಿರ್ತೇನೆ'....ಅಂತ.

ನರ್ಸ್—ನೀವು ಯಾವುದೋ ಕನಸಿನ ಲೋಕದಲ್ಲಿ ಇದ್ದ ಹಾಗೆ ಕಾಣ್ತದೆ.

ಪ್ರೇ.—ಅಲ್ಲ ಸಿಸ್ಟರ, ಇದು ಕಾವ್ಯ ಅಲ್ಲ ಕಟ್ಟುಕತೆ ಅಲ್ಲ; ಆಗಿಹೋದ ಸಂಗತಿ. ಹೇಳ್ಲೇನು ಕತೆ?

ನರ್ಸ್—ಮಿಸ್ಟರ ಕುಮಾರ, ನೀವೀಗ ರೆಸ್ಟ ತೊಗೋಬೇಕು. ಬಹಳ ಮಾತನಾಡಬಾರದು. ಡಾಕ್ಟರ ಬಂದು ನೋಡಿದ್ರೆ ಇಬ್ಬರೂ ಬೈಸಿಕೊಳ್ಳಬೇಕಾದೀತು—ಸೊ, ರೆಸ್ಟ.

ಪ್ರೇ.—(ತನ್ನೊಳಗೆ) ಕನಸೊ ನನಸೊ—ಎಲ್ಲ ಹಾಲೋ ಹಾಲು. ಕನಸಿನ ಲೋಕದಲ್ಲಿ! ಎಂತಹ ಸವಿಯಾಗಿತ್ತು ಆ ಕನಸು–

(ಫ್ಲಾಶ್ ಬ್ಯಾಕ್)

ಆಕೆ—ಸರ್.

ಪ್ರೇ.—ನೀವಿನ್ನು ನನಗೆ ಸರ್ ಅಂತ ಕೂಗ್ಬಾರ್ದು ನೋಡು. ನೀ ನನ್ನ ನನ್ನ ವಿದ್ಯಾರ್ಥಿನಿ ಅಲ್ಲ.

ಆಕೆ—ನಾನ್ಯಾವಾಗಲೂ ನಿಮ್ಮ ವಿದ್ಯಾರ್ಥಿನೀನೆ—

ಪ್ರೇ.—ನಿಮ್ಮ ಐಚ್ಛಿಕ ವಿಷಯಗಳೇ ಬೇರೆ—

ಆಕೆ—ಆದ್ರೂ ನನ್ನ ಹಾಬಿ ವಿಷಯ ಅಂದ್ರೆ ಕಾವ್ಯ ಅಂತ ಹೇಳಿದ್ದೀನಲ್ಲಾ.

ಪ್ರೇ.—ಸಂತೋಷ.

ಆಕೆ—ನನ್ನ ಮೇಲೆ ಒಂದು ಕಾವ್ಯ ಬರೀರಿ, ನೋಡೋಣ.

ಪ್ರೇ.—'ನನ್ನ ಮೇಲೆ' ಅಲ್ಲ 'ನಮ್ಮ ಮೇಲೆ'—ಅಂತ ಹೇಳಿ. ಆಗ ನೋಡಿ.

ಆಕೆ—ಆಗಲಿ, ಒಳ್ಳೇದೊಂದು ಕಾವ್ಯಸೃಷ್ಟಿ ಆಗೋ ಹಾಗಿದ್ರೆ ನಾನ್ಯಾಕೆ ಬೇಡ ಅನ್ನಲಿ?

ಪ್ರೇ.—ಕಾವ್ಯಸೃಷ್ಟಿ ಇಷ್ಟೇ ಅಲ್ಲ.

ಆಕೆ—ಮತ್ತೆ?

ಪ್ರೇ.—ಜೀವನಸೃಷ್ಟಿ ಕೂಡ.

ಆಕೆ—ಇವತ್ಯಾಕೊ ಕಾವ್ಯಲಹರಿ ಜೋರಾಗಿದೆ ಅಂತ್ಕಾಣ್ತದೆ.

ಪ್ರೇ.—ಈ ಲಹರಿ ಕ್ಷಣಿಕವಾಗಿರದೆ ಕಾಯಂ ಆಗಿರ್ಬೇಕು ಅಂತೀನಿ.

ಆಕೆ—ಕಾವ್ಯ ಯಾವಾಗಲೂ ಕಾಯಂ ಆಗೇ ಇರುತ್ತಲ್ಲಾ.

ಪ್ರೇ.—ನಿಮ್ಮನ್ನ ನನ್ನ ಕಾವ್ಯದಲ್ಲಿ ಯಾವ ಹೆಸರ್ನಿಂದ ಸಂಬೋಧಿಸಲಿ?

ಆಕೆ—ನನ್ನ ತಂದೆತಾಯಿ ಯಾವ ಹೆಸರಿಟ್ಟಿದ್ದಾರೊ ಆ ಹೆಸರ್ನಿಂದ.

ಪ್ರೇ.—ಇಲ್ಲ ನಿನ್ನ, ಸಾರಿ ನಿಮ್ಮ....

ಆಕೆ—ಸಾರಿ ಏನು ಬೇಕಿಲ್ಲ. 'ನಿನ್ನ' ಅಂತ್ಲೆ ಹೇಳಬಹುದು. ನಾನೆಷ್ಟಾದ್ರೂ....

ಪ್ರೇ.—ಅರ್ಥವಾಯ್ತು. ಹಾಗಾದರೆ ನನ್ನ ಕಾವ್ಯದಲ್ಲಿ ನಿನ್ನ ಹೆಸರು ವಿದ್ಯುಲ್ಲತೆ.

ಆಕೆ—ವಿದ್ಯುಲ್ಲತೆ? ಒಂದೇ ಕ್ಷಣದಲ್ಲಿ ಮಿಂಚಿಹೋಗ್ಬಿಡುತ್ತೆ.

ಪ್ರೇ.—ಆದರೂ ಆ ಕ್ಷಣ ಎಂಥಾದ್ದು! Electric Shock ಇದ್ದ್ಹಾಗೆ.

ಆಕೆ—ಸೈನ್ಸ ಅಭ್ಯಾಸಿ ನಾನು. ವಿದ್ಯುಲ್ಲತೇನೂ Electric Shock ಅಲ್ಲ ವೇನು?

ಪ್ರೇ.—ಸರಿ, ಕಾವ್ಯಕ್ಕೆ ಒಳ್ಳೇ ಸ್ಫೂರ್ತಿ ಸಿಕ್ಕಿದ ಹಾಗಾಯ್ತು. ನಾಳೆಗೇ ರೆಡಿ ಮಾಡಿಟ್ಟಿರ್ತೀನಿ.

ಆಕೆ—ಇದೇನು ? ಟೈಲರ್ ಹೇಳೋ ಹಾಗೆ ಹೇಳ್ತಾ ಇದ್ದೀರಲ್ಲಾ. ಇವತ್ತೆಲ್ಲಾ Measurement ತೊಗೊಂಡಾಯ್ತು ಅಂತ್ಕಾಣುತ್ತೆ. ನಾಳೆ ಕಾವ್ಯದ ಬಟ್ಟೆ ರೆಡಿ.

ಪ್ರೇ.—ಕಾವ್ಯದ ಬಟ್ಟೆ ಅಲ್ಲ–ಬಾಳಬಟ್ಟೆ. ಕಾವ್ಯ ಅಂದ್ರೆ ಬಾಳಬಟ್ಟೆಯ ಪರಮಾಗಮ. ಕಾವ್ಯ ಕ್ಷಣಿಕ ಅಂತ್ಹೇಳೋರು ಕ್ಷುಲ್ಲಕರು.

ಆಕೆ—ಅಲ್ಲಾ, ನಾಳೆ ರೆಡಿ ಮಾಡಿಡ್ತೀನಿ ಅಂತ ಅಂದ್ರಿ, ಕಾವ್ಯಾನ ಒಂದು ವ್ಯಾವಹಾರಿಕ ವಸ್ತು ಮಾಡ್ಬಿಟ್ರಲ್ಲಾ ಅಂತ. ಇಂದಿನ ವಿಜ್ಞಾನಯುಗದಲ್ಲಿ ಸ್ಪೇರ್ ಕಣ್ಣು, ಸ್ಪೇರ್ dentures ಉ, ಸ್ಪೇರ್ ಮೂಗು, ಮೂಳೆಯ ತುಣುಕು ಇದನ್ನೆಲ್ಲಾ ತಯಾರಿಸೋ ಹಾಗೆ, ನಿಮ್ಮ ಕಾವ್ಯಾನೂ–

ಪ್ರೇ.—ಒಳ್ಳೇ ವಿಚಾರ—ಇನ್ನೊಂದು ಕಾವ್ಯಕ್ಕೆ ಸ್ಫೂರ್ತಿ ಸಿಕ್ಕ ಹಾಗಾಯ್ತು. ಅದೊಂದು ನವ್ಯ ಧಾಟಿಯ ವ್ಯಂಗ್ಯ ಕಾವ್ಯ ಆಗಬಹುದು. ಹೊಳಹು ಹೇಳ್ಲೇನು ?

ಆಕೆ—ಆಗಲೇ ಸಿದ್ಧವಾಗಿದ್ದೇನು ? After all atomic age.

ಪ್ರೇ.—ಅಲ್ಲ, ಪ್ರತಿಭೆಯ ವಿದ್ಯುಲ್ಲತೆ. ಐಡಿಯಾ ಹೇಳ್ತೀನಿ ಕೇಳಿ. ನವದಂಪತಿಗಳು ಶಾಪಿಂಗ್‌ಗೆ ಹೊರಟಿದ್ದಾರೆ.

ಆಕೆ—ಶುರುವಾಯ್ತು. ತರ್ಕಾರಿ ತೊಗೊಂಡು ಬರ್ತಾರೆ ನವದಂಪತಿಗಳು. ನವ್ಯ ಕಾವ್ಯ.

ಪ್ರೇ.—ಅಲ್ಲಾ ವಿದ್ಯುಲ್ಲತೆ–ಬ್ಯೂಟಿ ಶಾಪಿಂಗ್‌ಗೆ ಹೋಗ್ತಾ ಇದ್ದಾರೆ.

ಆಕೆ—ಸರಿ, cosmetics ಎಲ್ಲಾ purchase ಮಾಡ್ಕೊಂಡು ಬರ್ತಾರೆ.

ಪ್ರೇ.—ಅದು ನವ್ಯ ಆಗೋದಿಲ್ಲಾ, ವ್ಯಂಗ್ಯಾನೂ ಆಗೋದಿಲ್ಲ.

ಆಕೆ—ಮತ್ತಿದೆಂಥ ಬ್ಯೂಟಿ ಶಾಪಿಂಗ್ ಅಂತೀರಿ ?

ಪ್ರೇ.—ಆಕೆಗೆ ಮೂಗು ಹ್ಯಾಗಿರ್ಬೇಕೋ ಹಾಗಿರ್ಬೇಕು. ಕಣ್ಣು ಹ್ಯಾಗಿರ್ಬೇಕೋ ಹಾಗಿರ್ಬೇಕು. ಗಂಡ ರಸಿಕ ನೋಡು ಕಾವ್ಯ ಓದ್ಕೊಂಡೋನು. ಕವಿಸಮಯದಲ್ಲಿ ಮೂಗು ಹ್ಯಾಗಿರ್ಬೇಕು ಅನ್ನೋದನ್ನ ತಿಳ್ಕೊಂಡಿರ್ತಾನೆ. ಮುಂದುವರಿದ ವಿಜ್ಞಾನ ದೇವರು ಸೃಷ್ಟಿಸಿದ ದೇಹದ ಸ್ಪೇರ್ ಪಾರ್ಟ್ಸನೆಲ್ಲಾ ಪೂರೈಸೋ ಜನತಾ ಬಜಾರ ಒಂದು ಸ್ಥಾಪಿಸಿರ್ತದೆ. ಅದಕ್ಕಾಗಿ ತನ್ನ ಧರ್ಮಪತ್ನಿಗೆ ಸಂಪಿಗೆ ಹಾಗೆ ಮೂಗಿರಲಿ ಅಂದ್ಬಿಟ್ಟು ಈ ಮೂಗನ್ನ ತೆಗೆದು ಆ ಮೂಗು ಹಾಕ್ತಾನೆ.

ಆಕೆ—ಸರಿ, ಯಾವ್ದೊ ಮೋಡ್ಡ್ಕಾ ಬಜಾರಗೆ ಹೋಗಿ ಸಿಗತಕ್ಕ ಸ್ಪೇರ್ ಪಾರ್ಟ್ಸ್ ತೊಗೊಂಡ್ಬಂದು ಕೆಟ್ಹೋದ ಕಾರ್‌ಗೆ ಹಾಕಿ ಸರಿಪಡಿಸ್ಕೊಂಡ್ಹಾಗೆ. ಅಂತೂ ನಿಮ್ಮ ಕಾವ್ಯದ ಧ್ವನಿ ಅರ್ಥವಾಯ್ತು.

ಪ್ರೇ.—ಕಾವ್ಯ ರೆಡಿ ಆದ್ಮೇಲೆ ನೋಡು.

ಆಕೆ—ಆಗಲಿ, ನಾಳೆ ಎರಡೂ ಕಾವ್ಯಗಳೂ ರೆಡಿಯಾಗಬಹುದಲ್ಲಾ.

ಪ್ರೇ—ನೀನು ಸ್ವಲ್ಪ ಹೊತ್ತು ಕೂತಿದ್ರೆ ವ್ಯಂಗ್ಯ ಕಾವ್ಯ ಈಗ್ಲೇ ಹೊಸೆದು ಬಿಡಬಹುದಾಗಿತ್ತು.

ಆಕೆ—ವ್ಯಂಗ್ಯಕಾವ್ಯದ ಪ್ರತಿಮೆ ಏನು ನಾನು ?

ಪ್ರೇ.—ಅಲ್ಲ, ನಿಮ್ಮ ಅಲ್ಲಾ ನಿನ್ನ, ಐಚ್ಛಿಕ ವಿಷಯ ವಿಜ್ಞಾನ ಅಲ್ಲವೇನು ?

ಆಕೆ—ಅದೇ ಪಂಚಾಯ್ತಿ ಈಗ ಬಂದದ್ದು.

ಪ್ರೇ.—ಅಲ್ಲ, the need of the hour is marriage between arts and science.

(ಇಬ್ಬರೂ ನಗುವರು.)

ಆಕೆ—ಹಾಗಾದ್ರೆ ನಾಳೆ ಇದೇ ಹೊತ್ತಿಗೆ ಇದೇ ಸ್ಥಳದಲ್ಲಿ—

(ಫ್ಲಾಶ್ ಎಂಡ್ಸ)

ನರ್ಸ—ಮಿಸ್ಟರ ಕುಮಾರ್–ಏನೊ ಖುಶಿ ಒಳಗೆ ಇದ್ದ ಹಾಗೆ ಕಾಣ್ತದೆ.

ಪ್ರೇ.—ಕನಸಿನ ಲೋಕದ ಖುಶಿ.

ನರ್ಸ—ಆದ್ರೂ ಪರವಾಗಿಲ್ಲ. ಇಲ್ಲಿ ಸಿಗದೇ ಇದ್ದ ಖುಶೀನ ಅಲ್ಲಿ ದೊರಕಿಸ್ಕೊಳ್ತೀರಲ್ಲಾ.

ಪ್ರೇ.—ಈ ಆಸ್ಪತ್ರೆ ರಸಿಕವಾತಾವರಣದಿಂದ ತುಂಬಿದ ಹಾಗೆ ಕಾಣುತ್ತೆ ನಂಗೆ.

ನರ್ಸ—ರಸಿಕ ಕಣ್ಣೆ ಅಂಥಾದ್ದು. So—ರೆಡೀನಾ ?

ಪ್ರೇ.—ಒಂದು ನಿಮಿಷ ಕೊಡ್ತೀರಾ ?

ನರ್ಸ—ಅವಶ್ಯವಾಗಿ–ನಾನೂ–

ಪ್ರೇ.—ನಿಂತ್ಕೊಳ್ಳಬಹುದು. ಕೊನೇದೊಂದು ಪ್ರಾರ್ಥನೆ ಸಲ್ಲಿಸಿ ಬರ್ತೀನಿ.

ನರ್ಸ—ಪ್ರಾರ್ಥನೆ ಅಂತ ಇಷ್ಟೇ ಹೇಳಿ. ಈ ನಿಮ್ಮ ಪ್ರಾರ್ಥನೆಯಲ್ಲಿ ನಮ್ಮ ಹಾರೈಕೇನೂ ಕೂಡಿದೆ ಅಂತ ತಿಳ್ಕೊಳ್ಳಿ.

ಪ್ರೇ.—ಅನಸ್ಥೆಟಾಯಜೇಶನ್ ಇದು ನನ್ನ ಮೊದಲನೆಯ ಅನುಭವ !

ನರ್ಸ—ಇದೂ ನಿಮ್ಮ ಕಾವ್ಯಕ್ಕೆ ಒಂದಿಷ್ಟು ಆಹಾರ ಆಗ್ಬಹುದು.

ಪ್ರೇ.—I say what exactly would be the state of consciousness? ಅಂದ್ರೆ, chloroform ತೊಗೊಂಡ ರೋಗಿಯ ಮನಃಸ್ಥಿತಿ ಹ್ಯಾಗಿರುತ್ತೆ ಅಂತ?

ನರ್ಸ—For all practical purposes he is dead ಅಂತ್ಲೇ ಹೇಳ್ಬೇಕು. ಆದ್ರೆ ಪ್ರಾಣ ಮಾತ್ರ ಆಡ್ತಾ ಇರುತ್ತೆ.

ಪ್ರೇ.—ಈ ಎಚ್ಚರ ತಪ್ಪಿಸೋ ವಿಧಾನದಲ್ಲಿ ಬೇಕಾದಷ್ಟು ಸುಧಾರಣೆಗಳೂ ಆಗಿವೆ ಅಲ್ವೆ ಈಗ?

ನರ್ಸ—Of course. ನಿಮಗೆ ಅದರಿಂದ ಯಾವ ಬಾಧೇನೂ ಇಲ್ಲಾಂತ ನಾನು ಹೇಳಬಲ್ಲೆ.

ಪ್ರೇ.—ನನ್ನ ಪ್ರಾರ್ಥನೆ ಪೂರೈಸಲೆ?

ನರ್ಸ—ಓ, ಡಾಕ್ಟರ ಬಂದ್ರೂ ಅಂತ ಕಾಣುತ್ತದೆ.

(Bridge Music)

ಡಾ.—ಡಾಕ್ಟರ ರಮೇಶ್—ಹ್ಯಾಗಿದೆ ಪೇಶಂಟ್?

ರಮೇಶ—ಡಾಕ್ಟರ, ನಿಜವಾಗಿನೂ ನಿಮಗೆ ಇದೊಂದು opportunity—ನೀವು ಹೇಳ್ತಾ ಇದ್ರೆಲ್ಲಾ ದೇವಪ್ರೇಷಿತ ಅಂತ. ನಿಮ್ಮ ತಪಶ್ಚರ್ಯ ಸಿದ್ಧಿಸೋದಕ್ಕೆ ಇದೊಂದು ಜೀವಪ್ರೇಷಿತ ಸಂಧಿ.

ಡಾ.—Thank you. ಆದರೆ ನಾನು ಪ್ರಥಮ ಕಸಿಹೃದಯ ಪ್ರಯೋಗ ಮಾಡಬೇಕು ಅಂತ ಜನ ಹೃದಯಾಘಾತದಿಂದ, ಅಥವಾ ಬೇರೆ ಆಕಸ್ಮಿಕಗಳಿಂದ ಸಾಯಲಿ ಅಂತ ನಾನು ಅಪೇಕ್ಷಿಸುವದಿಲ್ಲ.

ರಮೇಶ—ಅದು ಸರಿ. ಜನರಲ್ಲಿ ರೋಗ ಬೆಳೆಯಲಿ, ನನಗೆ ದುಡ್ಡೂ ಹೆಸರೂ ಬರ್ಲಿ ಅಂತ ಯಾವ ಡಾಕ್ಟರ ಬಯಸುತ್ತಾನೆ? ಆದರೆ ನೀವು ಈ ಕಸಿಹೃದಯ ಪ್ರಯೋಗದಲ್ಲಿ ನಡೆಸಿರುವ ಕೃಷಿ ಅಂದರೆ ಒಂದು ತಪಶ್ಚರ್ಯವೇ ಅದು.

ಡಾ.—Thank you for your kind words. ಕಳೆದ ವಾರ ಪ್ರಾಣಿಗಳ ಹೃದಯದ ಕಸಿ ಮಾಡಿದ ಪ್ರಯೋಗ ಅಂದರೆ You may not believe it. Dr. Ramesh ಅದು ನೂರೊಂದನೇದ್ದು.

ರಮೇಶ—ಮೊನ್ನೆ ಒಂದು ಆರ್ಟಿಕಲ್ ಓದತಾ ಇದ್ದೆ. ಮಾನವಹೃದಯದ ಕಸಿಮಾಡಿದ್ದ ಒಂದು ನಾಯಿ ಮನುಷ್ಯನ ಹಾಗೆ ನಡೆದುಕೊಳ್ಳಲಿಕ್ಕೆ ಆರಂಭಿಸಿ ಬಿಟ್ಟಿತಂತೆ.

ಡಾ.—ಚೆನ್ನಾಗಿದೆ. ಕೈಲಾಸಂ ಜೋಕು ಗೊತ್ತಿಲ್ಲವೇನು? ಯಾವನೊ ಒಬ್ಬ ಪುಣ್ಯಾತ್ಮ ದೇವರ್ನ ಕಾಣಬೇಕು ಅಂತ D-O-G ಒಂದನ್ನ ತಲೆಕೆಳಗೆ ಮಾಡಿ ಬಾಲದಿಂದ ಹಿಡಿದುಕೊಂಡು ನಿಂತಿದ್ದನಂತೆ.

ರಮೇಶ—(ನಕ್ಕು) ಅವನಿಗೆ ದೇವರು ಇಂಗ್ಲಿಷನಲ್ಲೇ ದರ್ಶನ ಕೊಟ್ಟಿರಬೇಕು. God ಆಗಿ, Joke apart, Doctor, ಕಸಿಹೃದಯದ ಪ್ರಯೋಗಗಳು ಅಂದರೆ mockery of nature ಅಂತೇನು ಟೀಕೆ ಮಾಡ್ತಾರೆ, ಅದನ್ನು ಸುಳ್ಳು ಮಾಡಬೇಕು ನಿಮ್ಮ ಪ್ರಯೋಗ.

ಡಾ.—ಡಾಕ್ಟರನ ಬದುಕು ಅಂದರೆ ಮಾನವತೆಯ ಸೇವೆ ಅಲ್ಲದೆ ಪ್ರಕೃತಿಯ ಅಣಕ ಅಲ್ಲ; ದೇವರ ಸೃಷ್ಟಿಗೆ ಮನುಷ್ಯ ಹಾಕೋ ಸವಾಲು ಅಲ್ಲ. ಪ್ರಪಂಚದಲ್ಲಿ ವೈದ್ಯಕೀಯ ಶೋಧಗಳು ನಡೆದಿರೋದು ಪ್ರಕೃತಿಯ ವಿಡಂಬನೆಯನ್ನು ಮಾಡೋದಕ್ಕಲ್ಲ; ಮಾನವತೆಗೆ ಸೇವೆಯನ್ನು ಸಲ್ಲಿಸೋದಕ್ಕಾಗಿ. ಮಾನವಸೇವೆಯ ಮೂಲಕ ಮಹಾದೇವನ ಸೇವೆ. ಮಾನವ ಸೇವೆ ಮಾಡಬೇಕು ಅನ್ನುವವನಿಗೆ ವೈದ್ಯಕೀಯ ಕ್ಷೇತ್ರಕ್ಕಿಂತ ಮಿಗಿಲಾದ ಇನ್ನೊಂದು ಕ್ಷೇತ್ರ ಇಲ್ಲ ಅಂತ ನನ್ನ ಭಾವನೆ.

ರಮೇಶ—You are right, Doctor. ಇಲ್ಲದಿದ್ದರೆ ಬೆವರು ಸುರಿಸಿ, ಬ್ರೈನ್ ಸವೆಯಿಸಿ, ರಕ್ತ ಸುಟ್ಟು ನೀವು ನೂರೊಂದು ಆಪರೇಶನ್ ಪ್ರಯೋಗ ನಡಸೋ ಅಗತ್ಯ ಏನಿತ್ತು?

ಡಾ.—ಕಸಿಹೃದಯದ ಆಪರೇಶನ್ ನಡೆಸುವ ರಿಹರ್ಸಲ್ ಚಾರ್ಟ ತಯಾರಿಸಲಿಕ್ಕೇನೆ ತಿಂಗಳಗಟ್ಟಲೆ ವೇಳೆ ಹಾಕಬೇಕಾಯಿತು.

ರಮೇಶ—ರಿಹರ್ಸಲ್‌ನಲ್ಲಿ ಕೂಡ ನಿಮ್ಮ ಮುಖದ ಗಾಂಭೀರ್ಯ ನೋಡಿದಾಗ ನೀವು ವೈದ್ಯಕೀಯ ಕ್ಷೇತ್ರದ ಒಬ್ಬ ತಪಸ್ವಿ ಹಾಗೆ ಕಂಡಿರಿ ನನಗೆ.

ಡಾ.—Thank you. I really feel flattered, Dr Ramesh.

ರಮೇಶ—ದೇವರು ನಿಮ್ಮಿಂದ ಇನ್ನೂ ಹೆಚ್ಚಿನ ಸೇವೆ ಸಲ್ಲುವಂತೆ ನಿಮ್ಮನ್ನು ಅನುಗ್ರಹಿಸಲಿ.

ಡಾ.—(ಭಾವನಾತ್ಮಕವಾಗಿ) ರಮೇಶ—ನಿಮ್ಮಂತಹ ಮೂವತ್ತು ಯುವಕ ಜನ ಡಾಕ್ಟರರು ನನ್ನ ಬೆಂಬಲಕ್ಕಿರೋವಾಗ ದೇವರು ಅನುಗ್ರಹಿಸೇ ಇದ್ದಾನೆ ಅಂತ ಭಾವಿಸಿಕೊಳ್ಳತೀನಿ. This is my red letter day....wish me good luck.

(Enters the Theatre.)

(Operation Theatreನ ಗಂಭೀರ ವಾತಾವರಣ. Fan and loud breathing of the patient. Assistants whispering.)

ಡಾ.—ಸಿಸ್ಟರ–ನೈಫ್....

ನರ್ಸ—ಯಸ್ ಡಾಕ್ಟರ.

ಡಾ.—Rib cutter.. .(Effect) Oh my ! We are just in time..Heart lungs machine ok ?

ನರ್ಸ—ಯಸ್ ಡಾಕ್ಟರ.

ಡಾ.—(loud breathing of the patient) Ok ! Sister, knife.

ನರ್ಸ—ಯಸ್ ಡಾಕ್ಟರ.

ಡಾ.—Swab please. Ribcutter..(Effect)

ಡಾ.—Oh my! we are just in time Breathing ok?

ರಮೇಶ—ಯಸ್.

ಡಾ.—ಮೋರ ಆಕ್ಸಿಜನ ಪ್ಲೀಜ್.

ಡಾ.—Nurse, blood pressure check up ಮಾಡಿ.

ಡಾ.—Mop please.

ಡಾ.—Ether ಹಾಕಿದ್ದೀರಾ ?

ನರ್ಸ—ಯಸ್ ಡಾಕ್ಟರ.

ಡಾ.—Dr. Ramesh, how is he progressing ?

ರಮೇಶ—Ok. Doctor.

ಡಾ.—Sister, chloromycetine.

ಡಾ—. Sister, gauze pieces ಎಣಿಸಿದ್ದೀರಾ ?

ನರ್ಸ—ಯಸ್ ಡಾಕ್ಟರ.

ಪ್ರೇ.— (loud breathing)....

(Sound effect)

(ಫ್ಲಾಶ್ ಬ್ಯಾಕ್)

ಆಕೆ—ಅದೇ ಸ್ಥಳ, ಹೇಳೆ ಮಾತ್ರ–

ಪ್ರೇ.—ತಡಮಾಡಿ ಬಂದವಳು ನೀನೆ.

ಆಕೆ—ಅದಕ್ಕೆ ಕಾರಣ ಇದೆ, ಸರ್.

ಪ್ರೇ.—ಕೂಡದು ಕೂಡದು, ಸರ್ ಅನ್ಬೂಕ್ಡದ್ದು ಅಂತ ಹೇಳ್ಲಿಲ್ಲವೇನು ?

ಆಕೆ—ಕ್ಷಮಿಸಿ, ನಾನು ಸ್ವಲ್ಪ ವಿಷಯ ಹೇಳ್ಬೇಕಾಗಿದೆ.

ಪ್ರೇ.—ಆದಕ್ಕಂತ್ಲೆ ಅಲ್ಲವೇನು ನಾವು ಮೀಟ ಮಾಡಿರೋದು ?

ಆಕೆ—ಕ್ಷಮಿಸಿ.

ಪ್ರೇ.—ಅಯ್ಯೊ, ಮಾತಿಗೊಮ್ಮೆ ಕ್ಷಮಿಸಿ. ಏನಿದೆ ಕ್ಷಮಿಸೋದಕ್ಕೆ?

ಆಕೆ—ನಮ್ಮ ತಂದೆ—

ಪ್ರೇ.—ಹೌದು—ನಾನು ಮೀಟ್ ಮಾಡ್ಬೇಕೆ ?

ಆಕೆ—ಇಲ್ಲ, ಬೇಕಿಲ್ಲ.

ಪ್ರೇ.—ಸರಿ ಹಾಗಾದ್ರೆ—ನೀನೆ ಎಲ್ಲಾ ಹೇಳ್ಬಿಟ್ಟಿದ್ದೀಯಲ್ಲಾ.

ಆಕೆ—ಹೇಳ್ಬಿಟ್ಟಿದ್ದೀನಿ—ಆದರೆ—

ಪ್ರೇ.—ಹೇಳ್ಬಿಡು ನನ್ನ ಮುಂದೂ.

ಆಕೆ—ನಮ್ತಂದೆಗೆ ಯಾಕೊ ಈ ಎರಡೂ ideologies ಸರಿಬೀಳತ ಇಲ್ಲ. ಕವಿಗಳು ಅಂದ್ರೆ opium eaters ಅಂತಾರ ನಮ್ತಂದೆ. ಕವಿಗಳು ಅಂದ್ರೆ ಕುಡುಕರು ಅಂತಾರೆ ನಮ್ತಂದೆ. ಕವಿಗಳು ಅಂದ್ರೆ ವ್ಯವಹಾರಕ್ಕೆ ಹೊರತಾದವರು ಅಂತಾರೆ ನಮ್ತಂದೆ. ಕವಿಗಳು ಅಂದ್ರೆ—

ಪ್ರೇ.—ವಿದ್ಯುಲ್ಲತೆ—don't give me the shock of my life.

ಆಕೆ—(ದುಃಖದಿಂದ) ನೀವು ಕ್ಷಮಿಸ್ಬಿಡಿ ಸರ್. ಇದ್ಯಾಕೊ ಹೊಂದಿಕೆ ಆಗಲಾರದು ಅಂತ ತೋರುತ್ತೆ.

ಪ್ರೇ.—ಹೇಳು ಲತಾ, ಆದದ್ದೇನು ಹೇಳ್ಬಿಡು.

(ಫ್ಲಾಶ್ ಬ್ಯಾಕ್)

ಆಕೆ—ಅಪ್ಪಾ, ಅವರು ಬಹಳ ಒಳ್ಳೇವರು ಅಪ್ಪ. ಕಾವ್ಯ ಮತ್ತು ವಿಜ್ಞಾನಗಳು ಮದುವೆ ಆಗ್ಬೇಕೂಂತಾರೆ.

ತಂದೆ—ಈ bachelorಗೆ professorship ಕೊಡ್ಲೇ ಬಾರ್ದು. Professors ಅಂದ್ರೆ ನರೆತ ಕೂದಲು, ಬಾಗಿದ ಬೆನ್ನು, ದೊಡ್ಡ ತಲೆ ಅಂತ ನನ್ನ ಕಲ್ಪನೆ. ಈಗಿನ ಪ್ರೊಫೆಸರ್ಸ್ ಎಲ್ಲಾ Romeosಪ.

ಆಕೆ—ಅಪ್ಪಾ, ಅವರ ವಿಷಯಕ್ಕೆ ಅಷ್ಟು ಹಗುರಾಗಿ ಮಾತಾಡ್ಬೇಡಿ. ನನಗೆ ಗೊತ್ತು. ನನ್ನ ಇಂಟರೆಸ್ಟ ಅವರಿಂದ ಹಾಳಾಗೋದಿಲ್ಲ ಅನ್ನೋದು ನಾನು

ಬಲ್ಲೆ. ಅವರ ಪ್ರತಿಭೆ, ಅವರ ಪಾಂಡಿತ್ಯ, ಅವರ ಮೇಧಾಶಕ್ತಿ, ಅವರ ವಿಚಾರವೈಖರಿ--

ತಂದೆ—ನಿನಗೆಲ್ಲೊ ಹುಚ್ಚು. ಆತ ನಿನಗೆ ಮೋಹನಾಸ್ತ್ರ ಬೀರಿರಬೇಕು. ಇದು ಕೂಡದು, ಇದು ಕೂಡದು.

ಆಕೆ—ನನ್ನ ಮೇಲೆ ನಿಮಗೆ ಪ್ರೀತಿ ಇಲ್ಲವೆ ಅಪ್ಪಾ?

ತಂದೆ—ಹು! ಎಂಥಾ ಪ್ರಶ್ನೆ? ತನ್ನ ಮಗಳ ಮೇಲೆ ತಂದೆಗೆ ಪ್ರೀತಿ ಇರೋದಿಲ್ವೆ? ನನ್ನ ಮಗಳು ಮತ್ತೊಬ್ಬ ಮೇಡಂ ಕ್ಯೂರಿ ಆಗ್ಬೇಕು—ಅಂತ ನನ್ನ ಅಭಿಲಾಷೆ—ಕ್ಯೂರಿ ದಂಪತಿಗಳ ಹಾಗೆ ನೀವೂನೂ ವಿಜ್ಞಾನದ ಪ್ರಪಂಚಕ್ಕೆ ದೊಡ್ಡ ಕಾಣಿಕೆ ಸಲ್ಲಿಸಬೇಕು ಅಂತ ನನ್ನ ಕೋರಿಕೆ. ನಮ್ಮ ನಾಡಿಗೆ ಇವತ್ತು Bose, Raman, Roy ಇಂತಹ ವಿಜ್ಞಾನಿಗಳು ಬೇಕು. ಕವಿಗಳು ಅಂದ್ರೆ ನಾಡನ್ನ ಹಾಳ್ಮಾಡೋ ಅಂತಹ opium eatersಉ—ಕವಿಗಳು ಅಂದ್ರೆ ಕುಡುಕರು—ಕವಿಗಳು ಅಂದ್ರೆ ಹುಚ್ಚರು. ನಾಡು ಬೆಳೆಯೋದು ಕವಿಗಳ ಕನಸಿನ ಹಾಡುಗಳಿಂದಲ್ಲ, ವಿಜ್ಞಾನಿಗಳ ಬೆವರಿನಿಂದ.

ಆಕೆ—ಅಪ್ಪಾ, ನಾನೀಗಾಗ್ಲೇ ಮಾತು ಕೊಟ್ಬಿಟ್ಟಿದ್ದೇನೆ.

ತಂದೆ—ಹಾಗಾದ್ರೆ ನಿನಗೂ ನನ್ನ ಮನೇಲಿ ಸ್ಥಾನವಿಲ್ಲ. ಹೇಳು, ಯಾವ್ದನ್ನ ಆರಿಸ್ಕೊಳ್ತಿ? ತಂದೆ ಬೇಕೋ, ನಿನ್ನ ಕವಿ ಬೇಕೊ? ಈ ಕ್ಷಣ ಈ ಸ್ಥಳದಲ್ಲಿ ಎರಡರಲ್ಲಿ ಒಂದು ನಿರ್ಣಯ ಆಗ್ಬೇಕು. ಹೇಳು.

ಆಕೆ—ಅಪ್ಪಾ....

ತಂದೆ—ಎರಡರಲ್ಲಿ ಒಂದು—ತಂದೆ ಬೇಕೋ....

ಆಕೆ—ಅಪ್ಪಾ....

ತಂದೆ—ಹೇಳು ಎರಡರಲ್ಲಿ ಒಂದು—ಆತ ಬೇಕೋ—ಅಪ್ಪ ಬೇಕೋ?

ಆಕೆ—ಅಪ್ಪಾ (ಬಿಕ್ಕುವಳು)

ತಂದೆ—ನನ್ನ ಮಗಳೆ, ಸಂತೋಷ—ಅಂತೂ ಅಪ್ಪನನ್ನೆ ಆರಿಸ್ಕೊಂಡಿ.

ಆಕೆ—ಅಪ್ಪಾ—

ತಂದೆ—ಇನ್ನಾಕು—ಆತನಿಗೆ ಇಲ್ಲ ಅಂತ ಹೇಳಿಕಳಿಸ್ಬಿಡು.

ಆಕೆ—ಅಪ್ಪಾ.

ತಂದೆ—ಆಗ್ಹೋಯಿತ್ತಿನ್ನ.

(Music Effect)

ಪ್ರೇ. —So..That's that..Goodbye.

ಆಕೆ—ಇಲ್ಲಾ ಸರ್.

ಪ್ರೇ.—ಇನ್ನು ಇದೆ ಏನು ?

ಆಕೆ—ನಿಮ್ಮ ಕಾವ್ಯ—

ಪ್ರೇ.—ಟೈಲರ್ ಮಾಡಿದ್ದಿರೇನು ಅಂತ ಕೇಳ್ತೀಯಾ ?

ಆಕೆ—ನನಗೆ ಹೇಳೋದಕ್ಕೆ ಅವಕಾಶ ಕೊಡಿ.

ಪ್ರೇ.—ನಿಮ್ಮ ಹೃದಯಾನೇ ಮಾತ್ನಾಡ್ತಾ ಇದ್ಯೆಲ್ಲಾ.

ಆಕೆ—ನನ್ನ ಹೃದಯ ಎಂದೆಂದಿಗೂ ನಿಮ್ಮದೆ.

ಪ್ರೇ.—ಥ್ಯಾಂಕ್ ಯೂ. (ವ್ಯಂಗ್ಯ ನಗೆ)

ಆಕೆ—ಒಂದಿಲ್ಲ ಒಂದು ದಿನ ನಾನು ಬಂದು ನಿಮ್ಮ ಹೃದಯದಲ್ಲೇ ವಾಸವಾಗಿರ್ತೇನೆ.

ಪ್ರೇ.—ಥ್ಯಾಂಕ್ ಯೂ! (ವ್ಯಂಗ್ಯವಾಗಿ ನಗುವನು.)

(ಫ್ಲಾಶ್ ಎಂಡ್ಸ)

ಡಾ.—So, everything is in its place.

ನರ್ಸ—Everything has a place and everything in its place.

ಡಾ.—ಪುಟ್ಟ ಹೃದಯ ಆದ್ರೂ, ಎಷ್ಟು smug ಆಗಿ ಕೂತಿದೆ.

ನರ್ಸ—In course of time ಸರಿಹೋಗಬಹುದು.

ಡಾ.—ಹೌದು, after all nature's law. (pause) Sister, more oxygen.

ನರ್ಸ—ಸ್ಪಂದನ ಮಾತ್ರ ಸ್ಪಷ್ಟವಾಗ್ತಾ ಇಲ್ಲಾ.

ಡಾ.—Correct; dont worry. Electrodes..(Effects) ಹಾಂ ಹಾಂ that is right.

ನರ್ಸ—ಡಾಕ್ಟರ, ಹೃದಯದ ಬಡಿತ ಆರಂಭವಾಯ್ತು.

ಡಾ.—Thank god....ಕಸಿಹೃದಯ ಕಣ್ತೆರೆಯಿತು. Nurse, check up the pulse.....

ನರ್ಸ—ಓಕೆ. ಡಾಕ್ಟರ್.

ಡಾ.—Breathing ? (Pause.)

ನರ್ಸ—ಓಕೆ.

ಡಾ.—Skin sutures ready....

ನರ್ಸ—ಯಸ್ ಡಾಕ್ಟರ....needle.

ಡಾ.—ಗುಡ್.

ನರ್ಸ—ಅಂತೂ ಕಸಿಹೃದಯ ಕಣ್ತೆರೆಯಿತು.

ಡಾ.—ಕುಮಾರ ಕಣ್ತೆರೆಯಬೇಕೀಗ.

(Music)

ಪ್ರೇ.—(ಮೆಲ್ಲಗೆ ಎಚ್ಚರಗೊಳ್ಳುತ್ತಾನೆ) ಡಾಕ್ಟರ್—

ಡಾ.—Yes, Mr. Kumar! how are you?

ಪ್ರೇ.—ಆಪರೇಷನ್ ಎಲ್ಲಾ ಪೂರೈಸಿತೆ, ಡಾಕ್ಟರ?

ಡಾ.—Yes, all complete and successful.

ಪ್ರೇ.—ಇಷ್ಟು ಬೇಗ? ಆಪರೇಷನ್ ಬಹಳ ಕಾಂಪ್ಲಿಕೇಟೆಡ್ ಅಲ್ವೆ?

ಡಾ.—ಕೈಚಳಕಕ್ಕೆ ಯಾವುದೂ ಕಾಂಪ್ಲಿಕೇಟೆಡ್ ಅಲ್ಲ. ಎದೆಯನ್ನು ಸೀಳಿ ರಿಬ್ ಕತ್ತರಿಸಿ ರಕ್ತನಾಳಗಳನ್ನು ಬೇರ್ಪಡಿಸಿ suitable ಹೃದಯವನ್ನು ಜಾಗ್ರತೆಯಾಗಿ ದೇಹದಿಂದ ಬಿಡಿಸಿಕೊಂಡು heart lung machine ಮೂಲಕ ಅದಕ್ಕೆ ಆಕ್ಸಿಜಿನೇಟೆಡ್ ರಕ್ತ ಪೂರೈಸಿ ತಂಪಾಗಿಸಿ ಒಂದು ಡಿಗ್ರಿಗೆ ತರಲಾಯಿತು. ರಕ್ತ ಪರೀಕ್ಷೆಯೂ ಆಯಿತು. ನಿಮ್ಮ ರಕ್ತಕ್ಕೆ ಸರಿಹೋಗಬೇಕು ನೋಡಿ—

ಪ್ರೇ.—ಸರಿಹೋಯಿತ?

ಡಾ.—Oh splendidly! ನಿಮ್ಮ ನಿರುಪಯೋಗಿ ಹೃದಯವನ್ನು ನಿಮ್ಮ ಎದೆಗುಂಡಿಗೆಯಿಂದ ಎತ್ತಿಕೊಂಡು ಬದಲಿ ಹೃದಯವನ್ನು ಜೋಡಿಸಲಾಯಿತು.

ಪ್ರೇ.—ಹೊಸ ಹೃದಯ ತುಡಿಯಲಿಕ್ಕೆ ಆರಂಭಿಸಿಬಿಟ್ಟಿತೆ?

ಡಾ.—ಓ! ಎಷ್ಟು ಸರಿಯಾಗಿ ಪ್ರಶ್ನಿಸಿದಿರಿ, ಕುಮಾರ? ಒಮ್ಮೆಲೆ ಕಸಿಹೃದಯ ಕಣ್ತೆರೆಯಲಿಲ್ಲ. ಇಲೆಕ್ಟ್ರೋಡ್‌ನಿಂದ ಆ ಪುಟ್ಟ ಹೃದಯಕ್ಕೆ ಶಾಕ್ ಕೊಡಬೇಕಾಯಿತು. ನಿಮಗಾಗೇ ದೇವದತ್ತವಾಗಿ ಬಂದ ಹೃದಯ ಅದು. ನಿಮ್ಮ ಗುಂಡಿಗೆಯಲ್ಲಿ ಬೆಚ್ಚನೆ ಕುಳಿತುಕೊಂಡಿತು. ಸುಂದರ, ಸುಕುಮಾರ ಪುಟ್ಟ ಹೃದಯ ಅದು.

ಪ್ರೇ.—ಹೇಳಿ ಡಾಕ್ಟರ ಹೇಳಿ, ಆ ಹೃದಯ ಯಾರದು?

ಡಾ.—ಆ ಹೃದಯ ನಿಮಗಾಗೇ ತಪಶ್ಚರ್ಯೆ ಮಾಡುತ್ತಿದ್ದಿರಬೇಕು. ಯಾಕೆ ಈ ದಿಸೆಯಲ್ಲಿ ಆಕೆ ಬಂದಳೊ. ಯಾಕೆ ಕಾರ್ ಆಕಸ್ಮಿಕಕ್ಕೆ ಬಲಿ ಆದಳೊ

ಪ್ರೇ.—ಡಾಕ್ಟರ್—

ಡಾ.—ಯಾಕೆ ಆಕೆ ಕಣ್ಮುಚ್ಚಿದಳೊ.

ಪ್ರೇ.—ಡಾಕ್ಟರ್—

ಡಾ —ಯಾಕೆ— ?

ಪ್ರೇ.—ಡಾಕ್ಟರ್, ಡಾಕ್ಟರ್—

(' ಎಂದಾದರೂ ಒಂದು ದಿನ ಬಂದು ನಿಮ್ಮ ಹೃದಯದಲ್ಲೇ ವಾಸವಾಗಿರ್ತೇನೆ' ಎಂಬ ಶಬ್ದಗಳು ದೂರಿಂದ ಪ್ರತಿಧ್ವನಿಸುತ್ತವೆ.)

ಪ್ರೇ.—ನನಗೆ ಹೃದಯವನ್ನು ನೀಡಿದ ದಾನಿಯ ಹೆಸರೇನು, ಡಾಕ್ಟರ ?

ಡಾ.—ಹೇಳಿದೆನಲ್ಲ, ದೇವಪ್ರೇಷಿತ ಅಂತ – ಹೆಣ್ಣು ಹೃದಯ.

ಪ್ರೇ. – ಹೌದು, ಶ್ರೀರಾಮನ ಪಾದಸ್ಪರ್ಶದಿಂದ ಕಲ್ಲುಹೃದಯ ಹೆಣ್ಣು ಹೃದಯವಾಯ್ತು.

ಡಾ. – ಆದರೆ ಹೆಣ್ಣು ಹೃಯದ ಮಾತ್ರ ಎಂದಿಗೂ ಕಲ್ಲುಹೃದಯ ಆಗೋದಿಲ್ಲ ನೋಡಿ.

ಪ್ರೇ. – ಹಾಗಂತೀರಾ ? – ನಾನು ನಂಬಲಾರೆ.

ಡಾ. – ನಿಮಗೆ ಅನುಭವ ಇಲ್ಲಾಂತ ಹೇಳಬೇಕಷ್ಟೆ.

ಪ್ರೇ. – ಹಾಗಂತೀರಾ ?– ಹೇಳಿ ಡಾಕ್ಟರ, ಈ ಹೃದಯವನ್ನು ದಾನಮಾಡಿದ ಆ ಉದಾರ ವ್ಯಕ್ತಿ ಯಾರು ?

ಡಾ. – ಆಕೆಗಿಂತ ಆಕೆಯ ತಂದೆ ಉದಾರಿ ಅನ್ನಬೇಕು.

ಪ್ರೇ. – ಯಾವ ತಂದೆ ?

ಡಾ. – ಕಮಲೂನ ತಂದೆ.

ಪ್ರೇ. – ಡಾಕ್ಟರ ಡಾಕ್ಟರ – ಯಾವ ಕಮಲೂ ತಂದೆ ?

ಡಾ. – ನಿಮ್ಮ ಹೃದಯದಲ್ಲಿರೋ ಕಮಲೂ ತಂದೆ !

ಪ್ರೇ. – ಯಾವ ಕಮಲೂ – ಓ ! (voice echos—'ಎಂದಾದರೊಂದು ದಿನ ಬಂದು ನಿಮ್ಮ ಹೃದಯದಲ್ಲೇ ವಾಸವಾಗಿರುತ್ತೇನೆ.')

ಡಾಕ್ಟರ್, ಕಮಲೂ ಈಗಿಲ್ವೆ ?

ಡಾ.—ಇಲ್ಲಾ ಮಿಸ್ಟರ ಪ್ರೇಂ, ಕಮಲೂ ಈಗಿಲ್ಲ. ಆಕೆ ತಂದೆ ಮಾನವತಾ ಮೂರ್ತಿ.

ಪ್ರೇ.—ಒಂದು ಹೆಣ್ಣು ಹೃದಯ, ಇನ್ನೊಂದು ಕಲ್ಲುಹೃದಯ.

ಡಾ.—ಕಲ್ಲುಹೃದಯ ಯಾರಂತೀರಿ ?

ಪ್ರೇ.—ತಂದೆ ಅನ್ನುವ ಹೃದಯ.

ಡಾ.—ಛೆ ಛೆ ಛೇ—ತಂದೆ ಅನ್ನೋ ಹೃದಯ ಕಲ್ಲುಹೃದಯ ಅಲ್ಲ. ಕಣ್ಣಿನ ಹೃದಯ.

ಪ್ರೇ.—ಓ—ಇದೇನೊ mystery.

ಡಾ.—ಅಲ್ಲಾ history, ತಂದೆಯ ಉದಾರ ಒಪ್ಪಿಗೆ ಒಂದು history. ಹೆಣ್ಣು ಹೃದಯದ ಕಸಿ ಒಂದು history. A successful operation ಅದೂ ಒಂದು history ! ನಿಮ್ಮ ಪುನರ್ಜನ್ಮ . .

ಪ್ರೇ.—History ! Repeat . . ಆಗದ history.

ಡಾ.—ಇಂತಹ ಯಶಸ್ವಿ ಶಸ್ತ್ರಕ್ರಿಯೆಗಳು ರಿಪೀಟ ಆಗಲೇಬೇಕಾದ historyಗಳು

ಪ್ರೇ.—ಅದಕ್ಕೆ ನನ್ನ ಸಂಪೂರ್ಣ ಒಪ್ಪಿಗೆ.

ಡಾ.—ಹಾಗಾದರೆ ?

ಪ್ರೇ.—ಹಾಗಾದರೆ ಡಾಕ್ಟರ—ಹೇಳಿ ಅಥವಾ ನನಗೆ ಫೋಟೊ ಇದ್ದರೆ ತೋರ್ಸಿ, ಈ ಕಮಲೂ ಯಾರೂ ಅಂತ.

ಡಾ.—Don't worry. ವಿಶ್ರಮಿಸಿಕೊಳ್ಳಿ. ಈ ಕಣ್ತೆರೆದ ಕಸಿಹೃದಯ ಕನಸಿನ ಲೋಕದಲ್ಲಿ ನಿಮ್ಮೊಡನೆ ಮಾತನಾಡತದೆ....see you again. ವಿಶ್ರಮಿಸಿ... (exits)

ಪ್ರೇ.—ಕಣ್ತೆರೆದ ಕಸಿಹೃದಯ .... ಕನಸಿನ ಲೋಕ .... ಮಾತನಾಡುವುದು ! ಕಮಲೂ....ಕಮಲೂ....ಸಂಶಯವಿಲ್ಲ. ಕಮಲೂನೇ... ನನ್ನ ವಿದ್ಯುಲ್ಲತಾನೇ ....ಆದರೆ ಕಮಲೂ, ನೀನಿನ್ನು ಇಲ್ಲವೇ ?....

(Dream Effects)

ಕಮಲೂ ಧ್ವನಿ—ಇದ್ದೀನಿ. ಇಲ್ಲ ಅಂತ ಅಂದವರು ಯಾರು ?........ಎಂದಿಲ್ಲೊಂದು ದಿನ ಬಂದು ನಿಮ್ಮ ಹೃದಯದಲ್ಲೇ ವಾಸವಾಗಿರತೀನಿ ಅಂತ ಹೇಳಲಿಲ್ವೆ ?

ಪ್ರೇ. – ಕಮಲೂ, ನನ್ನ ಹೃದಯದಲ್ಲಿ ಬರೋದಕ್ಕೆ ಮುಂಚೆ –

ಕಮಲೂ ಧ್ವನಿ—ಬರೋದಕ್ಕೆ ಮುಂಚೆ—ಹಾ—ತಡೀರಿ ಜ್ಞಾಪಿಸಿಕೊಳ್ತೀನಿ—ಹೌದು, ನನಗೆ ಸುದ್ದಿ ಬಂತು. ನಿಮ್ಮನ್ನು ಆಸ್ಪತ್ರೆಯಲ್ಲಿ ಸೇರಿಸಿದ್ದಾರೆ ಅಂತ ಯಾರೋ ಹೇಳಿದ ಹಾಗಾಯ್ತು. ನಿಮ್ಮ ಹೃದಯದ ಶಸ್ತ್ರಕ್ರಿಯೆ ಅಂತ.

(ಫ್ಲಾಶ್ ಬ್ಯಾಕ್)

ಕಮಲು – (Excited) ಏನು ? ಇಂದೇ ಆಪರೇಷನ್ ಏ? ಇಷ್ಟು ಹೊತ್ತಿನಲ್ಲಿ ಹ್ಯಾಗೆ ಹೋಗೋದು? ಗಾಡಿ, ಟ್ಯಾಕ್ಸಿ ಯಾವ್ದೂ ಸಿಕ್ಕೊ ಹಾಗಿಲ್ಲ. ನಾನು ಹೋಗ್ಲೇಬೇಕು. ಅವರನ್ನ ಕಾಣ್ಲೇಬೇಕು. ಅವರು ನನಗೆ ಪೂಜ್ಯರು. (words echo ! ವಿಜ್ಞಾನ ಮತ್ತು ಕಾವ್ಯದ marriage ಆಗ್ಬೇಕು—True arts and true science are the products of sacrifice...)

(Car moving)

ಇಷ್ಟು ಹೊತ್ತಿನಲ್ಲಿ ಯಾವ carಊ ಸಿಕ್ಕೋ ಹಾಗಿಲ್ಲವಲ್ಲಾ ! ಹೌದು, ನಡೀತಾನೆ ಹೋಗ್ತೀನಿ! ಪಾದಯಾತ್ರೆ ಮಾಡ್ತಾ ಹೋಗ್ತೀನಿ! ಓಡ್ತಾ ಹೋಗ್ತೀನಿ! ಪ್ರೊಫೆಸರ ಕುಮಾರ, ಪ್ರೇಮಕುಮಾರ, ಪ್ರೇಮ್—

(ಚಿಟ್ಟನೆ ಚೀರಿ ಬೀಳುತ್ತಾಳೆ-ಕಾರ್ ಆ್ಯಕ್ಸಿಡೆಂಟ.)

(Flash ends)

ಕಮಲು—ಹೀಗೆ ಯಾರನ್ನ ಕಾಣ್ಬೇಕು ಅಂತ ಬಂದ್ನೋ ಅವರನ್ನೇ ಕಾಣದೆ, ಕಣ್ಮರೆಯಾಗಿ ಹೋಗ್ಬಿಟ್ಟೆ,

ಪ್ರೇ.—ಅಂದರೆ ಕಮಲೂ, ನನ್ನ ವಿದ್ಯುಲ್ಲತೆ, ನೀನೇನಾದ್ರೂ ನಿನ್ನ ಪರಿವರ್ತಿತ ಸಂಕಲ್ಪದ ವಿಷಯ ಹೇಳೋದಕ್ಕೆ ಬಂದಿದ್ಯೇನು ?

ಕ.—ಪರಿವರ್ತಿತ ಸಂಕಲ್ಪ ! ಸಂಕಲ್ಪವೇನೊ ಪರಿವರ್ತಿತವಾಗಿರಲಿಲ್ಲ.

ಪ್ರೇ.—ಮತ್ತೆ ?

ಕ.—ನಾನು ಪರಿವರ್ತಿತಳಾಗಿದ್ದೆ. ಸಂಕಲ್ಪ ನನ್ನ ತಂದೆಯದಾಗಿತ್ತು. ಆದರೆ ತಂದೆಯ ಉಕ್ಕಿನ ಸಂಕಲ್ಪವನ್ನು ತೊರೆದು ಬಂದಿದ್ದೆ. Iron curtain ಹರಿದು ಬಂದಿದ್ದೆ.

ಪ್ರೇ.—ಕಮಲೂ, ನಿನಗೆ ನಾನು ಅಂದೇ ಮಾರ್ಹೋಗ್ಬಿಟ್ಟದ್ದೆ.

ಕ.—ನಾನೂ—ಆರ್ಟ್ಸ ಮತ್ತು ಸೈನ್ಸಗಳ ಮದುವೆ ಆಗ್ಬೇಕು ಅಂದಿದ್ದರಲ್ಲಾ, ಆಗಲಿ—

ಪ್ರೇ.—ಹಾಗಾದ್ರೆ, ನಿನ್ನ ಹೃದಯ ಪರಿವರ್ತನೆ ಆಗ್ಬಿಟ್ಟತ್ತು.

ಕ.—ನನ್ನ ಹೃದಯಪರಿವರ್ತನೆ ಆದದ್ದರ ಪರಿಣಾಮಾನೇ ಇದು.

ಪ್ರೇ.—ನನ್ನ ಹೃದಯವನ್ನು ಪರಿವರ್ತನೆ ಮಾಡ್ಬಿಟ್ಟೆ ಅಲ್ಲವೆ?

ಕ.—ಹೌದು – Physically ಪರಿವರ್ತನೆ ಮಾಡ್ಬಿಟ್ಟೆ.

ಪ್ರೇ.—ಇಲ್ಲಿ ಮಾತ್ರ ನಿನ್ನ ತಂದೆಯ ಅಧಿಕಾರ ನಡೆಯದಿದ್ರೂ ಒಪ್ಪಿಗೆ ಮಾತ್ರ ದೊರೆತಿದೆ.

ಕ.—ಒಪ್ಪಿಗೆ? ನನ್ನ ತಂದೆ ಒಪ್ಪಿಗೆ ದೊರೆತಿದ್ಯೆ ?

ಪ್ರೇ.—ಹೌದು ಕಮಲೂ. ಎರಡು ಜೀವಗಳಲ್ಲಿ ಒಂದಾದ್ರೂ ಜೀವ ಬದುಕಲಿ ಅಂದ್ಬಿಟ್ಟು ನಿಮ್ಮ ತಂದೆ ಅಪೂರ್ವ ಮಾನವತೆಯನ್ನು, ಅದ್ವಿತೀಯ ಔದಾರ್ಯ ವನ್ನು ತೋರಿದರು ಅಂತ ಡಾಕ್ಟರು ಹೇಳಿದ್ರು.

ಕಮಲು—ಓ! ಅಂತೂ ನನ್ನ ತಂದೆ ನನ್ನನ್ನು ಕಣ್ವರ ಹಾಗೆ ಕಳಿಸಿಕೊಟ್ರ ಅನ್ನಿ, ನಿಮ್ಮ ಹೃದಯಮಂದಿರಕ್ಕೆ.

ಪ್ರೇ.—ನಿರಂಕುಶವಾದ ಪ್ರೇಮಸಾಮ್ರಾಜ್ಯ ನಮ್ಮದು. ಇಲ್ಲಿ ಮಾತು ಪ್ರೇಮದ ಅದ್ವೈತ ಅನುಭವವನ್ನು—

ಕ.—ಅದ್ವೈತ ? ಒಳ್ಳೆ ದಾರ್ಶನಿಕರು ನೀವು. ಪ್ರೇಮದಲ್ಲಿ ಅದ್ವೈತವನ್ನು ಕಂಡ ಆಧುನಿಕ ಶಂಕರಾಚಾರ್ಯರು.

ಪ್ರೇ.—ಶಂಕರಾಚಾರ್ಯರು, ಜಗತ್ತು ಮಾಯೆ ಅಂದ್ರು. ನಾವು ಪ್ರೇಮದ ಅದ್ವೈತವನ್ನು ಅನುಭವಿಸುತ್ತಿರುವ ಸತ್ಯ ಜಗತ್ತಿನ ಜೀವಿಗಳು. ನಮಗೆ ಜಗತ್ತು ಶೂನ್ಯದಲ್ಲಿ ಶಿವಮಯ.

ಕ.—ಸುಂದರವಾಗಿ ಮಾತಾಡ್ತೀರಿ ನೀವು. ನನಗೆ ನಿಜವಾಗಿಯೂ ಚಿರಂಜೀವಿಯ ಪಟ್ಟ ದೊರಕಿದ ಹಾಗಾಯ್ತು. ನೀವು ಮುಪ್ಪಾದರೂ ನಾನು ಮುಪ್ಪಾಗು ವುದಿಲ್ಲ.

ಪ್ರೇ.—ಹೌದು. ನಾನು ಮೃತನಾದರೂ ನೀನು ಅಮೃತಳು—ಅಮರಳು.

ಕ.—ಬಿಡ್ತೂ ಅನ್ನಿ.

ಪ್ರೇ.—ಅಯ್ಯೊ, ನನ್ನ ಕಮಲೂ, ನೀನು ಶೂನ್ಯದಲ್ಲಿ ಶೂನ್ಯವಾಗಿ ಹೋದರೂ ನನ್ನ ಮರಣದ ಮಾತಿಗೆ "ಬಿಡ್ತೂ" ಅಂತೀಯ ? ನಿನ್ನ ಮನಸ್ಸು ಚಿನ್ನ ದಂತಹದು.

ಕ.—ಚಿನ್ನವಾಗಿರೋದು ಬೇಡ.

ಪ್ರೇ.—ಮತ್ತೆ ?

ಕ.—ಚಿನ್ಮಯುವಾಗಿರೋಣ.

ಪ್ರೇ.—ಓ ಕಮಲೂ—

(Bridge Music)

ತಂದೆ—Patient ಹ್ಯಾಗಿದ್ದಾರೆ, ಡಾಕ್ಟರ ?

ಡಾ.—He is progressing. ನೀವು ಬೆಳೆಸಿದ ಜೀವ ಅದು.

ತಂದೆ—ನೋಡ್ಬಹುದೆ ?

ಡಾ.—ಒಂದು ನಿಮಿಷ.—ಆದ್ರೆ ವಿಶೇಷ emotional ಆಗ್ಬೇಡಿ, ಆಯ್ತು. Sister (Exit)..

(Ward atmosphere)

ಡಾಕ್ಟರ—ಮಿಸ್ಟರ ಪ್ರೇಂಕುಮಾರ.

ಪ್ರೇ.—ಬನ್ನಿ ಡಾಕ್ಟರ. ಪ್ರೇಮದ ಅದ್ವೈತ ಅಂದ್ರೇನು ? ಅದರ ಸಾಕ್ಷಾತ್ಕಾರ ಕಂಡುಕೊಂಡೆ.

ತಂದೆ—(ಚಿರಗಾಗಿ) ಯಾರದು ?

ಪ್ರೇ.—(ಚಿರಗಾಗಿ) ಯಾರು ?

ತಂದೆ—ಪರಿಚಯುದ ಧ್ವನಿ ?

ಪ್ರೇ.—ಹೌದು, ಪರಿಚಯುದ ಧ್ವನಿ—ಕಮಲೂ ತಂದೆ !

ತಂದೆ—ಕಮಲೂ ಪ್ರೇಮ.

ಡಾ.—ಅದ್ವೈತ ಪ್ರೇಮ.

ತಂದೆ—ಡಾಕ್ಟರ, ನೀವು ನನಗೆ ಮೋಸ ಮಾಡಿದ್ದೀರಿ. ನಾನು ವಂಚಿತ. ಈ ವಂಚಕನಿಗೆ ಈ ಹಂತಕನಿಗೆ ಕಮಲೂನ ಹೃದಯುದಾನ. ಅದು ಸಾಧ್ಯವಿಲ್ಲ, ಡಾಕ್ಟರ. I don't care if the patient dies.

ಪ್ರೇ.—ಪ್ರೇಮಿಗಳಿಬ್ಬರೂ ಅಮರರಾಗಿ ಹೋಗಿದ್ದಾರೆ.

ತಂದೆ—ನೀನು ವಂಚಕ—

ಡಾ.—Mr.....Please.

ತಂದೆ—ನೀನು ಹಂತಕ—

ಡಾ.—Oh ! please.

ತಂದೆ—ನೀನು ಘಾತಕ. You should not survive.

ಡಾ. – (Excitedly) Please remove him nurse. ಯಾರಲ್ಲಿ?

ತಂದೆ – ನೊ ನೊ ನೊ – (exits.) ನನ್ನ ಶಾಪ ನಿನಗೆ ತಟ್ಟದೆ ಹೋಗದು!

ಡಾ. – ಮಿಸ್ಟರ ಪ್ರೇಮಕುಮಾರ್.

ಪ್ರೇ. – ಕಮಲೂ....

ಡಾ. – ಮಿಸ್ಟರ ಪ್ರೇಂಕುಮಾರ....

ಪ್ರೇ. – ನನ್ನ ಕಮಲೂ, ನೀನು ಮಾತ್ರ ನನ್ನ ಬಿಟ್ಟು ಹೋಗ್ಬೇಡ.

ಡಾಕ್ಟರ – ಮಿಸ್ಟರ ಕುಮಾರ –

ಪ್ರೇ. – ನನ್ನ ಚಿನ್ಮಯೀ –

ಡಾ. – ಮಿಸ್ಟರ ಪ್ರೇಂ –

ಪ್ರೇ. – (ಕುಸಿಯುತ್ತ, ಕ್ಷೀಣ ಧ್ವನಿಯಲ್ಲಿ) ಅ – ದ್ವೈ – ತ – ಪ್ರೇ – ಮ –

ಡಾ. – ನರ್ಸ –

ಪ್ರೇ. – (ಕ್ಷೀಣವಾಗಿ) ಶೂ – ನ್ಯ – ದ – ಲ್ಲಿ ಅ – ದ್ವೈ – ತ...

ಡಾ. – He is collapsing . . nurse . . oxygen . . quick, quick.

(೧೨ ಗಂಟೆ ಹೊಡೆಯುತ್ತದೆ.)

ಅನೌನ್ಸರ್ : ಕವಿ ಹೃದಯ ಕಣ್ತೆರೆದಿತ್ತು.
ಎನ್ಕೆ ಅವರ ತ್ರೈಮಾಸಿಕ ವಿಶೇಷ ನಾಟಕ ಕೇಳುತ್ತಿದ್ದಿರಿ.

★ ಎನ್ಕೆ

ಜಾಡು

೧

ಮುದಿತನದ ಮುದ್ದು, ಮುದ್ದೆಯಾದರೇನಂತೆ
ಬೇಕಲ್ಲ ಅರಗಿಸುವ ತಾಕತ್ತು.
ಐದುಸುರಿಗೊಮ್ಮೆ ಯಮಭೇಟ
ರಕ್ತಕಾಸ ಪಾಶ ಬಂಧಿತ. ವಯ ಕಿರಿದೆ?
ಸೆಳ್ಳುಗುರ ಕೈಮುಟಿಗೆ ಹಿಡಿ ಹಿಚುಕು ಹಿಗ್ಗು ಮೊಲೆ-
ಮೂಗಿನೊಳ ಅಳಕು ಬೆಳ್ಳಿಕಡ್ಡಿಯ ಹೀರು ಹಾರು
ಸವರಿಕೋ ರತಿ, ವಿರತಿ, ಸಂಪ್ರೀತಿ ಸಾರ ನಸು-
ಗುನ್ನಿ. ಕನ್ನೆಯ ಕರೆದು ನಿಬಾಯಿಸು—
ಪ್ರಕೃತಿ ವಿಕೃತಿ ಸಂಸ್ಕೃತಿ ಪಟ್ಟಗಳ ಜವಾಬ್ದಾರಿ
ಭಾರ ನಿನಗೆ!
ನಿಯತ ಜನ್ಯರಾಗದ ಜೋಪಡಿಯ ಬೆಂಕಿ ಧಗಧಗಿಸಲಿ
ಅಲ್ಲಿ ಅಲ್ಲಿ, ಅಲ್ಲಲ್ಲಿ.
ಒಳಮನೆಯ ಗರ್ಭಗುಡಿ ಸುಟ್ಟ ಸುಡುಗಾಡಿನಲಿ
ಬಿಮ್ಮನಿಸಿದಾ ಹೆಣ್ಣು! ಛೀ ಮುಚ್ಚು ಕಣ್ಣು.
ನವರಸದ ಬಿಸಿಬಿಸಿಯ ತವದೊಣೆಯು ತವುಗಿ ತಾ
ಸುಟ್ಟ ಕುಂಡಿಯ ನೆಕ್ಕಿ ಬರುತಿಹುದು ಬೆಕ್ಕು.
ಅದು–ನೀ–ಅದೆ, ಅದು ಅದಕೆ ನೀ ನಿನಗೆ
ಅಪರಾಧಿ ನೀನಲ್ಲ. ನೀನು ಖೋಜಾ
ಎಂದಿನಂತೆ ತಾಜಾ
ಮಜಾ ಮಾಡು ಯುಗಯುಗಾಂತ ಬರುವನಕ
ಸಹಜ.

೨

ವೇದ ಮಂತ್ರ ಜಪತಪ–ಭೋಗ
ಗೆರೆ ತೀಡು, ಆಡು ಸರಗೆರೆ ಆಟ
ಬರಲಿಲ್ಲ ನಾರದ.
ನಾಪಿತನ ಹಿಡಿತಕ್ಕೆ ಸಿಕ್ಕ ನಾರಕ ತಲೆಗೆ
ನಾದಾರಿ ಪಟ್ಟ.

ನಿರ್ವಾಣ ಆಶೆಯಲೆ ನಿರ್ವಿಣ್ಣ ಭಾವ.
ಕೊನೆಗೋ ! ಇದೆಯಲ್ಲ ; ಹೆದ್ದಾರಿ
ನಿವೃತ್ತಿಯ ರಹದಾರಿ, ನಿರ್ದಾಯ ಭೋಗದೂಟ.
ಪುರೋಗಮನ ವ್ರತ ಪುಲಕದೆದೆಯಲಿ
ಹುಣ್ಣು ಹಕ್ಕಳೆಗಟ್ಟಿ ತಿಂಡಿ ಬಿಟ್ಟಿದೆ.
ತುರಿಕೆಯಲಿ ರಸ ಒಸರಿ ಹೊಸ ಘಾಯದುರುಪು
ಮೆಣಸು ಪುಡಿ ಬೇಡಿ
ಬತ್ತಾಸು ನೆನಪು ಬತ್ತಿಸಿಕೊಂಡ
ಬತ್ತು ಕಂದಿ. ತಿರುಗುತಿದೆ ಬಣವೆ ಬಣವೆ
ಬದನಾಮಿ.

ಜಾಡ ಹಿಡಿ,–ಬೇಡ,–ಬಿಡು
ಜಾಡದೊಳಗೆ ಸಿಕ್ಕ ಕೀಟದ ಕುತ್ತುಸುರ
ಬಾರುಕೋಲು ಬಾರು
ನನ್ನೆದಿಗೆ ಮೂಡಿತಿದೊ ! ಬಯ್ತು ಬಯಕೆ
ಹುಡಿಗೂಡಿದನ್ಯಾಯಕ್ಕೆ
ಕೋರ್ಟಿ ಕೊನೆತನಕ ದರಖಾಸ್ತು.
ಬಧಿರನ ಮುಂದೆ ಬವಣೆ ಬದ್ದವಣ ಸಾಕು.

★ ಸೋಮಶೇಖರ ಇಮ್ರಾಪೂರ

ಶನಿವಾರಸಿದ್ಧಿ

ಕನ್ನಡನಾಡಿನ ಇತಿಹಾಸದಲ್ಲಿ ಕದಂಬ, ಗಂಗ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ ಮುಂತಾದ ಪ್ರಮುಖ ರಾಜಮನೆತನಗಳೂ ಅಲ್ಲಲ್ಲಿ ತಲೆಯೆತ್ತಿದ ಮಾಂಡಳಿಕ ವಂಶಗಳೆನಿಸಿದ (ಕೆಲಕಾಲ ಸ್ವತಂತ್ರರಾಗಿದ್ದ) ಶಿಲಹಾರರು, ಬಾಣರು, ಶಾತವಾಹನರು, ರಟ್ಟರು, ಕಲಚುರಿಗಳು ಮೊದಲಾದ ಮನೆತನಗಳೂ ನಮ್ಮ ಗಮನ ಸೆಳೆಯುತ್ತವೆ. ಈ ಎಲ್ಲ ರಾಜವಂಶಗಳೂ ಕಲೆ, ಧರ್ಮ, ಜನ-ಜೀವನದ ವಿಕಸನಕ್ಕೆ ಶ್ರಮಿಸಿವೆ. ಇವುಗಳ ರಾಜಕೀಯ ಚರಿತ್ರೆಯನ್ನು ನಿರೂಪಿಸುವ ಅನೇಕ ಗ್ರಂಥಗಳು ದೊರೆಯುತ್ತವೆ. ಕೆಲವೊಂದು ಕೃತಿಗಳಲ್ಲಿ ಕಲೆ, ಧರ್ಮ, ಸಂಸ್ಕೃತಿಗಳನ್ನು ವಿಚಾರಮಾಡಿರುವುದೂ ಉಂಟು.* ಈ ಎಲ್ಲಾ ಕೃತಿಗಳಿಗೂ ಬಹುಮಟ್ಟಿಗೆ ಶಾಸನಗಳು ಆಧಾರವಾಗಿರುವುದು ಗಮನಾರ್ಹ ಸಂಗತಿ. ನಮ್ಮ ನಾಡಿನ ಜನಜೀವನ, ಧರ್ಮ, ಸಂಸ್ಕೃತಿಯನ್ನು ತಿಳಿಯಲು ನಾವು ಶಾಸನಗಳಿಗೆ ಶರಣುಹೋಗಬೇಕು. ಕನ್ನಡನಾಡಿನಲ್ಲಿ ಶಾಸನಸಾಹಿತ್ಯ ವಿಪುಲವಾಗಿದೆ. ಒಟ್ಟು ಶಾಸನಗಳನ್ನು ಗಮನಿಸಿದಾಗ ಹಳ್ಳಿಗೊಂದರಂತೆಯಾದರೂ ದೊರೆಯುತ್ತವೆ. ಅವುಗಳಲ್ಲಿ ಆಯಾ ಕಾಲದಲ್ಲಿ ನಡೆದ ಘಟನೆಗಳ ವಿವರಣೆ, ಅಂದಿನ ಜನರು ಆಚರಣೆಯಲ್ಲಿಟ್ಟಿದ್ದ ಸಂಪ್ರದಾಯಗಳು, ಆ ಕಾಲದ ಜನಜೀವನದ ಸ್ಪಷ್ಟ ಪರಿಚಯ ನಮಗಾಗುತ್ತದೆ. ಈ ಶಾಸನಗಳಲ್ಲಿ ದಾನ ಅಥವಾ ದತ್ತಿ ಶಾಸನ, ವೀರಗಲ್ಲು, ಮಹಾಸತಿಕಲ್ಲು, ವಿಜಯಸ್ತಂಭ ಮೊದಲಾದುವು ಮುಖ್ಯವಾದುವುಗಳು. ಶಾಸನಗಳನ್ನು (Inscriptions) ಕುರಿತು "Documents inscribed on some hard or permanent material in the form of letters or other conventional signs, for the purpose of conveying some information or preserving a record"[1] ಎಂಬ ವಿವರಣೆ ಇಂಗ್ಲೀಷ್ ವಿಶ್ವಕೋಶದಲ್ಲಿ ದೊರೆಯುತ್ತದೆ. ಶಾಸನ ಎಂದರೇನು ? ಎಂಬ ಪ್ರಶ್ನೆ ಉದ್ಭವಿಸಿದಾಗ ಈ ವಿವರಣೆಯೂ ಸಾಧ್ಯವಾಗುತ್ತದೆ. "ಶಾಸನಗಳು ಮೊದಲು ರಾಜಾಜ್ಞೆಗಳಾಗಿದ್ದವು. ('ಶಾಸ್' ಎಂಬ ಧಾತುವಿಗೆ, ಆಜ್ಞೆಮಾಡು, ಶಿಕ್ಷಿಸು, ನಿಯಂತ್ರಿಸು ಮುಂತಾದ ಅರ್ಥಗಳಿವೆ.) ಕಾನೂನನ್ನು ಜನರಿಗೆ ಪ್ರಕಟ

---

* ಉದಾ : ಡಾ॥ ಫ್ಲೀಟ್, ವಿನ್ಸೆಂಟ್ ಸ್ಮಿತ್, ರೈಸ್, ಮೊರೆಸ್, ಡೆರೆಟ್, ಹಯವದನ ರಾವ್, ಡಾ॥ ಶ್ರೀಕಂಠಶಾಸ್ತ್ರಿ, ಆಲೂರು ವೆಂಕಟರಾಯರು, ಆರ್. ಎಸ್. ಪಂಚಮುಖಿ, ಎಸ್. ಲಕ್ಷ್ಮೀನಾರಾಯಣ ರಾವ್ ಮೊದಲಾದವರ ಕೃತಿಗಳನ್ನು ಗಮನಿಸಬಹುದು.

1 Encyclopaedia Britanica : XII, Page 393.

ಸುವ ಬರಹಗಳೇ ಈ ಶಾಸನಗಳು. ರಾಜನೇ ಆಗಲಿ ಅಥವಾ ಬೇರೆಯವರು ಯಾರೇ ಆಗಲಿ ಅವರು ದಾನವನ್ನು ಕೊಟ್ಟಾಗ. ದಾನದ ವಿಷಯದಲ್ಲಿ ಕೆಲವು ನಿಯಮಗಳನ್ನು ಹಾಕಿ, ಆ ನಿಯಮಗಳನ್ನು ಯಾರೂ ಉಲ್ಲಂಘಿಸಕೂಡದೆಂದೂ, ಎಲ್ಲರೂ ಆ ದಾನವನ್ನು ಕಾಪಾಡಿಕೊಂಡು ಬರಬೇಕೆಂದೂ ಕೇಳಿಕೊಳ್ಳುತ್ತಿದ್ದರು. ಅಥವಾ ಆಜ್ಞೆ ಮಾಡುತ್ತಿದ್ದರು. ಅಲ್ಲದೆ ದಾನವಾಗಿ ಕೊಟ್ಟ ಭೂಮಿಗೆ ತೆರಿಗೆಯನ್ನು ತೆಗೆದುಹಾಕಿದ ಆಜ್ಞೆಯನ್ನು ರಾಜನೋ ಅವನ ಅಧಿಕಾರಿಗಳೋ ಹೊರಡಿಸುತ್ತಿದ್ದರು. ಹೀಗೆ ಪರ್ಯಾಯವಾಗಿ ಇಂತಹ ಇತರ ಬರಹಗಳಿಗೂ ಶಾಸನಗಳೆಂಬ ಹೆಸರು ರೂಢಿಗೆ ಬಂದಿತು. ಈ ಅರ್ಥವು ಇನ್ನೂ ವಿಸ್ತಾರವಾಗಿ ರಾಜರ ಪ್ರಶಸ್ತಿಯನ್ನು ಹೇಳುವ, ವೀರರ ಸಾವನ್ನು; ಸನ್ಯಾಸಿಗಳ ಮರಣವನ್ನು ಕೊನೆಗೆ ಶಿಲ್ಪದ ಅಥವಾ ಶಿಲ್ಪಿಯ ಹೆಸರನ್ನು ಹೇಳುವ ಬರಹಗಳಿಗೂ 'ಶಾಸನ' ಎಂಬ ಹೆಸರು ಅನ್ವಯವಾಯಿತು."[2]

ಇಂತಹ ಶಾಸನಗಳು ಇತಿಹಾಸಸಾಕ್ಷಿಯಾಗಿ, ಸಂಸ್ಕೃತಿಯ ದ್ಯೋತಕವಾಗಿ, ಜನಜೀವನದ ಪ್ರತಿನಿಧಿಯಾಗಿ ನಿಂತಿವೆ. ಈ ಶಾಸನಗಳಲ್ಲಿಯೇ ರಾಜರ ಹೊಗಳಿಕೆ, ಅವರ ಬಿರುದುಗಳು ಬಂದಿರುವುದುಂಟು. ಬಿರುದುಗಳು ಆಯಾ ರಾಜರುಗಳ ಜೀವನಕಾಲದಲ್ಲಿನ ಮುಖ್ಯ ಘಟನೆಗಳ; ಅವರು ಗಳಿಸಿದ ವಿಜಯದ ಪ್ರತೀಕವಾಗಿ ಬರಬಹುದು. ಜಯ ಗಳಿಸಿದಾಗ ತಾವು ಗೆದ್ದ ರಾಜನಿಗಿರುವ ಬಿರುದುಗಳನ್ನು ಪರ್ಯಾಯವಾಗಿ ತಾವುಗಳು ತಮ್ಮ ಹೆಸರಿನ ಹಿಂದೆ ಸೇರಿಸಿಕೊಳ್ಳುವುದೂ ಉಂಟು. ಇಂತಹ ಬಿರುದುಗಳಲ್ಲಿ ಒಂದೆನಿಸಿದ **'ಶನಿವಾರಸಿದ್ಧಿ'** ವಿಷಯವಾಗಿ ವಿಚಾರಮಾಡುವ ಉದ್ದೇಶ ಈ ಲೇಖನದ್ದಾಗಿದೆ.

ಶಾಸನಾಭ್ಯಾಸದಲ್ಲಿ ತೊಡಗಿರುವ ಸಮಯದಲ್ಲಿ ಕಲಚುರಿ ರಾಜನಾದ ಬಿಜ್ಜಳನ ಕುರಿತಾದ ಶಾಸನಗಳಲ್ಲಿ ಅವನ ಬಿರುದುಗಳಲ್ಲಿ ಒಂದಾಗಿರುವ **'ಶನಿವಾರಸಿದ್ಧಿ'** ನನ್ನ ಗಮನ ಸೆಳೆಯಿತು. ಅದರ ಬಗೆಗೆ ಯಾವ ವಿವರಣೆಯೂ ತತ್‌ಕ್ಷಣದಲ್ಲಿ ದೊರೆಯಲಿಲ್ಲ. ಶಾಸನಗಳ ಬಗೆಗೆ ವಿಶಿಷ್ಟ ಅಧ್ಯಯನ ನಡೆಸಿರುವ ಸನ್ಮಾನ್ಯ ಡಾ॥ ಎಂ. ಚಿದಾನಂದಮೂರ್ತಿಯವರಲ್ಲಿ ತಿಳಿಸಿದಾಗ ಅವರು ಆ ವಿಷಯದ ಬಗೆಗೆ ಯಾವುದೇ ವಿವರಣೆಯನ್ನು ಹೇಳುವ ಬದಲು ನನ್ನನ್ನು ಪ್ರೋತ್ಸಾಹಿಸಿ ಅದರ ಎಲ್ಲ ವಿಷಯಗಳನ್ನು ಸಂಗ್ರಹಿಸಿ ಒಂದು ಲೇಖನವನ್ನು ತಯಾರುಮಾಡಲು ಹೇಳಿದರು. ಅವರ ಪ್ರೋತ್ಸಾಹ, ಉತ್ತೇಜನಪೂರ್ವವಾದ ಮಾರ್ಗದರ್ಶನದಿಂದ ನಾನು ಸಂಗ್ರಹಿಸಿದ ವಿಷಯಗಳನ್ನು ಸಹೃದಯರ ಅವಗಾಹನೆಗೆ ಇಟ್ಟಿದ್ದೇನೆ.

---

2 ಡಾ॥ ಎಂ. ಚಿದಾನಂದಮೂರ್ತಿ : ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೧೫.
ಪ್ರಕಟಣೆಯ ಕಾಲ : ೧೯೬೬ ಪ್ರಕಟಣೆಯ ಸ್ಥಳ : ಮೈಸೂರು.

‘ ಶನಿವಾರಸಿದ್ಧಿ ’ ಒಂದು ಬಿರುದು ಎಂಬ ಅಂಶ ನಿರ್ವಿವಾದವಾದುದು. ಆದರೆ ಆ ಬಿರುದು ಯಾವುದೇ ರಾಜನಿಗಾಗಲಿ, ಯಾವ ಕಾರಣದಿಂದ ಬಂದಿತೆಂಬ ವಿಷಯ ಅಸ್ಪಷ್ಟವಾಗಿಯೇ ಉಳಿದಿದೆ. **‘ ಶನಿವಾರಸಿದ್ಧಿ ’**ಯ ಮೂಲವನ್ನು ಹುಡುಕುವಾಗ ಶಿಲಹಾರರಾಜನಾದ ‘ ಅಪರಾಜಿತದೇವ ’ನ ಬಿರುದುಗಳಲ್ಲಿ **‘ ಶನಿವಾರವಿಜಯ ’** ಎಂಬ ಮಾತು ಬಂದಿದೆ. ಸುಮಾರು ಕ್ರಿ.ಶ. ೯೯೭ ರ ಶಾಸನದಲ್ಲಿ[3] ಈ ರೀತಿ ಇದೆ :

> “ ಸಮಧಿಗತ ಪಂಚಮಹಾ ಸವ್ದ(ಬ್ದ) ಮಹಾಸಾಮಂತಾಧಿಪತಿ
> ಕಗರ ಪುರ ಪರಮೇಶ್ವರ ಶಿಲಾರ ನರೇಂದ್ರ ಜೀಮೂತವಾಹನಾ
> ನ್ವಯಪ್ರಸೂತ ಸುವರ್ಣ ಗರುಡಧ್ವಜ ಅಭಿಮಾನಮಹೋಧದಿ
> ಮಾಳಗಳ ಗಂಡ ಗಂಡ ಕಂದರ್ಪಸಹಜ ವಿದ್ಯಾಧರ ಅಪರದಿಗ್ವದೂ
> ತಿಲಕ ನನ್ನಿಸಮುದ್ರಪ್ರತಾಪಮಾರ್ತಾಂಡ **‘ ಸನಿವಾರವಿಜಯ ’**
> ಆದಿ ಸಮಸ್ತರಾಜಾವಳಿಸಮಲಂಕೃತ ಮಹಾಮಂಡಲೇಶ್ವರ
> ಶ್ರೀಮತ್ ಅಪರಾಜಿತ ದೇವರಾಜ.”

ಈ ಶಾಸನದಲ್ಲಿ **‘ ಸನಿವಾರವಿಜಯ ’** ಎಂಬ ಮಾತು ಅಪರಾಜಿತದೇವನ ರಾಜಾವಳಿಗಳಲ್ಲಿ ಒಂದಾಗಿ ಬಂದಿದೆ ಎಂಬ ಅಂಶ ಸ್ಪಷ್ಟವಾಗಿದೆ. ಈ ಶಾಸನವನ್ನು ಸಂಪಾದಿಸಿ ಇ. ಹುಲ್ಷ್ (E. Hultzsch)ರವರು ಆದರ ಅಡಿ ಟಿಪ್ಪಣಿಯಲ್ಲಿ “ with this title, for which I cannot offer any suitable explanation (Compare Sanivarasiddi : Page 208 above note 5) ಎಂದು ಹೇಳುತ್ತಾ “ The two birudus might mean “ One who is Victorious ” and ‘‘one who is successful (even) on (an unlucky day like) Saturday ”[4] ಎಂದು ವಿವರಣೆ ನೀಡುತ್ತಾರೆ. ಮೇಲೆ ಹೇಳಿರುವ **‘ ಶನಿವಾರಸಿದ್ಧಿ ’** ಉದಾಹರಣೆಯನ್ನು ಗಮನಿಸುವಾಗ ಅದು ಕೊಲ್ಹಾಪುರದ ಶಿಲಹಾರರ ವಿಜಯಾ-ದಿತ್ಯನ ಕುರಿತಾದ ಕ್ರಿ.ಶ. ೧೧೪೩ರ ಶಾಸನವೆಂಬುದು ತಿಳಿಯುತ್ತದೆ. ಈ ಶಿಲಹಾರವಂಶ ಜತ್ತಿಗನಿಂದ ಆರಂಭವಾಗಿ ಗಾಂಧಾರಾದಿತ್ಯನವರೆಗೆ ಬರುತ್ತದೆ. ಈ ಮಧ್ಯೆ ಬರುವ ವಿಜಯಾದಿತ್ಯನಿಗೆ **‘ ಶನಿವಾರಸಿದ್ಧಿ ’** ಎಂಬ ಬಿರುದು ಇತ್ತೆಂದು ಕಂಡುಬರುತ್ತದೆ.[5] ಇದರ ಅಡಿಟಿಪ್ಪಣಿಯಲ್ಲಿ ಶಾಸನವನ್ನು ಸಂಪಾದಿಸಿದ ಎಫ್. ಕೀಲ್‌ಹಾರ್ನ್‌ರವರು ಇದರ ವಿವರಣೆಯನ್ನು “ he whose desires (or wishes) are accomplished on Saturday ” ಎಂದು ನೀಡುತ್ತಾ ಇಂಡಿಯನ್ ಆಂಟಿಕ್ವರಿ ಎರಡನೆ ಭಾಗದಲ್ಲಿನ ಒಂದಂಶವನ್ನು ಆಧಾರವಾಗಿ ಕೊಡುತ್ತಾರೆ.

---

3 Epigraphia Indica : Vol. III, No. 37, Page 269-273.
4 Epigraphia Indica : Vol. III, Page 269.
5 Epigraphia Indica : Vol. III, Page 207-208.

ಆದರಲ್ಲಿ ಈ ವಿಷಯದ ಬಗೆಗೆ ಈ ರೀತಿ ಹೇಳಿದೆ : "Sri Viraballala deva who is adorned with all the glorious titles commencing with the refuge of the whole earth, the favourite of the world, the supreme king of great kings.. "Sanivara siddhi"; the conqueror of wise forts, a very Rama in war..."[6] ಎಂದು ಮುಂತಾದ ಬಿರುದುಗಳನ್ನು ಹೇಳಲಾಗಿದೆ. ಇದರ ಅಡಿಟಿಪ್ಪಣಿಯಲ್ಲಿ '**ಶನಿವಾರಸಿದ್ಧಿ**' ಎಂಬ ಬಿರುದಿಗೆ "He whose wishes are accomplished on a Saturday" ಎಂದು ವಿವರಣೆ ಹೇಳಿದೆ.

ಈ ಎಲ್ಲ ವಿವರಣೆಗಳನ್ನು ಗಮನಿಸಿದಾಗ 'ಶನಿವಾರ' ನಮ್ಮ ಸಂಪ್ರದಾಯದಲ್ಲಿ ಅಶುಭ ದಿವಸ. ಆ ದಿನ ಯಾವ ಶುಭ ಕೆಲಸವನ್ನೂ ಮಾಡಬಾರದು. ಮಾಡಿದರೂ ಅದು ಶ್ರೇಯಸ್ಕರವಲ್ಲ ಎಂಬ ನಂಬಿಕೆ ಇದೆ.* ಅಂತಹ ಅಶುಭವೆಂದೆಣಿಸಿದ ದಿವಸದಲ್ಲಿಯೂ ಶುಭಸಾಧಿಸಿದವನೆಂಬುದಾಗಿ ಈ ಬಿರುದು ಬಂದಿರಬೇಕು. ಆದರೆ ಈ ಬಿರುದು ಯಾವಾಗ ಹೇಗೆ ಬಂದಿತೆಂಬುದು ಇನ್ನೂ ಕಾಲದ ತೆರೆಯ ಮರೆಯಲ್ಲಿದೆ.

ಈ ಶನಿವಾರವಿಜಯ ಅಥವಾ ಸಿದ್ಧಿಯನ್ನು ಕುರಿತು ಹೇಳುವಾಗ ಹುಲ್ಷ್‌ರವರು ಚೋಳರಾಜರಲ್ಲಿ ಒಬ್ಬನಾದ ವೀರ ಚಂಪರಾಜನಿಗಿರುವ 'ನಿದ್ರಾವಸಾನ ವಿಜಯ' ಎಂಬ ಬಿರುದನ್ನು ಹೇಳಿ ಅದನ್ನು ಇದಕ್ಕೆ ಅನ್ವಯಿಸಬಹುದೆಂದು ಹೇಳಿದ್ದಾರೆ—ಎಪಿಗ್ರಫಿಯಾ ಇಂಡಿಕಾ ಮೂರನೇ ಭಾಗದಲ್ಲಿನ ಬಿಲ್ವನಾಥೇಶ್ವರ ಶಾಸನದಲ್ಲಿ ಬರುವ "the second name "Nidravasana Vijaya Mandapa" ಎಂಬ ಬಿರುದಿನ ವಿವರಣೆಯನ್ನು "This name means victorious at the completion of sleep"[7] ಎಂದು ಹೇಳಿರುವಲ್ಲಿ ನಿದ್ರಾವಸಾನಕಾಲದಲ್ಲಿಯೂ ಜಯಗಳಿಸುವ ಚಾತುರ್ಯ; ಶಕ್ತಿ ಉಳ್ಳವನು ಎಂದು

6 Indian Antiquary : Vol. II, Page 303.

* ರನ್ನನ ೨ನೇ ಆಶ್ವಾಸದ ೨೬ನೇ ಪದ್ಯದಲ್ಲಿ 'ವಡ್ಡವಾರ' ಶಬ್ದ ಬಂದಿದೆ. ಇದರ ಬಗ್ಗೆ ಡಿ. ಎಲ್. ಎನ್. ರವರು ಕನ್ನಡ ಗ್ರಂಥಸಂಪಾದನೆಯಲ್ಲಿ ೯ನೇ ಅಡಿಟಿಪ್ಪಣಿಯಲ್ಲಿ 'ವಡ್ಡವಾರವೆಂದರೆ ಸಾಮಾನ್ಯವಾಗಿ ಶನಿವಾರವೆಂದು' ಅನೇಕ ವಿದ್ವಾಂಸರು ತೀರ್ಮಾನಿಸಿರುವುದನ್ನು ಹೇಳಿದ್ದಾರೆ. ಅಲ್ಲದೆ "ಕುಜನ ವಾರವನ್ನು ಕುಜವಾರವೆಂದಾಗಲಿ, ಶನಿಯ ವಾರವನ್ನು ಶನಿವಾರವೆಂದಾಗಲಿ ಕರೆಯಬಾರದು. ಅವು ಕ್ರೂರಗ್ರಹಗಳು ಆದ್ದರಿಂದ ತೊಂದರೆಯುಂಟಾಗಬಹುದು. ಈ ಹೆಸರುಗಳನ್ನು ಮರೆಮಾಡಿ ಮಂಗಳವಾರ ವಡ್ಡವಾರವೆಂದು ಕರೆದರೆ ಆ ಗ್ರಹಗಳಿಗೂ ತೃಪ್ತಿ; ಕರೆದವರಿಗೂ ಕ್ಷೇಮ" ಎಂದಿದ್ದಾರೆ. ಶನಿವಾರ ಅಶುಭವಾದದ್ದು ಎಂಬ ಅಂಶ ಇಲ್ಲಿದೆ.

7. Ep. In., Vol. III, page 70–71–72 : 1236 A.D. No. 12 "Three Inscriptions of Chola Chiefs." Edt. by T. D. Krishnaswamy.

ತಿಳಿಯುತ್ತದೆ. ಹಾಗೆಯೇ ಭಾರತೀಯ ಸಂಪ್ರದಾಯದಲ್ಲಿ ಅಶುಭವೆನಿಸುವ ಶನಿವಾರವೂ ವಿಜಯ–ಸಿದ್ಧಿ–ಯನ್ನು ಗಳಿಸುವ ಬಲ ಉಳ್ಳವನು ಎಂದು ಅರ್ಥ ಮಾಡಬಹುದು.

ಈ ಬಿರುದಿನ ಬಗೆಗೆ ವಿವರಣೆಯನ್ನು ಕೇಳಿ ಪ್ರೊ|| ಎನ್. ಲಕ್ಷ್ಮೀನಾರಾಯಣ ರಾವ್‌ರವರಿಗೆ ನಾನು ಬರೆದ ಪತ್ರಕ್ಕೆ ಅವರು ಈ ರೀತಿ ವಿವರಣೆಯನ್ನು ಕೊಟ್ಟಿದ್ದಾರೆ : "The birudu of Sanivarasiddhi is found in inscriptions of the Silāhāras, the Kalachuryas, and the Hoysalas applied to various kings. It has been translated as 'successful (even) on Saturday.' As it is borne by many kings; it is apparent that every one of them could not have achieved victory on a Saturday. I think it refers to the strength and powers of the king who could obtain success even against heavy odds. You might be aware that Saturdays are not considered to be auspicious for undertaking any important exploit or worthy deed. So, a person who could achieve success even on Saturdays that is against heavy odds, might have been spoken as Sanivara Siddhi." [8]

ಇದನ್ನೆಲ್ಲಾ ಗಮನಿಸಿದಾಗ ಒಬ್ಬ ದೊರೆ ಇನ್ನೊಬ್ಬ ದೊರೆಯನ್ನು ಗೆದ್ದಾಗ ಅವನಿಗಿರುವ ಬಿರುದುಗಳನ್ನೆಲ್ಲಾ ತಾನು ಗ್ರಹಿಸುತ್ತಿದ್ದುದು ಉಂಟು. ಹಾಗಾಗಿ ಈ ಬಿರುದು ಎಲ್ಲ ರಾಜರಿಗೂ ಬಂದಿರಬೇಕು. ಅಲ್ಲದೆ ಆಯಾ ರಾಜರ ಪರಾಕ್ರಮ, ಶಕ್ತಿಯನ್ನು ತಿಳಿಸುವುದಕ್ಕಾಗಿ ಉಪಯೋಗಿಸಿದ್ದಿರಬೇಕೆಂಬಂಶ ವ್ಯಕ್ತವಾಗುತ್ತದೆ. ಇದೇ ಅಭಿಪ್ರಾಯವೂ ಪ್ರೊ|| ಎನ್. ಲಕ್ಷ್ಮೀನಾರಾಯಣ ರಾವ್‌ರವರ ಪತ್ರದಿಂದಲೂ ವ್ಯಕ್ತವಾಗುತ್ತದೆ.

ಈ ಬಿರುದು ಉತ್ತರ ಭಾರತದ ಯಾವ ರಾಜರೂ ಇಟ್ಟುಕೊಂಡಿರುವುದು ಕಂಡುಬರುವುದಿಲ್ಲ. ಅಂತೆಯೇ ಚಾಲುಕ್ಯರೂ ಈ ಬಿರುದನ್ನು ಇಟ್ಟುಕೊಂಡಂತಿಲ್ಲ. ಆದರೆ ಶಿಲಹಾರರ ಅಪರಾಜಿತದೇವನಿಗಿದ್ದುದಕ್ಕೆ ಆಧಾರವಿದೆ. ಅನಂತರ ಕಲಚುರಿಯ ಪೆರ್ಮಾಡಿ, ಬಿಜ್ಜಳ, ಸೋಯಿದೇವನಿಗೆ ಈ ಬಿರುದು ಕಂಡು ಬರುತ್ತದೆ. ಮುಂದೆ ಹೊಯ್ಸಳರಲ್ಲಿ ಈ ಬಿರುದಿನ ಬಳಕೆ ಬಂದಿದೆ. ಈ ಅಂಶಗಳನ್ನು ಗಮನಿಸಿದಾಗ ಈ ಬಿರುದು ತಾವು ತಾವೇ ಇಟ್ಟುಕೊಂಡುದೇನೋ ಎಂಬ ಅನುಮಾನ ಬರುತ್ತದೆ.

---

8. ದಿನಾಂಕ : ೧೦–೭–೬೯ ರಲ್ಲಿ ನನಗೆ ಬರೆದ ಪತ್ರದ ಒಕ್ಕಣೆ.

' ಶನಿವಾರಸಿದ್ಧಿ ' ಇರುವ ಕಲಚುರಿ ರಾಜರ ಶಾಸನಗಳು

ಚಾಲುಕ್ಯರ ಆರನೇ ವಿಕ್ರಮಾದಿತ್ಯನು ಆಳುವ ಕಾಲಕ್ಕೆ ಅಂದರೆ ೧೦೮೪ ರಲ್ಲಿ ಆಹವಮಲ್ಲ ಪೆರ್ಮಾಡಿಗೆ ಈ ಬಿರುದು ಇದ್ದಹಾಗೆ ಒಂದು ಶಾಸನದಲ್ಲಿ ಕಂಡುಬರುತ್ತದೆ :

"ಸಮಧಿಗತ ಪಂಚಮಹಾಶಬ್ದ ಮಹಾಮಣ್ಡಳೇಶ್ವರಂ
ಪತಾಪಮಹೇಶ್ವರಂ ವೈರಿನಾರಾಯಣಂ ನೀತಿಪಾರಾಯಣಂ
ರಿಪು ಹೃದಯಸಲ್ಲ (ಸೊಲ್ಲುವಕ್ಕೆ) ಮಲ್ಲಂ ಚಾಳುಕ್ಯರಾಜಾ
ಭಿವೃದ್ಧಿ 'ಶನಿವಾರಸಿದ್ಧಿ' ಶ್ರೀಮನ್ಮಹಾಮಣ್ಡಳೇಶ್ವರ ಆಹವ
ಮಲ್ಲ ಪೆರ್ಮಾನಡಿಗ............" [9]

ಎಂಬಲ್ಲಿ ಚಾಲುಕ್ಯರಾಜರ ಮಹಾಮಂಡಲೇಶ್ವರನಾಗಿದ್ದ ಕಲಚುರಿ ಪೆರ್ಮಾಡಿಗೆ ಈ ಬಿರುದು ಇರುವ ಅಂಶ ಸ್ಪಷ್ಟವಾಗುತ್ತದೆ. ಈ ಬಿರುದು ಇವನ ಮಗನಾದ ಬಿಜ್ಜಳನಿಗೂ ಇರುವುದು ಕಾಣುತ್ತದೆ.

" ದಾರುಕ ತೂರ್ಯನಿರ್ಗ್ಘೋಷಣಂ ಕಳಚುರಿಕುಳಕಮಳಮಾರ್ತಾಂಡಂ
ಕದನಪ್ರಚಂಡಂ ಮಾನಕನರಾಚಳಂ ಸುಭಟರಾದಿತ್ಯಂ ಕಲಿಗಳಂಕುಶಂ
ಗಜಸಾಮಂತ ಶರಣಾಗತ ವಜ್ರಪಂಜರಪ್ರತಾಪ ಲಂಕೇಶ್ವರಂ ಪರನಾರೀ
ಸೋದರಂ 'ಶನಿವಾರಸಿದ್ಧಿ' ಗಿರಿದುರ್ಗಮಲ್ಲಂ ಛಲದಂಕರಾಮಂ
ವೈರಿಭಕಣ್ಠೀರವಂ ನಿಶ್ಶಂಕಮಲ್ಲ ನಾಮಾದಿಪ್ರಶಸ್ತಿ ಸಹಿತಂ
ಶ್ರೀಮದ್ಭುಜಬಳಚಕ್ರವರ್ತಿ ತ್ರಿಭುವನಮಲ್ಲ ಬಿಜ್ಜಣದೇವ." [10]

ಇಲ್ಲಿ ಚಾಲುಕ್ಯರನ್ನು ಹತ್ತಿಕ್ಕಿ ತಾನೇ ಚಕ್ರವರ್ತಿ ಎಂದು ಘೋಷಿಸಿಕೊಂಡು ತನ್ನ ತಂದೆ ತಳೆದಿದ್ದ ಶನಿವಾರಸಿದ್ಧಿ ಬಿರುದನ್ನು ತಾನೂ ತಳೆದಿರುವಂತೆ ತಿಳಿಯುತ್ತದೆ. ಬಿಜ್ಜಳನಂತೆಯೆ ಅವನ ಮಗ ಸೋಯಿದೇವನೂ ಈ ಬಿರುದನ್ನು ತಳೆದಿರುವುದು ಸ್ಪಷ್ಟವಾಗಿದೆ :

"ಸಮಸ್ತಭುವನಾಶ್ರಯಂ ಪೃಥ್ವೀವಲ್ಲಭಂ ಮಹಾರಾಜಾಧಿರಾಜ
ಪರಮೇಶ್ವರ ಕಾಲಂಜರಪುರವರಾಧೀಶ್ವರಸುವರ್ಣವೃಷಭಧ್ವಜಡಮ
ರುತ ತೂರ್ಯ ನಿರ್ಘ್ಘೋಷಣಕದನಪ್ರಚಂಡಮಾನಕನಕಾಚಳಸುಭಟ
ರಾದಿತ್ಯಕಲಿಗಳಂಕುಶ 'ಶನಿವಾರಸಿದ್ಧಿ' ಗಿರಿದುರ್ಗಮಲ್ಲ ಚಲದಂಕ
ರಾಯಕಳಚುರಿಕುಳ ಕಮಳಮಾರ್ತಾಂಡಪ್ರತಾಪ ಲಂಕೇಶ್ವರ ರಾಮುಮು
ರಾರಿ ಭುಜಬಳಮಲ್ಲ ಸೋವಿದೇವರಸರು..........." [11]

---

9. EP. Car. XII.
10. Ep. Car. XI : ದಾವಣಗೆರೆ ಶಾಸನ : ನಂ. 42, ಪುಟ 122, ಕ್ರಿ.ಶ. 1162.
11. Ep. Car. XI : ದಾವಣಗೆರೆ ಶಾಸನ : ನಂ. 84, ಪುಟ 156, ಕ್ರಿ.ಶ. 1161.

ಈ ಶಾಸನಗಳನ್ನು ಗಮನಿಸಿದಾಗ ಶನಿವಾರಸಿದ್ಧಿ ಬಿರುದು ಕಲಚುರಿ ರಾಜರಲ್ಲಿ ವಂಶಪಾರಂಪರ್ಯವಾಗಿ ಬಂದಂತೆ ಕಾಣುತ್ತದೆ. ಬಹುಶಃ ಶಿಲಹಾರರಿಗಿದ್ದ ಬಿರುದನ್ನು ಚಾಲುಕ್ಯದೊರೆ ಆರನೇ ವಿಕ್ರಮಾದಿತ್ಯನು ತಮ್ಮ ಚಾಲುಕ್ಯ ಚಕ್ರಾಧಿಪತ್ಯಕ್ಕೆ ಸುಭದ್ರಕೋಟೆ ಎನಿಸಿದ್ದ ಪೆರ್ಮಾಡಿಗೆ ಅನ್ವಯಿಸಿ ಹೇಳಿರಬೇಕು. ಅವನ ಬಗೆಗಿರುವ ಶಾಸನದಲ್ಲಿ ಬಂದಿರುವ ''ಚಾಲುಕ್ಯರಾಜ್ಯಾಭಿವೃದ್ಧಿ'' ಎಂಬ ಮಾತು ಈ ವಿಷಯಕ್ಕೆ ಪುಷ್ಟಿಕೊಡುತ್ತದೆ. ಆದರೆ ಪೆರ್ಮಾಡಿ ಶನಿವಾರ ವಿಜಯ ಸಾಧಿಸಿದ ಬಗ್ಗೆ ಸ್ಪಷ್ಟವಾದ ಆಧಾರಗಳು ಈವರೆಗೆ ದೊರೆತಿಲ್ಲ. ತಂದೆಗೆ ಬಂದಿದ್ದ ಬಿರುದನ್ನು ಬಿಜ್ಜಳ ಹಾಗೂ ಅವನ ಮಗ ಪಟ್ಟಾಧಿಕಾರದ ಜೊತೆಗೆ ತಳೆದಿರಬಹುದು.

ಈ ಬಿರುದು ಹೊಯ್ಸಳ ರಾಜರಲ್ಲಿಯೂ ಕಂಡುಬರುತ್ತದೆ. ಬಹುಶಃ ಕಲಚುರಿಗಳಾದಮೇಲೆ ಪ್ರಾಬಲ್ಯಕ್ಕೆ ಬಂದ ಹೊಯ್ಸಳರು ಈ ಬಿರುದನ್ನು ತಾವು ಗ್ರಹಿಸಿರಬೇಕು.

ಶನಿವಾರಸಿದ್ಧಿ ಇರುವ ಹೊಯ್ಸಳ ರಾಜರುಗಳ ಶಾಸನಗಳು

ವೀರಸೋಮೇಶ್ವರ

(೧) "ಸ್ವಸ್ತಿ ಶ್ರೀ ಸಮಾಭವನಾಸ್ರಯಂ ಪ್ರತ್ವೀವಲಾಭ ಮಾಹಾರಾಜಾಧಿರಾಜ ಪರಮೇಶ್ವರ ದ್ವಾರಾವತೀ ಪುರವರಾಧೀಶ್ವರಾ ಆದವಕುಲಾಂಬರಶಿಕಾಮಣಿ ಸವ್ಯಜ್ಞಚೂಡಾಮಣಿ ಮಲೆರಾಜ ರಾಜಮಲಪರೇಳ್ಗಂಡ ಗಂಡಭೇರುಂಡ ಕದನಪ್ರಚಂಡ ಸಹಾಯಸೂರ ಏಕಾಂಗವೀರ **''ಸನಿವಾರ ಸಿದ್ಧಿ''** ಗಿರಿದುರ್ಗಮಲ್ಲ ಚಲದಂಕರಾಮ........ಹೊಸಣ ಶ್ರೀ ವೀರಸೋಮೇಶ್ವರದೇವರಸರು........''

1. Ep. Car. XII, ಪುಟ 126, ನಂ. 13, ಕ್ರಿ.ಶ. 1251
2. Ep. Car. XII, ಪುಟ 128, ನಂ. 21, ಕ್ರಿ.ಶ. 1237
3. Ep. Car. XII, ಪುಟ 129, ನಂ. 23, ...
4. Ep. Car. XII, ಪುಟ 160, ನಂ. 78, ...

ಹೊಯಿಸಳ ವೀರನಾರಸಿಂಹ ದೇವರು

(೧) ''ಸ್ವಸ್ತಿಸಮಸ್ತಭುವನಾಶ್ರಯಂ ಶ್ರೀ ಪೃಥ್ವೀವಲ್ಲಭಂ ಮಹಾರಾಜಾಧಿರಾಜಂ........ಶೀಪುರವರಾಧೀಶ್ವರಂ ಯಾದವ ಕುಳಾಂಬರದ್ಯುಮಣಿ ಸರ್ವಜ್ಞ ಚೂಡಾಮಣಿ ಮಲೆರಾಜರಾಜ ಮಲಪರೊಳುಗಂಡ ಗಂಡಬೇರುಂಡ ಕದನ ಪ್ರಚಂಡ ನೇಕಾಂಗವೀರನ ಸಹಾಯಸೂರ **'ಸನಿವಾರಸಿದ್ಧಿ'** ಗಿರಿದುರ್ಗ ಮಲ್ಲ ಚಲದಂಕರಾಮ ವೈರೀಭಕಂಠೀರವಮಗರರಾಜ್ಯನಿಸ್ಸಂಕ ಪ್ರತಾಪ ಚಕ್ರವರ್ತಿ ಹೊಯಿಸಳ ಶ್ರೀ ವೀರನಾರಸಿಂಹದೇವರು........||

1. Ep. Car. XII, ಪುಟ 129, ನಂ. 22, ಕ್ರಿ.ಶ. 1265
2. Ep. Car. XII, ಪುಟ 131, ನಂ. 28, ಕ್ರಿ.ಶ. 1259
3. Ep. Car. XII, ಪುಟ 49, ನಂ. 49, ಕ್ರಿ.ಶ. 1269
4. Ep. Car. XII, ಪುಟ 60, ನಂ. 11, ಕ್ರಿ.ಶ. 1226
5. Ep. Car. XII, ಪುಟ 77, ನಂ. 45, ಕ್ರಿ.ಶ. 1233
6. Ep. Car. XII, ಪುಟ 117, ನಂ. 2, ಕ್ರಿ.ಶ. 1263
7. Ep. Car. XII, ಪುಟ 148, ನಂ. 54, ಕ್ರಿ.ಶ. 1228
8. Ep. Car. XII, ಪುಟ 155, ನಂ. 64, ಕ್ರಿ.ಶ. 1260
9. Ep. Car. XII, ಪುಟ 225, ನಂ. 27, ಕ್ರಿ.ಶ. 1232

ಹೊಯಿಸಳ ವೀರಬಲ್ಲಾಳದೇವರು

"ಸ್ವಸ್ತಿ ಶ್ರೀಮನುಮಹಾಮಂಡಳೇಶ್ವರಂ ಮಲೆರಾಜರಾಜ ಮಲಪರೊ
ಳುಗಂಡ ಯಾದವನಾರಾಯಣ ದ್ವಾರಾವತೀಪುರವರಾಧೀಶ್ವರಂ ಸಪ್ತೋ
ಬ್ರ್ರಿವಕಪ್ಪು ಮಂಡಳಿಕ ಘಟಸರ್ಪ ಚೋಳಪಾಳವ ಗೊಜ್ಜರಭಯಜ್ವರ
ಚೋಳಕಟಕ
ಸೂರೆಕಾರ ಅಯನನ ಬೆಂಕೊಂಡಗಂಡ ಚೆಂಗಿಯ ಬೆಂಕೊಂಡ ಹಿರಿಯಂಗೊ
ಳನ ಬೆಂಕೊಂ(ಡ)ಗಂಡ ಪಾಂಡ್ಯ ಬೆಂಕೊಂಡ ಗಂಡ ಮಾಳವರ ಬೆಂ
ಕೊಂಡ ಗಂಡ ತ್ರೈಲಪನ ತಲೆಯ ಕೊಂಡ ಗಂಡ ನೆ........ಗಂಡ
ಕದನ ಪ್ರಚಂಡ ತಳಕಾಡು ಗಂಗವಾಡಿ ನೊಳಂಬವಾಡಿ ಬನವಸೆ ಹಾ
ನುಂಗಲು ಗೊಂಡ ಭುಜಬಳವೀರಗಂಗನ ಸಹಾಯ ಸೂರ
'ಸನಿವಾರಸಿದ್ಧಿ' ಗಿರಿದುರ್ಗಮಲ್ಲ ಚಲದಂಕರಾಮ........
ಹೊಯಿಸಳ ವೀರಬಲ್ಲಾಳದೇವರಸರು........"

1. Ep. Car. XII, ಪುಟ 133, ನಂ. 31, ಕ್ರಿ.ಶ. 1193
2. Ep. Car. XII, ಪುಟ 183, ನಂ. 123, ಕ್ರಿ.ಶ. 1286
3. Ep. Car. XII, ಪುಟ 143, ನಂ. 43, ಕ್ರಿ.ಶ. 1205
4. Ep. Car. XII, ಪುಟ 143, ನಂ. 29, ಕ್ರಿ.ಶ. ...
5. Ep. Car. XII, ಪುಟ 185, ನಂ. 127, ಕ್ರಿ.ಶ. ...
6. Ep. Car. XII, ಪುಟ 198, ನಂ. 4, ಕ್ರಿ.ಶ. 1318
7. Ep. Car. XII, ಪುಟ 201, ನಂ. 9, ಕ್ರಿ.ಶ. 1187
8. Ep. Car. XII, ಪುಟ 214, ನಂ. 17, ಕ್ರಿ.ಶ. 1215
9. Ep. Car. XII, ಪುಟ 217, ನಂ. 20, ಕ್ರಿ.ಶ. 1188

ವಿಷ್ಣುವರ್ಧನ ಬಿಟ್ಟಿದೇವ

" ಗಿರಿದುರ್ಗಮಲ್ಲ **' ಸನಿವಾರಸಿದ್ಧಿ '** ಅಸಹಾಯಶೌರ್ಯ್ಯ ಶ್ರೀಮನ್ಮಹಾಮಂಡಳೇಸ್ವರ ತ್ರಿಭುವನಮಲ್ಲ ಅರಿಭೂಪಾಲಹೃದಯ ಸೆಲಬಪ್ಪನಂಕಕಾಱ ಚಲದಂಕರಾಮ........ವಿಷ್ಣುವರ್ಧನ ಬಿಟ್ಟದೇವ...."

(Ep. Car. XII, ಪುಟ 166, ನಂ. 91, ಕ್ರಿ.ಶ. 1169)

ಹೊಯ್ಸಳ ಬಲ್ಲಾಳ

" ಸ್ವಸ್ತಿ ಸಮಧಿಗತ ಪಂಚಮಹಾಸಬ್ದ ಮಹಾಮಂಡಳೇಸ್ವರ ದ್ವಾರಾವತೀ ಪುರವರಾಧೀಸ್ವರಂ ಯಾದವ ಕುಳಾಂಬರ ದ್ಯುಮಣಿಸಂವ್ಯಕ್ತ ಚೂಡಾಮಣಿ ಮಲಪರೊಳ್ಗಂಡ ತಳಕಾಡು ಕೊಂಗು ನಂಗಲಿ ಗಂಗವಾಡಿ ನೊಣಂಬವಾಡಿ ಬನವಸೆ ಹಾನುಂಗಲು ಚಂಗಿಗೊಂಡ ಭುಜಬಳ ವೀರಗಂಗನ ಸಹಾಯ ಸೌರ್ಯ್ಯ **' ಸನಿವಾರಸಿದ್ಧಿ '** ಗಿರಿದುರ್ಗಮಲ್ಲ ನಿಸ್ಸಂಕಪ್ರತಾಪ ಹೊಯ್ಸಳ ಬಲ್ಲಾಳ ದೇವರು........"

(Ep. Car. XII, ಪುಟ 210, ನಂ. 14, ಕ್ರಿ.ಶ. 1187)

ಹೀಗೆ **' ಶನಿವಾರಸಿದ್ಧಿ '** ಬಿರುದು ವಂಶಪಾರಂಪರ್ಯವಾಗಿ ಅಥವಾ ಬಿರುದು ತಳೆದ ರಾಜನ ಮೇಲೆ ವಿಜಯ ಸಾಧಿಸಿದಾಗ ತಮ್ಮ ಹೆಸರಿನ ಹಿಂದೆ ಸೇರಿಕೊಂಡ ಬಿರುದು ಎಂದು ಭಾವಿಸಬಹುದು. ಅಲ್ಲದೆ ಇಲ್ಲಿ ಬಂದಿರುವ ಶಾಸನಗಳನ್ನೂ ಗಮನಿಸಿದಾಗ ' ಶನಿವಾರಸಿದ್ಧಿ ಗಿರಿದುರ್ಗಮಲ್ಲಂ ' ಎಂದು ಎಲ್ಲಾ ಶಾಸನಗಳಲ್ಲಿಯೂ ಸರ್ವೇಸಾಮಾನ್ಯವಾಗಿ ಬಂದಿರುವುದರಿಂದ ' ಶನಿವಾರಸಿದ್ಧಿ ' ಎಂಬ ಊರು ಇದ್ದಿರಬಹುದು ಎಂಬ ಅನುಮಾನವೂ ಉಂಟಾಗುತ್ತದೆ. ಆದರೆ ಈ ವಿಷಯದಲ್ಲಿ ಇದೇ ಸರಿ ಎಂದು ಹೇಳಲು ಸಾಧ್ಯವಾಗಿಲ್ಲ. ಈ ದಿಶೆಯಲ್ಲಿ ಇನ್ನೂ ಕಾರ್ಯವಾಗಬೇಕಾಗಿದೆ.

★ **ಆರ್. ರಾಚಪ್ಪ**

ಹೊಸ ಹೃದಯ

ತೀವ್ರ ಆಘಾತಕ್ಕೆ ಒಳಗಾಗಿ ಶಕ್ತಿಹೀನವಾದ ಹೃದಯವನ್ನು ಹೊರತೆಗೆದು ಸುಸ್ಥಿತಿಯಲ್ಲಿರುವ ಮತ್ತೊಬ್ಬರ ಹೃದಯದ ಜೋಡಣೆಯನ್ನು ಮಾಡಿ ಸಾವಿನ ಸಮೀಪದಲ್ಲಿದ್ದ ರೋಗಿಗೆ ಹೊಸ ಜೀವದಾನ ಮಾಡಿದ ಪವಾಡ ಕಾರ್ಯ ೧೯೬೭ರ ಅಂತ್ಯಭಾಗದಲ್ಲಿ ನಡೆಯಿತು. ವೈದ್ಯಕೀಯ ರಂಗದಲ್ಲಿಯೇ ಅಪೂರ್ವವೆನಿಸಿದ ಹೃದಯಸ್ಥಾನಾಂತರ ಕಾರ್ಯವನ್ನು ದಕ್ಷಿಣ ಆಫ್ರಿಕೆಯ ಕೇಪ್ ಟೌನಿನ ಗ್ರೂಟ್‌ಶೂರ್ ಆಸ್ಪತ್ರೆಯಲ್ಲಿ ಡಾ. ಕ್ರಿಶ್ಚಿಯನ್ ಬರ್ನಾರ್ಡರು ಮಾಡಿ ಜಗತ್ತಿನ ಜನತೆಯನ್ನು ದಂಗುಬಡಿಸಿದರು. ಇದರಿಂದ ಅಳಿವು-ಉಳಿವಿನ ವ್ಯತ್ಯಾಸವೇ ಉಳಿಯಲಿಲ್ಲ. ಸತ್ತುಹೋಗುತ್ತಿರುವ ಮನುಷ್ಯನಿಗೆ ಪುನರ್ಜನ್ಮವನ್ನೀಯುವ ಈ ಹೃದಯ ಜೋಡಣೆಯ ಕಾರ್ಯ ಭಾರತವನ್ನೊಳಗೊಂಡು ಇತರ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕೈಕೊಂಡಿದ್ದಾರೆ. ಈ ರೀತಿ ಹೃದಯಪಲ್ಲಟಗೊಳಿಸಿದ ಸಂಖ್ಯೆ ನೂರನ್ನು ದಾಟಿದೆ. ಬರ್ನಾರ್ಡರ ಎರಡನೆಯ ರೋಗಿ ಡಾ. ಫಿಲಿಪ್ ಬ್ಲೇಬರ್ಗ್ ಹೊಸ ಹೃದಯವನ್ನು ಹೊಂದಿ, ಈಗಾಗಲೇ ೧೫ ಮಾಸಗಳನ್ನು ಕಳೆದು ಜೀವನ ನಡೆಸಿದ್ದಾರೆ. ಹೃದಯದೌರ್ಬಲ್ಯದಿಂದ ಸಾವಿನ ದಿನಗಳನ್ನು ಎದುರುನೋಡುತ್ತಿದ್ದ ಆ ವ್ಯಕ್ತಿ ಇಂದು ಹೊಸ ಹೃದಯದಿಂದ ಹೊಸ ಜೀವನಕ್ಕೆ ನಾಂದಿಯನ್ನು ಹಾಡಿದ್ದಾರೆ.

ಒಬ್ಬರ ದೇಹದ ಈ ಪ್ರಮುಖ ಅಂಗವನ್ನು ಹೊರತೆಗೆದು ಮತ್ತೊಬ್ಬರಿಗೆ ಜೋಡಣೆ ಮಾಡಬೇಕೆನ್ನುವ ಕನಸನ್ನು ಶಸ್ತ್ರವೈದ್ಯರು ಬಹುದಿನಗಳಿಂದ ಕಾಣುತ್ತಿದ್ದರು. ಈ ಶತಮಾನದ ಆದಿಯಲ್ಲಿ ಮಾಡಿದ ಕಣ್ಣಿನ ತೆಳುಪೊರೆಯ ಜೋಡಣೆ ಇಂತಹ ಕಾರ್ಯಚಟುವಟಿಕೆಗಳಿಗೆ ಉತ್ತೇಜನ ನೀಡಿತು. ಚರ್ಮ, ಮೂತ್ರಜನಕಾಂಗಗಳ ಜೋಡಣೆಯ ಕಾರ್ಯ ಯಶಸ್ವಿಯಾಗಿ ನಡೆದಿದೆ. ಪುಪ್ಪುಸ, ಕಲಿಜ ಮತ್ತು ಮೇದೋಜೀರಕ ಗ್ರಂಥಿಗಳನ್ನು ಒಬ್ಬರಿಂದ ತೆಗೆದು ಮತ್ತೊಬ್ಬರಲ್ಲಿ ನಾಟಿಹಾಕುವ ಕಾರ್ಯವೂ ನಡೆದಿದೆ. ಹೃದಯಜೋಡಣೆಯ ಪ್ರಯೋಗಪರೀಕ್ಷೆಗಳು ಪ್ರಾಣಿಗಳ ಮೇಲೆ ಈ ಶತಮಾನದ ಆದಿಭಾಗದಿಂದಲೂ ನಡೆಯುತ್ತಬಂದಿದ್ದು, ಐದು ವರುಷಗಳ ಹಿಂದೆ ಮನುಷ್ಯನಲ್ಲಿ ಗೋರಿಲ್ಲಾದ ಹೃದಯದ ಜೋಡಣೆಯ ಕಾರ್ಯ ಸಹ ನಡೆಯಿತು. ಈಗಾಗಲೇ ಹೃದಯದ ಮೇಲೆ ನಡೆಸುವ ಶಸ್ತ್ರಕ್ರಿಯೆಗಳು ಸಾಮಾನ್ಯವಾಗಿವೆ. ಕವಾಟಗಳ ಜೋಡಣೆ, ಕಿರಿದುಗೊಂಡ ಕವಾಟಗಳನ್ನು ದೊಡ್ಡದು ಮಾಡುವ ಕಾರ್ಯ, ಎರಡೂ ಹೃತ್ಕರ್ಣಗಳ ಮಧ್ಯೆ ಮತ್ತು ಎರಡೂ ಹೃತ್ಕುಕ್ಷಿಗಳ ಮಧ್ಯದಲ್ಲಿರುವ ತೆರೆಯಲ್ಲಿನ ರಂಧ್ರಗಳನ್ನು ಮುಚ್ಚುವ ಕಾರ್ಯದಂತಹ ಶಸ್ತ್ರಚಿಕಿತ್ಸೆಗಳು ನಡೆ

ದಿದ್ದರೂ ಹೃದಯಸ್ಥಾನಾಂತರದ ಕಾರ್ಯ ನಡೆದಿರಲಿಲ್ಲ. ಈ ವಿಧಾನದಲ್ಲಿ ಒಬ್ಬರ ಹೃದಯವನ್ನು ಹೊರತೆಗೆದು ಮತ್ತೊಬ್ಬರ ಎದೆಗೂಡಿನಲ್ಲಿ ಅವರ ದುರ್ಬಲ ಹೃದಯವನ್ನು ತೆಗೆದು ಅಲ್ಲಿನ ಅಂಗರಚನಾಕ್ರಿಯೆಯಲ್ಲಿ ಬದಲಾವಣೆ ಗೊಳಿಸದಂತೆ ಹೃದಯವನ್ನು ಇತರ ರಕ್ತನಾಳಗಳಿಗೆ ಸೇರಿಸುವುದೇ ಆಗಿದೆ.

ಈ ಅವಧಿಯಲ್ಲಿ ಶಸ್ತ್ರಕ್ರಿಯಾವಿಧಾನದಲ್ಲಿ ಉಂಟಾದ ಗಮನಾರ್ಹ ಬದಲಾವಣೆಗಳು ಇಂತಹ ಶಸ್ತ್ರಚಿಕಿತ್ಸೆಯ ಕಾರ್ಯವನ್ನು ಕೈಗೂಡಿಸುವಲ್ಲಿ ಸಹಕಾರಿಯಾಗಿವೆ. ಆಮ್ಲಜನಕದ ಪೂರೈಕೆಯ ಯಂತ್ರ, ಶಸ್ತ್ರಚಿಕಿತ್ಸಾಲಯದಲ್ಲಿ ಹೃದಯ ಮತ್ತು ಶ್ವಾಸಕೋಶಗಳು ಕೆಲಸವನ್ನು ನಿರ್ವಹಿಸುವುದಿಲ್ಲವಾದುದರಿಂದ ಆ ಕಾಲದಲ್ಲಿ ದೇಹದಲ್ಲಿನ ರಕ್ತಶುದ್ಧೀಕರಣಕಾರ್ಯಕ್ಕೆ ಅಗತ್ಯವಾದ ಹೃದಯ-ಪುಪ್ಪುಸ ಯಂತ್ರ, ರಕ್ತ ಹೆಪ್ಪುಗಟ್ಟದಂತೆ ಮಾಡುವ ಕರಣೆರೋಧಕ ಔಷಧಿಗಳ ಬಳಕೆ, ಅರಿವು ತಪ್ಪಿದ ಮನುಷ್ಯನ ದೈಹಿಕ ಉಷ್ಣಾಂಶವನ್ನೂ ಕನಿಷ್ಠಮಟ್ಟಕ್ಕೆ ಇಳಿಸುವ ಶೈತ್ಯೀಕರಣ ವಿಧಾನಗಳು ಮತ್ತು ದೇಹದಲ್ಲಿನ ಪ್ರತಿರೋಧಕ ಕ್ರಿಯೆಗಳ ಬಗ್ಗೆ ಹೆಚ್ಚಿನ ತಿಳಿವಳಿಕೆ ಹೃದಯಪಲ್ಲಟದ ಕಾರ್ಯದಲ್ಲಿ ತುಂಬಾ ಸಹಕಾರಿಯಾಗಿವೆ. ಇಂತಹ ಶಸ್ತ್ರಕ್ರಿಯೆಯ ವಿವಿಧ ಹಂತಗಳಲ್ಲಿ ಕೆಲಸ ಮಾಡುವ ಸಹಕಾರಿಗಳ ಬಹು ದೊಡ್ಡ ತಂಡವೇ ಬೇಕಾಗುತ್ತದೆ.

ಈ ಶಸ್ತ್ರಕ್ರಿಯೆಯಲ್ಲಿ ರೋಗಿಷ್ಟ ಹೃದಯದ ಬಹು ಭಾಗವನ್ನು ಕತ್ತರಿಸಿ ತೆಗೆಯಬೇಕಾಗುತ್ತದೆ. ಬಲ ಹೃತ್ಕರ್ಣದೊಳಕ್ಕೆ ದೇಹದ ಮಲಿನ ರಕ್ತವನ್ನು ತೆಗೆದುಕೊಂಡು ಬರುವ ಕೆಳ ಮತ್ತು ಮೇಲಿನ ಮಹಾ ಅಭಿಧಮನಿಗಳು ಮತ್ತು ಎಡ ಹೃತ್ಕರ್ಣದೊಳಕ್ಕೆ ಪುಪ್ಪುಸದಿಂದ ಶುದ್ಧಿಗೊಂಡ ರಕ್ತವನ್ನು ತೆಗೆದುಕೊಂಡು ಬರುವ ಶ್ವಾಸಕೋಶ ಅಭಿಧಮನಿಗಳು ಬಾಯ್ದೆಗೆಯುವುವು. ಈ ಪ್ರದೇಶವನ್ನು ಹಾಗೆಯೇ ಬಿಟ್ಟು ಹೃದಯದ ಉಳಿದ ಭಾಗವನ್ನು—ಹೃದ್ಧಮನಿ ಮತ್ತು ಶ್ವಾಸಕೋಶ ಅಪಧಮನಿಗಳ ಆದಿ ಭಾಗದ ಸಮೇತ—ಕತ್ತರಿಸಿ ತೆಗೆಯಬೇಕಾಗುವುದು. ಕಿರೀಟ ನಾಳವನ್ನೊಳಗೊಂಡ ಹೃದ್ಧಮನಿ ಮತ್ತು ಶ್ವಾಸಕೋಶ ಅಪಧಮನಿಯ ಆದಿಭಾಗವನ್ನೊಳಗೊಂಡು ಕತ್ತರಿಸಿ ತೆಗೆದ ದಾನಿಯ ಹೃದಯವನ್ನು ಹೊಲೆದು ಸೇರಿಸಿ ಮಹಾರಕ್ತನಾಳಗಳಿಗೆ ಹೃದಯದ ಸಂಪರ್ಕವನ್ನು ಏರ್ಪಡಿಸಿ ಮೊದಲಿದ್ದಂತೆ ಅಂಗರಚನೆಯನ್ನು ಉಂಟುಮಾಡುವರು. ಈ ಶಸ್ತ್ರಚಿಕಿತ್ಸಾ ಕಾರ್ಯವು ಮೊದಲು ದಾನಿಯಲ್ಲಿ ಪ್ರಾರಂಭವಾಗುವುದು. ಅಲ್ಲಿಂದ ಹೃದಯವನ್ನು ಬೇರ್ಪಡಿಸಿ ಅನಂತರ ರೋಗಿಯ ಹೃದಯವನ್ನು ಹೊರತೆಗೆದು ಅಲ್ಲಿಗೆ ಸೇರ್ಪಡೆ ಮಾಡುವರು. ಆ ಅವಧಿಯಲ್ಲಿ ದೇಹದಲ್ಲಿನ ರಕ್ತಪೂರೈಕೆ, ಆಮ್ಲಜನಕದ ಪೂರೈಕೆ ಯಂತ್ರದಿಂದ ಜರುಗುವುದು.

ಹೃದಯಸ್ಪಂದನಕ್ಕೆ ಉತ್ತೇಜನವನ್ನೀಯುವ ನರಜಾಲ ಹೃದಯದಲ್ಲಿಯೇ ಅಡಗಿದೆ. ಅದರ ಬಡಿತದ ಪ್ರಾರಂಭ ಮತ್ತು ವೇಗಗತಿಯನ್ನು ರೂಪಿಸುವಲ್ಲಿ ಹೊರಗಿನಿಂದ ಬರುವ ನರಗಳು ಬೇಕಾಗಿಲ್ಲ. ಹೃದಯವನ್ನು ಹೊರತೆಗೆಯುವಾಗ ಇವುಗಳ ರಕ್ಷಣೆಯನ್ನು ಮಾಡುವುದಿಲ್ಲ. ಇನ್ನೊಬ್ಬರಲ್ಲಿ ನಾಟಿಹಾಕಲ್ಪಟ್ಟಿರುವ ಹೃದಯ ತನ್ನಷ್ಟಕ್ಕೆ ತಾನೇ ಬಡಿತವನ್ನು ಪ್ರಾರಂಭ ಮಾಡುತ್ತದೆ. ಹಾಗಾಗದಿದ್ದರೆ ನೇರವಾಗಿ ವಿದ್ಯುತ್ ಆಘಾತವನ್ನು ಕೊಟ್ಟು ಅದರ ಪ್ರಾರಂಭಕ್ಕೆ ಚಾಲನೆ ನೀಡಬಹುದು. ಎದೆಗೂಡಿನಲ್ಲಿ ಹುದುಗಿಸಲ್ಪಟ್ಟ ವಿದ್ಯುತ್ ಗತಿ ರೂಪಕ ಹೃದಯದ ತಾಳಮಯ ಬಡಿತಕ್ಕೆ ಸಹಕಾರಿಯಾಗಿದೆ. ದಾನವಾಗಿ ನೀಡಲ್ಪಟ್ಟ ಹೃದಯ ಸುಸ್ಥಿತಿಯಲ್ಲಿರುವುದರಿಂದ ಇದರ ಅಗತ್ಯ ಅಷ್ಟಾಗಿ ತೋರಿಬರದು.

ದೇಹದಲ್ಲಿನ ರಕ್ಷಣಾಕ್ರಿಯೆ, ದೇಹದಲ್ಲಿ ತನ್ನದಲ್ಲದ ಇತರ ವಸ್ತುವನ್ನು ಸೇರಿಸಿದಾಗ ಅದನ್ನು ತೆಗೆದುಕೊಳ್ಳದೆ ತ್ಯಾಜ್ಯವಸ್ತುವೆಂದು ಪರಿಗಣಿಸಿ ತನ್ನಲ್ಲಿರುವ ಬಿಳಿಯ ರಕ್ತಕಣಗಳು ಮತ್ತು ಅವು ಸಿದ್ಧಪಡಿಸುವ ನಿರೋಧಕ ಕಣಗಳ ಸಹಾಯದಿಂದ ಅದರ ಮೇಲೆ ದಾಳಿಯಿಟ್ಟು ನಿರ್ನಾಮಗೊಳಿಸುವುವು. ದೇಹದಲ್ಲಿನ ಪ್ರತಿರೋಧಕಶಕ್ತಿ ಯಾವುದೇ ಹೊಸ ವಸ್ತುವಿನ ಆಗಮನವನ್ನು ಸಹಿಸದು. ಸಾಮಾನ್ಯವಾಗಿ ಇತರರಿಗೆ ಸೇರಿದ ಅಂಗಗಳನ್ನು ದೇಹದಲ್ಲಿ ಸೇರಿಸಿದಾಗ ವಿಸ್ತೃತವಾಗಿ ಈ ಕ್ರಿಯೆ ತೋರಿಬರುವುದು. ಈ ರೀತಿಯ ಅಂಗತ್ಯಾಜ್ಯಕ್ರಿಯೆ ಹೃದಯಸ್ಥಾನಾಂತರದ ಕಾರ್ಯದಲ್ಲಿ ಒಂದು ಪ್ರಮುಖ ತೊಡಕಾಗಿದ್ದಿತು. ರಕ್ತವನ್ನು ಒಬ್ಬರಿಂದ ತೆಗೆದು ಮತ್ತೊಬ್ಬರಿಗೆ ದಾನವಾಗಿ ಕೊಡುವಾಗ ಹೇಗೆ ಅದು ಹೊಂದಬೇಕೋ ಅದೇ ರೀತಿ ಈ ಅಂಗಗಳು ಸಹ ಹೊಂದಬೇಕು. ದೇಹದಲ್ಲಿನ ಈ ರೀತಿಯ ತ್ಯಾಜ್ಯೀಕರಣಕ್ರಿಯೆಯನ್ನು ಹತ್ತಿಕ್ಕಲು ಮತ್ತು ಆ ಕ್ರಿಯೆಯನ್ನು ನಿಸ್ಸತ್ವಗೊಳಿಸಲು ರೋಗಿಗೆ ಮೊದಲು ಕೋಬಾಲ್ಟ್ ವಿಕಿರಣ, ಕಾರ್ಟಿಸೋನ್ ರಸದೂತ ಮತ್ತು ಪ್ರತಿರೋಧಕ ಶಕ್ತಿಯ ದಮನಕಾರಿ ಔಷಧಿಗಳಾದ ಇಮುರಾನ್ ಅಜಿತಯೋಟ್ರಿನ್ ಔಷಧಿಗಳನ್ನು ಕೊಡುವರು. ಇವುಗಳ ಪ್ರಭಾವಕ್ಕೆ ಒಳಗಾದ ವ್ಯಕ್ತಿಯು ದೇಹದಲ್ಲಿನ ಸಾಮಾನ್ಯ ರಕ್ಷಣಾ ಶಕ್ತಿಯನ್ನು ಕಳೆದುಕೊಳ್ಳುವುದರಿಂದ, ಯಾವುದೇ ರೋಗಾಣುಜೀವಿಯ ದಾಳಿಗೆ ಸುಲಭವಾಗಿ ಬಲಿಯಾಗಬಹುದು. ಅನೇಕ ರೋಗಿಗಳು ಹೃದಯಸ್ವೀಕಾರದ ಅನಂತರ ನ್ಯುಮೋನಿಯಾದಂತಹ ರೋಗಗಳಿಗೆ ಬಲಿಯಾಗಿದ್ದಾರೆ. ರೋಗದ ಸೋಂಕಿಗೆ ಬಲಿಯಾಗುವುದನ್ನು ತಪ್ಪಿಸಲು ರೋಗಿಯನ್ನು ರೋಗಾಣುಜೀವಿಗಳು ಇಲ್ಲದಂತಹ ಆವರಣದಲ್ಲಿ ಮೊದಲಿನ ಶಕ್ತಿಯನ್ನು ಪಡೆಯುವವರೆಗೂ ಶುಶ್ರೂಷೆಯನ್ನು ನೀಡುತ್ತಾರೆ.

ಬಹು ದೂರದಲ್ಲಿ ಆಗಬಹುದೆಂದು ತಿಳಿದ ಈ ಅಪೂರ್ವ ರೀತಿಯ ಶಸ್ತ್ರ ಚಿಕಿತ್ಸೆ ಇಂದು ಕೈಗೂಡಿದೆ. ತೀವ್ರ ತೆರನಾಗಿ ಘಾತಗೊಂಡ ಹೃದಯ, ಸ್ನಾಯು, ವಿಕೃತಿಗೊಂಡ ಕವಾಟಗಳು, ಹುಟ್ಟಿನಿಂದ ತೋರಿಬರುವ ಹೃದಯದ ವಿಕೃತಿಗಳು, ಮತ್ತು ಕಿರೀಟನಾಳ ರೋಗದಿಂದ ದುರ್ಬಲಗೊಂಡ ಹೃದಯಗಳನ್ನು ಬದಲುಗೊಳಿಸಿ ಹೊಸ ಹೃದಯವನ್ನು ಪಡೆಯಬಹುದು.

ಮೆದುಳಿನ ತೀವ್ರತರ ಘಾತದಿಂದ ಪುನಶ್ಚೇತನ ಪಡೆಯಲಾರದ ವ್ಯಕ್ತಿಯಲ್ಲಿ ಸಾವು ಸನ್ನಿಹಿತವಾಗಿ ಕುಳಿತಾಗ ಅಂತಹ ವ್ಯಕ್ತಿಯ ಹೃದಯವನ್ನು ಹೊರತೆಗೆದು ಮತ್ತೊಬ್ಬರಿಗೆ ಅದನ್ನು ನಾಟಿಹಾಕುವ ಕಾರ್ಯ ಮಾನವೀಯತೆಯ ಅನೇಕ ವಿವಾದಾತ್ಮಕ ಪ್ರಶ್ನೆಗಳನ್ನು ಉದ್ಭವಿಸಿದೆ. ಸಾವಿನ ಬಗ್ಗೆ ನಿರ್ದಿಷ್ಟ ಆಧಾರಗಳನ್ನು ಸೂಚಿಸುವ ಬಗ್ಗೆ ಚರ್ಚೆ ನಡೆದಿದೆ.

ಹೃದಯವನ್ನು ಪವಿತ್ರವಾದ ಅಂಗವೆಂದು ಪರಿಗಣಿಸಿದ್ದೇವೆ. ಸತ್ತ ಮನುಷ್ಯನ ಹೃದಯ, ಸಾವು ಸನ್ನಿಹಿತವಾದ ಮನುಷ್ಯನಲ್ಲಿ ಸೇರ್ಪಡೆಗೊಂಡು ತನ್ನ ಬಡಿತವನ್ನು ಆರಂಭಿಸಿ ಜೀವನದ ಜ್ಯೋತಿ ಬೆಳಗಲು ಸಹಾಯಮಾಡಿದೆ.

★ ಪಿ. ಎಸ್. ಶಂಕರ್

ವಚನಪಿತಾಮಹನನ್ನು ರೂಪಿಸಿದ ಶಿಲ್ಪಿ

ಅಮೂಲ್ಯ ವಚನಸಾಹಿತ್ಯಪ್ರಕಾರವು ಕನ್ನಡಿಗರ ಕಣ್ಣಿಗೆ ಬೀಳದೆ ಕತ್ತಲೆಯಲ್ಲಿ ಉಳಿದಾಗ ಅದನ್ನು ಹೊರದೆಗೆದು, ಕನ್ನಡಿಗರಿಗೆ ಬೆಳಕನ್ನು ನೀಡಲು ಕಾರಣರಾದವರಲ್ಲಿ ಡಾ|| ಫ. ಗು. ಹಳಕಟ್ಟಿಯವರಿಗೆ ಅಗ್ರತಾಂಬೂಲ ಸಲ್ಲಬೇಕು. ವಚನಸಾಹಿತ್ಯವನ್ನು ಪ್ರಕಟಿಸಿದ್ದಲ್ಲದೆ, ಅದರ ಬಗೆಗೆ ವಿವರ ಇತಿಹಾಸವನ್ನು ಒದಗಿಸಿ ಹಳಕಟ್ಟಿಯವರು ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ. ಅಷ್ಟೇ ಏಕೆ, ವಚನಸಾಹಿತ್ಯದ ಇತಿಹಾಸವನ್ನೇ ಮೂರು ಯುಗಗಳಲ್ಲಿ ವಿವೇಚಿಸಿ, ಹಳಕಟ್ಟಿಯವರನ್ನು ಒಂದು ಯುಗದ ಅಧ್ವರ್ಯುಗಳನ್ನಾಗಿ ಮಾಡಬೇಕಾಗುತ್ತದೆ.

(೧) ವಚನಸೃಷ್ಟಿಯುಗ : ೧೧ನೆಯ ಶತಮಾನದ ಆದಿಯಲ್ಲಿ ಬಾಳಿದ ದೇವರ ದಾಸಿಮಯ್ಯನಿಂದ ಮೊಳಕೆಯೊಡೆದು ೧೨ನೆಯ ಶತಮಾನದ ಶರಣರ ಸಂಗದಲ್ಲಿ ಪಕ್ವಫಲಗಳನ್ನು ನೀಡಿದ ಇತಿಹಾಸ ಇಲ್ಲಿದೆ.

(೨) ಸಂಕಲನಯುಗ : ಕಾರಣಾಂತರಗಳಿಂದ ಒಮ್ಮೆಲೇ ನಿಂತುಹೋದ ಅಮೂಲ್ಯ ಕೃತಿ ಹೇಗೋ ಅಲ್ಲಲ್ಲಿ ಉಳಿದುಕೊಂಡು, ೧೫ನೆಯ ಶತಮಾನದಲ್ಲಿ ಅದರ ಸಂಕಲನರೂಪದಲ್ಲಿ ಮತ್ತೆ ಅವತರಿಸಿತು. ಇಲ್ಲಿ ಶೂನ್ಯಸಂಪಾದನೆಯ ವಿವಿಧ ಆವೃತ್ತಿಗಳು, ಏಕೋತ್ತರಶತಸ್ಥಲದ ಸಂಪಾದನೆಯ ವಚನಗಳು ಮುಂತಾದ ಸಂಕಲನಗಳನ್ನು ಹೆಸರಿಸಬಹುದು.

(೩) ಪ್ರಕಟನಯುಗ : ಸಂಕಲಿತವಾದ ಈ ವಚನಸಾಹಿತ್ಯ ಮತ್ತೆ ಶತಮಾನಗಳ ಕಾಲ ಅಜ್ಞಾತವಾಸದಲ್ಲಿಯೇ ಇರಬೇಕಾಯಿತು. ಅದು ೨೦ನೆಯ ಶತಮಾನದಲ್ಲಿ ಮತ್ತೆ ಬೆಳಕು ಕಂಡುದು ಕನ್ನಡಿಗರ ಸುದೈವವೇ. ಈ ಯುಗ ನಿರ್ಮಿತಿಗೆ ಕಾರಣರಾದವರು—ಡಾ|| ಫ. ಗು. ಹಳಕಟ್ಟಿಯವರು.

ವಚನಶಾಸ್ತ್ರ ಪ್ರಕಟನೆಯ ಅಗ್ಗಳಿಕೆಯಷ್ಟೇ ಅಲ್ಲದೆ, ಬರಗಾಲದ ನಾಡಾದ ವಿಜಾಪುರ ಜಿಲ್ಲೆಯಲ್ಲಿ ವಿವಿಧ ಸಾಮಾಜಿಕ, ಶೈಕ್ಷಣಿಕ ಸಂಸ್ಥೆಗಳ ಹುಲುಸಾದ ಬೆಳೆಯನ್ನೇ ತಂದ ಅಗ್ಗಳಿಕೆಯೂ ಹಳಕಟ್ಟಿಯವರಿಗಿದೆ. ಅಲ್ಲಿ ಅವರು ಕಟ್ಟಿದ ಸಂಸ್ಥೆಗಳು ಅನೇಕ; ಗೈದ ಕಾರ್ಯಗಳು ಅದ್ಭುತ. ಶಿಕ್ಷಣದ ದೃಷ್ಟಿಯಿಂದಲೂ ಬಂಜೆಯಾದ ಭೂಮಿಯಲ್ಲಿ ಪ್ರಥಮತಃ ಶಿಕ್ಷಣದ ಬೆಳವಣಿಗೆಗಾಗಿ ಬಿ.ಎಲ್.ಡಿ.ಈ. ಸಂಸ್ಥೆಯ ಬೀಜವನ್ನು ನೆಟ್ಟರು. ಅದು ಸಿದ್ದೇಶ್ವರ

ಹಾಯ್‌ಸ್ಕೂಲಿನ ಮೊಳಕೆಯಿಂದ, ಈಗ ನಾಲ್ಕು ಕಾಲೇಜುಗಳ ಉತ್ಕೃಷ್ಟ ಫಲಗಳನ್ನು ನೀಡಿದೆ. ಸಮಾಜದ ಸರ್ವತೋಮುಖ ಬೆಳವಣಿಗೆಗಾಗಿ ಹಾತೊರೆಯುತ್ತಿದ್ದ ಅವರ ಪ್ರಜ್ಞೆ, ಸಿದ್ದೇಶ್ವರ ಬ್ಯಾಂಕ್, ಒಕ್ಕಲುತನ ಸುಧಾರಣಾ ಸಮಿತಿ, ವಿಲ್ಸನ್ ಎಂಟಿಫ್ಯಾಮಿನ್ ಇನ್‌ಸ್ಟಿಟ್ಯೂಟ್ ಮುಂತಾದ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿತು. ಕನ್ನಡ ನಾಡಿನಲ್ಲಿಯೇ ಕನ್ನಡ ಶಾಲೆಗಳು ಇಲ್ಲದಿದ್ದ ಶೋಚನೀಯ ಪರಿಸ್ಥಿತಿಯ ನಿವಾರಣೆಗಾಗಿ ಪ್ರಯತ್ನಿಸಿ, ಕನ್ನಡದ ಅರಿವು ಜಾಗ್ರತವಾಗುವಂತೆಯೂ, ಕನ್ನಡ ಶಾಲೆಗಳು ಸ್ಥಾಪಿತವಾಗುವಂತೆಯೂ ಮಾಡಿದರು. ವಚನಸಾಹಿತ್ಯ, ವೀರಶೈವಧರ್ಮ ಇವುಗಳಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಸಿದರು. ಇಂತಹ ಅದ್ಭುತಸಾಧನೆಯ ಪುತ್ರನನ್ನು ಪಡೆದ ಯಾವ ನಾಡೂ ಹೆಮ್ಮೆಪಡಬೇಕಾದುದೇ. ಆದರೆ ಅಷ್ಟೇನೂ ಶ್ರೀಮಂತವಲ್ಲದ ಮನೆತನದಲ್ಲಿ ಹುಟ್ಟಿ, ಆಗಿನ ಕಾಲದ ದೃಷ್ಟಿಯಿಂದ ಅತ್ಯುಚ್ಚವೆನ್ನುವ ಶಿಕ್ಷಣ ಪಡೆದ ಹಳಕಟ್ಟಿ ಫಕೀರಪ್ಪನವರು ಯುಗಧರ್ಮಕ್ಕನುಸರಿಸಿ, ಶ್ರೀ. ಫ. ಗು. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ. ವಕೀಲರು (ನೌಕರಿ ಸೇರಿದ್ದರೆ ನ್ಯಾಯಾಧೀಶರೋ) ಆಗಬೇಕಾಗಿತ್ತು. ಅದನ್ನು ಬಿಟ್ಟು ಸ್ವತಂತ್ರ ಜೀವನ ನಡೆಸಿ, ಕೊನೆಗೆ ವಕೀಲಿಯನ್ನು ಬಿಟ್ಟು, ಸಮಾಜಸುಧಾರಣೆ, ವಚನಶಾಸ್ತ್ರಪ್ರಕಟನೆ ಮತ್ತು ವೀರಶೈವಧರ್ಮದ ಏಳ್ಗೆ—ಇವುಗಳಿಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟುದು ಹೇಗೆ? ಫ. ಗು. ಹಳಕಟ್ಟಿಯವರು ತಮ್ಮ ಸಂಕಲ್ಪಬಲದಿಂದಲೇ ವಚನಪಿತಾಮಹರಾದರೆ? ಈ ಅಂಶಗಳು ಸಹಜವಾಗಿಯೇ ಆಸಕ್ತಿ ಕೆರಳಿಸುವಂತಹವು. ಅವರ ಬೆಳವಣಿಗೆಯ ಇತಿಹಾಸವನ್ನೂ, ಜೀವನದ ಸಂಧಿ-ಕಾಲದಲ್ಲಿ ಅವರ ಮನಸ್ಸಿನಲ್ಲಿದ್ದ ತುಮುಲವನ್ನೂ ಗಮನಿಸಿದಾಗ ಅವರಿಗೆ ವಿದ್ವತ್ತೆ, ಕಾರ್ಯಶಕ್ತಿಗಳು ಹೇರಳವಾಗಿದ್ದುದು ಸರಿಯೇ. ಆದರೆ ಆ ಕಾರ್ಯಗಳನ್ನು ಕೈಕೊಳ್ಳಬೇಕಾದ, ಕೊನೆಗಾಣಿಸಬೇಕಾದ ಪ್ರೇರಕಶಕ್ತಿ, ಸಂಕಲ್ಪಶಕ್ತಿಗಳು ಸುದೈವದಿಂದ ದೊರೆತವು ಎಂಬ ವಿಷಯದ ಅರಿವಾಗುತ್ತದೆ. ಇದನ್ನು ಪೂರೈಸಿದವರು ಕನ್ನಡದ ಧೀರ ಕೈ.ವಾ. ತಮ್ಮಣ್ಣಪ್ಪ ಚಿಕ್ಕೋಡಿಯವರು. ಆದಕ್ಕಾಗಿಯೇ ಅವರನ್ನು 'ವಚನಪಿತಾಮಹನನ್ನು ರೂಪಿಸಿದ ಶಿಲ್ಪಿ' ಎಂದು ಕರೆದಿರುವುದು.

ದಿ. ತಮ್ಮಣ್ಣಪ್ಪ ಚಿಕ್ಕೋಡಿಯವರು ಪ್ರಾಥಮಿಕ ಶಾಲೆಯ ಮುಖ್ಯ ಅಧ್ಯಾಪಕರು. ಕನ್ನಡಸಾಹಿತ್ಯವನ್ನು ಚೆನ್ನಾಗಿ ಅಭ್ಯಸಿಸಿದವರು. ಶಿಕ್ಷಣ ಅವರ ಮೊದಲ ಪ್ರೇಮ. ಒಂದು ಸಮಾಜದ ಪ್ರಗತಿ ಶಿಕ್ಷಣವನ್ನೇ ಅವಲಂಬಿಸಿದೆ ಎಂದು ಗಾಢವಾಗಿ ನಂಬಿ, ಸಮಾಜದಲ್ಲಿ ಯಾವ ಜಾಣ ವಿದ್ಯಾರ್ಥಿಯೇ ಇರಲಿ, ತಾವೇ ಅವನ ಹತ್ತಿರ ಹೋಗಿ, ಅವನಿಗೆ ಸಹಾಯ ಮಾಡುತ್ತಿದ್ದರು. ಇವರ ಸಹಾಯಪಡೆದು ಶಿಕ್ಷಣಪಡೆದವರು ಅನೇಕ ಜನ. ಅಂಥವರಲ್ಲಿ ಹಳಕಟ್ಟಿ

ಯವರು ಅಗ್ರಗಣ್ಯರು. ಮುಂದೆ ಹಳಕಟ್ಟಿಯವರಿಗೆ ತಮ್ಮಣ್ಣಪ್ಪನವರು ತಮ್ಮ ಮಗಳಾದ ಭಾಗೀರಥಿತಾಯಿಯನ್ನು ಕೊಟ್ಟು ವಿವಾಹ ಮಾಡಿದರು. ಹಳಕಟ್ಟಿಯವರಿಗೆ ಪ್ರಾರಂಭದಿಂದಲೂ ಸಹಾಯ ಮಾಡುತ್ತ ಬಂದಿದ್ದಾರೆ. ಅವರ ಪತ್ರಗಳು :—

ರಬಕವಿ
ಜೂನ್, ೧೮೯೭

ಫಕೀರಪ್ಪನಿಗೆ—

ಇನ್ನೂ ಸ್ಕಾಲರ್‌ಶಿಪ್ ಹಣ ಸಿಕ್ಕಂತೆ ತೋರುವದಿಲ್ಲ. ಅಂದಮೇಲೆ ನಿನಗೆ ಊಟ ಮುಂತಾದ್ದರ ವೆಚ್ಚಕ್ಕೂ, ಕಾಲೇಜ ಫೀ ಮುಂತಾದ್ದಕ್ಕೂ, ಹಣದ ತೊಂದರೆ ಉಂಟಾಗಬಹುದು. ಸ್ಕಾಲರ್‌ಶಿಪ್ಪಿನ ಹಣ ಬಾರದ್ದಕ್ಕೆ ಹಣದ ತೊಂದರೆ ಇದ್ದರೆ ಎಷ್ಟು ರೂಪಾಯಿಗಳು ಬೇಕು?

ಬನಹಟ್ಟಿ
ಮಾರ್ಚ್, ೧೮೯೮

ಫಕೀರಪ್ಪನಿಗೆ—

ಕಾಲೇಜದ ಖರ್ಚು ವರ್ಷಕ್ಕೆ ಎಷ್ಟು ರೂಪಾಯಿಗಳಾಗುತ್ತದೆ? ಹಣವನ್ನು ಒಳ್ಳೇ ಹಿಡಿತದಿಂದ ಖರ್ಚು ಮಾಡಬೇಕು.

ಬನಹಟ್ಟಿ
ಫೆಬ್ರುವರಿ, ೧೮೯೯

ಗುರುಬಸಪ್ಪನಿಗೆ—

ಫಕೀರಪ್ಪನು ಹಣ ತೆಗೆದುಕೊಳ್ಳದೆ ತೊಂದರೆ ಮಾಡಿಕೊಂಡ ವರ್ತಮಾನ ವನ್ನು ಓದಿ, ಮನಸ್ಸಿಗೆ ಕೆಡುಕೆನ್ನಿಸಿತು. ಶಿಕ್ಷಣವೂ, ವಯಸ್ಸೂ, ಅನು-ಭವವು ಬೆಳೆದ ಹಾಗೆ, ಪ್ರಸಂಗಕ್ಕೆ ಸರಿಯಾಗಿ ನಡೆಯುವ ಧೈರ್ಯವೂ ಬೆಳೆಯಲಿಕ್ಕೇ ಬೇಕು.

ತಮ್ಮಣ್ಣಪ್ಪನವರು ಈ ರೀತಿಯ ಸಹಾಯವನ್ನು, ಸಹಾಯವೆಂದು ಗಣಿಸದೆ, ಕರ್ತವ್ಯವೆಂದು ಬಗೆಯುತ್ತಿದ್ದರು. ಪ್ರತಿವ್ಯಕ್ತಿಗೂ ತಾನು ಹುಟ್ಟಿದ ಸಮಾಜದ ಬಗೆಗೆ ಕೆಲ ಕರ್ತವ್ಯಗಳಿರುತ್ತವೆ. ಅಂಥವುಗಳಲ್ಲಿ ಶಿಕ್ಷಣಕ್ಕಾಗಿ ಸಹಾಯಮಾಡಿ, ಅಂಥ ಜನರು ತಮ್ಮ ಸಮಾಜದ ಪ್ರಗತಿಗೆ ನೆರವಾಗುವಂತೆ ಮಾಡುವದು ಒಂದೆಂದು ಅವರು ತಿಳಿದಿದ್ದರು. ಅವರು ಹಳಕಟ್ಟಿಯವರ ತಂದೆಗೆ ಬರೆದ ಪತ್ರದಲ್ಲಿ ಈ ಭಾವ ವ್ಯಕ್ತವಾಗಿದೆ.

ಬನಹಟ್ಟಿ
ಡಿಸೆಂಬರ, ೧೯೦೧

ಗುರುಬಸಪ್ಪನಿಗೆ—

ತಾವು ಈ ಪತ್ರದಲ್ಲಿ ಚಿ|| ಫಕೀರಪ್ಪನಿಗೆ ನಾವು ಚೆನ್ನಾಗಿ ಸಹಾಯ ಮಾಡಿದೆವೆಂದು ಬರೆದಿರುವಿರಿ. ಆದರೆ ಚಿ|| ಫಕೀರಪ್ಪನ ಅಭ್ಯಾಸಕ್ಕೆ ಅನು-ಕೂಲ್ಯವನ್ನು ಉಂಟುಮಾಡತಕ್ಕ ಭಾರವು, ಹೆತ್ತವರಾದ ತಮ್ಮಷ್ಟೇ ನಮ್ಮ ಮೇಲೆಯೂ ಇರುತ್ತದೆಂದು ನಾನು ತಿಳಿಯುತ್ತೇನೆ. ಅಂದಮೇಲೆ ನಾವು ಮಾಡಿದ್ದು ಸಹಾಯವಲ್ಲ; ನಾವು ನಮ್ಮ ಕರ್ತವ್ಯವೆಂದು ಮಾಡಿದ್ದೇವೆ. ಆತನ ಶಾಂತ ಮತ್ತು ಸಾತ್ವಿಕ ಸ್ವಭಾವವೂ, ಜ್ಞಾನಸಂಪಾದನಾರ್ಥವಾಗಿ ಆತನಲ್ಲಿ ಜಾಗೃತವಾಗಿರುವ ಜಿಜ್ಞಾಸಾಪ್ರಾಬಲ್ಯವೂ, ಮುಂದಿನ ಆತನ ಅಭ್ಯುದಯ ಕಾಲದ ಕುರುಹಗಳಾಗಿರುವವು. ಅವನು ಈ ಕಾಲದ ವೀರಶೈವ ಸಮಾಜದಲ್ಲಿ ಧುರಂಧರನಾಗಿ ನಮ್ಮ ಹೀನದೆಸೆಗೆ ಬಂದ ಕನ್ನಡ ವಾಙ್ಮಯದಲ್ಲಿ, ಉತ್ತಮೋತ್ತಮ ಗ್ರಂಥಗಳನ್ನು ಬರೆದು, ಅಗ್ರಗಣ್ಯನಾಗಬೇಕೆಂದು ನಾನು ಬಯಸುತ್ತೇನೆ. ದೇವರು ನನ್ನ ಅಪೇಕ್ಷೆಯನ್ನು ಕೊನೆಗಾಣಿಸಿ, ಕರ್ನಾಟಕದ ಅಭ್ಯುದಯವನ್ನು, ನನ್ನ ಜೀವಮಾನಕಾಲದಲ್ಲಿಯೇ ಮಾಡಿದರೆ, ಅದನ್ನು ನೋಡಿ ನಾನು ಸಾಯಬೇಕೆನ್ನುತ್ತೇನೆ. ಉಚ್ಚತರದ ಶಿಕ್ಷಣವು—ದೇಶಾಭಿವೃದ್ಧಿಯ ಸಲುವಾಗಿಯೇ ಕಲಿಯಬೇಕಲ್ಲದೆ ಸ್ವಾರ್ಥದ ಸಲುವಾಗಿ ಕಲಿಯುವುದು ಯೋಗ್ಯವಲ್ಲವೆಂದು ನಾನು ತಿಳಿಯುತ್ತೇನೆ.

ಫಕೀರಪ್ಪನ ಬಗೆಗೆ ತಮ್ಮಣ್ಣಪ್ಪನವರು ಹಾಕಿಕೊಂಡ ಹೊಳಹು ಇದು. ಕನ್ನಡ ಅಭ್ಯುದಯದ ತಮ್ಮ ಅಪೇಕ್ಷೆ ಈಡೇರಲು ಇವನು ತಕ್ಕವನೆಂದು ಬಗೆದು, ಅದಕ್ಕಾಗಿ ಹಿಂದೆ ನಿಂತು ಕೆಲಸಮಾಡಿದರು. ಅವರ ಅಪೇಕ್ಷೆಯನ್ನು ದೇವರು ಅವರ ಜೀವಮಾನಕಾಲದಲ್ಲಿಯೇ ಈಡೇರಿಸಿದುದರಿಂದ, ಅವರಿಗಾದ ತೃಪ್ತಿಗಿಂತ, ಸಮಾಜಕ್ಕಾದ ಉಪಕಾರ ದೊಡ್ಡದು. ಅವರು ತಾವು ಹಾಕಿಕೊಂಡ ಹೊಳಹಿನ ಪ್ರಕಾರ, ಫಕೀರಪ್ಪನ ಜೀವನಮಾರ್ಗವನ್ನು ರೂಪಿಸಲು ಸಿದ್ಧರಾಗಿದ್ದರು. ಹೀಗಾಗಿ, ಯಾವ ದಿಕ್ಕಿನಲ್ಲಿಯೋ ಸಾಗಬೇಕಾಗಿದ್ದ ಹಳಕಟ್ಟಿಯವರು—ಕನ್ನಡದ ಉದ್ಧಾರದ ದಿಕ್ಕಿನಲ್ಲಿ ಸಾಗುವಂತಾಯಿತು.

ವಿದ್ಯಾರ್ಥಿಗಳ ಮನಸ್ಸನ್ನು ಸರಿಯಾಗಿ ಅರಿತವರಾದ ತಮ್ಮಣ್ಣಪ್ಪನವರು ಸಾಧನೆಯಲ್ಲಿ ಉಂಟಾದ ತಪ್ಪುಗಳನ್ನು, ಅಯಶಸ್ಸನ್ನು ಕಂಡಕೂಡಲೇ, ಅವರಿಗಿಂತ ಮೊದಲೇ ತಾವು ಅವರನ್ನು ಹುರಿದುಂಬಿಸಿ, ಆ ತಪ್ಪಿನ ಬಗೆಗೆ, ಯಾವದೇ ರೀತಿಯ ಅಳುಕು, ಮನಸ್ಸಿನಲ್ಲಿ ಉಳಿಯದಂತೆ ಮಾಡುತ್ತಿದ್ದರು. ಹೀಗಾಗಿ, ಕೈಹೊತ್ತು ಕುಳಿತುಕೊಳ್ಳಬೇಕಾದ ವಿದ್ಯಾರ್ಥಿ ಮತ್ತೆ ಹೊಸ ಚೈತನ್ಯದಿಂದ

ಮತ್ತೆ ಕಾರ್ಯೋನ್ಮುಖರಾಗುತ್ತಿದ್ದರು. ವಿದ್ಯಾರ್ಥಿಗಳು ನಿರಾಶರಾಗಿ ಕುಳಿತುಕೊಳ್ಳಬೇಕಾದ ಪ್ರಸಂಗದಲ್ಲಿ, ಅವರಿಗೆ ಮಾರ್ಗದರ್ಶಕರಾಗಿ, ಭವಿಷ್ಯತ್ತಿನ ಬಗೆಗೆ ಭರವಸೆ ಹುಟ್ಟಿಸುವ ಕಲೆ ತಮ್ಮಣ್ಣಪ್ಪನವರಿಗೆ ಚೆನ್ನಾಗಿ ಕರಗತವಾಗಿತ್ತು. ಹಳಕಟ್ಟಿಯವರು ೧೯೦೦ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ಅನುತ್ತೀರ್ಣರಾದರು. ಇದರಿಂದ ಹತಾಶರಾಗಬಾರದೆಂದು ಕೂಡಲೇ ತಮ್ಮಣ್ಣಪ್ಪನವರು ಗುರುಬಸಪ್ಪನವರಿಗೆ ಪತ್ರ ಬರೆದರು.

ಬನಹಟ್ಟಿ
ಡಿಸೆಂಬರ್, ೧೯೦೦

ಗುರುಬಸಪ್ಪನಿಗೆ—

ಚಿ॥ ಫಕೀರಪ್ಪನ ಪರೀಕ್ಷೆಯು ಇಳಿಯಲಿಲ್ಲವೆಂಬುದು ತಿಳಿಯಿತು. ಈ ಸಾರೆ ಆತನ ಪರೀಕ್ಷೆಯು ಇಳಿಯಲಿಲ್ಲವೆಂದು ವ್ಯಸನಪಡುವ ಕಾರಣವಿಲ್ಲ. ಆತನ ವಯಸ್ಸು ಎಳೆಯದಾದುದರಿಂದ, ಆತನಿಗೆ ಮಾನಸಿಕ ಶ್ರಮವು ಬಹಳವಾಗಿ, ಅವನು ಅಶಕ್ತನೂ ಸಹ ಆಗಿದ್ದಾನೆ. ಆತನಿಗೆ ತಾನು ಮನಸ್ಸಿಗೆ ಚಿಂತೆ ಹತ್ತಿಕೊಳ್ಳುವ ಕಾರಣವಿಲ್ಲವೆಂದು ಹೇಳಬೇಕು. ಇನ್ನು ಬಿ.ಎ. ಅಭ್ಯಾಸವನ್ನು ಮತ್ತೆ ಮಾಡಬೇಕಾದುದರಿಂದ ಒಂದು ತರದಿಂದ ಒಳ್ಳೇದೇ ಆಯಿತು.

ಮುಂದೆ ಸೇಂಟ್ ಜೋಸೆಫ್ ಕಾಲೇಜಿಗೆ ಹೋಗಬೇಕೆಂದೂ, ಒಂದಸೇ ಎಲ್‌ಎಲ್.ಬಿ.ಗೆ ಟರ್ಮ್ ತುಂಬಬೇಕೆಂದೂ ಮಾಡಿದ ಸಂಕಲ್ಪ ನನ್ನ ಮನಸ್ಸಿಗೆ ಬಂದಿತು. Try again ಎಂಬ ಉಷ್ಣೋತ್ಪಾದಕ ತತ್ತ್ವವನ್ನು ಕಣ್ಣ ಮುಂದೆ ಯಾವಾಗಲೂ ಇಡಬೇಕೆಂದು ಬಲ್ಲವರು ಹೇಳಿಯೇ ಇದ್ದಾರೆ. ಅದನ್ನು ಈ ವಿಷಯದಲ್ಲಿ ಜ್ಞಾಪಿಸಬೇಕು.

ಈ ರೀತಿ ನಿರಾಶೆಯ ಮಧ್ಯದಲ್ಲಿಯೂ, ಹೊಸ ಆಸೆಯನ್ನು, ಹೊಸ ಚೈತನ್ಯವನ್ನು ತುಂಬುವದಷ್ಟೇ ಅಲ್ಲ, ಆ ತಾತ್ಕಾಲಿಕ ಅಯಶಸ್ಸು, ಒಳ್ಳೆಯದಕ್ಕೇ ಆಯಿತು ಎಂಬ ಭಾವನೆಯನ್ನು ಹುಟ್ಟಿಸುವ ತಮ್ಮಣ್ಣಪ್ಪನವರ ವ್ಯಕ್ತಿತ್ವ ಹಳಕಟ್ಟಿಯವರನ್ನು ಯಾವಾಗಲೂ ಕೈಹಿಡಿದು ಮುಂದೆ ನಡೆಸಿದೆ.

ವ್ಯಕ್ತಿತ್ವವಿಕಾಸಕಾಲದಲ್ಲಿ ನಾವು ಯಾವ ರೂಢಿಗಳನ್ನು ಬಲಗೊಳಿಸಿಕೊಳ್ಳುತ್ತೇವೆಯೋ ಅವೇ ಮುಂದೆ ನಮ್ಮ ಜೀವನದ ಅಂಗಗಳಾಗುತ್ತವೆ; ಜೀವನಮಾರ್ಗವನ್ನು ನಿರ್ಧರಿಸಲೂ ಸಹಾಯಕವಾಗಬಹುದು. ಅದಕ್ಕಾಗಿ ವಿದ್ಯಾರ್ಥಿ ನಾನಾ ಚಟುವಟಿಕೆಗಳಲ್ಲಿ ತೊಡಗಬೇಕಾಗುತ್ತದೆ. ವ್ಯಕ್ತಿತ್ವದ ಸರ್ವತೋಮುಖ ವಿಕಾಸಕ್ಕೆ ಅಭ್ಯಾಸವಿಷಯ ಅವಶ್ಯ ಬೇಕು. ಮತ್ತು ನಾವು ಯಾವ ರೀತಿ ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕೆಂಬ ಆಶಯವಿದೆಯೋ

ಅದಕ್ಕನುಗುಣವಾದ ಇತರ ಚಟುವಟಿಕೆಗಳಲ್ಲಿ ನಿರತರಾಗಬೇಕಾಗುತ್ತದೆ. ಫ. ಗು. ಹಳಕಟ್ಟಿಯವರು ವೀರಶೈವಸಮಾಜದಲ್ಲಿ ಧುರಂಧರರಾಗಬೇಕು, ಕನ್ನಡ ವಾಙ್ಮಯದ — ಅದರಲ್ಲಿಯೂ ವೀರಶೈವ ವಾಙ್ಮಯದ—ಶೋಚನೀಯ ಸ್ಥಿತಿಯನ್ನು ಹೋಗಲಾಡಿಸಲು ದುಡಿಯಬೇಕು ಎಂಬ ತಮ್ಮ ಸಂಕಲ್ಪದಂತೆ— ತಮ್ಮಣ್ಣಪ್ಪನವರು ಆಗಾಗ ಹಳಕಟ್ಟಿಯವರು ಮಾಡಬೇಕಾದ ಇತರ ಕಾರ್ಯದ ಬಗೆಗೆ ತಿಳಿಸುತ್ತಿದ್ದರು.

ಬನಹಟ್ಟಿ
ಫೆಬ್ರುವರಿ, ೧೯೦೦

ಫಕೀರಪ್ಪನಿಗೆ—

ಅಭ್ಯಾಸವನ್ನು ಮನಸ್ಸುಗೊಟ್ಟು ಮಾಡಬೇಕು. ಪುಣೆಯ ಫ್ರೆಂಡ್ಸ್ ಅಸೋಸಿಯೇಶನ್‌ದ ಮುಖಾಂತರವಾಗಿ ಆಗುತ್ತಿರುವ ಎಲ್ಲ ವ್ಯಾಖ್ಯಾನಗಳಿಗೆ ಹೋಗಬೇಕು.

ತಮ್ಮಣ್ಣಪ್ಪನವರು ಕೇವಲ ಉಪದೇಶ ಮಾಡುತ್ತಿದ್ದರೆಂದಲ್ಲ. ಅವರೇ ಸಾಕಷ್ಟು ಓದುತ್ತಿದ್ದರು. ಅವರು ಕೆಲವು ಕೃತಿಗಳನ್ನು ರಚಿಸಿದ್ದಾರೆ. ತಮ್ಮಂ-ತೆಯೇ ಉಳಿದ ಜನರ ಓದಿನ ಹಸಿವೂ ಹಿಂಗಲು ರಬಕವಿಯಲ್ಲಿ 'ಶಂಕರಲಿಂಗ ದೇವಸ್ಥಾನ ಲಾಯ್‌ಬ್ರರಿ' ಸ್ಥಾಪಿಸಿದರು. ಹಳಟ್ಟಿಯವರು ಸಾಧ್ಯವಿದ್ದಷ್ಟು ಹೆಚ್ಚು ಕಲಿಯಬೇಕೆಂದು ತಮ್ಮಣ್ಣಪ್ಪನವರ ಇಚ್ಛೆಯಾಗಿತ್ತು. ಆದಕ್ಕಾಗಿ ಇತ್ತ ಹಳಕಟ್ಟಿಯವರು ಕಾಯದೆ ಅಭ್ಯಾಸ ನಡೆಸಿದಾಗಲೇ, ಮುಂದೆ ಏನು ಮಾಡಬೇಕೆಂಬುದನ್ನು ನಿಶ್ಚಯಿಸಿ, ಅನೇಕ ಪತ್ರಗಳಲ್ಲಿ ಕಾಣಿಸಿದ್ದರು. ಕೊನೆಗೊಮ್ಮೆ ಹಳಕಟ್ಟಿಯವರು ಎಂ.ಎ. ಕಲಿಯಬೇಕೆಂಬ ನಿರ್ಧಾರಮಾಡಿದರು. ಹಳಕಟ್ಟಿಯವರ ತಂದೆ ಬರೆದ ಒಂದು ಪತ್ರ—

ಬನಹಟ್ಟಿ
ಜನವರಿ, ೧೯೦೨

ಫಕೀರಪ್ಪನಿಗೆ—

ನೀನು ಎಂ.ಎ. ಪರೀಕ್ಷೆಯ ಅಭ್ಯಾಸವನ್ನು ಸಹ ಈಗಲೆ ಮಾಡಬೇಕೆಂಬ ಹಂಬಲವನ್ನು ಹೊರಗೆಡವಿರುತ್ತಿ. ಈ ಪ್ರಕಾರ ನಿನ್ನ ಉತ್ಸುಕತೆಯನ್ನು ನೋಡಿ ನನಗೆ ಅಭಿಮಾನ ಉಂಟಾಗುತ್ತದೆ.

ಈ ರೀತಿಯ ನಿರ್ಧಾರದ ಹಿಂದೆ ತಮ್ಮಣ್ಣಪ್ಪನವರ ಕೈವಾಡವಿದೆಯೆಂಬುದನ್ನವರು ಬಲ್ಲರು. ಎಂ.ಎ. ಪರೀಕ್ಷೆಯ ಅಭ್ಯಾಸ ಮಾಡಬೇಕೆಂಬ ನಿರ್ಧಾರವಾಯಿತು. ಯಾವ ವಿಷಯವನ್ನು ತೆಗೆದುಕೊಳ್ಳಬೇಕು? ಇದು

ಕನ್ನಡಿಗರ ದೃಷ್ಟಿಯಿಂದ ಅತಿ ಮಹತ್ವದ ನಿರ್ಣಯ. ಏಕೆಂದರೆ, ಅರ್ಥಶಾಸ್ತ್ರವನ್ನೋ, ರಾಜ್ಯಶಾಸ್ತ್ರವನ್ನೋ ಹಳಕಟ್ಟಿಯವರು ಆರಿಸಿದ್ದಿದ್ದರೆ, ಅವರು ಮುಂದೇನಾಗುವರು? ಅವರಿಂದ ಕನ್ನಡಕ್ಕೆ ಯಾವ ಸಹಾಯವಾಗುತ್ತಿತ್ತು? ಎಂಬುದು ಇದರಿಂದಲೇ ನಿರ್ಧಾರವಾಗುತ್ತಿತ್ತು. ಅದಕ್ಕಾಗಿ ತಮ್ಮಣ್ಣಪ್ಪನವರು ಹಳಕಟ್ಟಿಯವರಿಗೆ ಅನೇಕ ಸಲ ಮುಖತಃ ಹೇಳಿ, ಅವರು ಕನ್ನಡವನ್ನೇ ಮುಖ್ಯ ವಿಷಯವನ್ನಾಗಿ ತೆಗೆದುಕೊಳ್ಳುವಂತೆ ಮಾಡುವ ಪ್ರಯತ್ನದಲ್ಲಿ ಯಶಸ್ವಿಯಾದರು.

ಒಂದು ಪತ್ರದಲ್ಲಿ,

ಬನಹಟ್ಟಿ
ಜನವರಿ, ೧೯೦೨

ಗುರುಬಸಪ್ಪನಿಗೆ—

ಎಂ.ಎ. ಪರೀಕ್ಷೆಗೆ ಫಕೀರಪ್ಪನು ಕನ್ನಡ ಭಾಷೆಯನ್ನು ತಕ್ಕೊಳ್ಳಬೇಕೆಂಬ ಹೇತು ನನ್ನದಿರುವುದನ್ನು ಸಮಕ್ಷಮದಲ್ಲಿ ಆತನಿಗೆ ತಿಳಿಸಿದ್ದೇನೆ.

ಕಾರಣಾಂತರಗಳಿಂದ ಹಳಕಟ್ಟಿಯವರು ಎಂ.ಎ. ಪರೀಕ್ಷೆಗೆ ಕುಳಿತುಕೊಳ್ಳಲಿಲ್ಲ. ಆ ವಿಷಯ ಬೇರೆ.

ಫ. ಗು. ಹಳಕಟ್ಟಿಯವರು ಬಿ.ಎ., ಎಲ್‌ಎಲ್.ಬಿ. ಮುಗಿಸಿ ವಕೀಲರಾದರು. ವಕೀಲರಾದಮೇಲೆ ಏನು ಮಾಡಬೇಕೆಂಬುದನ್ನು ಯಾರೂ ಊಹಿಸಬೇಕಾಗಿಲ್ಲ. ಒಂದು ಕ್ಷೇತ್ರವನ್ನಾರಿಸಿಕೊಂಡು, ವಕೀಲಿ ಪ್ರಾರಂಭಿಸುವದು. ಕೆಲವರ್ಷ ವಕೀಲಿ ಮಾಡಿ, ಒಳ್ಳೆಯ ಸಂಪಾದನೆಯಾಗಹತ್ತಿದರೆ ವಕೀಲರಾಗಿ ಮುಂದುವರಿಯುವದು, ಇಲ್ಲವಾದರೆ ಸರಕಾರೀ ನೌಕರಿಯೊಂದಕ್ಕೆ ಅರ್ಜಿ ಹಾಕುವದು. ಇದಿಷ್ಟನ್ನು ವಕೀಲರು ಮಾಡಬಹುದು ಎಂಬುದು ಜನರ ತಿಳಿವಳಿಕೆ. ಇದರಷ್ಟೇ ಮಹತ್ವದ ಅಂಶವೆಂದರೆ ಎಲ್ಲಿ ವಕೀಲಿ ಪ್ರಾರಂಭಿಸಬೇಕೆನ್ನುವದು. ಇಲ್ಲಿ ಹಳಕಟ್ಟಿಯವರ ಜೀವನದ ದಿಕ್ಕನ್ನೇ ಬದಲಿಸುವ ಎರಡು ನಿರ್ಣಯಗಳಲ್ಲಿ ಒಂದು ರೂಪುಗೊಂಡಿತು. ಧಾರವಾಡದ ಫ. ಗು. ಹಳಕಟ್ಟಿಯವರು ವಕೀಲಿ ಪ್ರಾರಂಭಿಸಬೇಕಾದುದು ಧಾರವಾಡದಲ್ಲಿ ತಾನೆ? ಆದರೆ ಅವರು ವಿಜಾಪುರದಲ್ಲಿ ವಕೀಲಿ ಪ್ರಾರಂಭಿಸಿದರು. ಇಲ್ಲಿಯವರೆಗೆ ಹಳಕಟ್ಟಿಯವರನ್ನು ಕುರಿತು ಬರೆದ ಲೇಖನಗಳು ಮತ್ತು ಗ್ರಂಥಗಳಲ್ಲಿ ಇದನ್ನು ವಿಧಿಯ ಸಂಕಲ್ಪವೆಂದು ಗಣಿಸಲಾಗಿದೆ. ಇಲ್ಲವಾದರೆ ಎಲ್ಲ ಊರು ಬಿಟ್ಟು, ಅದರಲ್ಲಿಯೂ ಹುಟ್ಟೂರು ಧಾರವಾಡವನ್ನೇ ಬಿಟ್ಟು ಹಿಂದುಳಿದ ಜಿಲ್ಲೆಯಾದ

ದೂರದ ವಿಜಾಪುರವನ್ನೇಕೆ ಅವರು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳುತ್ತಿದ್ದರು ?

ಈ ಮಹತ್ವದ ನಿರ್ಣಯದಲ್ಲಿ ಹಳಕಟ್ಟಿಯವರಿಗಿಂತ ತಮ್ಮಣ್ಣಪ್ಪನವರ ಕೈವಾಡವೇ ಹೆಚ್ಚಿಗಿದೆ. ಅವರು ಈಗಾಗಲೇ ಹೇಳಿದಂತೆ ಹಳಕಟ್ಟಿಯವರು ಏನು ಮಾಡಬೇಕು ? ಎಲ್ಲಿ ? ಇವೆಲ್ಲವುಗಳನ್ನು ವಿಚಾರಿಸಿ ನಿರ್ಧಾರ ಮಾಡಿದ್ದರು. ತಮ್ಮಣ್ಣಪ್ಪನವರು ಗುರುಬಸಪ್ಪನವರಿಗೆ ಬರೆದ ಒಂದು ಪತ್ರ—

ಬನಹಟ್ಟಿ
ಫೆಬ್ರುವರಿ, ೧೯೦೫

ಗುರುಬಸಪ್ಪನಿಗೆ—

ಫಕೀರಪ್ಪನು ಇಂತಹ ಜಿಲ್ಲೆಯಲ್ಲಿಯೇ ವಕೀಲಿ ಸನದು ತಕ್ಕೊಳ್ಳಬೇಕೆಂಬ ನನ್ನ ಆಗ್ರಹವಿಲ್ಲ. (೧) ವಿಜಾಪುರದ ಹವೆ ನೆಟ್ಟಗೆ. (೨) ಈಗ ಅಲ್ಲಿ ಲಿಂಗಾಯತ ವಕೀಲರು ಯಾರೂ ಇಲ್ಲದ್ದರಿಂದ ಫಕೀರಪ್ಪನ ತೇಜವು ಅಲ್ಲಿ ಬಿದ್ದೀತೆಂದು ನನ್ನ ಅನುಮಾನ. (೩) ಇಡೀ ವಿಜಾಪುರ ಜಿಲ್ಲೆಯಲ್ಲಿ ರಾಯಪ್ಪನವರ ಗುರುತು ಇರುವದರಿಂದ ಫಕೀರಪ್ಪನ ಕಡೆಗೆ ಖಟ್ಲೆಗಳು ಬರಲು ಅನುಕೂಲ ಮಾಡಿಕೊಡುತ್ತಾರೆ. (೪) ಧಾರವಾಡದಲ್ಲಿ ವಕೀಲರು ಬಹಳ. (೫) ಜನ್ಮಸ್ಥಳದಲ್ಲಿ ಬೇಗನೆ ವರ್ಚಸ್ಸು ಆಗಲಿಕ್ಕಿಲ್ಲೆಂಬ ಭಾವ.

ವಕೀಲಿ ಪರೀಕ್ಷೆ ಪಾಸಾಗಿ ಜೀವನದಲ್ಲಿ ಯಶಸ್ವಿ ವಕೀಲನಾಗಬೇಕಾದರೆ ಎಂಥ ಪರಿಸರ ಬೇಕು ? ಎಂಬುದನ್ನು ಸಾದ್ಯಂತವಾಗಿ ವಿಚಾರಮಾಡಿ, ಹಳಕಟ್ಟಿಯವರಿಗೆ ೪-೬ ಪತ್ರ ಬರೆದರು. ಕೊನೆಗೆ ಹಳಕಟ್ಟಿಯವರು ವಿಜಾಪುರ ಜಿಲ್ಲೆಯನ್ನು ತಮ್ಮ ವಕೀಲಿವ್ಯವಸಾಯದ ಕ್ಷೇತ್ರವಾಗಿ ಮಾಡಿಕೊಂಡರು.

ಆದರೆ ಇದಾವುದೂ, ಹಳಕಟ್ಟಿಯವರು ವಚನಪಿತಾಮಹರಾಗುವ ಸೂಚನೆಯನ್ನೊಳಗೊಂಡಿರಲಿಲ್ಲ. ವಿಜಾಪುರ ಜಿಲ್ಲೆಯನ್ನು ಹಳಕಟ್ಟಿಯವರು ತಮ್ಮ ವಕೀಲಿವ್ಯವಸಾಯಕ್ಕೆ ಆರಿಸಿಕೊಳ್ಳುವಂತೆ ಮಾಡುವಲ್ಲಿ ತಮ್ಮಣ್ಣಪ್ಪನವರ ಇಚ್ಛೆ—ಅವರು ಯಶಸ್ವಿ ವಕೀಲರಾಗಲಿ ಎಂಬುದಲ್ಲ. ವಕೀಲಿಯಲ್ಲಿ ಸಂಪಾದನೆಯಾಗಿ ಹಣದ ತೊಂದರೆ ಬರದಿರಲಿ ಎಂಬುದು. ಈ ರೀತಿ ಜೀವನದ ಒಂದು ಪ್ರಮುಖ ಸಮಸ್ಯೆ ಪರಿಹಾರವಾದರೆ, ಅವರ ಜೀವನಧ್ಯೇಯದ ಕೆಲಸ ನಿಶ್ಚಿಂತವಾಗುತ್ತದೆ ಎಂಬ ಕಾರಣ. ತಮ್ಮಣ್ಣಪ್ಪನವರು ವೀರಶೈವಸಮಾಜದ ಅವನತಿಯನ್ನು ಕಂಡು ಮಮ್ಮಲ ಮರುಗುತ್ತಿದ್ದರು. ಅದರ ಉದ್ಧಾರಕ್ಕಾಗಿ ಎಷ್ಟು ಜನ ದುಡಿದರೂ ಕಡಿಮೆ ಎಂದೇ ಒಳ್ಳೆಯ ಮೇಧಾವಿಗಳು ಉಚ್ಚಶಿಕ್ಷಣ ಪಡೆಯಲಿ ಎಂದು ಸರ್ವದಾ ಆಶಿಸುತ್ತಿದ್ದರು. ಉಚ್ಚ ಶಿಕ್ಷಣ ಪಡೆಯುವುದು ಸಮಾಜದ ಉದ್ಧಾರಕ್ಕಾಗಿ ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು.

ವೀರಶೈವ ಸಮಾಜ ಸರ್ವವಿಧದಲ್ಲಿಯೂ ಮುಂದೆ ಬರಬೇಕಾಗಿದೆ. ಎಲ್ಲ ಜನರು ವೀರಶೈವ ಧರ್ಮದ ಬಗೆಗೆ ಮಾತನಾಡುತ್ತಾರೆ. ಆದರೆ ಅವರಲ್ಲಿ ಎಷ್ಟು ಜನರಿಗೆ ವೀರಶೈವ ಧರ್ಮ ತಿಳಿದಿದೆ? ಆದುದರಿಂದ ಅದನ್ನು ಆಳವಾಗಿ ಅಭ್ಯಸಿಸಿ, ಜನರಿಗೆ ತಿಳಿಸಿ, ಅವರಲ್ಲಿ ಐಕ್ಯವನ್ನುಂಟುಮಾಡುವ ವ್ಯಕ್ತಿಯೊಬ್ಬ ಬೇಕಾಗಿದ್ದಾನೆ — ಎಂಬುದು ಅವರ ಅರಿತಕ್ಕೆ ಬಂದಿತ್ತು. ಅವರ ಒಂದು ಪತ್ರದಲ್ಲಿ :

ಬನಹಟ್ಟಿ
ಮಾರ್ಚ್ ೯, ೧೯೦೮

ಫಕೀರಪ್ಪನಿಗೆ—

ಎಲ್ಲರೂ ವೀರಶೈವ ಧರ್ಮ, ಧರ್ಮ ಎಂದು ಒದರಾಡುತ್ತಾರೇ ಹೊರತು ಅದರ ಉತ್ಪತ್ತಿ, ಅದರ ಬೆಳವಣಿಗೆ, ಅದರಲ್ಲಿ ಆಗುತ್ತಬಂದ ಸ್ಥಿತ್ಯಂತರಗಳು ಮತ್ತು ಧರ್ಮಪ್ರಕಾರದಲ್ಲಿ ಈ ನಮ್ಮ ಮತವು ಹಿಂದುಸ್ಥಾನದಲ್ಲಿ ಮಾಡಿದ, ಹಾಗು ಮಾಡತಕ್ಕದ್ದಿರುವ ಕಾರ್ಯವು—ಇವೆಲ್ಲವುಗಳ ಬಗ್ಗೆ ಮಾರ್ಮಿಕ ಸಂಗತಿಗಳ ವಿಚಾರ ಮಾಡಿದವರು ಎಷ್ಟು ಜನರಿದ್ದಾರೆ?

ವೀರಶೈವ ಸಮಾಜವು ಅವನತಿಯ ಪರೆಯನ್ನು ಕಳಚಿ ಪ್ರಗತಿಪಥದಲ್ಲಿ ನಡೆಯಬೇಕಾದ ಸಂದರ್ಭದಲ್ಲಿ, ಅದರ ಅಭ್ಯುದಯಕ್ಕಾಗಿ ಇವರಂತೆಯೇ ಇನ್ನೂ ಅನೇಕ ಜನ ಪ್ರಯತ್ನಿಸಿದರು. ಅಂಥವರಲ್ಲಿ ವೀರಶೈವ ಸಮಾಜದ ಉದ್ಧಾರಕ್ಕಾಗಿ, ಹೊಸ ರೀತಿಯಲ್ಲಿ ಒಂದು ಪ್ರಯತ್ನ ಮಾಡಿದವರು—ಪೂಜ್ಯ ಹಾನಗಲ್ ಕುಮಾರಸ್ವಾಮಿಗಳು. ಆದರೆ ಇಷ್ಟರಿಂದಲೇ ತೃಪ್ತವಾಗುವ ಜೀವ ತಮ್ಮಣ್ಣಪ್ಪನವರದಾಗಿರಲಿಲ್ಲ. ಕಾಲಮಾನಕ್ಕನುಸರಿಸಿ, ನಾವು ಬಹಳ ವೇಗದಿಂದ ಮುನ್ನಡೆಯಬೇಕಾಗಿದೆ. ಈ ಮುನ್ನಡೆಯಲ್ಲಿ ಪ್ರಪಂಚ, ಪಾರಮಾರ್ಥ ಎರಡನ್ನೂ ಕೂಡಿಸಿಕೊಂಡು ಸಾಗಬೇಕು. ಅಷ್ಟೇ ಏಕೆ, ಲೌಕಿಕದ ಕಡೆಗೆ ಧರ್ಮಕ್ಕಿಂತ ಹೆಚ್ಚು ದೃಷ್ಟಿಹರಿಸದಿದ್ದರೆ ನಾವು ಪ್ರಗತಿಹೊಂದಲಾರೆವು— ಎಂಬ ಭಾವನೆಯಿತ್ತು.

ಅವರ ಒಂದು ಪತ್ರ :

ಬನಹಟ್ಟಿ
ಜನವರಿ, ೧೯೦೮

ಫಕೀರಪ್ಪ—

ಶ್ರೀ ಹಾನಗಲ್ ಕುಮಾರಸ್ವಾಮಿಗಳು ಯೋಜಿಸಿದ ಶಿವಯೋಗಮಂದಿರದ ಸಂಗತಿಯು ತಿಳಿಯಿತು. ಅವರ ಹಳಬುತನಕ್ಕೆ ಇವೆಲ್ಲವೂ ಸರಿ

ಯಾದದ್ದೆ! ಅವರಿಗೆ ಧರ್ಮಾಂತರ್ಗತ ಕರ್ಮಮಾರ್ಗದ ಮಹತ್ವವು ಹೆಚ್ಚು ತೋರುತ್ತದೆ. ಆದರೂ ಸಂಪೂರ್ಣವಾಗಿ ಧರ್ಮಗುರುಗಳಿಗೆ ಅನುಸಾರವಾಗಿಯೇ ನಡೆಯುವದು ಸಾಂಪ್ರತಕ್ಕೆ ಹಿತಕರವಾಗಿಲ್ಲ. ಮಿಕ್ಕ ಎಲ್ಲ ಬಗೆಗಳಿಂದಲೂ ನಾವು ಮುಂದೆ ಬೀಳದ ಹೊರತು ನಮ್ಮ ಕಲ್ಯಾಣವಾಗದು.

ಭರತಖಂಡದಲ್ಲಿ ನಮ್ಮ ಧರ್ಮದ ಮಹತ್ವವು ಬೆಳೆಯಬೇಕಾದರೆ ಲೌಕಿಕ ವಿದ್ಯೆಯ ಮಹತ್ವ ಬಹಳವಿರುತ್ತದೆ. ಇದಕ್ಕೆ ಧರ್ಮಗುರುಗಳ ಸಹಾನುಭೂತಿ ದೊರೆತರೆ, ನಮ್ಮ ಪ್ರಗತಿಯು ಬೇಗನೆ ಆಗುವದು. ಆದರೆ ಲೌಕಿಕದ ಕಡೆಗೆ ದುರ್ಲಕ್ಷ್ಯ ಮಾಡಿ, ಧರ್ಮಗುರುಗಳ ಹೇಳಿಕೆಯಂತೆ ನಡೆದರೆ, ನಾವು ಎಂದೂ ಮುಂದೆ ಬೀಳಲಾರೆವು.

ವೀರಶೈವ ಧರ್ಮದ ಮುನ್ನಡೆಗೆ ಬೇಕಾದುದುದೇನು ಎಂಬ ಸ್ಪಷ್ಟ ಕಲ್ಪನೆಯನ್ನು ಅವರು ಮಾಡಿಕೊಂಡಿದ್ದರು. ಅದಕ್ಕಾಗಿ, ಸುಶಿಕ್ಷಿತ ಜನ ದುಡಿಯದೆ ಹೋದರೆ, ಅವರು ಸಮಾಜದ ಋಣವನ್ನು ತೀರಿಸದೆ ಹೋದಂತಾಗುತ್ತದೆ. ಮುಖ್ಯವಾಗಿ ಸುಶಿಕ್ಷಿತರು ಮಾಡಬೇಕಾದ ಕರ್ತವ್ಯವೇನು ಎಂಬುದನ್ನು ಒಂದು ಪತ್ರದಲ್ಲಿ ಬರೆದಿದ್ದಾರೆ :

ಧಾರವಾಡ
ಅಕ್ಟೋಬರ್, ೧೯೧೧

ಪ್ರಿಯ ಫಕೀರಪ್ಪನಿಗೆ—

ಈ ಜಗತ್ತಿನಲ್ಲಿ ಸ್ವಾರ್ಥವನ್ನು ಸಾಧಿಸಿಕೊಳ್ಳುವದು ಪ್ರತಿಯೊಂದು ಪ್ರಾಣಿಯ ನೈಸರ್ಗಿಕ ಗುಣವಾಗಿದೆ. ಇದಕ್ಕೆ ಅಷ್ಟು ಇಂಬುಗೊಡದೆ ಕೈಲಾದ ಮಟ್ಟಿಗೆ ತಮ್ಮ ಸಮಾಜದ ಹಿತಕ್ಕೆ ಲಕ್ಷ್ಯಗೊಡುವದು ಮನುಷ್ಯಜನ್ಮದ ಮುಖ್ಯ ಕರ್ತವ್ಯವಾಗಿದೆ. ಈಗಿನ ಕಾಲದಲ್ಲಿ ಸುಶಿಕ್ಷಿತರಿಗೆ ಎರಡು ಮಾರ್ಗಗಳುಂಟು. ಮೊದಲನೇದು ಸರಕಾರಿ ಉದ್ಯೋಗವು. ಇದರಿಂದ ಸ್ವಾತಂತ್ರ್ಯವು ನಷ್ಟವಾಗುತ್ತದೆ. ಸಾರ್ವಜನಿಕ ಕಾರ್ಯಗಳೇ 'ನನ್ನ ಜನ್ಮದ ಸಾರ್ಥಕ'ವೆಂದು ನಂಬಿರುವವನಿಗೆ ಉದ್ಯೋಗವು ತಕ್ಕದ್ದಲ್ಲ. ಸ್ವತಂತ್ರ ಉದ್ಯೋಗವೇ ಸುಶಿಕ್ಷಿತರಿಗೆ ಎರಡನೇ ಮಾರ್ಗವೆಂದು ನಾನು ಎಣಿಸುತ್ತೇನೆ.

ಈ ರೀತಿ, ಸಮಾಜದ ಉದ್ಧಾರದ ಬಗೆಗೆ ಸ್ಪಷ್ಟಕಲ್ಪನೆ ಹೊಂದಿ, ಅದಕ್ಕಾಗಿ ಸುಶಿಕ್ಷಿತರು ಮಾಡಬೇಕಾದ ಕರ್ತವ್ಯವನ್ನು ಬಗೆದು, ತಮ್ಮಣ್ಣಪ್ಪನವರು ಹಳಕಟ್ಟಿಯವರಿಗೆ ಸಾರ್ವಜನಿಕ ಕಾರ್ಯಕ್ಕಾಗಿ, ವೀರಶೈವಧರ್ಮದ ಅಭ್ಯುದಯಕ್ಕಾಗಿ, ತಮ್ಮ ಜೀವನವನ್ನು ಮೀಸಲಿಡಲು ಹೇಳುತ್ತಿದ್ದರು. ವಿಜಾಪುರಕ್ಕೆ ಬಂದು ಹಳಕಟ್ಟಿಯವರು ವಕೀಲಿ ಪ್ರಾರಂಭಿಸಿದರು. ವಕೀಲಿಯೊಡನೆ

ಸಮಾಜದ ಉನ್ನತಿಗಾಗಿ ಅವರು ಕೈಕೊಳ್ಳಬೇಕಾದ ಕಾರ್ಯಗಳ ರೂಪರೇಷೆಗಳನ್ನು ಒಂದೊಂದಾಗಿ ತಮ್ಮಣ್ಣಪ್ಪನವರು ತಿಳಿಸುತ್ತಿದ್ದರು. ಒಂದು ಜಿಲ್ಲಾ ಕಮಿಟಿಯನ್ನು ಸ್ಥಾಪಿಸಬೇಕು. ನಂತರ ತಾಲೂಕಿಗೊಂದರಂತೆ ಒಂದೊಂದು ಕಮಿಟಿ, ನಂತರ ಗ್ರಾಮಕ್ಕೊಂದರಂತೆ ಸ್ಥಾನಿಕ ಸುಶಿಕ್ಷಿತರನ್ನೊಳಗೊಂಡ ಕಮಿಟಿ—ಹೀಗೆ ಮಾಡಿದರೆ ಏನಾದರೂ ಮಾಡಲು ಸಾಧ್ಯವಾಗುತ್ತದೆಯೆಂದು ನಂಬಿ, ಆ ದಿಶೆಯಲ್ಲಿ ಹಳಕಟ್ಟಿಯವರು ದುಡಿಯುವಂತೆ ಪ್ರೇರೇಪಿಸಿದರು. ಇದರ ಫಲವಾಗಿ ಹಳಕಟ್ಟಿಯವರು ಜಿಲ್ಲಾ ಕಮಿಟಿಯನ್ನು ಸ್ಥಾಪಿಸಲು ನಿರ್ಧರಿಸಿದರು. ಇದನ್ನು ತಿಳಿದು ತಮ್ಮಣ್ಣಪ್ಪನವರು ಬರೆದ ಒಂದು ಪತ್ರ:

ಬನಹಟ್ಟಿ
ಜನೆವರಿ, ೧೯೦೪

ಫಕೀರಪ್ಪನಿಗೆ—

ನೀವು ವಿಜಾಪುರ ಜಿಲ್ಲೆಯ ಕಮಿಟಿಯನ್ನು ನಿಯಮಿಸುವ ಉದ್ದೇಶದಿಂದ ನಡೆಯಿಸಿದ ಯತ್ನವು ಯೋಗ್ಯವಾದದ್ದು. ಇದರೊಡನೆ ಬೋರ್ಡಿಂಗ ಕಟ್ಟಡಕ್ಕಾಗಿ ಒಂದು ಸ್ವತಂತ್ರ ಧನನಿಧಿಯನ್ನು ಸ್ಥಾಪಿಸಬೇಕು.

ಇನ್ನೊಂದು ಪತ್ರ :

ಬನಹಟ್ಟಿ
ಮಾರ್ಚ್ ೯, ೧೯೦೪

ಫಕೀರಪ್ಪನಿಗೆ—

ವೀರಶೈವ ಜಿಲ್ಲಾ ಸಭೆಯ ವ್ಯಾಪ್ತಿ ಇಡೀ ಜಿಲ್ಲೆಯೊಳಗೆಲ್ಲ ಆಗಬೇಕಾದರೆ, ಬಹಳೇ ಯತ್ನದ ಅಗತ್ಯವಿರುವದು. ನಮ್ಮ ಜನರು ಅಶಿಕ್ಷಿತರು ಇರುವದರಿಂದ ಕೇವಲ ಪತ್ರವ್ಯವಹಾರದಿಂದ ಇಷ್ಟಹೇತು ಸಿದ್ಧಿಸಲಾರದು. ನಮ್ಮ ಜನರಿಗೆ ಕಾನ್‌ಸ್ಟಿಟ್ಯೂಶನ್‌ದ ಅಂಕೆಯಿಲ್ಲ. ಮೊದಲು ಪ್ರತ್ಯೇಕ ತಾಲೂಕಿನ ಊರಿಗೆ, ಆಮೇಲೆ ತಾಲೂಕಿನ ಪ್ರಮುಖ ಗ್ರಾಮಗಳಿಗೆ ಹೋಗಿ ಅಲ್ಲಿಯ ಜನರಿಗೆ ಭಾಗಸಭೆಗಳ ಮಹತ್ವ ತಿಳುಹಿಸಿ, ಅಲ್ಲಿಯ ಹೊಸ ಪರಿಸ್ಥಿತಿಯ ಅರಿಕೆಯುಳ್ಳ, ಶಿಕ್ಷಿತ ಜನರ ಕೈಯಲ್ಲಿ ಭಾಗಸಭೆಗಳ ಸೂತ್ರಗಳನ್ನು ಕೊಟ್ಟು, ಈ ರೀತಿ ಕೆಲಸ ನಡೆಸಬಹುದು.

ಈ ರೀತಿ, ಹಳಕಟ್ಟಿಯವರನ್ನು ಸಮಾಜಹಿತ ಕಾರ್ಯಕ್ಕೆ ಅಣಿಮಾಡಿ, ತಾವು ಹಿಂದೆ ನಿಂತು, ಸರ್ವವಿಧ ಮಾರ್ಗದರ್ಶನ ಮಾಡುವದು ತಮ್ಮಣ್ಣಪ್ಪನವರು ತಾವೇ ವಹಿಸಿಕೊಂಡ ಕೆಲಸವಾಗಿತ್ತು. ಕೆಲಸಮಾಡಬೇಕೆಂಬ ಉತ್ಸಾಹ ಹಳಕಟ್ಟಿಯವರಿಗೆ ಇದ್ದರೂ, ಈ ಕೆಲಸಕ್ಕಾಗಿಯೇ ತಮ್ಮ ಜೀವನವನ್ನು

ಮುಡಿಪಾಗಿಡಬೇಕೆ? ಬೇಡವೆ? ಎಂಬ ಸಂದಿಗ್ಧದಲ್ಲಿ ಅವರಿದ್ದರು. ಸಮಾಜಕ್ಕಾಗಿಯೇ ತಮ್ಮನ್ನು ಸಂಪೂರ್ಣ ಅರ್ಪಿಸಿಕೊಂಡರೆ ತಮ್ಮನ್ನು ಅವಲಂಬಿಸಿದ ಕುಟುಂಬದ ಗತಿ ಏನು? ಇಂಥ ಕಾರ್ಯಗಳಲ್ಲಿಯೇ ಸಂಪೂರ್ಣ ತೊಡಗಿಬಿಟ್ಟರೆ, ವಕೀಲಿಗೂ ವೇಳೆ ದೊರೆಯದೆ ಆದರಿಂದ ಯಾವ ಆದಾಯವೂ ಬರಲಿಕ್ಕಿಲ್ಲ. ಅದಕ್ಕಾಗಿ ಸರಕಾರಿ ನೌಕರಿ ಮಾಡಲೆ ಎಂಬ ಚಾಂಚಲ್ಯ ಸದಾ ಅವರನ್ನು ಆವರಿಸಿತ್ತು. ನೌಕರಿ ಮಾಡಬೇಕೆಂಬ ನಿರ್ಧಾರವೇ ಕೊನೆಗೊಮ್ಮೆ ಗಟ್ಟಿಗೊಂಡರೆ ಆದರಿಂದ ಸಮಾಜಕ್ಕೆ ಖಂಡಿತ ಹಾನಿ ಎಂದು ತಮ್ಮಣ್ಣಪ್ಪನವರು ಆ ದಿಶೆಯಲ್ಲಿ ಮುಂದುವರಿಯಲು ಬಿಡಲೇ ಇಲ್ಲ. ಈ ಸಂದರ್ಭದಲ್ಲಿ ಅವರು ಬರೆದ ಪತ್ರಗಳು ಉತ್ಕೃಷ್ಟವಾಗಿವೆ. ಅವುಗಳಲ್ಲಿ ಕಂಡುಬರುವ ಸಮಾಜದ ಉಚಿತ ಪರಿಜ್ಞಾನ, ಉದ್ಧಾರದ ಕಳಕಳಿ, ಕೈಕೊಳ್ಳಬೇಕಾದ ಕಾರ್ಯದ ನಿಶ್ಚಿತಜ್ಞಾನ, ಆ ಮಾರ್ಗವನ್ನು ಹಿಡಿದರೆ ಒದಗುವ ಅಡೆತಡೆಗಳು, ಮಾಡಬೇಕಾದ ತ್ಯಾಗ —ಈ ಭಾವಗಳಿಂದ ಈ ಪತ್ರಗಳು ಅಮೂಲ್ಯವಾಗಿವೆ. ನೌಕರಿ ಸೇರಬೇಕೆ? ಸ್ವತಂತ್ರವೃತ್ತಿಯಲ್ಲಿ ತೊಡಗಿ, ವೀರಶೈವ ಸಮಾಜ, ಸಾಹಿತ್ಯಗಳ ಅಭಿವೃದ್ಧಿಗಾಗಿ ಯತ್ನಿಸಬೇಕೆ? ಎನ್ನುವ ವಿಷಯದಲ್ಲಿ ಕೈಕೊಳ್ಳಬೇಕಾದ ನಿರ್ಣಯ— ಹಳಕಟ್ಟಿಯವರ ಜೀವನದ ಎರಡನೆಯ ಮಹತ್ವದ ನಿರ್ಣಯ. ಈ ನಿರ್ಣಯದ ಮೇಲೆಯೇ ಸಮಾಜದ, ಸಾಹಿತ್ಯದ ಏಳಿಗೆ ಅವಲಂಬಿಸಿದ್ದವು. ಹಳಕಟ್ಟಿಯವರು ವಕೀಲರಾಗುವರೋ, ವಚನಪಿತಾಮಹರಾಗುವರೋ ಎನ್ನುವ ವಿಷಯ ಈ ನಿರ್ಧಾರವನ್ನವಲಂಬಿಸಿತ್ತು. ಈ ಸಮಾಜದ ಏಳಿಗೆಗಾಗಿಯೇ ಆಗಬೇಕೆಂಬ ಕಳಕಳಿಯಿಂದ ತಮ್ಮಣ್ಣಪ್ಪನವರು ಬರೆದ ಪತ್ರ: ನೋಡಿ.

ಬನಹಟ್ಟಿ
ಮಾರ್ಚ್, ೧೯೦೮

ಫಕೀರಪ್ಪನಿಗೆ,

ಸರಕಾರಿ ನೌಕರಿಯನ್ನು ಕುರಿತು ಬರೆದ ಸಂಗತಿಯು ತಿಳಿಯಿತು. ನಾನು ಸರಕಾರಿ ನೌಕರಿ ಮಾಡಬಾರದೆನ್ನುವ ಪಕ್ಷದವನಲ್ಲ. ನಿಮಗೆ ಉತ್ಪನ್ನ ಕಡಿಮೆಯಾದ ಪಕ್ಷದಲ್ಲಿ ಸೌ|| ಭಾಗೀರಥಿಯು ಇಸ್ಟೇಟಿನ ವ್ಯವಹಾರದಲ್ಲಿ ಆದ ಲಾಭದ ಸಹಾಯವು ಸಹಜವಾಗಿ ಸಿಕ್ಕುತ್ತದೆ.

ನಮ್ಮ ವೀರಶೈವ ಸಮಾಜವು ಬಹಳ ಅವನತಿಯಲ್ಲಿ ಬಿದ್ದಿರುವದು. ನಮ್ಮ ಸಮಾಜದ ಹಿತಕ್ಕಾಗಿಯೇ ಪರಿಶ್ರಮ ಮಾಡುವವರು ಜಿಲ್ಲೆಗೆ ೧/೨ ಜನ ಸಹ ಇಲ್ಲ. ತಾಲೂಕಿನಲ್ಲಂತೂ ಇಲ್ಲವೇ ಇಲ್ಲ. ಇಂತಹ ಸ್ಥಿತಿಯಲ್ಲಿ ಜಿಲ್ಲೆಯಲ್ಲಿ ತಮ್ಮಂತಹರು ಒಬ್ಬಿಬ್ಬರೂ ಸಹ ನೌಕರಿಗೆ ಸೇರ್ಪಡೆಯಾದರೆ ಸಮಾಜದ ದುರ್ದೆಸೆಯೇ ಸರಿ. ತಮಗೆ ವೀರಶೈವ ಸಮಾಜದ ವಿಷಯಕ್ಕೆ

ಇರುವ ಜ್ಞಾನವೂ, ಅವರು ಮುಂದೆಬೀಳಲಿಕ್ಕೆ ಮಾಡಬೇಕಾದ ಕರ್ತವ್ಯಗಳೂ ಚೆನ್ನಾಗಿ ಗೊತ್ತಿವೆ.......

ನಮ್ಮ ವೀರಶೈವ ಸಮಾಜದ ಸಾಂಗೋಪಾಂಗ ಇತಿಹಾಸವು ಹೊರಬೀಳಬೇಕಾಗಿದೆ. ಅದಕ್ಕಾಗಿ ಎಷ್ಟೋ ಶೋಧಗಳು ಮಾಡಬೇಕಾಗಿದೆ. ಮತ್ತು ಆದ ಶೋಧಗಳ ಮೇಲೆ ಮನನ ಮಾಡಿ, ಹೊರಟ ಸಿದ್ಧಾಂತಗಳನ್ನು ಪ್ರಸಿದ್ಧಪಡಿಸಿ, ನಮ್ಮಲ್ಲಿ ಐಕ್ಯವನ್ನು, ಹೊಸ ಚೈತನ್ಯವನ್ನು ಹುಟ್ಟಿಸಬೇಕಾಗಿದೆ. ಈ ಕೆಲಸವನ್ನು ಯಾರು ಮಾಡಬೇಕು? ಯಾರಿಗೆ ಶಕ್ತಿಯುಂಟು? ಮತ್ತು ಯಾರಿಂದ ಈ ಕೆಲಸವನ್ನು ಮಾಡಲಾದೀತು? ಈ ಮೂರು ಪ್ರಶ್ನೆಗಳ ವಿಚಾರ ಮಾಡಿರಿ. ಅಂದರೆ ನೀವು ಯಾವ ಮಾರ್ಗವನ್ನು ಹಿಡಿಯಬೇಕೆಂಬುದು ಇದರಿಂದ ಗೊತ್ತಾದೀತು.

ವೀರಶೈವ ಮತದೊಳಗಿನ ಎಲ್ಲ ಸುಶಿಕ್ಷಿತರು ನೌಕರಿಯಲ್ಲಿಯೇ ಬೀಳುವದು ಸರ್ವಥಾ ಅಯೋಗ್ಯವಾದದ್ದು.

ಇಂತಹ ನಿಸ್ಸ್ವಾರ್ಥ, ಸಮಾಜಹಿತೈಕದೃಷ್ಟಿಯ ಭಾವ, ಪರಿಣಾಮ ಬೀರದೇ ಹೋದೀತೆ? ಹಳಕಟ್ಟಿಯವರೂ ಈ ಜೀವನಮಾರ್ಗಕ್ಕೆ ಒಪ್ಪಿಕೊಂಡರು. ಈ ಒಪ್ಪಿಗೆಯ ಪತ್ರಕ್ಕೆ ಬರೆದ ಮಾರೋಲೆ ಕೆಳಗಿನದು—

ಬನಹಟ್ಟಿ
ಮೇ, ೧೯೦೮

ಫಕೀರಪ್ಪನಿಗೆ—

ನಾನು ಸರಕಾರಿ ನೌಕರಿಯ ಸಂಬಂಧದಿಂದ ಬರೆದ ಅಭಿಪ್ರಾಯವು ನಿಮ್ಮ ಮನಸ್ಸಿಗೆ ಸಮ್ಮತವಾದುವನ್ನು ತಿಳಿದು ಸಂತೋಷವಾಯಿತು. ನಮ್ಮ ಸಮಾಜದ ನಿಜವಾದ ಇತಿಹಾಸವನ್ನು ಶೋಧಿಸುವ ಸಲುವಾಗಿ ತಾವು ಮಾರ್ಮಿಕ ರೀತಿಯಿಂದ ನಡೆಸಿದ ವಾಚನವು, ನಮ್ಮ ಸಮಾಜದ ಹಿತವನ್ನು ಮಾಡದೆ ಬಿಡದು. ತಮ್ಮ ಕರ್ತೃತ್ವದ ಮೇಲೆ ನಮ್ಮ ನಂಬುಗೆ ಇರುವದು.

ಹಳಕಟ್ಟಿಯವರು ಸಮಾಜಕ್ಕಾಗಿ, ತಮ್ಮ ಜೀವನವನ್ನೇ ಮುಡಿಪಿಡುವ ನಿರ್ಧಾರ ಕೈಕೊಂಡರು. ಆದರೆ ಅವರಿನ್ನೂ ತರುಣರು. ಅವರು ಜೀವನದಲ್ಲಿ ನಡೆದುಬಂದ ದಾರಿಗಿಂತ ನಡೆಯಬೇಕಾದ ದಾರಿ ಬಹಳವಿದೆ. ನಡೆದುಬಂದ ದಾರಿಯಲ್ಲಿ ಗುಲಾಬಿಯೇನೂ ಇರಲಿಲ್ಲ. ಆದರೆ ಆ ಮಾರ್ಗವನ್ನನುಸರಿಸಿ ನಡೆಯಬೇಕಾದ ದಾರಿಯಲ್ಲಿ ಮುಳ್ಳುಗಳೇ. ಆದುದರಿಂದ ಒಂದೆಡೆ ಸಮಾಜದ ಚಿಂತೆ, ಇನ್ನೊಂದೆಡೆ ಕುಟುಂಬದ ಚಿಂತೆ. ಒಂದೆಡೆ ಪರಾರ್ಥಕ್ಕಾಗಿ ಕಳಕಳಿ, ಇನ್ನೊಂದೆಡೆ ಸ್ವ-ಅರ್ಥಕ್ಕಾಗಿ ಚಿಂತೆ. ಇವುಗಳ ನಡುವೆ ಆತ್ಮೊಮ್ಮೆ,

ಇತ್ತೊತ್ತೆಮ್ಮೆ ಹೊಯ್ದಾಡುತ್ತಿದ್ದ ಹಳಕಟ್ಟೆಯವರು ಮತ್ತೆ ನೌಕರಿಗೆ ಸೇರಬೇಕೆಂದು ಮನಸ್ಸುಮಾಡಿದರು. ಅವರು ತಮ್ಮಣ್ಣಪ್ಪನವರಿಗೆ ಬರೆದ ಪತ್ರ :

ವಿಜಾಪುರ
ಜನವರಿ, ೧೯೧೧

ಪೂಜ್ಯ ತಮ್ಮಣ್ಣಪ್ಪನವರಿಗೆ—

ನಾನು ತಮಗೆ ಕೇಳಬೇಕೆಂದು ಇಚ್ಛಿಸಿದ ಸಂಗತಿಗಳು ನನಗೆ ಬಹಳ ಮಹತ್ವದವಿದ್ದು, ಅವುಗಳ ಬಗ್ಗೆ ತಮ್ಮ ಆಲೋಚನೆಯನ್ನು ತಾವು ತಿಳಿಸುವಿರೆಂದು ನಂಬಿರುವೆನು. ಇನ್ನುಮೇಲೆ ನಾನು ಏನು ಮಾಡಬೇಕೆಂಬುದನ್ನು ನಿಶ್ಚಯಿಸಬೇಕಾಗಿದೆ. ಈಗ ನಾನು ಮಾಡುವ ನಿಶ್ಚಯದಿಂದ ನನ್ನ ಮುಂದಿನ ಆಯುಷ್ಯಕ್ರಮವೆಲ್ಲ ಬದಲಾಗುವಂತೆ ಇದೆ. ಈ ವಿಷಯದಲ್ಲಿ ತಮ್ಮ ಅಭಿಪ್ರಾಯವು ಮಹತ್ವವಾದದ್ದಿದೆ. ಯಾಕೆಂದರೆ, ತಮ್ಮ ಅಭಿಪ್ರಾಯದ ಮೇಲೆ ಹೆಚ್ಚು ಭರವಸೆ ಇಟ್ಟು ನಡೆಯಬೇಕೆಂದು ಯೋಚಿಸಿರುವೆನು.

ನಾನು ಈಗ ನೌಕರಿಯಲ್ಲಿ ಸೇರಬೇಕೆ? ಅಥವಾ ಈಗಿನಂತೆ ಸ್ವತಂತ್ರತೆಯ ಉದ್ಯೋಗದಲ್ಲಿ ಇರಬೇಕೆ? ಈ ವಿಷಯವು ನನ್ನ ಮನಸ್ಸಿನಲ್ಲಿ ತುಂಬಿರುತ್ತದೆ. ನಮ್ಮ ಕರ್ನಾಟಕಸ್ಥರಲ್ಲಿ ಹೊಸ ಚೈತನ್ಯವನ್ನು ಹುಟ್ಟಿಸಬೇಕು ಎಂದು ಮನಸ್ಸಿನಲ್ಲಿ ಮಾತ್ರ ಬಹಳವಿದೆ. ಆದರೆ ಅದನ್ನು ಕೃತಿಯಲ್ಲಿ ತರಲು ನನ್ನಲ್ಲಿ ಅನುಕೂಲವಿಲ್ಲೆಂದು ನನಗೆ ಖೇದವೆನಿಸುತ್ತದೆ.

ಈ ಪತ್ರವನ್ನೋದಿ ತಮ್ಮಣ್ಣಪ್ಪನವರ ಮನಸ್ಸಿನಲ್ಲಿ ಯಾವ ಭಾವನೆ ಹುಟ್ಟಿರಬಹುದು? ಇದಕ್ಕೆ ಕೆಳಗಿನ ಪತ್ರವೇ ಉತ್ತರ :

ಬನಹಟ್ಟಿ
ಫೆಬ್ರುವರಿ, ೧೯೧೧

ಫಕೀರಪ್ಪನಿಗೆ—

ನೀವು ಬರೆದ ಮೂರು ಉದ್ದೇಶಗಳು ಬಹು ಮಹತ್ವವಾದವುಗಳು. ನೀವು 'ಮುನಸಫಿ'ಯನ್ನು ಸ್ವೀಕರಿಸಿ, ಸಾಂಪತ್ತಿಕ ಸ್ಥಿತಿ ಸುಧಾರಿಸಿದ ಮೇಲೆ ಮನಸ್ಸಿನಂತೆ ಮಾಡಬಹುದು.

ಇದು ತಮ್ಮಣ್ಣಪ್ಪನವರು, ಇಂಥ ಉದ್ದೇಶಗಳಿಗಾಗಿ ಬರೆದ ಅತಿ ಸಣ್ಣ ಪತ್ರ. ಹಳಕಟ್ಟಿಯವರ ಮನಸ್ಸಿನಲ್ಲಿ ನೌಕರಿಯ ಇಚ್ಛೆಯೇ ಇದ್ದರೆ ತಾವೇನು ಮಾಡಲಿಕ್ಕಾಗುತ್ತದೆ? ತಿಳಿದಂತೆ ಮಾಡಬಹುದು ಎನ್ನುವಲ್ಲಿ ಅವರ ಅಂತರಾಳದ ತೀವ್ರಭಾವನೆ ತಂತಾನೇ ವ್ಯಕ್ತವಾಗುತ್ತದೆ. ಅಂತೂ ತಾವು ಹೇಳಿದ

ಆದರ್ಶದ ರೂಪರೇಷೆಗಳು ಒಂದು ನೌಕರಿಗಾಗಿ ಕರಗಿಹೋಗುತ್ತವಲ್ಲಾ ಎನ್ನುವ ಕೊರಗಿನಿಂದ ಒಂದೇ ವಾಕ್ಯದಲ್ಲಿ ತಮ್ಮ ಪತ್ರ ಮುಗಿಸಿಬಿಟ್ಟರು. ಆದರೆ ಹತಾಶರಾಗಿ ಸುಮ್ಮನೆ ಕುಳಿತುಕೊಳ್ಳುವ ಜೀವ ಅವರದಾಗಿರಲಿಲ್ಲ. ಮತ್ತೆ ಮತ್ತೆ ತಿಳಿಸಿಹೇಳಿ, ಹಿಡಿದ ಮಾರ್ಗವನ್ನು ಬಿಡದಿರುವಂತೆ, ನೌಕರಿಗೆ ಮನಸೋಲದಂತೆ ಮಾಡಿದರು. ಈಗ ಮತ್ತೆ ಹಳಕಟ್ಟಿಯವರು, ಇವರ ಅಭಿಪ್ರಾಯಕ್ಕೆ ಸಮ್ಮತಿಸಿದಾಗ, ತಮ್ಮಣ್ಣಪ್ಪನವರು ತಾವು ಕೃತಾರ್ಥರಾದೆವೆಂದು ಬರೆದರು.

ಧಾರವಾಡ
ಅಕ್ಟೋಬರ್, ೧೯೧೧

ಪ್ರಿಯ ಫಕೀರಪ್ಪ—

ಈ ಜಗತ್ತಿನಲ್ಲಿ ಸ್ವಾರ್ಥವನ್ನು ಸಾಧಿಸಿಕೊಳ್ಳುವದು ಪ್ರತಿಯೊಂದು ಪ್ರಾಣಿಯ ನೈಸರ್ಗಿಕ ಗುಣವಾಗಿದೆ. ಇದಕ್ಕೆ ಆಪ್ಪು ಇಂಬುಗೊಡದೆ ಕೈಲಾದ ಮಟ್ಟಿಗೆ, ತನ್ನ ಸಮಾಜದ ಹಿತಕ್ಕೆ ಲಕ್ಷ್ಯಗೊಡುವದು ಮನುಷ್ಯಜನ್ಮದ ಮುಖ್ಯ ಕರ್ತವ್ಯವಾಗಿದೆ. ಈ ಘನವಾದ ಕಾರ್ಯದ ಕಡೆಗೆ ನಿಮ್ಮ ಲಕ್ಷ್ಯವಿರುವದನ್ನು ನೋಡಿ, ಇವತ್ತಿಗೆ ನಾನು ಕೃತಾರ್ಥನಾದೆನೆಂದು ತಿಳಿದುಕೊಳ್ಳುತ್ತೇನೆ. ಚಿಕ್ಕಂದಿನಿಂದಲೇ ನಿನ್ನ ಸಲುವಾಗಿ ನಾನು ಬರಿ ಜ್ಞಾನಾಭಿವೃದ್ಧಿಯ ಸಲುವಾಗಿ ಲಕ್ಷ್ಯಗೊಟ್ಟಿದ್ದರ ಫಲವು ಈಗ ದೊರೆಯಿತು.

ಈ ರೀತಿ ಸ್ವತಂತ್ರವೃತ್ತಿಯಿಂದಲೇ ಜೀವನ ಸಾಗಿಸುತ್ತ ಸಾಧ್ಯವಿದ್ದಷ್ಟು ಸಮಾಜಸೇವೆ ಮಾಡಬೇಕೆಂದು ನಿಶ್ಚಯಿಸಿದಮೇಲೆ ಮಾಡಬೇಕಾದ ಕಾರ್ಯಗಳಾವವು? ಎಂಬುದರ ನಿಷ್ಕರ್ಷೆಯಾಗಬೇಕು. ಮುಖ್ಯವಾಗಿ ಶೈಕ್ಷಣಿಕ ರಂಗದಲ್ಲಿ ಪ್ರಗತಿಯಾಗಬೇಕಾದುದು ಪ್ರಥಮ ಕಾರ್ಯ. ಇದನ್ನರಿತು ಹಳಕಟ್ಟಿಯವರು ತಮ್ಮಣ್ಣಪ್ಪನವರಿಗೆ ಕೆಳಗಿನ ಪತ್ರ ಬರೆದರು:

ವಿಜಾಪುರ
ಫೆಬ್ರುವರಿ, ೧೯೧೬

ತಮ್ಮಣ್ಣಪ್ಪನವರಿಗೆ—

ನಾನು ಬನಹಟ್ಟಿಗೆ ಬಂದಾಗ್ಗೆ, ತಾವು ಸಮಾಜದ ಬಗ್ಗೆ, ಸಾರ್ವಜನಿಕ ಕೃತ್ಯಗಳಲ್ಲಿ ಸಂಪೂರ್ಣವಾಗಿ ತೊಡಗುವ ಬಗ್ಗೆ ತಮ್ಮ ಸಂಕೇತವಿದ್ದ ಹಾಗೆ ತಿಳಿಸಿದ್ದಿರಿ. ಆದುದರಿಂದ ಆದಷ್ಟು ತೀವ್ರವೇ ನಾನಾದರೂ ಇಂಥ ಕಾರ್ಯಗಳಿಗಾಗಿ ಉದ್ಯುಕ್ತನಾಗಬೇಕೆಂದು ಇಚ್ಛಿಸಿರುವೆನು. ಕರ್ನಾಟಕ ದೇಶದ ಇತಿಹಾಸ, ವೀರಶೈವಧರ್ಮ ಮತ್ತು ಅದರ ಇತಿಹಾಸ, ಕನ್ನಡಭಾಷಾ ಇವು

ಗಳ ವಿಷಯವಾಗಿ ಶೋಧಗಳನ್ನು ನಡೆಸುವ ಯೋಚನೆಯೂ ಇದೆ. ಅಲ್ಲದೆ, ಅಲ್ಲಲ್ಲಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವದು ನಮ್ಮ ಕರ್ತವ್ಯವಾಗಿದೆ. ನಾವೂ ನೀವೂ ಕೂಡಿ ಈ ಬಗ್ಗೆ ಮುಂದಿನ ಮಾರ್ಗವನ್ನು ಠರಾಯಿಸುವದಿರುತ್ತದೆ. ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು.

ಈ ಹಿಂದೆಯೇ ಯೋಚಿಸಿ ಸಿದ್ಧೇಶ್ವರ ಹಾಯ್‌ಸ್ಕೂಲನ್ನು ಸ್ಥಾಪಿಸಲು ಪ್ರೇರೇಪಿಸಿದ್ದಾಗಿತ್ತು. ಆದರೆ ಈ ಹಾಯ್‌ಸ್ಕೂಲು ಬೆಳೆದು ಮುಂದೆ ಕಾಲೇಜಾಗಿ ಪರಿವರ್ತನೆಗೊಳ್ಳಬೇಕೆಂಬುದು ಅವರ ಉತ್ಕಟೇಚ್ಛೆ. ಅಂತೂ ಶೈಕ್ಷಣಿಕ ಸಂಸ್ಥೆಗಳು ತಲೆಯೆತ್ತಹತ್ತಿದವು. ವೀರಶೈವ ಸಾಹಿತ್ಯ ಸಂಶೋಧನೆಯನ್ನು ಹಳಕಟ್ಟಿಯವರು ಚೆನ್ನಾಗಿಯೇ ನಡೆಸಿಕೊಂಡು ಬಂದಿದ್ದಾರೆ. ಆದರೂ ಸಮಾಜ ಮುಂದುವರಿಯಲು ಇಷ್ಟು ಸಾಲದು. ಇನ್ನೂ ತೀವ್ರಗತಿಯ ಪ್ರಯತ್ನ ನಡೆಯಬೇಕು. ಎಲ್ಲಕ್ಕೂ ಮಿಗಿಲಾಗಿ ಜನರು ವಾಚನಾಭಿರುಚಿಯನ್ನು ಹೆಚ್ಚಿಸಿಕೊಳ್ಳಬೇಕು. ಇದಕ್ಕೆ ಪೋಷಕವಾಗುವಂತೆ ಒಂದು ಪತ್ರಿಕೆ ಹೊರಡಿಸಬೇಕು ಎಂಬ ಯೋಚನೆ ಅವರಿಗೆ. ಒಂದು ಪತ್ರದಲ್ಲಿ ಫಕೀರಪ್ಪನವರಿಗೆ ಈ ಎಲ್ಲ ವಿಷಯಗಳನ್ನು ವಿವರಿಸಿದ್ದಾರೆ :

ಬನಹಟ್ಟಿ
ಮಾರ್ಚ್, ೧೯೧೪

ಫಕೀರಪ್ಪನಿಗೆ—

ಲಿಂಗಾಯತ ಸಮಾಜಕ್ಕೆ ಧಾರ್ಮಿಕ, ಸಾಮಾಜಿಕ, ರಾಜಕೀಯಾದಿ ವಿಷಯಗಳ ಜ್ಞಾನವನ್ನು ಕೊಡುವಂತಹ ವರ್ತಮಾನಪತ್ರಗಳು, ಮಾಸಿಕ ಪುಸ್ತಕಗಳು ಅತ್ಯಲ್ಪವಿರುತ್ತವೆ. ಇದರ ಪ್ರಮಾಣಕ್ಕೆ ಸರಿಯಾಗಿಯೇ ಮೇಲ್ಕಂಡ ವಿಷಯಗಳ ಜ್ಞಾನವೂ ಸ್ವಲ್ಪವೇ. ನಮ್ಮ ಸುಶಿಕ್ಷಿತರಲ್ಲಿ ಕೂಡ ನಮ್ಮ ಸಮಾಜಸುಧಾರಣೆಯ ಬಗೆಗೆ ಲವಲವಿಕೆಯಿಲ್ಲ. ಸ್ಥಾನಿಕವಾದ ವಿಷಯಗಳ ಪೂರ್ತಿ ಚಟುವಟಿಕೆಗಳನ್ನು ತೋರಿಸುತ್ತಾರೆ. ಆದರೆ ಇದೂ ಅಲ್ಪಪ್ರಮಾಣವೇ ಸರಿ. ಮೆಣಸಿನಕಾಯಿ ಅಥವಾ ಅರಟಾಳ ಸಾ|| ಅಥವಾ ಅವರಂತಹ ಇತರ ಸರಕಾರಿ ಕಾಮದಾರರಿಗೆ ಹೊಸ ವಿಚಾರಗಳ ಅರಿಕೆಯಿಲ್ಲ. ಆದ್ದರಿಂದ ಅವರ ನೇತೃತ್ವದ ಕೆಳಗೆ ನಮ್ಮ ವಿಚಾರದಂತೆ ಕೆಲಸಗಳು ನಡೆಯುವದಿಲ್ಲ. ನಮ್ಮ ಜನರಲ್ಲಿ ಈ ಕಾಲಕ್ಕೆ ಸರಿಯಾಗಿ ಇತರರ ಕೂಡ ಮುಂದೆಬಿದ್ದ ಜನರಷ್ಟು ಜಾಗೃತಿಯಾಗಬೇಕಾದರೆ ಜೋರದಾರ ಭಾಷೆಯಲ್ಲಿ ಬರೆದ ವರ್ತಮಾನಪತ್ರಗಳೂ, ಮಾಸಿಕ ಪುಸ್ತಕಗಳೂ ಎಷ್ಟೋ ಹೊರಟು, ಜನರ ವಾಚನವು ಹೆಚ್ಚಾಗಬೇಕು. ವಾಚನದಿಂದಲೇ ಎಲ್ಲ ಜನಾಂಗದವರು ಮುಂದೆ ಬಿದ್ದಿದ್ದಾರೆ; ನಾವೂ ಬೀಳುವೆವು. ಈಗ ಸದ್ಯಕ್ಕೆ ವಿಜಾಪುರದ

ಭಾಗಕ್ಕೆ ಒಂದು ಉತ್ತಮ ಪ್ರತಿಯ ವರ್ತಮಾನಪತ್ರ ಹೊರಡಲೇಬೇಕಾಗಿದೆ. ಸೆಲೆಯಲ್ಲಿ ನೀರು ಇಲ್ಲದಿದ್ದರೆ ಬಾವಿಯಲ್ಲಿ ಎಲ್ಲಿಂದ ನೀರು ಬರಬೇಕು ? ಕರ್ತವ್ಯದ ಅರಿಕೆಯೇ ಇಲ್ಲದಿದ್ದರೆ ಕೃತಿಯು ಹೇಗೆ ಆಗುವದು? ಆದ್ದರಿಂದ ಈ ವರ್ಷ ಉಮದಿಯು ಬಿ.ಎ. ಪಾಸಾದರೆ ಅವರ ಕಡೆಯಿಂದ ವರ್ತಮಾನಪತ್ರ ತೆಗೆಯಿಸಬೇಕು—ಹೀಗೆ ನನಗೆ ತೋರುತ್ತದೆ. ಸ್ವತಂತ್ರ (ಲಿಂಗಾಯತ) ರೆಜಿಮೆಂಟಿನ ಮಹತ್ವವೂ ನಮ್ಮ ಮುಂದಾಳುಗಳಿಗೆ ತಿಳಿದಿಲ್ಲ.

ನಮ್ಮ ವೀರಶೈವ ಏಕೀಕರಣದ ಬಗ್ಗೆ ನಡೆದ ಚರ್ಚೆಯು ಯೋಗ್ಯವೇ ಇರುತ್ತದೆ. ಈ ವಿಷಯದ ಬಗ್ಗೆ ಮೇಲಿಂದಮೇಲೆ ಲೇಖಗಳು ಪ್ರಸಿದ್ಧವಾಗಬೇಕು. ಅಂದರೆ ಜನರಲ್ಲಿ ವಿಚಾರಕ್ರಾಂತಿಯುಂಟಾಗುತ್ತದೆ.

ಈ ವಿಚಾರವೇ, ಮುಂದೆ, ಹಳಕಟ್ಟಿಯವರು 'ಶಿವಾನುಭವ' ಮತ್ತು 'ನವಕರ್ನಾಟಕ'ಗಳ ಪ್ರಕಟನೆಯ ನಾಂದಿಯಾಯಿತು. ಇದೇ ಪತ್ರದಲ್ಲಿ ಹಳಕಟ್ಟಿಯವರು ಈ ರೀತಿ ಸ್ವತಂತ್ರ ಜೀವನ ನಡೆಸಿ, ಸಮಾಜಕಾರ್ಯದಲ್ಲಿ ತೊಡಗಿದರೆ ತಮ್ಮ ಆದಾಯದ ಗತಿಯೇನು? ಎಂದು ಕೇಳಿದ್ದರ ವಿಚಾರವಾಗಿ ಕೆಳಗಿನಂತೆ ಬರೆದಿದ್ದಾರೆ:

ಇನ್ನು ತಾವು ಮಾಡುತ್ತಿರುವ ಸಾರ್ವಜನಿಕ ಕಾರ್ಯದ ದೆಸೆಯಿಂದ ದ್ರವ್ಯದೃಷ್ಟಿಯಿಂದ ಹಾನಿಯಾಯಿತೆಂದು ಬರೆದಿದ್ದಿರಿ. ಆಗಿರಬಹುದು. ಆದರೆ ತಮ್ಮಿಂದ ವಿಜಾಪೂರ ಜಿಲ್ಲೆಯ ಲಿಂಗಾಯತರ ಹಿತವೂ ಬಹಳವಾಗಿದೆ. ಧಂಥೆಯ ಮೇಲೆಯೇ ತಮ್ಮ ಎಲ್ಲ ಮನಸ್ಸನ್ನು ಹಾಕಿದ್ದರೆ, ಅಲ್ಲಿಯ ಲಿಂಗಾಯತರು ಇನ್ನೂ ಅವನತಿಯಲ್ಲಿಯೇ ಕೊಳೆಯುತ್ತಿದ್ದರು. ಕೇವಲ ದ್ರವ್ಯದೃಷ್ಟಿಯಿಂದ ಬಾಳುವೆ ಮಾಡುವವರು ಎಂದಿಗೂ ಸಮರ್ಥನೀಯವಾಗಲಾರರು. ಸಮಾಜದ ಹಿತದ ಕಡೆಗೆ ಲಕ್ಷ್ಯವನ್ನು ಕೊಟ್ಟವರೇ ತಮ್ಮ ಜನ್ಮವನ್ನು ಸಾರ್ಥಕ ಮಾಡಿದರೆಂದು ತಿಳಿಯಬೇಕು.

ಸಾರ್ವಜನಿಕ ಜೀವನಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡು ಅನೇಕ ಸಂಘ ಸಂಸ್ಥೆಗಳನ್ನು ಕಟ್ಟುವಲ್ಲಿ ಹಳಕಟ್ಟಿಯವರು ನಿರತರಾದರು. ಆದರೂ ಅವರ ಮನಸ್ಸು ಇನ್ನೂ ಆ ಕಾರ್ಯಕ್ಕಾಗಿ ಸ್ಥಿರವಾಗಿರಲಿಲ್ಲ. ಅದಕ್ಕೆ ಬೇಕಾದ ಕಾರ್ಯಶಕ್ತಿಯನ್ನು ಸಾಕಷ್ಟು ಹೊಂದಿದ್ದರೂ, ಹಳಕಟ್ಟಿಯವರು ಇನ್ನೂ ಸಂಪೂರ್ಣವಾಗಿ ಅದನ್ನು ಕಾರ್ಯರೂಪಕ್ಕೆ ಇಳಿಸಲು ಬೇಕಾದ ಸಂಕಲ್ಪವನ್ನು ಸ್ಥಿರೀಕರಿಸಿಕೊಂಡಿರಲಿಲ್ಲ. ಹೀಗಾಗಿ ಸಂಘ-ಸಂಸ್ಥೆಗಳು ಕಾರ್ಯಪ್ರವೃತ್ತವಾದ ಮೇಲೆ ಮತ್ತೆ ಅವರಿಗೆ ಈ ಜೀವನ ಬಿಟ್ಟು ನೌಕರಿಯು ಕಲಿಪ್ರವೇಶ ಮಾಡಿತು.

ಹೇಗೂ ಸಾಧ್ಯವಾದಷ್ಟು ಕಾರ್ಯ ಮಾಡಿದ್ದೇನೆ. ಇನ್ನು ಆ ಸಂಸ್ಥೆಗಳು ಸಡೆಯುತ್ತವೆ. ಇನ್ನಾದರೂ ನಾನು ಯಾಕೆ ನೌಕರಿ ಮಾಡಬಾರದು? ಎಂಬ ಯೋಚನೆ ಮತ್ತೆ ಕಾಡಹತ್ತಿತು. ಆದಕ್ಕಾಗಿ ತಮ್ಮಣ್ಣಪ್ಪನವರು ಮತ್ತೆ ಬರೆದರು:

ಬನಹಟ್ಟಿ
ಸಪ್ಟಂಬರ್, ೧೯೧೯

ಫಕೀರಪ್ಪನಿಗೆ—

ತಮ್ಮ 'ಅಗತ್ಯವು ಇನ್ನು ಇಲ್ಲವೆಂದು ಬರೆದಿರುತ್ತೀರಿ. ಆದರೆ ಇನ್ನು ಮುಂದೆಯೇ ತಮ್ಮ ಖರೆ ಕೆಲಸವಿರುತ್ತದೆ. ತಮ್ಮ ವಿಚಾರದಿಂದಲೇ ಅಲ್ಲಿ ಸುಧಾರಣೆ ನಡೆದಿದೆ. ಮೂಲಯೋಜಕರ ಸಾನ್ನಿಧ್ಯವು ಸಂಸ್ಥೆಗಳಿಗೆ ಸದಾ ಇರಬೇಕಾಗುತ್ತದೆ. ನೀವು ಉತ್ಪನ್ನಮಾಡಿದ ಸಂಸ್ಥೆಗಳು ಅಲ್ಲಿ ಇನ್ನೂ ಬೇರೂರಿಲ್ಲ. ನಿಮ್ಮ ಹಾಯ್‌ಸ್ಕೂಲ್ ಬೆಳೆದು ಮುಂದೆ ಕಾಲೇಜ್ ಆಗಲಿಕ್ಕೇ ಬೇಕು. ಇವನ್ನು ನೆರವೇರಿಸಬೇಕಾದರೆ, ವಿಜಾಪೂರದಲ್ಲಿ ನಿಮ್ಮ ಹೊರತು ಯಾರೂ ಸಮರ್ಥರಿಲ್ಲ.

ಆದರೆ ಎಷ್ಟು ಪ್ರಯತ್ನಿಸಿದರೂ ಹಳಕಟ್ಟಿಯವರನ್ನು ನೌಕರಿಯಾಗಿ ಕಾಡಿತ್ತು ಮಾಯೆ. ಅವರಿಗೆ 'ಸುತ್ತಿದ ಮಾಯಾಪ್ರಪಂಚವ' ಕಳೆಯಲು ಅಲ್ಪರಿಗೆ ಅರಿದು. ಹಳಕಟ್ಟಿಯವರು ಬಿ.ಎ. ಪರೀಕ್ಷೆಯಲ್ಲಿ ಅನುತ್ತೀರ್ಣರಾದಾಗ ತಮ್ಮಣ್ಣಪ್ಪನವರು ಒಂದು ಪತ್ರದಲ್ಲಿ ಬರೆದಂತೆ 'Try again' ತತ್ತ್ವದಲ್ಲಿ ನಂಬಿಕೆ ಇರಿಸಿ, ಅದನ್ನೇ ಈಗ ಮತ್ತೆ ಪ್ರಯೋಗಿಸಿದರು.

ಬನಹಟ್ಟಿ
ನವ್ಹಂಬರ್, ೧೯೧೯

ಫಕೀರಪ್ಪನಿಗೆ—

"ಮನೆತನವನ್ನು ನಡೆಸಿಕೊಂಡು ಹೋಗುವಷ್ಟು ಸ್ವತಂತ್ರವೃತ್ತಿ ಅಥವಾ ಆದಾಯವುಳ್ಳವರೇ ಇಂಥ ಹೊರಗಿನ ಕಾರ್ಯಗಳಿಗೆ ಮನಸ್ಸುಹಾಕ ತಕ್ಕದ್ದು. ಈ ಸಂಗತಿಗಳಿಗೆ ಮೊದಲಿನಿಂದಲೂ ನಾನು ಲಕ್ಷ್ಯಗೊಡಲಿಲ್ಲ. ಈ ತಪ್ಪು ಇನ್ನು ತಿದ್ದಬೇಕಾಗಿದೆ" ಎಂದು ಬರೆದಿದ್ದೀರಿ. ಮೇಲೆ ಬರೆದ ತಮ್ಮ ಭಾವನೆಯು ಸಾಮಾನ್ಯ ಮನುಷ್ಯನದ್ದಿರುತ್ತವೆ. ತನ್ನ ಕುಟುಂಬದ ಹಿತವನ್ನು ಮಾತ್ರ ನೋಡುವ ಪ್ರವೃತ್ತಿಯು ಸಾಮಾನ್ಯವಾಗಿ ಎಲ್ಲ ಜನರಲ್ಲಿ ಹುಟ್ಟಾ ಇರುವದು. ಇದು ಪಶುಕೋಟಿಗಿಂತ ಸ್ವಲ್ಪ ಹೆಚ್ಚಿನದು. ಪಶುಗಳು ತನ್ನ ಪೂರ್ತೆ ನೋಡುತ್ತವೆ. ಸಾಮಾನ್ಯ ಮನುಷ್ಯನು ತನ್ನ ಹೊರ್ತಾಗಿ ತನ್ನ

ಹೆಂಡತಿಮಕ್ಕಳನ್ನು ಸಹ ನೋಡುತ್ತಾನೆ. ಪರೋಪಕಾರದ ಕೃತಿಯು, ಎಷ್ಟೋ ಆದಾಯ ಕಡಿಮೆಯಿದ್ದರೂ ಮಾಡಲಿಕ್ಕೆ ಬರುವಂಥಾದ್ದು. ನಿಜವಾದ ಪರೋಪಕಾರವನ್ನು ಈ ಜಗತ್ತಿನಲ್ಲಿ ನಿರ್ಧನಿಕರೇ ಮಾಡಿರುವರು. ಧನಿಕರು ಕೇವಲ ದುಡ್ಡಿನ ಸಹಾಯ ಮಾಡಿರಬಹುದು. ಆದರೂ ಜನಾಂಗದ ಏಳಿಗೆಗೆ ಧನಕ್ಕಿಂತಲೂ ಜ್ಞಾನವೇ ಮುಖ್ಯವಾಗಿರುವದು. ಯಾರಲ್ಲಿ ಈ ಜನಾಂಗದ ಏಳಿಗೆಯನ್ನು ಮಾಡುವ ತ್ರಾಣವೂ ಬುದ್ಧಿಯೂ ಇರುವದೋ ಅವರು ಯಃಕಶ್ಚಿತ ತನ್ನ ಕುಟುಂಬದ ಬಡೇಜಾವಕ್ಕಾಗಿ ತನ್ನ ಕಾಲಿನ ಪೂರ್ತಿ ನೋಡಿದರೆ ಅವರು ಈಶ್ವರನ ಕೋಪಕ್ಕೆ ಪಾತ್ರನಾಗಬಹುದು. ಯಾಕೆಂದರೆ ಅವನಲ್ಲಿದ್ದ ಮಹಾಶಕ್ತಿಯನ್ನು ತಿರಸ್ಕರಿಸಿದಂತೆ ಖಂಡಿತವಾಗಿ ಆಗುತ್ತದೆ; ಮತ್ತು ಆ ಮಹಾಶಕ್ತಿಯು ನಿರುಪಯೋಗಿಯಾಗಿ, ಈಶ್ವರನು ಅಯೋಗ್ಯ ಮನುಷ್ಯನಲ್ಲಿ ಆ ಶಕ್ತಿಯನ್ನು ಇಟ್ಟಂತಾಗಿ, ಅವನ ಯೋಜಕತೆಗೆ ಕುಂದು ತಂದಂತಾಗುವದು. ತನ್ನ ಕುಟುಂಬದ ಸ್ವಲ್ಪ ಹಾನಿಯಾಗಿ ಜನಾಂಗದ ಹಿತವು ಬಹಳವಾಗುತ್ತಿದ್ದರೆ, ಅಂಥ ಮಹಾಪುರುಷರು ಸಂತೋಷದಿಂದ ತಮ್ಮ ಹಾನಿಗೆ ಒಪ್ಪಿಕೊಳ್ಳುತ್ತಾರೆ. ಇವರೇ ಮಹಾಪುರುಷರು ; **ಉತ್ತಮ ವರ್ಗದವರು.** ಮಧ್ಯಮ ವರ್ಗದವರು ಯಾರೆಂದರೆ, ತಮ್ಮ ಮತ್ತು ತಮ್ಮ ಜನಾಂಗದ ಹಿತವನ್ನು ಕೂಡಿ ಮಾಡುವವರು. ದೇವರು ತಮಗೆ ಅನುಕೂಲಿಸಿಕೊಟ್ಟ ಸ್ಥಿತಿಯಲ್ಲಿ ತೃಪ್ತನಾಗಿದ್ದು ಅಂಥ ಸ್ಥಿತಿಯಲ್ಲಿ ಪರಹಿತವನ್ನು ಮಾಡದೆ ಬಿಡುವದಿಲ್ಲ. ಪರಹಿತದ ಗೊಡವೆಯನ್ನೇ ಬಿಟ್ಟು, ಸ್ವಂತದ ಹಿತವನ್ನೇ ಮಾಡುವವರಲ್ಲಿ ಕಾಲಕಳೆಯುವವರೇ ಅಧಮವರ್ಗದವರು. 'ಧಾರವಾಡಕ್ಕೆ ಹೋದಬಳಿಕ ನನ್ನ ಧಂಧೆಯ ಹೊರತು ಯಾವ ಕಾರ್ಯಕ್ಕೂ ಮನಸ್ಸು ಹಾಕಬಾರದೆಂದು ನಿಶ್ಚಯಿಸಿದ್ದೇನೆ'—ಎಂದು ಬರೆದಿದ್ದೀರಿ. ಇದರಮೇಲಿಂದ ಸ್ವೋಪಜೀವನವೇ ಮನುಷ್ಯಪ್ರಾಣಿಯ ಜನ್ಮಹೇತುವೆಂದು ನೀವು ತಿಳಿದುಕೊಂಡಂತೆ ಕಾಣುತ್ತದೆ. ಹೀಗೆ ನಿಮ್ಮ ಅಭಿಪ್ರಾಯವಿದ್ದರೆ, ನಿಮಗೆ ದೊರಕಿದ ಶಿಕ್ಷಣವು ಬೋರ್ಗಲ್ಲ ಮೇಲೆ ಮಳೆಯಾದಂತಾಯಿತು ಎಂದು ತಿಳಿದುಕೊಳ್ಳಬಹುದು. ಇಂಥ ಅಯೋಗ್ಯ ವಿಚಾರಗಳು ಅಯೋಗ್ಯರ ಸಹವಾಸದಿಂದಲೇ ಹುಟ್ಟಿರುವವಲ್ಲದೆ ಬೇರೆ ಅಲ್ಲ. ಸಾರ್ವಜನಿಕ ಹಿತವನ್ನು ಮಾಡುತ್ತಿರುವಾಗ, ಬಂದ ಆಪತ್ತುಗಳಿಗೆ ಹೆದರಿ, ಸ್ವೀಕೃತಕಾರ್ಯಗಳನ್ನು ಬಿಡುವದು ಎಂದಿಗೂ ಯೋಗ್ಯವಾಗಲಾರದು. ಈ ಜಗತ್ತಿನಲ್ಲಿ ಜನಹಿತದ ದಾರಿಯಲ್ಲಿ ತೊಡಗಿದ ಯಾವ ಮಹಾಪುರುಷನಿಗೆ ಆಪತ್ತುಗಳು ಬಂದಿಲ್ಲ? ಜನಹಿತಕ್ಕಾಗಿ ಎಷ್ಟೋ ಮಹಾಪುರುಷರು ತಮ್ಮ ಜೀವಿತಕ್ಕೂ ಎರವಾದ ಸಂಗತಿಗಳು ನನಗಿಂತ ತಮಗೇ ಹೆಚ್ಚು ಗೊತ್ತಿರುವವು.

ಮೇಲೆ ಬರೆದಂತೆ, ಉತ್ತಮ, ಮಧ್ಯಮ, ಅಧಮವರ್ಗಗಳಲ್ಲಿ ಯಾವ ವರ್ಗದಲ್ಲಿ ತಾವು ಸೇರಬೇಕೆಂದು ತಮ್ಮ ಅಪೇಕ್ಷೆ ಇರುವದು? ಅಧಮ ವರ್ಗವಂತೂ ತಮಗೆ ಸರ್ವಥಾ ತ್ಯಾಜ್ಯವಿರುವದರಿಂದ ಈ ವರ್ಗದಲ್ಲಿ ತಾವು ಸೇರಲಿಕ್ಕಿಲ್ಲವೆಂದು ಮೇಲೇ ತೋರುತ್ತದೆ. ಅಂದಮೇಲೆ ತಾವು ಉತ್ತಮವರ್ಗದಲ್ಲಿ ಸೇರಬೇಕೆನ್ನುವಿರೋ? ಮಧ್ಯಮವರ್ಗದಲ್ಲಿ ಸೇರಬೇಕೆನ್ನುವಿರೋ? ಉತ್ತಮವರ್ಗದಲ್ಲಿ ತಾವು ಸೇರಲು ಅಪೇಕ್ಷಿಸಿದರೆ ನಿಮಗೂ, ನಿನ್ನನ್ನು ಹಡೆದ ತಾಯಿತಂದೆಗಳಿಗೂ, ನೀವು ಯಾವ ಸಮಾಜದಲ್ಲಿ ಹುಟ್ಟಿರುವಿರೋ ಆ ಸಮಾಜದವರಿಗೂ, ನಿಮಗೆ ಅನ್ನಪಾನಾದಿಗಳನ್ನು ಪೂರೈಸಿಕೊಟ್ಟ ದೇಶಕ್ಕೂ, ಕಟ್ಟಕಡೆಗೆ ಇಡೀ ಧರಣಿಗೂ ಆನಂದೋನ್ಮಾದವಾಗದೇ ಇರದು. ಈ ಉತ್ತಮವರ್ಗದವರಿಂದಲೇ ಸೃಷ್ಟಿಯು ನಡೆಸಲ್ಪಟ್ಟಿರುವದು.

ಇನ್ನು ತಾವು ವಿಜಾಪುರದಲ್ಲಿರಬೇಕೋ? ಧಾರವಾಡದಲ್ಲಿರಬೇಕೋ? ಈ ವಿಷಯದಲ್ಲಿ ವಿಚಾರಮಾಡಲಾಗಿ, ನನಗೆ ಇನ್ನೂ ತಾವು ವಿಜಾಪುರದಲ್ಲಿಯೇ ಇರಬೇಕೆಂದು ತೋರುತ್ತದೆ. ತಾವು ಸ್ಥಾಪಿಸಿದ ಸಂಸ್ಥೆಗಳು ಇನ್ನೂ ಸ್ವತಂತ್ರವಾಗಿ ಮುಂದೆಬೀಳುವಂತೆ ಇಲ್ಲ. ನೀವು ವಕೀಲಿಯನ್ನು ಚೆನ್ನಾಗಿ ನಡೆಸಿ ಸ್ವಲ್ಪವೇ ಸಾರ್ವಜನಿಕ ಕೆಲಸದ ಕಡೆಗೆ ಲಕ್ಷ್ಯಗೊಟ್ಟರೂ, ನಿಮ್ಮ ಸಂಸ್ಥೆಗಳು ನೆಲೆಗೊಳ್ಳುವವು. ಇದರಿಂದ ತಮ್ಮ ಕೀರ್ತಿ ವಿಜಾಪುರ ಜಿಲ್ಲೆಯಲ್ಲಿ ಸ್ಥಿರವಾಗಿ ನಿಲ್ಲುವದು.

ನಾನು ತಮಗೆ ಪೂರ್ಣ ಸ್ವಾರ್ಥತ್ಯಾಗವನ್ನು ಮಾಡಲಿಕ್ಕೆ ಬೋಧಿಸುವದಿಲ್ಲ. ಪೂರ್ಣಸ್ವಾರ್ಥವನ್ನು ಮಾಡಲಿಕ್ಕೂ ಸರ್ವಥಾ ಹೇಳುವದಿಲ್ಲ. ನಿಜಗುಣಶಿವ-ಯೋಗಿಗಳು ಹೇಳಿದಂತೆ, ಪ್ರಪಂಚ–ಪರಮಾರ್ಥ ಎರಡೂ ಮಾಡಬೇಕೆಂದು ಹೇಳುತ್ತೇನೆ. ನಿಮಗೆ ಹೇಳುವಷ್ಟು ಸಮರ್ಥನಲ್ಲಾ; ಆದರೆ ನಿಮ್ಮ ಒಳ್ಳೇ ವಿಚಾರಗಳನ್ನು, ನಿಮ್ಮ ಕರ್ತವ್ಯತತ್ಪರತೆಯನ್ನು ನೋಡಿ, ನಿಮ್ಮಂಥ ಒಬ್ಬ ಸೇವಕನನ್ನು ಆಕಸ್ಮಿಕ ಆಪತ್ತಿಗಾಗಿ ಸಮಾಜವು ಕಳೆದುಕೊಳ್ಳುತ್ತದೆಯೆಂದು ಹಳಹಳಿಸಿ ಇಷ್ಟು ಬರೆದಿದ್ದೇನೆ.

ಮೇಲಿನ ವಿವೇಚನೆಯಿಂದ, ಹಳಕಟ್ಟಿಯವರು ಎಲ್ಲಿಯೇ ಹುಟ್ಟಿರಲಿ, ವಚನಪಿತಾಮಹ ಮಾತ್ರ ತಮ್ಮಣ್ಣಪ್ಪನವರ ಸಂಕಲ್ಪಗರ್ಭದಿಂದ ಹುಟ್ಟಿದರೆನ್ನುವದು ಅತಿ ಸ್ಪಷ್ಟ. ತಮ್ಮಣ್ಣಪ್ಪನವರ ವೈವಿಧ್ಯಮಯ ಸಾಮಾಜಿಕ ಕೃತಿಗಳಲ್ಲಿ ವಚನಪಿತಾಮಹರನ್ನು ಕರ್ನಾಟಕಕ್ಕೆ ಕೊಟ್ಟದ್ದು ಅತಿ ಮಹತ್ವದ ಕೃತಿ ಎನ್ನಬಹುದು. ಕರ್ನಾಟಕದ ಶೈಕ್ಷಣಿಕ, ಸಾಮಾಜಿಕ ಉನ್ನತಿಗೆ ಕಾರಣವಾದ ಹಳಕಟ್ಟಿಯವರಿಗೆ ಋಣಿಯಾದ ಕರ್ನಾಟಕ ತಮ್ಮಣ್ಣಪ್ಪನವರನ್ನು ನೆನೆಯುವದೂ ಕರ್ತವ್ಯವಾಗಿದೆ.

★ ಜೆ. ಎಸ್. ಕುಳ್ಳಿ

ಬಸ್ಸು ಬಂತು!

(ಆಧುನಿಕ ಜೀವನದ ಅವಾಂತರ)

ನಾವೆಲ್ಲ—ಈಗ ಪೂರ್ಣ—ಸಂಪೂರ್ಣ Bus minded ಆಗಿ ಹೋಗಿದ್ದೇವೆ. ಮಾತನಾಡುತ್ತ ನಿಂತಿರುವಾಗಲೇ, 'ಬಸ್ಸು ಬಂತೂ—ಬರತೇನಿ' ಎಂದು ಗೊಣಗಿದವರೇ ಓಟ ಬಿಟ್ಟುಬಿಡುತ್ತಾರೆ ಜನ. ಅರ್ಧ ಮಾತು ಅವರ ನಾಲಗೆಯ ಮೇಲೆ, ಉಳಿದರ್ಧ ಮಾತು ನಮ್ಮ ಕಿವಿಯಲ್ಲಿ ನಿನದಿಸುತ್ತಿರುತ್ತದೆ! 'ಅಯ್ಯೋ–ಈ ಬಸ್ಸು ಸುಡಾ!' ಎಂಬುವ ಉದ್ಗಾರ ನಾನೇ ಅನೇಕ ಸಲ ತೆಗೆದಿದ್ದೇನೆ. ಆದರೂ ನಾನೂ ಬಸ್ಸು ಹತ್ತುತ್ತಲೇ ಇರುತ್ತೇನೆ—ಇಂದಿನ ಪ್ರಪಂಚಕ್ಕೆ ಬಸ್ಸು ಅನಿವಾರ್ಯ; ಅಗತ್ಯ ಎಂಬುವದನ್ನು ಸಂಪೂರ್ಣ ಒಪ್ಪಿ ತಮಗೆ ರುಜು ಹಾಕಿಕೊಡುತ್ತೇನೆ. ಯಂತ್ರಯುಗವನ್ನು—ಯಾಂತ್ರೀಕರಣವನ್ನೂ ಕಾರ್ಲಾಯಿಲ್–ರಸ್ಕಿನ್–ಮೊದಲಾದ ಆಂಗ್ಲಸಾಹಿತಿಗಳು ವಿರೋಧಿಸಿದರು, ಹಳಿದರು; ತಮ್ಮ ದಿವ್ಯ ವ್ಯಂಗ್ಯ–ರಸಜನ್ಯ ಗ್ರಂಥಗಳಿಂದ ಆಂಗ್ಲ ಸಾಹಿತ್ಯಭಾಂಡಾರ ತುಂಬಿದರು. ವಿದ್ವನ್ಮಣಿಗಳು ಆ ವಿಚಾರಧಾರೆಗೆ ಮೆಚ್ಚಿದರು—ಸರಿ! ಆದರೆ ಯಂತ್ರಯುಗ ಬರುವದು ಬಿಡಲಿಲ್ಲ—ಬಂತು. ತನ್ನೊಡನೆ ಎಲ್ಲ ಅವಾಂತರಗಳನ್ನೂ ತಂತು! ಇವೆಲ್ಲ ನಾವು ಒಪ್ಪಬೇಕಾದದ್ದು. ರಸ್ಕಿನ್ ಮಹಾಶಯನ ಆಶಯಗಳು ಎಷ್ಟು ಗಹನವಾಗಿವೆ ಮಧುರವಾಗಿವೆ, ಸಾಮಾಜಿಕ ಪ್ರಜ್ಞೆಯನ್ನು ರೂಪಿಸುವಂತಹವಾಗಿವೆ–ಎಂಬುದನ್ನು ಓದಿ ಸಂತೋಷಪಡುತ್ತಿರುವಾಗಲೇ—ಮಡದಿಯ ಕೂಗು ಕೇಳಿಸುತ್ತದೆ—'ಬಸ್ಸಿನ Time ಆಯಿತು–ಊರಲ್ಲಿ ಹೋಗಬೇಕು, ಏಳಿರಿ!' 'ರೀಃ' ಮೇಲುಗಾಡಿಯ ಧ್ವನಿ ಲಾಲಿಸಿ ನಾನು ಗಡಬಿಡಿಯಿಂದ ಬಟ್ಟೆ ಬದಲಿಸಿ ಹೊರಡಬೇಕೆನ್ನುವಷ್ಟರಲ್ಲಿಯೇ 'ಬಸ್ಸು ಬಂದು ಹೋಯಿತು' ಎಂದು ನನ್ನ ಚಿಕ್ಕ ಅಣುಗ ವಾರ್ತೆ ತರುತ್ತಾನೆ. ನನ್ನಾಕೆಯ ಮೂಗು ಕೆಂಪಾಗುತ್ತದೆ—'ನಿಮ್ಮದು ಹೀಗೇ—ರವಿವಾರಕ್ಕೊಮ್ಮೆ ಊರಲ್ಲಿ ಬೇಗ ಹೋಗಿ ಬರೋಣ ಅಂದರೆ—ಇನ್ನೊಂದು ಬಸ್ಸಿಗೆ ಇನ್ನರ್ಧಗಂಟೆ ಕಾಯಬೇಕು.' ಇಷ್ಟೆಲ್ಲ ಮಾತು ನಡೆದಿರುವಾಗ ಒಳಮನೆಯಿಂದ ಧ್ವನಿ ಬರುತ್ತದೆ 'ಬೇಗನೆ ಊಟ ಮುಗಿಸಿಕೊಂಡೇ ಹೋಗಿರಿ.' ಇದು ನಮ್ಮ ಅತ್ತೆಯ ಕೂಗು. ಅವರ ಮಾತೂ ಒಪ್ಪಬೇಕಾದದ್ದೇ—ನಾವು ತಿರುಗಿ ಬರುವದು ಮಧ್ಯಾಹ್ನ ತಿರುಗಿದ ಮೇಲೆ. ಅವರ ಗತಿಯೇನು—ಪಾಪ! ನಿಜವೆನಿಸುತ್ತದೆ; ಮತ್ತೆ ಗಡಬಿಡಿ.

ತಟ್ಟೆ-ಬಟ್ಟಲಗಳ ಕಡಕಡಾಟ ಪ್ರಾರಂಭವಾಗುತ್ತದೆ. ಅಂದಿನ 'ಹುಳಿ' ಅಂದರೆ ಬಲು ರುಚಿಯಾಗಿರುತ್ತದೆನ್ನಿ. ರಸಾಸ್ವಾದನ ಮಾಡುತ್ತ, ಬಾಯಿ ಚಪ್ಪರಿಸುತ್ತ—ರವಿವಾರದ ಊಟ ಭಾರವಾಗುತ್ತದೆ. ಬಾಯಿಯಲ್ಲಿ ತಾಂಬೂಲ ತುಂಬಿಕೊಂಡು ನಾಗಾಲೋಟ ಬಿಟ್ಟು ಬಸ್ಸು Stopಗೆ ಬಂದಾಗ 'ಇದೀಗ ಬಸ್ಸು ಹೋಯಿತು' ಎಂಬುವ ಶುಭಸಂದೇಶ ಅಲ್ಲಿ ನಿಂತಿರುವ ರೊಬ್ಬರು ಹೇಳುತ್ತಾರೆ. ನನ್ನಾಕೆ ಹಿಂದಿನಿಂದ ಓಡುತ್ತಲೇ ಬರುತ್ತಾಳೆ 'ಇನ್ನೂ ಬಸ್ಸು ಬಂದಿಲ್ಲವೆ?' ಎಂಬುವ ಅವಳ ಪ್ರಶ್ನೆಗೆ ನಾನು ಮೌನಿಯಾಗುತ್ತೇನೆ. ಮತ್ತೆ ಮಾತಿನ ಚಕಮಕಿ....ಇತ್ಯಾದಿ. ಇದೆಲ್ಲಾ ಯಾರ ತಪ್ಪು, ಬಸ್ಸಿನದೇ—ನಮ್ಮದೇ?

ಬಸ್ಸು ತಪ್ಪುತ್ತದೆಂದರೆ—ಎಲ್ಲಾ ಸಮಯದಲ್ಲೂ ತಪ್ಪುತ್ತದೆ ಎನ್ನು ವಂತಿಲ್ಲ. ಒಮ್ಮೊಮ್ಮೆ ನಾವು ಬಸ್ಸು ನಿಲ್ಲುವ ಠಾಣಕ್ಕೆ ಬರುವಷ್ಟರಲ್ಲಿಯೇ ಬರುತ್ತದೆ. ಬಹು ಹಿತವಾಗುವಂತೆ ಮಾಡುತ್ತದೆ. ಆಗ ನಾವು ಬಸ್ಸನ್ನು ಕೊಂಡಾಡುತ್ತೇವೆ. ವಾರಕ್ಕೊಮ್ಮೆ ಬರುವ ರವಿವಾರದಂದು ನಾವು ಬಸ್ಸಿಗಾಗಿ ಕ್ಯೂಹಚ್ಚಿ ನಿಂತುಕೊಂಡಾಗ ಕಿಕ್ಕಿರಿದು ಜನರನ್ನು ತುಂಬಿಕೊಂಡು, ನಮ್ಮನ್ನು ಮಾತ್ರ ಬಿಟ್ಟುಹೋದಾಗ, ಹಲ್ಲು ಕಡಿಯುವಂತಾಗುತ್ತದೆ.—ನಮಗೋ ಚಿತ್ರಗೃಹದಲ್ಲಿ ಮತ್ತೆ ಕ್ಯೂ ಹಚ್ಚಬೇಕು.—ಆದರೆ ಮಾಡುವದೇನು? ಎಲ್ಲವೂ ದೇವರ ಲೀಲೆ ಎನ್ನಬೇಕಾಗುತ್ತದೆ. ಈಗಿನ ವಿಜ್ಞಾನಯುಗದಲ್ಲಿ ದೇವನು ಲೀಲೆ ಮಾಡುವದಿಲ್ಲ—ಮಾನವನೇ ಎಲ್ಲ ಲೀಲೆಗಳನ್ನು ಮಾಡುತ್ತಾನೆ. Cause and effect ಇವುಗಳ ಸಂಬಂಧವೇ ಮುಖ್ಯ! ಅಂದರೆ ನಾವು ಒಂದು ವೇಳೆ—ಬಸ್ಸಿನ ಸರಿಯಾದ ವೇಳೆಗೆ ಬಂದಿದ್ದರೆ—ಬಸ್ಸು ಸರಿಯಾದ ವೇಳೆಗೆ ಅಂದು ಬಂದಿ-ದ್ದರೆ—ಅಂದಿನ ಮುಹೂರ್ತ ಸರಿಯಾದದ್ದು ಎಂದು ಅರ್ಥವಷ್ಟೆ? ಈ ತಿರುವುಮುರುವಿನ ಮಾತು—ಬಸ್ಸಿನ ಧಡಕಿಯಲ್ಲಿ ತಾನೇ ಸ್ವಾಭಾವಿಕವಾಗಿ ಮರೆತುಹೋಗುತ್ತದೆ. ಬಸ್ಸಿನ ಧಡಕಿಗೆ—ಎಲವು ಮುರಿದವರ ಎಲವೂ ಕೂಡಾ ಹೊಂದಾಣಿಕೆ ಆಗಿಹೋಗುತ್ತವೆ—ಎಂಥ ಉಪಕಾರ! ಇದರ ವಿರು-ದ್ಧವಾಗಿ ಬಲಗೈ ಎಲವು ಎಡಗೈಗೆ....Transfer ಆದರೂ ಆಗಬಹುದು—ಆದೆಲ್ಲ ಜನರ ನಶೀಬ ಎನ್ನಬೇಕೆ?—ಹುಚ್ಚುಹರಟೆಗೆ ತಲೆ ಇಲ್ಲ, ಬಾಲವಿಲ್ಲ—ಹೋಗಲಿ ಬಿಡಿ, ಏಷ್ಟಾದರೂ ಅದು ನಮ್ಮ ಬಸ್ಸು! ಮಕ್ಕಳು ಮಂಡತನ ಮಾಡಿದರೆ—ಅವರನ್ನು ಬಿಡುತ್ತೇವೆಯೆ?

ಬಸ್ಸು ಇಲ್ಲದಾಗ ನಾವು ಸುಖವಾಗಿದ್ದೆವು. ವೇಳೆಗೆ ಸರಿಯಾಗಿ ಕೆಲಸಕ್ಕೆ ಹೋಗುತ್ತಿದ್ದೆವು. (ಈಗ ಯಾರೂ ವೇಳೆಗೆ ಸರಿಯಾಗಿ ಬರುವದಿಲ್ಲ!) ಕೆಲಸ ಮಾಡುತ್ತಿದ್ದೆವು—ಎಲ್ಲವೂ ಸುಗಮವಾಗಿಯೇ ನಡೆದಿತ್ತು....ಇತ್ಯಾದಿಯಾಗಿ ವಾದಿಸುವ ಮುದುಕರಿದ್ದಾರೆ. ಅವರಿಗೆ ಅನುಭವ ಬೇರೆ ಇರುತ್ತದೆ! 'ತರುಣರಿಗೆ

ತಾಳ್ಮೆ ಇಲ್ಲ, ವೇಗ ಹೆಚ್ಚು. ಆದ್ದರಿಂದ ಅವರು ಬಸ್ಸು ಮೆಚ್ಚುತ್ತಾರೆ' ಎಂದು ಹಿರಿಯರು ಹೇಳುತ್ತಲೇ—ಬಸ್ಸಿಗಾಗಿ ಕಾದು ಕ್ಯೂ ನಿಂತಿರುವದನ್ನು ಕಂಡು ಕನಿಕರವೆನಿಸುತ್ತದೆ.

ಸೋಮೇಶ್ವರ ಕವಿಯು ತನ್ನ ಶತಕದಲ್ಲಿ ಅನುಭವದಿಂದ 'ಒಣಗಲ್ ಪೈರಿಗೆ ಬಾರದಿರ್ದ ಮಳೆ ತಾಂ ಬಂದೇನು?' ಎನ್ನುವಂತೆ ನಾವು ಕೂಡಾ ಆಧುನಿಕ ಶತಕ 'ವೇಳೆಗೆ ಬಾರದ ಬಸ್ಸಿನಿಂದೇಂ? ಹರಹರಾ ಶ್ರೀಚನ್ನ 'ಬಸ್ಸೇಶ್ವರ!' ಎಂದು ಹಾಡಿದರೇನು ತಪ್ಪು? ಆಧುನಿಕ ಕವಿಗಳಿಗೆ ಆಧುನಿಕ ವಸ್ತುಗಳೇ ಸ್ಫೂರ್ತಿ ಕೊಡಬಲ್ಲವು. ದೂರದ—ಚಂದ್ರ—ಸೂರ್ಯ—ಮಂದ (ಬುದ್ಧಿ ಇಲ್ಲದ)ಮಾರುತ ಕಾವ್ಯವಸ್ತುಗಳಾಗಲಾರವು. ಎಲ್ಲಿಯ ಮಾತು ಎಲ್ಲಿಗೆ ಬಂತು. ನಾವು ತೀರ ದಾರಿ ತಪ್ಪಿದಂತಾಯಿತು—ಬಸ್ಸಿನಂತೆ! ಒಂದೊಂದು ಸಲ ಬಸ್ಸು ಬಂದಾಗ ಬರಲಿ ಎಂಬುವ ದೃಢ ನಿರ್ಧಾರದಿಂದ Request stopಗೆ ನಿಂತುಕೊಂಡಾಗ ಬಸ್ಸು "ತುಂ—ತುಂ—ತುಂ—ತುಂಬಿಬಂದಿತ್ತ—ತುಳುಕಿಹೋಗಿತ್ತs" ಎಂಬುವಂತೆ—ತುಂಬಿಬಂದು—ನಿಲ್ಲದೇ ಹೋಗುತ್ತದೆ. ಇನ್ನೇನು ಆಸೆಯಿಲ್ಲ ಎಂದು, ಅಲ್ಲಿ ನಿಂತ ಜನರ ಗದ್ದಲ ಕಂಡು—ನಡೆಯುತ್ತ ಹೊರಟುಬಿಟ್ಟಾಗ ನಾಲ್ಕು ಹೆಜ್ಜೆ ಹೋಗಿರುವದಿಲ್ಲ. ಬಸ್ಸು ಬಂದು ಎಲ್ಲರನ್ನೂ ತನ್ನ ಹೊಟ್ಟೆಯಲ್ಲಿ ತುಂಬಿಕೊಂಡು ನಮ್ಮನ್ನು ಅಣಕಿಸುತ್ತಾ ಹೋಗಿಬಿಡುತ್ತದೆ. ನಮ್ಮ ಮನಸ್ಸಿಗೆ ಕಳವಳವಾಗುತ್ತದೆ. ಅದರಲ್ಲಿ ಕುಳಿತವರು "ಇವರು ಇನ್ನೂ ಇಲ್ಲಿಯೇ ಇದ್ದಾರೆ" ಎಂದು ಹೇಳುವ ಮಾತು ನಮಗೆ ಕೇಳಿಸುತ್ತದೆ. ಆದರೆ ನಾವು ಈಗ ಪಾದಚಾರಿಗಳೇ ಆಗಬೇಕಾಗುತ್ತದೆ. ಮನುಷ್ಯನಿಗೆ ಸಮಾಧಾನ ಬೇಕಲ್ಲ. "ಹತ್ತು ಪೈಸೆ ಉಳಿದವು" ಎನ್ನುತ್ತೇವೆ! Left-Right—ಮಾಡುತ್ತ ಅರ್ಧ ಗಂಟೆ ನಡೆಯುವಷ್ಟರಲ್ಲಿಯೇ—ಎದುರಿನಿಂದ ಬಸ್ಸು ಬಂದು ಒಂದು Stopಗೆ ನಿಂತಾಗ—ನಮ್ಮ ಜೊತೆಗಾರರು ತಮ್ಮ ಕೆಲಸ ತೀರಿಸಿಕೊಂಡು ಅದರಲ್ಲಿ ಮರಳಿರುತ್ತಾರೆ—ಅಯ್ಯೋ, ನಮ್ಮ ವೇಳೆಯ ಅಪವ್ಯಯ! ಈಗ Timeಗೆ ಬಹಳ ಮಹತ್ವ; ನಾವು ಹುಚ್ಚರು ಎನಿಸುತ್ತದೆ.

ಸಿಟಿ ಬಸ್ಸುಗಳಿಲ್ಲದಾಗ. ನಾವು ಮೊದಲೇ ವೇಳೆ ಗೊತ್ತುಪಡಿಸಿಕೊಂಡು ವರಕವಿ ಬೇಂದ್ರೆಯವರನ್ನು ಕಾಣಲು ಸಾಧನಕೇರಿಗೆ 'ಹೊಂಗೆಹೂವ ತೊಂಗಲಲ್ಲಿ ಭೃಂಗದ ಸಂಗೀತ' ಕೇಳುತ್ತ—ಆ ಹರಟೆ ಈ ಹರಟೆ ಕೊಚ್ಚುತ್ತ,—ಹಾಯಾಗಿ ಅವರ ಮನೆ ಸೇರುತ್ತಿದ್ದೆವು. ಕವಿ ನಮ್ಮನ್ನು ಬರಮಾಡಿಕೊಂಡು—ತಮ್ಮ ನುಡಿಗಳಿಂದ ನಮ್ಮ ದಣಿವನ್ನು ಕಳೆದು ಬಿಡುತ್ತಿದ್ದರು. ನಮಗೆ ಬಸ್ಸಿಗೆ ಹೊರಡುವ ಆತುರವಿಲ್ಲ, ಅವರ ಮಾತಿಗೆ ಮುಕ್ತಾಯವಿಲ್ಲ—ಅದು ಒಂದು ಮಾತು, ಮಾತು ಮಥಿಸಿ ಬಂದ—ನವನೀತ—ಕೇಳುವದೇನು? ಈಗಲೋ ತೀರ ವಿಚಿತ್ರವಾಗಿ ಹೋಗಿದೆ—ಈ ಬಸ್ಸು ಬಂದು. ಹೊರಡುವಾಗ ಬಸ್ಸು

ತಪ್ಪಿದರೆ—ಮುಂದಿನ ರವಿವಾರ ಹೋದರಾಯಿತು ಎನ್ನುತ್ತೇವೆ; ಒಮ್ಮೊಮ್ಮೆ ನಾವು ಸರಿಯಾಗಿ ಬಸ್ಸು ಹಿಡಿದು ಅವರ ಮನೆ ಮುಟ್ಟಿದಾಗ ಅವರೂ ಊರಲ್ಲಿ ಬರಬೇಕೆಂದು ಬಸ್ಸಿಗೆ ಕಾದಿರುತ್ತಾರೆ. ಮಾತುಕಥೆ ಅಷ್ಟಕಷ್ಟೆ. ನಾವು ಅವರ ಮಾತು ಕೇಳುತ್ತ ಕುಳಿತಿರುವಾಗಲೇ ಬಸ್ಸಿನ ಸದ್ದಾಗುತ್ತದೆ–ಎದ್ದು ಬಿಡುತ್ತೇವೆ–ಒಟ್ಟಾರೆ ಹೇಳುವದಾದರೆ ಈ ಕೆಟ್ಟ ಬಸ್ಸು ಬಂದು ನಮ್ಮ ಬಾಳಿನ ನೆಮ್ಮದಿ ಕೆಡಿಸಿತು !

ಸಿಟಿ ಬಸ್ಸುಗಳ ವೇಳಾಪತ್ರಿಕೆಯನ್ನು ನಂಬುವದು ಎಂದರೆ–ಮೋಲದ ಕೋಡುಗಳನ್ನು ಕಂಡಂತೆಯೇ ಸರಿ! ಏಕೆ? ಎಂದು ಪ್ರಶ್ನೆ ಹಾಕಿದರೆ ಅವುಗಳಲ್ಲಾಗುವ ಬದಲಾವಣೆಗಳಿಗೆ ಇತಿ—ಇಲ್ಲಾ ! ಮಿತಿಯಿಲ್ಲಾ—ತಿಥಿ—ಇಲ್ಲಾ ! ಮುಂಜಾವು ನೋಡಿ ಬರೆದುಕೊಂಡದ್ದು ಅದೇ ಸಾಯಂಕಾಲವೇ ಬದಲಾಗಿರುತ್ತದೆ. ಒಮ್ಮೊಮ್ಮೆ ಪ್ಯಾಸಿಂಜರ ಅನುಕೂಲತೆಗಾಗಿ ಆ ಬಸ್ಸು 'ಕ್ಯಾನ್ಸಲ್' ಆಗಿರುತ್ತದೆ! ಒಟ್ಟಿನ ಮೇಲೆ ಬಸ್ಸು ಸರಿಯಾಗಿ ಹತ್ತುವದಕ್ಕೆ ದೈವ ಬೇಕು !!

ಒಂದು ರೀತಿಯಲ್ಲಿ ಟಾಂಗಾ ಸವಾರಿಯೇ ಮೇಲು. 'ಹತ್ತರೀ—ರಾವಸಾಬ' ಎಂದು ಆತ್ಮೀಯತೆಯಿಂದ ಸಾಬಿ ಕರೆಯುತ್ತಾನೆ. 'ಎಷ್ಟು ಕೊಡಬೇಕೋ ಸಾಬಾ'—ಅಂದರೆ 'ತಮಗ ಗೊತ್ತಿಲ್ಲರೇ—ರಾವಸಾಬ–ಹತ್ತರಿ' ಅನ್ನುತ್ತಾನೆ. ನಮ್ಮನ್ನು ಮುಟ್ಟಿಸುವ ಸ್ಥಳಕ್ಕೆ ಬಂದಾಗ—ನಮಗೂ ಅವನಿಗೂ ಬಾಯಿಗೆ ಬಾಯಿಹತ್ತಿದರೆ, ಸುತ್ತಲಿನ ಜನಕ್ಕೆ ಮನರಂಜನೆ ಪುಕ್ಕಟೆಯಾಗಿ ಸಿಕ್ಕುತ್ತದೆ–ಅಷ್ಟೆ! ಎಷ್ಟಂದರೂ ಟಾಂಗಾ ಸಾಬಿ ಮಾನವ–ಅವನಿಗೊಂದು ಕುದುರೆ ಇದೆ. ಬಸ್ಸೋ ನಿರ್ಜೀವಿಯಾದ ಹೃದಯವಿಲ್ಲದ ಯಂತ್ರ. ಟಾಂಗಾಕ್ಕೂ ಬಸ್ಸಿಗೂ ಮಹದಂತರ. ಬಸ್ಸಿನ ಡ್ರಾಯ್ವರ, ಕಂಡಕ್ಟರನ ಅಧೀನ Stopಗೆ ಮಾತ್ರ ಗಂಟೆಯ ನಿನಾದ. ಹತ್ತುವವರು ಹತ್ತುತ್ತಾರೆ. ಇಳಿಯುವವರು ಇಳಿಯುತ್ತಾರೆ—ಯಾರಿಗೆ ಯಾರೋ—ಪುರಂಧರವಿಠ್ಠಲ ! ತೀರ ಯಾಂತ್ರಿಕವಾಗಿ ಬಿಟ್ಟಿದೆ ಬೀದಿ ಬಸ್ಸಿನ ಬಾಳು. ಜನರೂ ಕೂಡಾ ಈಗ ಹೃದಯವಂತಿಕೆ ಕಳೆದುಕೊಂಡು ಬಿಟ್ಟಿದ್ದಾರೆ. ನಿಂತವರು ನಿಂತುಕೊಳ್ಳಲೇ ಬೇಕು. ಕುಳಿತವರು ತುಸು ಸ್ಥಳ ಮಾಡಿಕೊಡುವದಿಲ್ಲ. ಪಾಪ! ಅವರದೇನು ತಪ್ಪು ? ಬಸ್ಸಿನ ನಿಯಮಾವಳಿಯನ್ನು ಪಾಲಿಸುವದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಲ್ಲವೆ ? ಬಸ್ಸೆಂದರೆ ಸಮಾಜವಾದದ ಅಪರಾವತಾರ !

ಬಸ್ಸಿನ Stop ತೀರ ಮನೆಯ ಹತ್ತಿರ ಇರುವದು ಅಷ್ಟು ಸಮಂಜಸವಲ್ಲ. ಅತಿಥಿಗಳ ಹಾವಳಿ ಹೆಚ್ಚಾಗುವ ಸಂಭವ ಹೆಚ್ಚು. ಬಸ್ಸು ಬರುವದಕ್ಕೆ ತಡವಾಯಿತೋ "ಏನು ನಡಿಸಿದ್ದೀರಿ ?" ಎಂದು ಕೂಗುತ್ತ ಬರುತ್ತಾರೆ. ಮತ್ತೆ ನಾವು ತಾರತಮ್ಯಾನುಸಾರವಾಗಿ '' ಹಿಃಹಿಃ–ಹುಃಹುಃ '' ಎಂದು ಕೈಗಡ ತಂದ ನಗುವನ್ನು ಪ್ರದರ್ಶಿಸಬೇಕು, ಉಪಚರಿಸಬೇಕು. ಬೇಡಪ್ಪಾ ಈ Bus Stop–

ಮನೆಯು ಹತ್ತಿರ! ಎನ್ನಬೇಕಾಗುತ್ತದೆ. ಎಷ್ಟೆಂದರೂ ಇದು ಜೀವನಾನುಭವ ನೋಡಿರಿ.

ಮದುವೆ-ಮುಂಜಿವೆಗಳಿಗೆ ಹೋಗುವದಕ್ಕೆ ನಾವು ಬಸ್ಸನ್ನೇ ನಂಬಿರುತ್ತೇವೆ. ಬಸ್ಸು ಗಸ್ತು ಕೊಡುತ್ತದೆ; ಮತ್ತೊಂದು ಬಸ್ಸು ಹಿಡಿದು 'ಅಕ್ಷತೆ' ಹಾಕುತ್ತೇವೆ – ಆರಿದ ಚಹ ಕುಡಿದು 'ಬರುತ್ತೇವೆ' ಎಂಬ ನಿರೂಪಣೆಯೊಂದಿಗೆ – ಮತ್ತೆ ಬಸ್ಸು Stopಗೇ ಧಾವಿಸುತ್ತೇವೆ.

ಬಸ್ಸಿನ ಕಂಡಕ್ಟರ ಅಂದರೆ – ನಿರಂಕುಶ ಪ್ರಭು ಇದ್ದ ಹಾಗೆ! ಅವನು ಗಂಟೆ ಬಾರಿಸಿದಾಗ ಅದು ನಿಲ್ಲಬೇಕು; ಅವನ ಲಹರಿಯ ಮೇರೆಗೆ ಅದು ಓಡಬೇಕು. ಅದರಲ್ಲಿ ಕುಳಿತವರು ಕೇವಲ ಸರಕುಗಳು – ಇಲ್ಲವೇ ವಾಚಾಳಿಗಳು. ಲಕ್ಷ್ಯಕೊಟ್ಟು ಅಭ್ಯಾಸ ಮಾಡುವವರಿಗೆ – ಅದು ಒಂದು ಪುಟ್ಟ ವಿಶ್ವದ ಪ್ರತೀಕವೇ ಸರಿ!

'ಕ್ಯೂ' ಎಂಬುದು ಇಪ್ಪತ್ತನೆಯ ಶತಮಾನದ ದೇವತಾ ಅವತಾರ—ಇಲ್ಲವೇ ಅವಾಂತರ. ಬಸ್ಸಿಗಾಗಿ ಕ್ಯೂ ಹಚ್ಚಿ ನಿಂತಿರುವ ಮಹಿಳೆಯರು, ಮುದುಕರು, ತರುಣರು, ತರುಣಿಯರು—ವಿದ್ಯಾರ್ಥಿಗಳು—ಅವರ ಹತ್ತಿರವೇ ವಿದ್ಯಾರ್ಥಿನಿಯರು—ಅವರವರ ಓರೆನೋಟ—ಕೋರೆನೋಟದ ಮಿಂಚು—ಬೇಕಾದರೆ ಸಂಚು! ಯಾರು ಯಾರು ಎಲ್ಲಿ ಎಲ್ಲಿಗೆ ಹೊರಟಿದ್ದಾರೊ—ಆ ಪರಬ್ರಹ್ಮನಿಗೂ ತಿಳಿಯದು. ಬಸ್ಸು ಬಂತೋ ಧುಮುಕಿದರೆ—ಒಬ್ಬನ ಪೆನ್ನು ಹೋಯಿತು, ಒಬ್ಬಳ ಪರ್ಸು ಹೋಯಿತು—ಹಾಗೆ ಹೀಗೆ ಸುದ್ದಿ ಕೇಳುತ್ತಿರುವಾಗಲೇ—ಬಸ್ಸು ನಾಗಾಲೋಟದಿಂದ ಹೋಗಿ ಬಿಡುತ್ತದೆ. ಮತ್ತೆ ಯಥಾಪ್ರಕಾರ ಕ್ಯೂ. ಅದು ನಿತ್ಯದ ಅನಿವಾರ್ಯದ ಅಗತ್ಯ! ನಾನೊಮ್ಮೆ ನಮ್ಮ ನೆಂಟರನ್ನು ಕಾಣಲು ರಾಜಾಜಿನಗರಕ್ಕೆ ಹೋಗಬೇಕೆಂದಾಗ 'ಕ್ಯೂ'ದ ಕೊನೆ ಬಾಲ ಅಲುಗಾಡಲೇ ಇಲ್ಲ. ಬೇಸತ್ತು 'ಮೆಜೆಸ್ಟಿಕ್'ಕ್ಕೆ ಬಂದಾಗ ಅಲ್ಲಿಯ ಕ್ಯೂ ಅದರ ಎರಡರಷ್ಟು ಇತ್ತು! ಇನ್ನು ಮನೆ ಹೇಗೆ ಕಾಣುವದು ಎಂದು ರಿಕ್ಷಾ ಹತ್ತಿ 'ಬಸವನಗುಡಿಗೆ ಹೋಗಬೇಕು' ಎಂದೆ. ನಾನು ಉತ್ತರ ಕರ್ನಾಟಕದವನೆಂಬುದನ್ನು ಅರಿತ ರಿಕ್ಷಾಧಿಪತಿ—ಬೆಂಗಳೂರೆಲ್ಲ ಸುತ್ತಿಸಿ ಮೂರು ರೂಪಾಯಿ ಪಡೆದು ಧನ್ಯನಾದ. ಬಸ್ಸು ಸಿಕ್ಕಿದ್ದರೆ ಇಪ್ಪತ್ತು ಪೈಸೆಗೆ ಮನೆ ತಲಪುತ್ತಿದ್ದೆ—ಎಂದು ಜೇಬಿನಲ್ಲಿ ಕೈಹಾಕಿಕೊಂಡೆ. ಅದಕ್ಕೇ ನಾನು ಹೇಳುವದು ನಮ್ಮ ಬಸ್ಸೇ ಮೇಲು ಎಂದು!

" ಬಸ್ಸಿನ ಯುಗದಲಿ—ಫಾಸಿಯಾದವರೂ
ಬಸ್ಸೆನ್ನುತ ಬಸ್ಸದು ಓಡುವದು

ಸ್ಟ್ಯಾಂಡಿಂಗಾಗಲಿ—ಸಿಟ್ಟಿಂಗಾಗಲಿ
ಬಸ್ಸಿನ ವೇಳೆಯು ಕಾಯ್ವುದೇ ಮೇಲು!"

ಎಂದು ಕವನ ಕಟ್ಟಿ ಹಾಡುವದೇ ನಮಗೆ ಹಿತಕಾರಿ.

ಬಸ್ಸಿನಲ್ಲಿ ಕುಳಿತು ಅವಲೋಕನ ಮಾಡಬೇಕು. ಪ್ರಪಂಚದ ಅರಿವಾಗುತ್ತದೆ. ಹತ್ತುವವರು, ಇಳಿಯುವವರು—ಇದೆಲ್ಲ ತೆರಪು ಇಲ್ಲದ ಜೀವನ ಪ್ರವಾಹ! ಒಬ್ಬೊಬ್ಬರರೀತಿ ಒಂದೊಂದು ತೆರ. ಅವರ ಮಾತು, ಭಾಷೆ, ಕಥೆ—ಒಂದೊಂದು ವಿಧ. ಹತ್ತ, ಹತ್ತಿರವೇ ಕುಳಿತಿರುವ ಯುವಕ-ಯುವತಿಯರ ಕೊಂಕುನೋಟ—ಮಿಂಚುನೋಟ—ಹೀಗೆ 'Love in Bus' ಪ್ರಕರಣ ನಡೆಯಬಹುದು. ಅದಕ್ಕೆ ನಮ್ಮ ಬಸ್ಸು ಸಾಧನವಾಗಬಹುದು!

★ ಬಿ. ಆರ್. ವಾಡಪ್ಪಿ

ರನ್ನನ ಸಮಸ್ಯಾತ್ಮಕ ತ್ರಿಪದಿ

(ಸ್ಪಷ್ಟೀಕರಣ)

'ಕರ್ನಾಟಕ ಭಾರತಿ'ಯಲ್ಲಿ ಪ್ರಕಟವಾದ 'ರನ್ನನ ಮೂರು ಸಮಸ್ಯಾತ್ಮಕ ಛಂದೋಬಂಧ'ಗಳು ಎಂಬ ಲೇಖದಲ್ಲಿ ತ್ರಿಪದಿಯೆಂದು ಹೆಸರಿಸಲ್ಪಟ್ಟ ಆತನ ಗದಾಯುದ್ಧದಲ್ಲಿಯ 'ಪದ್ಯರಚನೆಯೊಳ್' ಪದ್ಯವು[1] ನಮಗೆ ಪರಿಚಿತವಿರುವ ತ್ರಿಪದಿಯಲ್ಲ; ಅದು ಗಾಥಾ ಅಥವಾ ಗಾಥಾತ್ರಿಪದಿಯೆಂದು ಪ್ರತಿಪಾದಿಸಿರುವೆನು.[2] ಇದಕ್ಕೆ 'ಪ್ರತಿವಾದ' ಎಂದು ಇದೇ ಪತ್ರಿಕೆಯ ಮುಂದಣ ಸಂಚಿಕೆಯಲ್ಲಿ ಶ್ರೀ ಮೇವುಂಡಿ ಮಲ್ಲಾರಿಯವರ ಲೇಖವೊಂದು ಪ್ರಕಟವಾಗಿದೆ.[3] ಆದರಲ್ಲಿ ಅವರು ನನ್ನ ಪ್ರತಿಪಾದನೆಯನ್ನು ಖಂಡಿಸಿ, ಅದು ಅರ್ಧಸಮಮಾತ್ರಾವೃತ್ತ; ಮತ್ತಕೋಕಿಲ ಅಕ್ಷರವೃತ್ತದ ಮಾತ್ರಾರೂಪ; ಅತ ಏವ ಮಾತ್ರಾವಿಶಿಷ್ಟ ಮತ್ತಕೋಕಿಲ ಎಂದು ಸೂಚಿಸಿ ಈ ರೀತಿ ಅದನ್ನು ಪುನರ್ರಚಿಸಿರುವರು. ಅವರ ಪ್ರತಿವಾದದಲ್ಲಿಯ ಆಕ್ಷೇಪಣೆಗಳಿಗೆ ವಿವರಣೆ ಕೊಟ್ಟು ಗಾಥಾತ್ರಿಪದಿಯೆಂಬ ನನ್ನ ನಿಲುಮೆಯನ್ನು ಪುನಃ ಪ್ರಸ್ಥಾಪಿಸಲು ಅನುವು ದೊರೆತಿರುವದರಿಂದ ನನ್ನ ಮಟ್ಟಿಗೆ ಅದೊಂದು ಪ್ರಚ್ಛನ್ನ ಪ್ರಸಾದವೆಂದೇ ಭಾವಿಸಿರುವೆನು.

ಹಿನ್ನೆಲೆ :

ಇದು ರನ್ನನ ತ್ರಿಪದಿ—

ಪದ್ಯರಚನೆಯೊಳ್ಕಾಳಿದಾಸನುಂ
ಗದ್ಯರಚನೆಯೊಳ್ ಬಾಣನುಂ ಮುಂಕವಿಗಳೆರ್ವರುಂ
ನೆಗೞ್ದಿರದಱಿಂ ಸತ್ಕವಿಗಳೆರ್ವರುಮೆಮಗಭಿವಂದ್ಯರ್ ||

—ಯಾವ ರೀತಿಯ ತ್ರಿಪದಿಯ ಪ್ರಸ್ತಾರಕ್ಕೂ ಸೇರದೆಂದು ಗೋವಿಂದ ಪೈ ಕಂಡವೆಂದು ಗ್ರಹಿಸಿ ಇದನ್ನು ಹೀಗೆ ಪುನರ್ರಚಿಸಿರುವರು[4]—

(ಮೃದು)ಪದ್ಯರಚನೆಯೊಳ್ಕಾ-
ಳಿದಾಸನುಂ ಗದ್ಯರಚನೆಯೊಳ್ ಬಾಣನುಮುಂ- |
ಕದ ಕವಿಗಳೆರ್ವರುಂ ನೆಗ-
ೞ್ದದಱಿಂ ಸತ್ಕವಿಗಳೆರ್ವರೆಮಗಭಿವಂದ್ಯರ್ ||

---

೧. ಗ.ಯು. ೧/೯.
೨. ಕ.ಭಾ. ೦/೧, ಪು. ೪೯–೬೨.
೩. ಅದೇ, ೧/೨, ಪು. ೧೯೪–೨೦೦.
೪. ಜ.ಕ. ಸಂ. ೯, ಪು. ೨೪೪.

—ಇಲ್ಲಿ ಅವರು ಪ್ರಾರಂಭದಲ್ಲಿ 'ಮೃದು' ಪದವನ್ನು ಸೇರಿಸಿ, ಮೂಲದಲ್ಲಿಯ 'ಬಾಣನುಂ ಮುಂಕವಿಗಳು' ಪದಗಳನ್ನು 'ಬಾಣನುಮುಂಕದ ಕವಿಗಳು,' 'ನೆಗಟ್ದಿರದಱಿಂ' ಪದಗಳನ್ನು 'ನೆಗಟ್ದದಱಿಂ' ಮತ್ತು 'ರುಮೆಮಗಭಿವಂದ್ಯರ್' ಪದಗಳನ್ನು 'ರೆಮಗಭಿವಂದ್ಯರ್' ಎಂದು ಪರಿವರ್ತಿಸಿಕೊಂಡಿರುವರು.

'ಕಸ್ತೂರಿ'ಯ ಶ್ರೀ ಪಿ. ವಿ. ಆಚಾರ್ಯರ ಅಭಿಪ್ರಾಯದಲ್ಲಿ ಇದೊಂದು ಉಪಜಾತಿ-ಅಕ್ಷರವೃತ್ತ.[೫] ಪುನರ್‍ರಚನೆ ಹೀಗಿದೆ—

ಪದ್ಯರಚನೆಯೊಳ್ ಕಾಳಿದಾಸನುಂ
ಗದ್ಯರಚನೆಯೊಳ್ ಬಾಣನುಂ ಮುಂ- |
ಕವಿಗಳಿರ್ವರುಂ ನೆಗಟ್ದಿರದಱಿಂ ಸ-
ತ್ಕವಿಗಳಿರ್ವರುಮೆಮಗಭಿವಂದ್ಯರ್ ||

—ಇಲ್ಲಿ ಮೂಲದಲ್ಲಿಯ ಪದಗಳು ವ್ಯತ್ಯಾಸವಿಲ್ಲದೆ ಬಂದಿವೆ. ನಾಲ್ಕು ಪಾದಗಳು. ಪ್ರತಿಪಾದದಲ್ಲಿ ಕ್ರಮದಿಂದ ೧೧, ೧೦, ೧೩, ೧೨ ಅಕ್ಷರಗಳಿವೆ. ಪ್ರಾಸವ್ಯವಸ್ಥೆ–೧/೨, ೩/೪. ಲಯ ಸರಿಹೋಗುತ್ತದೆ ಎಂದಿರುವರು.

ಇದು ಮೇವುಂಡಿಯವರ ಪುನರ್‍ರಚನೆ—

ಪದ್ಯರಚನೆಯೊಳ್ ಕಾಳಿದಾಸನುಂ
ಗದ್ಯರಚನೆಯೊಳ್ ಬಾಣನುಂ (ಮಹಾ) |
ಕವಿಗಳಿರ್ವರುಂ ನೆಗಟ್ದಿರದಱ್(ನಾ)
ಕವಿಗಳಿರ್ವರುಮೆನಗಭಿವಂದ್ಯ(ರಯ್) ||

—ಅವರೆಣಿಕೆಯಲ್ಲಿ ಇದು ಮಾತ್ರಾವಿಶಿಷ್ಟ-ಮತ್ತಕೋಕಿಲೆ. ಪಾದಮಾತ್ರೆಗಳ ಮೊತ್ತ(೧೬)ದಲ್ಲಿ ವ್ಯತ್ಯಾಸವಿಲ್ಲದಿದ್ದರೂ ಅಕ್ಷರಗಳ ಲೆಕ್ಕದಿಂದ ಮೊದಲಿನವೆರಡು ಪಾದಗಳಲ್ಲಿ ೧೧, ಉಳಿದೆರಡು ಪಾದಗಳಲ್ಲಿ ೧೩ ಅಕ್ಷರಗಳಿರುವದರಿಂದ ಮತ್ತು ಎರಡೆರಡು ಪಾದಗಳ ಪ್ರಾಸವ್ಯವಸ್ಥೆ (ದ್ಯ ದ್ಯ, ವಿ ವಿ) ಇರುವದರಿಂದ ಅರ್ಧಸಮವೃತ್ತ; ಮತ್ತಕೋಕಿಲೆ ೧೨ ಅಕ್ಷರಗಳ ಅಕ್ಷರವೃತ್ತ –ನಭಜರ (ບບບ| –ບບ| ບ–ບ| –ບ–); ಮಾತ್ರೆಗಳ ಲೆಕ್ಕದಿಂದ ಮತ್ತಕೋಕಿಲೆಯು ೧೬ ಮಾತ್ರೆಗಳನ್ನು ೩–೫–೩–೩–ಗುರು, ಎಂದು ಒಡೆದು ರನ್ನ ಈ ಪದ್ಯ ರಚಿಸಿರಬೇಕೆಂದಿರುವರು. ಪಂಪಭಾರತದಲ್ಲಿಯ 'ನಂದನಂಗಳೊಳ್ ಸುಳಿವ ಬಿರಯಿಯಿಂ', ಮೊದಲಾದ ಮಂದಾನಿಲ ಅಥವಾ ಮಟ್ಟರಗಳೆಯ ಪಾದಗಳನ್ನೂ, ೧೬ ಮಾತ್ರೆಗಳಿಗೆ ಸರಿಹೋಗುವ ಮತ್ತಕೋಕಿಲೆಯ ಪಾದಗಳನ್ನೂ ಮತ್ತು ಇವೆರಡರ ಧಾಟಿಯಲ್ಲಿರುವ ಸಾಮ್ಯವನ್ನೂ ಗಮನಿಸಿ ರನ್ನ

೫. ನನಗೆ ಬರೆದ ಒಂದು ಪತ್ರದಲ್ಲಿ.

ಈ ಪ್ರಯೋಗವನ್ನು ಕೈಕೊಂಡಿರಬೇಕೆಂದಿರುವರು. ಮಂದಾನಿಲರಗಳೆ/ಮತ್ತ-ಕೋಕಿಲೆಯ ೧೬ ಮಾತ್ರೆ ಮತ್ತು ೩–೫–೩–೩–ಗುರು ಗಣವಿಭಾಗಕ್ಕೆ ಸರಿ ಹೋಗುವಂತೆ ತಮ್ಮ ಪುನರ್ರಚನೆಯಲ್ಲಿ—ಮೂಲದಲ್ಲಿಯ 'ಮುಂಕವಿಗಳು' ಪದಗಳಲ್ಲಿಯ 'ಮುಂ' ಬದಲು 'ಮಹಾ', 'ನೆಗಟ್ಟಿರದಱಿಂ ಸತ್ಕವಿಗಳು' ಬದಲು 'ನೆಗಟ್ಟಿರದಱಿನಾಕವಿಗಳು', 'ಎಮಗೆ' ಬದಲು 'ಎನಗೆ', 'ಅಭಿವಂದ್ಯರ್' ಬದಲು 'ಅಭಿವಂದ್ಯರಯ್' ಎಂದು ಮಾರ್ಪಾಟುಗಳನ್ನು ಮಾಡಿಕೊಂಡಿರುವರು.

ಇದು ನನ್ನ ಪ್ರತಿಪಾದನೆ :

ಗದಾಯುದ್ಧದ ಸಂಪಾದನೆಗಾಗಿ ಇಟ್ಟುಕೊಂಡ ಎಲ್ಲ ಹಸ್ತಪ್ರತಿಗಳಲ್ಲಿ ತ್ರಿಪದಿಯೆಂಬ ಹೆಸರಿನೊಂದಿಗೆ ಏಕರೂಪದಲ್ಲಿ ಬಂದಿದ್ದರೂ ಪರಿಚಿತ ತ್ರಿಪದಿಯ ಲಕ್ಷಣಗಳಿಗೆ ಹೊಂದದೆಂಬ ಕಾರಣದಿಂದ ಇದು ಪ್ರತಿಕಾರರ ದೋಷವೆಂದು ಬಗೆದು ಪದ್ಯದ ಪುನರ್ರಚನೆಗೆ ಕೈಹಾಕುವದು ಸಮಂಜಸ ವಾಗದು. ಲಾಕ್ಷಣಿಕರು ಗ್ರಂಥೋಕ್ತ ಅಥವಾ ಸಾಮಾನ್ಯವಾಗಿ ಪ್ರಯೋಗಗಳಲ್ಲಿ ಕಂಡುಬರುವ ಛಂದೋಬಂಧಗಳಿಗೆ ಹೊಂದಿಕೊಳ್ಳದ ಯಾವುದೇ ಛಂದೋ-ಬಂಧವನ್ನು ಗಾಥೆಯೆಂದು ತಿಳಿಯಬೇಕೆಂದಿರುವರು; ಪಾದವೈಷಮ್ಯ (ನಾಲ್ಕ-ಕ್ಕಿಂತ ಹೆಚ್ಚು ಅಥವಾ ಕಡಿಮೆ) ಪಾದಾಕ್ಷರವೈಷಮ್ಯ ಗಾಥೆಯ ಮುಖ್ಯ ಲಕ್ಷಣಗಳು; ರನ್ನನ ಈ ಪದ್ಯದಲ್ಲಿ ಇವೆರಡೂ ಇವೆ; ಆದ್ದರಿಂದ ಇದು ಗಾಥೆ; ಮೂರು ಪಾದಗಳಿರುವದರಿಂದ ಗಾಥಾ-ತ್ರಿಪದಿ; ಕನ್ನಡಪದ್ಯಗಳಲ್ಲಿ ಪ್ರಾಸ ಮತ್ತು ಎಲ್ಲ ಪಾದಗಳಲ್ಲಿಯ ಪಾದಾದಿಮಾತ್ರೆಯು ಒಂದೇ ಬಗೆಯದು (ಲಘು ಅಥವಾ ಗುರು) ಇರಬೇಕೆಂದಿದೆ. ರನ್ನನ ಈ ಪದ್ಯದ ಮೂರನೆಯ ಪಾದದಲ್ಲಿ ಈ ನಿಯಮ ಹೊಂದಿಬಂದಿಲ್ಲ. ಆದ್ದರಿಂದ ಈ ಪಾದದ ಪ್ರಾರಂಭದಲ್ಲಿರುವ 'ನೆಗಟ್ಟಿರ್' ಪದದಲ್ಲಿಯ 'ನೆ'ಯನ್ನು ಎರಡನೆಯ ಪಾದದ ಕೊನೆಗೆ ಸ್ಥಾನಾಂತರಿಸಿದರೆ, 'ಗ' ಮುಂದಿನ ಅಕ್ಷರ 'ಟ್ಟ' ದ್ವಿತ್ವವಿರುವದರಿಂದ 'ಗ' ಗುರುವಾಗುವದು ಮತ್ತು ಅದರೊಂದಿಗೆ ಪ್ರಾಸ ಕೂಡುವದು. ಎಂದಿರುವೆನು.

ಜೊತೆಗೆ 'ನೆಗಟ್ಟ' ಶಿಥಿಲದ್ವಿತ್ವ. ಇವು ಕನ್ನಡಕವಿಗಳಿಗೆ 'ಅನುಕೂಲ-ಸಿಂಧು' ಅಂದರೆ ಸಂದರ್ಭಾನುಸಾರ ದ್ವಿತ್ವದ ಹಿಂದಣ ಮಾತ್ರೆಯನ್ನು ಗುರು/ಲಘು ಮಾಡಿಕೊಳ್ಳಲು ಬರುತ್ತದೆ, ಎಂದಿರುವೆನಲ್ಲದೆ ಉದಾಹರಣೆಯೆಂದು ರನ್ನನ ಒಂದು ಪದ್ಯದ ಒಂದು ಚರಣವನ್ನು ಉಲ್ಲೇಖಿಸಿರುವೆನು. ಆದರೆ ಈ ಉದಾಹರಣೆಯಲ್ಲಿ ನನ್ನ ಈ ಮಾತಿನ ಸಮರ್ಥನೆ ಇಲ್ಲ. ಹೀಗೇಕಾಯಿತೆಂದು ಇಂದು ತಿಳಿಯದಾಗಿದೆ. ದೃಷ್ಟಿದೋಷವೇ ಇರಲಿ, ಏನೇ ಇರಲಿ, ತಪ್ಪು ತಪ್ಪೇ. ಆದ್ದರಿಂದ ಮುಕ್ತಮನಸಿನಿಂದ ಈ ತಪ್ಪನ್ನು ಒಪ್ಪಿಕೊಳ್ಳುವೆನು.

ಆಕ್ಷೇಪಣೆಗಳು :

ಇವು ಮೇವುಂಡಿಯವರ ಆಕ್ಷೇಪಣೆಗಳು—

(೧) ಈ ಪದ್ಯಕ್ಕೆ ತ್ರಿಪದಿಯೆಂದು ಹೆಸರಿಸಿರುವದು ಪ್ರತಿಕಾರರ ಕೈಗಂಟಲ್ಲ; ಇದು ರನ್ನನಿಂದಲೇ ಬಂದ ಹೆಸರೆಂದು ನಚ್ಚಿ ಗಾಥಾ-ತ್ರಿಪದಿಯೆಂದು ಸಾಧಿಸುವದು 'ಅತಿರಿಕ್ತ ವೈಚಕ್ಷಣ್ಯ'. ಗದಾಯುದ್ಧ ಗ್ರಂಥವನ್ನು[೬] ಸಂಪಾದಿಸುವಾಗ ಶುದ್ಧಪಾಠಗಳನ್ನು ಗುರುತಿಸುವದಕ್ಕಾಗಿ ಸಂಪಾದಕರು ಅನುಭವಿಸಿದ ಕಷ್ಟ–ಕೊರತೆಗಳಿಗೆ ಮಿತಿಯಿಲ್ಲ. 'ಈ ಮುದ್ರಣದಲ್ಲಿ ಪ್ರಾಯಶಃ ೨ ರಿಂದ ೭ರ ತನಕ ಆಶ್ವಾಸಗಳಲ್ಲಿ ಮೂಲಪಾಠವು ಸರಿಯಾಗಿದೆ ಎಂದು ಹೇಳಬಹುದು. ೧, ೮, ೯, ೧೦ರಲ್ಲಿ ಅಪಭ್ರಂಶಗಳು ಸುಮಾರಾಗಿ ಬಿದ್ದಿವೆ, ಮತ್ತು ಹಲವು ಕಡೆಗಳಲ್ಲಿ ಮೂಲಪಾಠಗಳು ಸರಿಯಾಗಿಲ್ಲವೆಂದು ತೋರುತ್ತದೆ. ಅವನ್ನು ಮಾತೃಕೆಗಳಿಂದ ಸರಿಪಡಿಸಲು ಸಾಧ್ಯವಾಗಲಿಲ್ಲ; ಇದ್ದ ಹಾಗೆಯೇ ಮುದ್ರಿಸಿರುತ್ತೇನೆ,' ಎಂದು ಅವರೇ ಹೇಳಿರುವರು. ಆದ್ದರಿಂದ ೧ನೆಯ ಆಶ್ವಾಸದಲ್ಲಿಯ ರನ್ನನ ಈ ಪದ್ಯದ ಛಂದೋಬಂಧದ ಬಗೆಗೆ ಅವರು ಸಾಶಂಕರಾಗಿರುವದು ವಿಚಾರಾರ್ಹ.

(೨) ಛಂದೋಬಂಧಗಳು ಅನಂತವಿದ್ದರೂ 'ಅಪಭ್ರಂಶ ಅಪಲಾಪ' ಗಳನ್ನೆಲ್ಲ ಗಾಥಾಪ್ರಪಂಚದ ಯಾವುದೊಂದು ಮೂಲೆಯಲ್ಲಿ ಸಶಾಸ್ತ್ರೀಯವೆಂದು ಸೇರಿಸುವದು ಅಸಮಂಜಸ. ಶಾಸ್ತ್ರವೆಂದರೆ ಒಂದು ನಿರ್ದಿಷ್ಟ ನಿಯಮವನ್ನು ಅಸಂದಿಗ್ಧವಾಗಿ ಹೇಳಬೇಕು. ರನ್ನನಂಥ ಮಹಾಕವಿ ಇಂಥದೊಂದು ಪದ್ಯವನ್ನು ರಚಿಸಿ ಅದಕ್ಕೆ ತ್ರಿಪದಿಯೆನ್ನಲಾರ.

(೩) ಪ್ರಾಸ ಮತ್ತು ಪಾದಾದಿಮಾತ್ರೆಯನ್ನು ಹೊಂದಿಸಿಕೊಳ್ಳಲು ಮೂರನೆಯ ಪಾದದ ಮೊದಲಕ್ಷರ 'ನೆ'ಯನ್ನು ಎರಡನೆಯ ಪಾದದ ಕೊನೆಗೆ ಎತ್ತಿಡಬೇಕೆಂಬ ಸೂಚನೆ ವ್ಯರ್ಥ. 'ಟ್ಬ' ಪ್ರಾಸ 'ದ್ಯ'ಕ್ಕೆ ಉಚಿತವಾಗದು. 'ನೆಗಟ್ಬ' ನಿತ್ಯಶಿಥಿಲ.

ವಿವರಣೆ :

ಗದಾಯುದ್ಧದ ಸಂಪಾದಕರ ಮಾತುಗಳು ೧೦೦% ವಸ್ತುಸ್ಥಿತಿಯನ್ನು ಬಣ್ಣಿಸುವವೆಂದು ತಿಳಿದರೂ, ಈ ಸಂದರ್ಭದಲ್ಲಿ ಪ್ರಯೋಗಿಸಿದ ಪ್ರಾಯಶಃ, ಸುಮಾರಾಗಿ, ಬಹುದು, ತೋರುತ್ತದೆ,—ಶಬ್ದಗಳ ಮೂಲಕ ಅವು ಈ ಪದ್ಯಕ್ಕೆ ಸಹ ಅನ್ವಯಿಸುವವೆಂದು ನಿಶ್ಚಿತವಾಗಿ ಗ್ರಹಿಸುವಂತಿಲ್ಲ. ಅಲ್ಲದೆ ಅವರ ಈ ಮಾತುಗಳು ಹಸ್ತಪ್ರತಿಗಳಲ್ಲಿಯ ಪಾಠಗಳ ಶುದ್ಧಾಶುದ್ಧತೆಯನ್ನು

೬. ಗ.ಯು., ೩ನೆಯ ಸಂಸ್ಕರಣ, ೧೯೨೫.

ಕುರಿತು. ಇಲ್ಲಿರುವ ಸಮಸ್ಯೆ ಛಂದಸ್ಸಿನದು. ಈ ಪದ್ಯದ ವಿಷಯದಲ್ಲಿ, ಇದು ಛಂದಃಶಾಸ್ತ್ರದಲ್ಲಿಯ ತ್ರಿಪದಿಯ ಲಕ್ಷಣಕ್ಕೆ ವಿರುದ್ಧವಾಗಿದೆ; ಆದ್ದರಿಂದ ಇದರ ಹೆಸರಿನ ಪಕ್ಕದಲ್ಲಿ (?) ಪ್ರಶ್ನೆಯ ಚಿಹ್ನವನ್ನು ಹಾಕಿರುತ್ತೇನೆ, ಎಂದಿಷ್ಟೇ ಹೇಳಿರುವರು.[7]

ರನ್ನನ ಈ ಪದ್ಯ ಮತ್ತು ಇದರಷ್ಟೇ ಸಮಸ್ಯಾತ್ಮಕವಿರುವ ಮಾತ್ರಾ-ಸಮಕಷಟ್ಪದಿಯ ಹೊರ್ತಾಗಿ ನೂರಾರು ಕಂದವೃತ್ತಗಳು ಆತನ ಈ ಗ್ರಂಥದಲ್ಲಿವೆ. ಕಂದ, ಚಂಪಕಮಾಲೆ ಮೊದಲಾದ ಖ್ಯಾತಕರ್ಣಾಟಕಗಳು ಮತ್ತು 'ಇರಲೀ ಮಾದ್ರಿತನೂಜಂ' ಅರ್ಧಸಮವೃತ್ತ—ಇವಿಷ್ಟನ್ನು ಬಿಟ್ಟು ಉಳಿದ ವೃತ್ತಗಳಿಗೆ ಹಸ್ತಪ್ರತಿಗಳಲ್ಲಿ ಸರಿಯಾದ ಹೆಸರುಗಳಿವೆ. ಇವುಗಳಲ್ಲಿ ಒಂದು ನವನಲಿನ, ಇನ್ನೊಂದು ಲಲಿತ, ಮೂರನೆಯದು ಪೃಥ್ವೀ. ಅರ್ಧಸಮವೃತ್ತ ನಿಯಮಾನುಸಾರ ರಚಿತವಾಗಿದ್ದರೂ ಶಾಸ್ತ್ರಗ್ರಂಥಗಳಲ್ಲಿ ಅದು ಉಕ್ತವಾಗಿಲ್ಲ. ಆದ್ದರಿಂದ ಅದಕ್ಕೆ ಹೆಸರು ಕೊಟ್ಟಿಲ್ಲ. ಅಂತೆಯೆ ಸಂಪಾದಕರು ಈ 'ವೃತ್ತದ ಹೆಸರು ಮಾತೃಕೆಯಲ್ಲಿ ಇಲ್ಲ,' ಎಂದಿರುವರು, ಅಡಿಟಿಪ್ಪಣಿಯಲ್ಲಿ.[8] ಇವೆಲ್ಲ ಚತುಷ್ಪದಿಗಳು. ಚತುಷ್ಪದಿಗಳಾಗಿಯೇ ಬಂದಿವೆ. ಮಾತ್ರಾಸಮಕ-ಷಟ್ಪದಿಯು ಹೆಸರಿಗನುಸರಿಸಿ ೬ ಪಾದಗಳಲ್ಲಿ ಬಂದಿದೆ. ಇದೇ ಮೇರೆಗೆ ತ್ರಿಪದಿಯು ಮೂರು ಪಾದಗಳಲ್ಲಿದೆ. ಪ್ರತಿಕಾರರ ದೋಷವೆಂದು ಅವರಿತ್ತ 'ತ್ರಿಪದಿ' ಹೆಸರನ್ನು ಹೊಡೆದುಹಾಕಿದರೂ ಕಂದವೃತ್ತಾದಿಗಳನ್ನು ಚತುಷ್ಪದಿಗಳಲ್ಲಿ, ಮಾತ್ರಾಸಮಕ-ಷಟ್ಪದಿಯನ್ನು ೬ ಪಾದಗಳಲ್ಲಿ ಬರೆದಿರುವಂತೆ ತ್ರಿಪದಿಯೆಂದು ಹೇಳಿ ಮೂರು ಪಾದಗಳಲ್ಲಿ ಅವರು ಈ ಪದ್ಯವನ್ನು ಬರೆದಿರುವದನ್ನು ಅದೇ ಖಟಿನಲ್ಲಿ ಹಾರಿಸಿಬಿಡುವದು ಸುಲಭವಿಲ್ಲ. ಅಲ್ಲದೆ ನಮಗೆ ಪರಿಚಿತವಿರುವ ತ್ರಿಪದಿಗಳ ಸಂಖ್ಯೆ ಎರಡೋ ಮೂರೊ. ಸಂಗೀತರತ್ನಾಕರಕಾರ ಶಾರ್ಙ್ಗದೇವನಾದರೊ ತ್ರಿಪದಿಗಳಲ್ಲಿ ಬಹಳಷ್ಟು (ಭೂರಯಃ) ಭೇದಗಳಿವೆ ಎಂದಿರುವನು.[9] ನಮಗೆ ಪರಿಚಿತವಿರುವ ತ್ರಿಪದಿ, ಷಟ್ಪದಿಗಳ ಹೊರ್ತಾಗಿ 'ತ್ರಿಪಥ' ಎಂಬ ಜಾತಿಯನ್ನು ಉಲ್ಲೇಖಿಸಿರುವನು ಆತ.[10] ಛಂದಸ್ಸಿನ ಮಟ್ಟಿಗೆ ಇದಕ್ಕೆ ಮೂರು ಪಾದಗಳಿರಬೇಕೆಂಬ ನಿಯಮವನ್ನು ಬಿಟ್ಟರೆ ಇತರ ನಿರ್ಬಂಧಗಳಿಲ್ಲ. ಬಿರುದು ಮೊದಲಾದ ಸ್ತುತಿ-ಸಂದರ್ಭಗಳಲ್ಲಿ ಇದು ಪ್ರಯೋಗಾರ್ಹ ಎಂದಿರುವನು. ರನ್ನನ ತ್ರಿಪದಿ ಇವಾಗಲಿ ಅಥವಾ ಆತ ಹೇಳಿದ ಇತರ (ಭೂರಯಃ) ತ್ರಿಪದಿಗಳಲ್ಲಿ ಯಾವುದೇ ಒಂದು ಇರಬಹುದಾಗಿದೆ. ಸಂಶೋಧನೆಯನ್ನು ಈ

---

೭. ಗ.ಯು. ಮುನ್ನುಡಿ, ಪು. ೨೩

೮. ಅದೇ, ಪು. ೮೮

೯. ಸಂ.ರ. ೪/೨೭೪

೧೦. ೪/೨೭೮–ಪಾದತ್ರಯಂ ತ್ರಿಪಥಕೇ ಪಾಟೈಸ್ತು ಬಿರುದೈಃ ಸ್ವರೈಃ ॥

ದಿಸೆಯಲ್ಲಿ ಮುಂದುವರಿ, ರನ್ನನ ಈ ಪದ್ಯ ತ್ರಿಪದಿಯೇ ಅಲ್ಲ; ಹೀಗೆಂದಿರುವದು ಪ್ರತಿಕಾರರ ದೋಷ, ಎಂದು ನಿಶ್ಚಿತಪಡಿಸಿಕೊಳ್ಳದೆ, ಗದಾಯುದ್ಧದ ಸಂಪಾದಕರು ಬಹುದು, ತೋರುತ್ತದೆ, ಮೊದಲಾದ ಎಚ್ಚರಿಕೆಯ ಶಬ್ದಗಳೊಂದಿಗೆ ಹೇಳಿರುವ ಮಾತುಗಳನ್ನು ತಳಹದಿಯಾಗಿಟ್ಟುಕೊಂಡು, ಪದ್ಯದ ಪುನರ್ರಚನೆಗೆ ಕೈಹಾಕುವದು ಮಳಲ ಮೇಲೆ ಮನೆಕಟ್ಟಿದಂತಾಗುವದು. ಇದಕ್ಕೆ ಸ್ಥಿರತೆಯಿಲ್ಲ, ಕೊನೆಯಿಲ್ಲ. ಈಗಾಗಲೆ ಈ ಪದ್ಯಕಂದ ಉಪಜಾತಿಗಳಲ್ಲಿ ಪುನರ್ರಚಿತವಾಗಿದೆ. ಮೇವುಂಡಿಯವರ ಅರ್ಧಸಮಮಾತ್ರಾವಿಶಿಷ್ಟ-ಮತ್ತ-ಕೋಕಿಲೆ ಮೂರನೆಯದು. ಇದನ್ನು ಇನ್ನೂ ಹಲವು ಬಗೆಗಳಲ್ಲಿ ಪುನರ್ರಚಿಸಬಹುದು. ಈ ರೀತಿ ಕಾಲಾಂತರದಲ್ಲಿ ಸಂಶೋಧನೆಯ ಹೆಸರಿನಲ್ಲಿ ಇದೊಂದು ಬೌದ್ಧಿಕ ಕಸರತ್ತಾಗಿ ಪರಿಣಮಿಸಬಹುದೇ ಹೊರತು ಸಮಸ್ಯೆಗೆ ಪರಿಹಾರ ದೊರೆಯದು.

ರನ್ನನ ಈ ಪದ್ಯ—ತ್ರಿಪದಿಯೇ ಇರಲಿ ಯಾವುದೇ ಇರಲಿ ಇದೊಂದು ಛಂದೋಬಂಧವೆಂಬಲ್ಲಿ ಮತಭೇದವಿಲ್ಲ. ಆದರೆ ಆ ಛಂದಸ್ಸಾವುದೆಂಬುದು ಇಂದು ತಿಳಿಯದಾಗಿದೆ. ಇಂಥ ಸಂದರ್ಭಗಳಲ್ಲಿ ಛಂದಸ್ಸುಗಳ ಅನಂತತ್ವವನ್ನು ಮನದಂದು ಲಾಕ್ಷಣಿಕರು ಆದಕ್ಕೆ ಗಾಥಾ ಎನ್ನಬೇಕೆಂದಿರುವರು. ಕೆಲವರು ಗಾಥೆ ತ್ರಿಪದಿ ಅಥವಾ ಷಟ್ಪದಿಗಳಲ್ಲಿರುವುದೆಂದಿರುವರು. ಬೇರೆ ಕೆಲವರು ವಿಷಮಾಕ್ಷರಪಾದ ವಿಷಮಪಾದಗಳಿರುವುದು ಗಾಥೆಯೆಂದಿರುವರು. ರನ್ನನ ಪದ್ಯದಲ್ಲಿ ಈ ಲಕ್ಷಣಗಳಿರುವುದರಿಂದ ಅದು ಗಾಥಾ ಅಥವಾ ಗಾಥಾತ್ರಿಪದಿ ಎಂದಿರುವೆನು. ಹೀಗೆನ್ನುವಾಗ ಕವಿಗೆ ದೋಷವನ್ನು ಕೊಟ್ಟಿಲ್ಲ. ಪ್ರತಿಕಾರರ ಮೇಲೆ ತಪ್ಪುಹೊರಿಸಿಲ್ಲ. ಪದ್ಯದಲ್ಲಿಯ ಶಬ್ದಗಳಿಗೆ ಕೈಹಚ್ಚಿಲ್ಲ. ಹೆಚ್ಚಿನ ಶಬ್ದಗಳನ್ನು ಸೇರಿಸಿಲ್ಲ. ಇದ್ದವುಗಳನ್ನು ತೆಗೆದುಹಾಕಿಲ್ಲ. ಪಾಠಶುದ್ಧಿಯ ದೃಷ್ಟಿಯಿಂದ ಗದಾಯುದ್ಧದ ಸಂಪಾದಕರು ಈ ಪದ್ಯವಿರುವ ಆಶ್ವಾಸದಲ್ಲಿ ಅಪಭ್ರಂಶಗಳು ಸುಮಾರಾಗಿ ಬಿದ್ದಿವೆ; ಹಲವು ಕಡೆಗಳಲ್ಲಿ ಮೂಲಪಾಠಗಳು ಸರಿಯಾಗಿಲ್ಲವೆಂದು ತೋರುತ್ತದೆ, ಎಂದಿರುವರು. ಈ ಪದ್ಯದ ವಿಷಯದಲ್ಲಿ ಅವಾವೆಂಬುದನ್ನು ಅವರೂ ತೋರಿಸಿಲ್ಲ; ಇದನ್ನು ಪುನರ್ರಚಿಸಿದವರೂ ತೋರಿಸಿಲ್ಲ. ತಪ್ಪಿರುವ ಪಾಠಗಳ ಬದಲು ಸರಿಯಿರಬಹುದಾದ ಪಾಠಗಳನ್ನು ಊಹಿಸಿ ಸೇರಿಸಿದರೂ ಪಾದವೈಷಮ್ಯ-ಪಾದಾಕ್ಷರವೈಷಮ್ಯಗಳು ಉಳಿಯುವದರಿಂದ ನನ್ನ ಪ್ರತಿಪಾದನೆಗೆ ಬಾಧೆತಟ್ಟದು. ಹಾಗೆ ನೋಡಿದರೆ ರನ್ನನ ಈ ಪದ್ಯವನ್ನು ಗಾಥಾ ಅಥವಾ ಗಾಥಾ-ತ್ರಿಪದಿ ಎಂದಿರುವದು ಸಂಶೋಧನೆಯ ಫಲವಲ್ಲ. ಛಂದಃಶಾಸ್ತ್ರದಲ್ಲಿಯ 'ಅನುಕ್ತಂ ಗಾಥಾ' ಸೂತ್ರದ ಪರಿಚಯವಿದ್ದವರು ಹೆಚ್ಚು ತಲೆತುರಿಸಿಕೊಳ್ಳದೆ ಥಟ್ಟನೆ ಒಂದು ಮಾತಿನಲ್ಲಿ 'ಇದು ಗಾಥಾ' ಎಂದು ಹೇಳಿ ಮುಂದೆ ಸಾಗುವರು. ನಾನಾದರೂ ಇಷ್ಟೇ ಹೇಳಿರುವೆನು

ಮತ್ತು ಇದಕ್ಕೆ ಪೂರ್ವಭಾವಿಯಾಗಿ ಗಾಥೆಯ ಇತಿಹಾಸವನ್ನು ವಿವರಿಸಿರುವೆನು. ಸದ್ಯ ಇಷ್ಟಕ್ಕಿಂತ ಹೆಚ್ಚು ಹೇಳುವದು ಸಾಧ್ಯವಿಲ್ಲ. ಇಷ್ಟೇ ಏಕೆ, ನನ್ನ ಪ್ರತಿಪಾದನೆಯನ್ನು ಅಲ್ಲಗಳೆದು ಮೇವುಂಡಿಯವರು ಅರ್ಧಸಮ-ಮಾತ್ರಾ ವಿಶಿಷ್ಟ-ಮತ್ತಕೋಕಿಲೆಯೆಂದು ಹೆಸರಿಸಿ ಪುನರ್ರಚಿಸಿದ ರನ್ನನ ಈ ಪದ್ಯದ ಛಂದಸ್ಸಿಗೆ ಸರಿಹೋಗುವ ಛಂದಸ್ಸು ಯಾವುದೇ ಗ್ರಂಥದಲ್ಲಿ ಉಕ್ತವಾಗಿಲ್ಲ. ಆದ್ದರಿಂದ ಇದಾದರೂ ಗಾಥಾ; ನಾಲ್ಕು ಪಾದಗಳಿರುವದರಿಂದ ಗಾಥಾ-ಚತುಷ್ಪದಿ ಎಂದೇ ಹೇಳಬೇಕಾಗುವದು. ಇಷ್ಟೊಂದು ವ್ಯಾಪಕವಿದೆ ಈ ಸೂತ್ರ. ವಸ್ತುಸ್ಥಿತಿ ಇಂತಿರುವಾಗ ಮೇವುಂಡಿಯವರ 'ಅತಿರಿಕ್ತ ವೈಚಕ್ಷಣ್ಯ', 'ಅಪಭ್ರಂಶ ಅಪಲಾಪ' ಮೊದಲಾದ ಮೂದಲಿಕೆಯ ಮಾತುಗಳ ಹೊಲಬು ತಿಳಿಯದಾಗಿದೆ.

ಶಿಥಿಲದ್ವಿತ್ವ–ಪ್ರಾಸ :

'ನೆಗಬ್ದ' ನಿತ್ಯಶಿಥಿಲದ್ವಿತ್ವ. ಆದ್ದರಿಂದ 'ಬ್ದ' ಹಿಂದಣ ಗ-ಕ್ಕೆ ಗುರುತ್ವವಿಲ್ಲ; ಬ್ದ-ಪ್ರಾಸ ದ್ಯ-ಕ್ಕೆ ಉಚಿತವಾಗದೆಂದು ಆಕ್ಷೇಪಿಸಲಾಗಿದೆ. ಶಾಸ್ತ್ರದ ಮಟ್ಟಿಗೆ ಇದು ನಿಜ. ಆದರೆ ಎಷ್ಟೋ ಸಲ ಶಾಸ್ತ್ರದಲ್ಲಿ ಒಂದಿದ್ದರೆ ಪ್ರಯೋಗದಲ್ಲಿ ಇನ್ನೊಂದಿರುವದುಂಟು. ಶಬ್ದಮಣಿದರ್ಪಣಕಾರ ಕೇಶಿರಾಜ ಸೂತ್ರ ೩೬ರ ಕೆಳಗೆ ದ್ವಿತ್ವಗಳನ್ನು ನಿಯತ, ಶಿಥಿಲ, ಉಭಯ (ಶಿಥಿಲ/ದ್ವಿತ್ವ) ಎಂದು ವಿಂಗಡಿಸಿರುವನು. ಶಿಥಿಲದ್ವಿತ್ವಗಳಿಗೆ ಉದಾಹರಣೆಗಳೆಂದು ನೆಗಬ್ದಂ, ಪೊಗಬ್ದಂ, ಮುಗುಬ್ದಂ, ಜಗುಬ್ದಂ, ಮೊದಲಾದ ಕೆಲವು ಉದಾಹರಣೆಗಳನ್ನು ಕೊಟ್ಟಿರುವನು. ಛಂದಸ್ಸಿನಲ್ಲಿ ಇವುಗಳಲ್ಲಿಯು 'ಬ್ದ' ಹಿಂದಣ ಗ-ಕ್ಕೆ ಗುರುತ್ವವಿಲ್ಲ. ಸಾಮಾನ್ಯವಾಗಿ ಕವಿಗಳು ಈ ನಿಯಮವನ್ನು ಪಾಲಿಸಿರುವರು. ಆದರೆ 'ಝುಳಕಂ ಝುಳುಟಿಸಿದಂ' ಕಂದಪದ್ಯದಲ್ಲಿ ಕೇಶಿರಾಜನೇ ಈ ನಿಯಮವನ್ನು ಉಲ್ಲಂಘಿಸಿರುವನು (ಸೂತ್ರ, ೨೫). ಈ ಪದ್ಯದ ಮೂರನೆಯ ಪಾದ—'ಬಳಿಗೆ ನೆಗಬ್ದೊಂಮುಳಿಜಂ' ಎಂದಿದೆ. ಕಂದದ ಲಕ್ಷಣಕ್ಕನುಸರಿಸಿ ಈ ಪಾದವನ್ನು ೪ ಚತುರ್ಮಾತ್ರಾಗಣಗಳಲ್ಲಿ ವಿಂಗಡಿಸುವಾಗ 'ನೆಗಬ್ದ'ದಲ್ಲಿಯ 'ಗ' ಗುರುವಾದರೇನೇ ಇದು ಸಾಧ್ಯ. ನಿಯಮಕ್ಕನುಸರಿಸಿ ಲಘು ಎಂದಿಟ್ಟುಕೊಂಡರೆ ಲೆಕ್ಕ ತಪ್ಪುವದು.

ಇವು—ಬೇರೆ ಕೆಲವು ಉದಾಹರಣೆಗಳು—

(೧) ××××ನೆಗಬ್ದುದಂದೀ। ಕೃತಿ ಜಗದೊಳ್ ಪುದಿದು ಸಾಗರಾಂತರಂ ಬರೆಗಂ ||

—ಆದಿಪಂಪನ ಆದಿಪುರಾಣದ ಕೊನೆಯಲ್ಲಿರುವ ಕಂದಪದ್ಯದ ಎರಡು ಪಾದಗಳಿವು. ಕವಿಚರಿತೆಯಲ್ಲಿ ಉದಾಹೃತವಾಗಿವೆ. ಮೊದಲ ಪಾದದ ೪ ಚತು-

ಮಾತ್ರಾಗಣಗಳಲ್ಲಿ ಮೊದಲನೆಯದಕ್ಕೆ ಹೊಂದಿಕೊಳ್ಳುವ ಅಕ್ಷರಗಳು ಬಿದ್ದು ಹೋಗಿವೆ. 'ನೆಗಟ್ಟು'ದಲ್ಲಿಯ 'ಗ' ಗುರುವಾದರೇನೇ ಮುಂದಣವೆರಡು ಚತುರ್ಮಾತ್ರಾಗಣಗಳು ಹುಟ್ಟುತ್ತವೆ.

(೨) 'ಳ ನೆಗಟ್ಟ ನೆಗಟ್ತೆ ತನ್ನಭಶ್ಚರ ಪತಿಯಾ'

—ಇದು ಪೊನ್ನನ ಶಾಂತಿಪುರಾಣದಲ್ಲಿಯ (೨/೫೦) ಕಂದಪದ್ಯದ ಳನೆಯ ಪಾದ. 'ನೆಗಟ್ಟಿ'ದಲ್ಲಿಯ 'ಗ' ಗುರುವಾದರೆ ಮಾತ್ರ ಈ ಪಾದದ ಗಣ-ವಿಭಾಗ ಹೊಂದಿಕೊಳ್ಳುವದು.

(೩) 'ಬೆನೆಕರಣತ್ರಯಪ್ರಕೃತಿಶುದ್ಧಿ ನೆಗಟ್ದಿರೆ ಮುನ್ನಿನ ರಾಜ್ಯಲೀಲೆಯಿಂ'

—ಇದು ರನ್ನನ ಅಜಿತಪುರಾಣದಲ್ಲಿಯ 'ತನುತನುವಾಗೆ (೩/೨)' ಪದ್ಯದ ೩ನೆಯ ಚರಣ. ಚಂಪಕಮಾಲೆ (ನಜಭಜಜಜರ)—೨೧ ಅಕ್ಷರಗಳ ವೃತ್ತ. ಈ ಪಾದದಲ್ಲಿ ೨೪ ಅಕ್ಷರಗಳಿದ್ದು ಆ ಮೂಲಕ ಒಂದು ಜ-ಗಣ ಹೆಚ್ಚಾಗಿದೆ. ಉಳಿದ ಮೂರು ಪಾದಗಳು ಲಕ್ಷಣಕ್ಕೆ ಹೊಂದಿಕೊಂಡಿವೆ. ಈ ಪಾದದಲ್ಲಿಯ ೫ನೆಯ ಗಣ ಜ-ಗಣವಾಗಬೇಕಾದರೆ 'ನೆಗಟ್ದಿದ'ಲ್ಲಿಯ 'ಗ' ಗುರುವಾಗಲೇ-ಬೇಕು.

(೪) '× × × ×| × × × ×| × × × ನೆ| ಗಟ್ದುದು| ಲೋಕೋ ||'

—ಇದು ಮಹಾಬಲಕವಿಯ ನೇಮಿನಾಥಪುರಾಣದಲ್ಲಿಯ ಕಂದದ ಎರಡನೆಯ ಪಾದ. ಶಾಸ್ತ್ರದ ಮೇರೆಗೆ ಇದರಲ್ಲಿ ೫ ಚತುರ್ಮಾತ್ರಾಗಣಗಳಿರಬೇಕು ಮತ್ತು ೩ನೆಯದು ಜ-ಗಣ ಅಥವಾ ನ್ಲ-ಗಣ (೪ ಲಘು) ಇರಬೇಕು. ಈ ಲೆಕ್ಕಕ್ಕನುಸರಿಸಿ ಇಲ್ಲಿಯ 'ನೆಗಟ್ದು'ದಲ್ಲಿಯ 'ನೆ' ೩ನೆಯ ಚತುರ್ಮಾತ್ರಾ ಜ ಅಥವಾ ನ್ಲ-ಗಣಕ್ಕೆ ಸೇರುತ್ತದೆ. 'ಗ' ಗುರುವಾಗದೆ ಮುಂದಣವೆರಡು ಚತುರ್ಮಾತ್ರಾಗಣಗಳು ಸಾಧಿಸವು.

(೫) 'ಬರಮೆ ಜಗುಟ್ದಿ........'

—ಇವು ನೇಮಿಚಂದ್ರನ ಲೀಲಾವತಿಯುಲ್ಲಿಯ 'ಪರೆಯ ಕುರುಳ್ಗಳಂತೆ' ಚಂಪಕಮಾಲೆಯ (ನಜಭಜಜಜರ) ೪ನೆಯ ಪಾದದ ಮೊದಲಿನವೆರಡು (ನಜ) ಗಣಗಳು. 'ಜಗುಟ್ದಿ'ದಲ್ಲಿಯ 'ಗು' ಗುರುವಾದರೇನೇ ಎರಡನೆಯ ಗಣ ಜ-ಗಣವಾಗಬಲ್ಲದು.

(೬) 'ಬರವ ಪುಳಿಂದಿ ತಾಳ್ದಿಸೆವ ಮೂಗಿನ ಮುತ್ತು ಮುಗುಟ್ಟು ನೋಡಲು'

—ಇದು ಹರಿಹರನ ಗಿರಿಜಾಕಲ್ಯಾಣದಲ್ಲಿಯದು. 'ಕರಮೆಸೆದತ್ತು ಕೌಮುದಿಯು ಬಿತ್ತು' ಚಂಪಕಮಾಲೆಯ ತೃತೀಯ ಪಾದ. ಚಂಪಕ

ಮಾಲೆಯ ಕೊನೆಯವೆರಡು ಗಣಗಳು—ಜರ. ಇಲ್ಲಿರುವ 'ಮಗುಬ್ಬ'ದಲ್ಲಿಯ 'ಗು' ಗುರುವಾಗದೆ ಜ-ಗಣ ಸಿದ್ಧಿಸದು.

(೭) 'ನನವರತಂ ಪೊಗಟ್ಬುಕೆ....'

—ಇವು ಚಂಪಕಮಾಲೆಯ ಪ್ರಾರಂಭದ ಮೂರು ಗಣಗಳು (ನಜಭ). ಹರಿಹರನ ಪಂಪಾಶತಕದಲ್ಲಿಯ 'ಮನುಜರ ಮೇಲೆ ಸಾವವ' ಪದ್ಯದ ೩ನೆಯ ಚರಣದಲ್ಲಿವೆ. 'ಪೊಗಟ್ಬ'ದಲ್ಲಿಯ 'ಗ'-ನ್ನು ಗುರುವಾಗಿಸದೆ ಭ-ಗಣ ಹುಟ್ಟದು.

ಇನ್ನು ಪ್ರಾಸವಿಚಾರ. ಕನ್ನಡ ಪದ್ಯಗಳಿಗೆ ದ್ವಿತೀಯಾಕ್ಷರ ಪ್ರಾಸ ಸಾಮಾನ್ಯವಿದ್ದರೂ ಶಾಸ್ತ್ರದಲ್ಲಿ ಒಂದಿದ್ದರೆ ಪ್ರಯೋಗದಲ್ಲಿ ಎಷ್ಟೋ ಸಲ ಇನ್ನೊಂದಿರುವುದುಂಟು. ಪ್ರಾಸವನ್ನು ಮೀರಿರುವ ಉದಾಹರಣೆಗಳೆಂದು ಲ-ಳ, ಱ-ರ, ಭ-ಫ, ರ್ಘ-ರ್ತ, ಟ್ತ-ರ್ತ, ನ್ತ-ನ್ತ, ಸ-ಶ, ಣ್ಬ-ಂಬ, ಮ್ಯ್ರ-ರ್ಮ, —ಪ್ರಾಸಗಳಿರುವ ಕೆಲವು ಪದ್ಯಗಳು ಕನ್ನಡ ಕೈಪಿಡಿಯಲ್ಲಿ ಉದಾಹೃತವಾಗಿವೆ[೧೧] ಇವುಗಳೊಂದಿಗೆ ಹ್ವ(ಸ್ವೀಕೃತಪಾಠ)–ವ (ಪಂಪಭಾರತ ೨/೩), ಣ (ಸ್ವೀಕೃತಪಾಠ)–ಳ (ಆದೇ ೪/೩೬), ಂತ-ಂದ್ರ (ಪೊನ್ನ-ಶಾಂ.ಪುರಾಣ, ೧೨/೪೮), ಸ್ತ-ಸ (ರನ್ನ-ಅಜಿತಪುರಾಣ, ೬/೭೦), ರ್ದ-ನ (ಆದೇ ೧೦/೩೫), ಸ್ತ-ಸ್ತ್ರ, ಪ್ರ-ಪ್ಪ, ರ್ಗ-ಟ್ಗ, ತ್ವ-ತ್ಕ (ಕ.ಚ ಸಂ. ೧, ಪು. ೨೮, ೫೯), ತ್ಯ-ತ (ಚಾಮರಸ-ಪ್ರ.ಲೀಲೆ), ತ್ಯ-ಕ್ತ (ಗುರುಬಸವ–ಶಿವಯೋಗಾಂಗಭೂಷಣ, –ಕ.ಚ. ಸಂ. ೨, ಪು. ೭೫) ಪ್ರಾಸಗಳಿರುವ ಪದ್ಯಗಳನ್ನೂ ಸೇರಿಸಬಹುದಾಗಿದೆ. ಇವುಗಳಲ್ಲಿಯ ತ್ಯ-ಕ್ತ ಪ್ರಾಸಕ್ಕೂ ರನ್ನನ ಪದ್ಯದ ವಿಷಯದಲ್ಲಿ ನಾನು ಸೂಚಿಸಿದ ದ್ಯ-ಟ್ದ ಪ್ರಾಸಕ್ಕೂ ವ್ಯತ್ಯಾಸವಿಲ್ಲೆಂದು ಬಗೆದಿರುವೆನು.

ಈ ಬಗೆಯ ಪ್ರಾಸಗಳನ್ನು ಅಪವಾದಗಳೆಂದು ಗ್ರಹಿಸಬೇಕೇ ಅಥವಾ ಇವುಗಳಿಗೊಂದು ಶಾಸ್ತ್ರ / ಪರಂಪರೆಯ ಆಧಾರವಿದೆಯೇ ಎಂಬುದೊಂದು ವಿಚಾರಣೀಯ ಅಂಶ. ಕವಿರಾಜಮಾರ್ಗದಲ್ಲಿ ದಕ್ಷಿಣೋತ್ತರ ಮಾರ್ಗಗಳ ನಿರೂಪಣೆಯ ಸಂದರ್ಭದಲ್ಲಿ ವರ್ಣಾನುಪ್ರಾಸ ಶ್ರುತ್ಯನುಪ್ರಾಸಗಳ ವಿಚಾರ ಬರುತ್ತದೆ. ಅದೇ ಅಕ್ಷರ ಪುನಃಪುನಃ ಬಂದರೆ ವರ್ಣಾನುಪ್ರಾಸ. ಉದಾ: ಧವಳಜಳಧರ ಕುಳಾಕುಳ, ಇತ್ಯಾದಿ. ಶ್ರುತ್ಯನುಪ್ರಾಸದಲ್ಲಿ ಭಿನ್ನಾಕ್ಷರಗಳಿದ್ದರೂ ಏಕಸ್ಥಾನ ಅಥವಾ ಅದರ ಸಮೀಪ ಸ್ಥಾನದಲ್ಲಿ (ದಂತ್ಯ, ಓಷ್ಠ್ಯ, ಇತ್ಯಾದಿ) ಉಚ್ಚರಿಸಲ್ಪಡುವ ಅಕ್ಷರಗಳಿರುತ್ತವೆ. ಉದಾ: ದೆಸೆಗಳ್ ವಿಶಾಲಮಾದುವು, ಇತ್ಯಾದಿ. ಕನ್ನಡದಲ್ಲಿ ವರ್ಣಪ್ರಾಸವೇ ಬಳಕೆಯಲ್ಲಿದ್ದರೂ ಕವಿಗಳು ಅಲ್ಲಲ್ಲಿ ಶ್ರುತಿಪ್ರಾಸವನ್ನು ಅಥವಾ ಇವೆರಡರ ಮಿಶ್ರಣವನ್ನು ಬಳಸಿದಂತಿದೆ. ಉಪರೋಕ್ತ ಉದಾ

---

೧೧. ಕೈಪಿಡಿ, ಸಂ. ೧, ಪು. ೭೩–೭೫

ಹರಹೆಗಳಲ್ಲಿ ಲ–ಳ, ಱ–ರ, ಸ–ಶ, ಹ್ವ–ಪ, ೞ–ಳ, ಸ್ರ–ಸ, ತ್ರ್ಯ–ತ್ರ, ರ್ದ–ನ, ಸ್ತ–ಸ್ತೃ, ತ್ಕೃ–ತ್ಕ, ರ್ಗ–ಟ್ಗ, ತ್ಯ–ಕ್ತ ಮೊದಲಾದವು ಈ ಬಗೆಯು ವಿದ್ದು ಶಾಸ್ತ್ರೋಕ್ತ ವರ್ಣಪ್ರಾಸಗಳೊಂದಿಗೆ ಇವುಗಳನ್ನೂ ಬಳಸಿರುವಂತೆ ತೋರುತ್ತದೆ. ಬಲ್ಲವರು ಈ ವಿಷಯುವನ್ನು ಪರಾಂಬರಿಸಿ ಮಾರ್ಗದರ್ಶನ ನೀಡಬೇಕು.

ರನ್ನನ ತ್ರಿಪದಿಯ ಮೂರನೆಯ ಪಾದದಲ್ಲಿರುವ ಪಾದಾದಿಮಾತ್ರೆ ಮತ್ತು ಪ್ರಾಸದ ಪ್ರಮೇಯುವನ್ನು 'ನೆಗಟ್ದ'ದಲ್ಲಿಯ ನೆ–ಯನ್ನು ಎರಡನೆಯ ಪಾದದ ಕೊನೆಯಲ್ಲಿಟ್ಟು ಬಗೆಹರಿಸಿಕೊಳ್ಳಬಹುದು ಎಂದಿರುವದು ಮೇಲ್ಕಾಣಿಸಿದ ಶಿಥಿಲದ್ವಿತ್ವ ಮತ್ತು ಪ್ರಾಸಗಳ ಉದಾಹರಣೆಗಳನ್ನು ಆಧರಿಸಿ. ಕನ್ನಡ ಕವಿಗಳಿಗೆ ಶಿಥಿಲದ್ವಿತ್ವಗಳು 'ಅನುಕೂಲಸಿಂಧು' ಎಂದಿರುವುದಾದರೂ ಇದೇ ಜಾಡಿನಿಂದ. ನಿತ್ಯಶಿಥಿಲದ್ವಿತ್ವಗಳೆಂದಿರುವ ಇವುಗಳನ್ನೇ ಅವರು ಹೀಗೆ ಬಳಸಿಕೊಂಡಿರುವಾಗ ಮಿಕ್ಕವುಗಳ ಪಾಡೇನು? ಇದು ವಸ್ತುಸ್ಥಿತಿ. 'ಆರೋಪ' ಅಲ್ಲ. ಆದರೆ ಈ ಮಾತಿನ ಸಮರ್ಥನೆಗಾಗಿ ಕೊಟ್ಟಿರುವ ಉದಾಹರಣೆ ತಪ್ಪಿಬಿದ್ದಿದೆ. ಈ ತಪ್ಪನ್ನು ಪ್ರಾರಂಭದಲ್ಲಿಯೇ ಒಪ್ಪಿಕೊಂಡಿರುವೆನು. ಶಿಥಿಲದ್ವಿತ್ವ-ಪ್ರಾಸಗಳ ಈ ವಾದದಲ್ಲಿ ಸಿಲುಕಿ ಒದ್ದಾಡುವದಕ್ಕಿಂತ ರನ್ನನ ಈ ಪದ್ಯವಿರುವ ಆಶ್ವಾಸದಲ್ಲಿ ಅಪಭ್ರಂಶಗಳು ಸುಮಾರಾಗಿ ಸೇರಿಕೊಂಡಿವೆಂಬ ಗದಾಯುದ್ಧದ ಸಂಪಾದಕರ ಮಾತುಗಳನ್ನು ಆಶ್ರಯಿಸಿ ಮೇವುಂಡಿಯವರು ತಮ್ಮ ಪುನರ್ರಚಿತ ಪದ್ಯದಲ್ಲಿ ಮೂಲದಲ್ಲಿಯ 'ಸತ್' ಪದವನ್ನು ತೊಡೆದುಹಾಕಿದಂತೆ 'ನೆಗಟ್ದರ್' ಪದವನ್ನು ಬಿಟ್ಟು ಅದರ ಬದಲು ಆದ್ಯ, ಹೃದ್ಯ, ಸುವೇದ್ಯ, ಮೊದಲಾದ ದ್ಯ–ಕಾರವಿರುವ ದ್ವಿತ್ವಶಬ್ದಗಳಲ್ಲಿ ಒಂದನ್ನು ಸರಿಹೋಗುವಂತೆ ಜೋಡಿಸಿಕೊಂಡು ಸುಲಭವಾಗಿ ಪಾರಾಗಬಹುದಿತ್ತು. ಆದರೆ ಈ ಸಾಹಸ ನನ್ನಲ್ಲಿಲ್ಲ.

ಮೇವುಂಡಿಯವರು ಪುನರ್ರಚಿಸಿದ ಪದ್ಯ :

ಇದಿಷ್ಟು ರನ್ನನ ಈ ಪದ್ಯ-ಗಾಥಾ ಅಥವಾ ಗಾಥಾ-ತ್ರಿಪದಿ ಎಂದಿರುವದಕ್ಕೆ ಮೇವುಂಡಿಯವರು ಎತ್ತಿದ ಆಕ್ಷೇಪಣೆಗಳ ಸ್ಪಷ್ಟೀಕರಣ. ಅವರು ಈ ಪದ್ಯವನ್ನು ಪುನರ್ರಚಿಸಿದ ಬಗೆಯನ್ನು ಕುರಿತು 'ಪೋಸ್ಟಮೊರ್ಟೆಮ್' ಕೈಕೊಳ್ಳುವ ಅಗತ್ಯ ನನಗಿಲ್ಲ. ಆದರೆ ಅವರೆತ್ತಿದ ಆಕ್ಷೇಪಣೆಗಳಲ್ಲಿ ಗದಾಯುದ್ಧದ ಸಂಪಾದಕರು 'ಅಪಭ್ರಂಶಗಳ ಮೊಟ್ಟೆ' ಎಂದು 'ಘಂಟಾಘೋಷ'ವಾಗಿ ಹೇಳಿರುವ ಈ ಪದ್ಯವನ್ನು ರಚಿಸಿ, ಇದಕ್ಕೆ 'ತ್ರಿಪದಿ' ಎಂದಿರುವನೆಂದು ಹೇಳಿ, ರನ್ನನಂಥ ಮಹಾಕವಿಗೆ 'ಪ್ರಗತಿಶೀಲ' ಕವಿಯೆಂದು ಒಪ್ಪವಿಡುವದು 'ಧಾರ್ಷ್ಟ್ಯವೇ ಸರಿ' ಎಂಬ ಮಾತಿದೆ. ಜೊತೆಗೆ ಪದ್ಯದ ಕರ್ತೃತ್ವದ ವಿಷಯದಲ್ಲಿ ಗದಾಯುದ್ಧದ ಸಂಪಾದಕರು ಸಾಶಂಕರಿರುವರೆಂಬ ಮಾತೂ ಇದೆ. ಛಂದಸ್ಸಿನೊಂದಿಗೆ

ಕರ್ತೃತ್ವದ ಸಮಸ್ಯೆಯೂ ಈ ಪದ್ಯಕ್ಕಿದೆಂಬುದು ನನಗೆ ಹೊಸ ವಿಷಯ. ರನ್ನಕೃತವೇ ಇರಲಿ, ಅನ್ಯಕೃತವೇ ಇರಲಿ, ಇದು ಬೇರೆ ವಿಷಯವೆಂದು ಮೇವುಂಡಿ ಇದನ್ನು ಇಷ್ಟಕ್ಕೇ ಕೈಬಿಟ್ಟಿರುವರು. ಏನಿದ್ದರೂ ಪ್ರಕೃತ ಸಂದರ್ಭದಲ್ಲಿ ಈ ಚರ್ಚೆ ಅಪ್ರಸ್ತುತ. ಆದರೆ ಛಂದಸ್ಸಿನ ಮಟ್ಟಿಗೆ ಮೂಲಪ್ರತಿಪಾದನೆಯಲ್ಲಾಗಲಿ ಈ ಸ್ಪಷ್ಟೀಕರಣದಲ್ಲಾಗಲಿ ಮೇವುಂಡಿಯವರು ಆಕ್ಷೇಪಿಸಿದ ಬಗೆಯ ಧಾರ್ಷ್ಟ್ಯತೆ ಇರಲಿ, ಅದರ ಸೋಂಕಾದರೂ ಎಲ್ಲಿದೆಯೆಂಬುದು ತಿಳಿಯದಾಗಿದೆ. ಅವರ ಪುನರ್ರಚಿತ ಪದ್ಯದ ಮೂಲಕವಾದರೂ ಇದು ತಿಳಿದರೆ ಇನ್ನುಮುಂದಾದರೂ ಈ ಬಗೆಯ ಪ್ರಮಾದ ಘಟಿಸದಂತೆ ಎಚ್ಚರವಹಿಸಲು ಅನುಕೂಲವಾಗುವದು.

ರನ್ನನ ತ್ರಿಪದಿ ತ್ರಿಪದಿಯೇ ಅಲ್ಲವೆಂದು ಹೇಳಿ ಅದನ್ನು ಪುನರ್ರಚಿಸುವ ಮೊದಲು ಮೇವುಂಡಿಯವರು ಇದು ಕಂದವೆಂದು ಭಾವಿಸಿದವರ ಪ್ರತಿಪಾದನೆಯನ್ನು ವಿಮರ್ಶಿಸಿರುವರು. ಇದಕ್ಕಾಗಿ ರನ್ನನ ಪದ್ಯದ ಮೂರನೆಯ ಪಾದಕ್ಕೂ ಕಂದದ ಕೊನೆಯ ಪಾದಕ್ಕೂ ಇರುವ ಸಾಮ್ಯವನ್ನೂ, ಕಂದವೆಂದು ಪ್ರಸ್ತರಿಸಿದಾಗ ರನ್ನನ ಪದ್ಯದ ಈ ಪಾದದ ನಾಲ್ಕನೆಯ ಗಣದಲ್ಲಿ ಒಂದು ಮಾತ್ರೆ ಹೆಚ್ಚಾಗುವದನ್ನೂ ಎತ್ತಿ ತೋರಿಸಿ, ಈ ದೋಷವನ್ನು ಸರಿಪಡಿಸಿಕೊಂಡರೂ, ಪದ್ಯದ ಇನ್ನುಳಿದ ಭಾಗದ ಗತಿಯೇನೆಂದು ಪ್ರಶ್ನಿಸಿ ಕಂದವಾದಿಗಳ ಪ್ರತಿಪಾದನೆಯನ್ನು ‘ಅಪರಿಪೂರ್ಣ’ ಎಂದು ತಳ್ಳಿಹಾಕಿರುವರು. ಗೋವಿಂದ ಪೈ ಕಂದವೆಂದು ಈ ಪದ್ಯವನ್ನು ಪುನರ್ರಚಿಸಿದ್ದು ಅದನ್ನು ಇಲ್ಲಿ ಪ್ರಾರಂಭದಲ್ಲಿಯೆ ಕೊಟ್ಟಿರುವೆನು. ಜಿಜ್ಞಾಸುಗಳು ಅದನ್ನು ಪರಿಕಿಸಿ ವಸ್ತುಸ್ಥಿತಿಯನ್ನು ಅರಿತುಕೊಳ್ಳಬಹುದು. ಕಂದವಾದಿಗಳ ಪ್ರತಿಪಾದನೆ ಅಪೂರ್ಣ ಎಂದಿರುವದರೊಂದಿಗೆ ಇದು ಗಾಥಾ ಅಥವಾ ಗಾಥಾ-ತ್ರಿಪದಿಯೆಂಬ ನನ್ನ ಪ್ರತಿಪಾದನೆ ‘ಜೊಳ್ಳುತನದಿಂದಾಗಿ ಹಾರಿ ಹೋಗುವುದು’, ಎಂದಿರುವರು. ಜೊಳ್ಳೊ. ಗಟ್ಟಿಯೊ, ಮತ್ತೊಂದೊ ಎಂಬುದರ ನಿರ್ಣಯ ನನಗೆ ಸೇರಿದ್ದಲ್ಲ. ಅದು ವಿದ್ವಾಂಸರ ಸೊತ್ತು. ನನ್ನ ಮಟ್ಟಿಗೆ ಗಟ್ಟಿಯೆಂದೇ ಭಾವಿಸಿರುವೆನು ಮತ್ತು ಆ ರೀತಿ ಪ್ರಸ್ತಾಪಿಸಲು ಮೂಲ ಲೇಖದಲ್ಲಿ ಮತ್ತು ಈ ಸ್ಪಷ್ಟೀಕರಣದಲ್ಲಿ ಯಥಾಶಕ್ತಿ ಪ್ರಯತ್ನಿಸಿರುವೆನು.

ಪ್ರತಿಭಾನ್ವಿತ ಕವಿಗಳಿಗೆ ಅಕ್ಷರವೃತ್ತಗಳಿರುವ ಗುರು-ಲಘು ಕ್ರಮದ ಬಂಧನವನ್ನು ನೀಗಿಸಿ, ಅವುಗಳನ್ನು ಸುಲಲಿತ ಮಾತ್ರಾಬಂಧಗಳಾಗಿ ಪರಿವರ್ತಿಸಿ, ಛಂದೋವೈವಿಧ್ಯವನ್ನು ಹೆಚ್ಚಿಸುವದಕ್ಕೆ ಆಸ್ಪದವಿದ್ದಿತೆಂಬ ಪೀಠಿಕೆ ಹಾಕಿ, ಮೇವುಂಡಿಯವರು ರನ್ನನ ಪದ್ಯದ ಪುನರ್ರಚನೆಗೆ ತೊಡಗಿರುವರು. ಇದಕ್ಕಾಗಿ ಪಂಪನ ಮಂದಾನಿಲರಗಳೆ, ಮತ್ತಕೋಕಿಲ ಅಕ್ಷರವೃತ್ತ ಮತ್ತು ರನ್ನನ ಈ ಪದ್ಯ—ಇವುಗಳ ಧಾಟಿಯಲ್ಲಿರುವ ಸಾಮ್ಯವನ್ನು ಎತ್ತಿ ತೋರಿಸಿ, ಮಂದಾನಿಲದ

ಪ್ರತಿಪಾದದಲ್ಲಿ ೪-ಚತುರ್ಮಾತ್ರಾಗಣಗಳಿರಬೇಕೆಂಬ ಶಾಸ್ತ್ರ/ಪರಂಪರೆಯನ್ನು ಬದಿಗಿರಿಸಿ, ಆಧುನಿಕರು ಲಯಕ್ಕನುಸರಿಸಿ ಇದನ್ನು ೩-೫-೩-೫ ಮತ್ತು ೩-೫-೩-೩-ಗುರು, ಎಂದು ಪ್ರಸ್ತರಿಸಿದ ಬಗೆಗಳಲ್ಲಿ ಎರಡನೆಯದನ್ನು ಸ್ವೀಕರಿಸಿ, ಜೊತೆಗೆ ಮತ್ತಕೋಕಿಲೆಯ ನ-ಭ-ಜ-ನ ಗಣಗಳ ೧೬ ಮಾತ್ರೆಗಳನ್ನು ೩-೫-೩-೩-ಗುರು ಪ್ರಸ್ತಾರಕ್ಕೆ ಪರಿವರ್ತಿಸಿ, ಎರಡರಲ್ಲೂ ಏಕರೂಪತೆಯನ್ನು ಉಂಟುಮಾಡಿ, ಈ ಪ್ರಸ್ತಾರಕ್ಕೆ ಹೊಂದಿಕೊಳ್ಳುವಂತೆ ಮೂಲಪದ್ಯದಲ್ಲಿಯ ಪಾಠಗಳಲ್ಲಿ ವ್ಯತ್ಯಾಸಮಾಡಿ, ಪದ್ಯವನ್ನು ಪುನರ್ರಚಿಸಿ, ಇದೊಂದು ರನ್ನನ ಪ್ರಯೋಗವೆಂದಿರುವರು.

ಹೀಗೂ ಇರಬಹುದೆಂದಿಟ್ಟುಕೊಂಡರೂ ಇದಕ್ಕಾಗಿ ರನ್ನನಿಗೆ ಇಷ್ಟೊಂದು ಸುತ್ತಾಡುವ ಅಗತ್ಯವೇನಿತ್ತೊ ತಿಳಿಯದು. ಪ್ರಾಚೀನರು ಹೊಸ ಹೊಸ ಛಂದೋಬಂಧಗಳನ್ನು ನಿರ್ಮಿಸುತ್ತಿದ್ದರು. ಪ್ರಾಚೀನತಮ ಪಿಂಗಲನ ಛಂದಃ-ಶಾಸ್ತ್ರದಲ್ಲಿ ಸುಮಾರು ೧೧೦ ಅಕ್ಷರ ಮತ್ತು ೪೦ ಮಾತ್ರಾವೃತ್ತಗಳಿವೆ. ಕ್ರಮೇಣ ಈ ಸಂಖ್ಯೆ ೮೦೦ ಮತ್ತು ೫೦ಕ್ಕೇರಿದೆ. ಪ್ರಾಕೃತ ಅಪಭ್ರಂಶಗಳಲ್ಲಿ ೫೫೦ಕ್ಕೆ ಮಿಕ್ಕ ಮಾತ್ರಾಬಂಧಗಳು ಉಕ್ತವಾಗಿವೆ. ಇವುಗಳಲ್ಲಿ ಕೆಲವು ಸಂಸ್ಕೃತದಲ್ಲಿ ಪ್ರವೇಶಪಡೆದಿವೆ. ಹೀಗೆ ಪ್ರವೇಶಪಡೆದವುಗಳಲ್ಲಿ ಕನ್ನಡದಲ್ಲಿ ವಿಶೇಷ ಬಳಕೆಯಲ್ಲಿದ್ದ ಸಾಂಗತ್ಯವೂ ಒಂದು. ನಮ್ಮ ಆದಿನಾಗವರ್ಮನೂ ಮಲ್ಲಿಕಾಮಾಲೆ ಮೊದಲಾದ ಕೆಲವು ವೃತ್ತಗಳನ್ನು ನಿರ್ಮಿಸಿರುವದಾಗಿ ತಾನೇ ಹೇಳಿಕೊಂಡಿರುವನು. ಅರ್ಧಸಮವೃತ್ತಗಳ ಪಾದಾದಿಮಾತ್ರೆಯ ವಿಷಯದಲ್ಲಿ ನಾವೀನ್ಯವನ್ನು ತೋರಿರುವನು. ರನ್ನನು ರಗಳೆಗೆ ಕನ್ನಡದ ವೈಶಿಷ್ಟ್ಯವನ್ನು ತೊಡಸಿರುವನು. ಆದರೆ ಹೊಸ ಛಂದೋಬಂಧಗಳ ಅವರ ನಿರ್ಮಾಣ ಮೋವುಂಡಿಯವರು ಬಣ್ಣಿಸಿದ ಬಗೆಯದಲ್ಲ. ಪ್ರಸ್ತಾರಪದ್ಧತಿಯ ಮೇರೆಗೆ ಹೊರಡುವ ಲಕ್ಷಾವಧಿ ಅಕ್ಷರ/ಮಾತ್ರಾಬಂಧಗಳಲ್ಲಿ ತಮಗೆ ಹಿಡಿಸಿದ ಯಾವುದೊಂದನ್ನು ಆಯ್ದು-ಕೊಂಡು, ಅದಕ್ಕೊಂದು ಹೆಸರುಕೊಟ್ಟು, ಪದ್ಯವನ್ನು ರಚಿಸುತ್ತಿದ್ದರು. ಅವರ ಈ ರಚನೆ ಇತರರಿಗೂ ಹಿಡಿಸಿ ಅವರೂ ಪ್ರಯೋಗಿಸುತ್ತಿದ್ದರು ಮತ್ತು ಈ ರೀತಿ ಲಕ್ಷಣಗ್ರಂಥಗಳಲ್ಲಿ ಅದಕ್ಕೊಂದು ಸ್ಥಾನದೊರೆಯುತ್ತಿತ್ತು. ಪಿಂಗಲಗ್ರಂಥ-ಕ್ಕಿರುವ ಮುನ್ನುಡಿಯಲ್ಲಿ ಕೇದಾರನಾಥ-ವಾಸುದೇವಶಾಸ್ತ್ರಿ ಪಂಡಿತದ್ವಯರು ‘ ಪ್ರಸ್ತಾರಪ್ರತಿಪನ್ನಾನಾಂ ಸ್ವರೂಪಾಣಾಂ ಮಧ್ಯೇ ಯಾನಿ ಯಾನಿ ಗತಿಸಂಪ-ನ್ನಾನಿ ಸ್ಯುಸ್ತಾನಿ ಕ್ವಚಿದೇಕೈಕಾನ್ಯೇನ ಪ್ರಯುಕ್ತಾನಿ ಛಂದಾಂಸಿ ಭವಂತಿ,’ ಎಂದಿರುವರು ಈ ಸಂದರ್ಭದಲ್ಲಿ.[೧೨] ರನ್ನನಾದರೂ ೩-೫-೩-೩ ಗುರು ಗಣ ವಿಭಾಗವಿರುವ ೧೬ ಮಾತ್ರೆಗಳ ಬಂಧವೊಂದರಲ್ಲಿ ನೇರವಾಗಿ ತನ್ನ ಈ

---

೧೨ ಪಿಂ.ಛಂ. ಮುನ್ನುಡಿ, ಪು. ೪೯; ಸರ್ವಸಮವೃತ್ತಪ್ರಭಾವ (ಸಂಸ್ಕೃತ) ಗ್ರಂಥದಲ್ಲೂ ಈ ವಿಷಯದಲ್ಲಿ ಸ್ವಲ್ಪ ಮಾಹಿತಿ ಇದೆ.

ಪದ್ಯವನ್ನು ರಚಿಸುತ್ತಿದ್ದನು. ೧೬ ಮಾತ್ರೆಗಳ ಬಂಧಗಳಲ್ಲಿ ಈಗಾಗಲೆ ೨೬ ಬಗೆಗಳಿವೆ. ಅವನದು ಅವುಗಳಲ್ಲಿ ೨೭ನೆಯದಾಗುತ್ತಿತ್ತು.

ಮೇವುಂಡಿಯವರು ಪುನರ್ರಚಿಸಿದ ಪದ್ಯ ಚತುಷ್ಪದಿ. ಪ್ರತಿಪಾದದಲ್ಲಿ ೧೬ ಮಾತ್ರೆಗಳಿವೆ. ಗಣವಿಭಾಗ ೩–೫–೩–೩–೨. ಇದರ ರಚನೆಗೆ ಪ್ರಚೋದಕಗಳೇನೇ ಇದ್ದರೂ ಸಿದ್ಧರೂಪದಲ್ಲಿ ಇದು ಮಾತ್ರಾವೃತ್ತಸಮಚತುಷ್ಪದಿ. ಕನ್ನಡದಲ್ಲಿರುವದರಿಂದ ಪಾದಾದಿ ಮಾತ್ರೆ ಮತ್ತು ಪ್ರಾಸನಿಯಮಗಳು ಇದಕ್ಕೂ ಅನ್ವಯಿಸಬೇಕು. ಆದರೆ ಮೇವುಂಡಿಯವರ ರಚನೆ ಇಂತಿಲ್ಲ. ಮೊದಲಿನವೆರಡು ಪಾದಗಳಲ್ಲಿ ಪಾದಾದಿಮಾತ್ರೆ–ಗುರು, ಉಳಿದೆರಡರಲ್ಲಿ–ಲಘು, ಇದೆ. ಪ್ರಾಸವ್ಯವಸ್ಥೆ ೧/೨–ದ್ಯ, ೩/೪–ವ. ಮಾತ್ರಾವೃತ್ತವಿದ್ದರೂ ಪ್ರಥಮಾರ್ಧದಲ್ಲಿ ೧೧ ಮತ್ತು ದ್ವಿತೀಯಾರ್ಧದಲ್ಲಿ ೧೩ ಅಕ್ಷರಗಳಿರುವದರಿಂದ ಮತ್ತು ಎರಡೆರಡು ಪಾದಗಳ ಪ್ರಾಸವ್ಯವಸ್ಥೆ ಇರುವದರಿಂದ ಇದೊಂದು :ಅರ್ಧಸಮ ಮಾತ್ರಾವೃತ್ತ ಎಂದು ತಿಳಿಯಲು ಪ್ರತ್ಯವಾಯವಿಲ್ಲ, ಎಂದಿರುವರು ಅವರು.

ಅರ್ಧಸಮವೃತ್ತದ ಮೇವುಂಡಿಯವರ ಈ ವ್ಯಾಖ್ಯೆ ಸಮಗ್ರ ಛಂದಃಶಾಸ್ತ್ರಕ್ಕೇನೆ ಹೊಸದು. ಅಕ್ಷರವೃತ್ತವೇ ಇರಲಿ, ಮಾತ್ರಾವೃತ್ತವೇ ಇರಲಿ, ಪದ್ಯದ ನಾಲ್ಕೂ ಪಾದಗಳು ಪ್ರಸ್ತಾರದಲ್ಲಿ ಒಂದೇ ಬಗೆಯವಿದ್ದರೆ ಅದು ಸಮವೃತ್ತವೆನಿಸಿಕೊಳ್ಳುವದು. ೧/೩ನೆಯ ಪಾದಗಳು ಒಂದು ಬಗೆಯವು, ೨/೪ನೆಯ ಪಾದಗಳು ಇನ್ನೊಂದು ಬಗೆಯವು ಇದ್ದು ಥಾಟ ಕೂಡುತ್ತಿದ್ದರೆ ಅದು ಅರ್ಧಸಮವೃತ್ತ. ನಾಲ್ಕೂ ಪಾದಗಳು ಬೇರೆ ಬೇರೆ ಬಗೆಯವಿದ್ದು ಥಾಟ ಹೊಂದುತ್ತಿದ್ದರೆ ಅದು ವಿಷಮವೃತ್ತ. ಅಕ್ಷರವೃತ್ತಗಳು ಪಾದದಲ್ಲಿಯ ಅಕ್ಷರಗಳ ಸಂಖ್ಯೆಯಿಂದ ನಿಯತವಾಗಿರುತ್ತವೆ. ಮಾತ್ರಾವೃತ್ತಗಳು ಮಾತ್ರೆಗಳ ಸಂಖ್ಯೆಯಿಂದ ನಿಯತವಾಗಿರುತ್ತವೆ. ಅಕ್ಷರವಿಶಿಷ್ಟವೆಂದು ಹೇಳಿ ಮಾತ್ರೆಗಳ ಸಂಖ್ಯೆಯನ್ನಾಧರಿಸಿ ಅದು ಸಮ, ಅರ್ಧಸಮ, ವಿಷಮವೆಂದು ವರ್ಗೀಕರಿಸುವಂತಿಲ್ಲ. ಇದೇ ಮೇರೆಗೆ ಮಾತ್ರಾವಿಶಿಷ್ಟವೆಂದು ಹೇಳಿ ಅಕ್ಷರಗಳ ಸಂಖ್ಯೆಯನ್ನಾಧರಿಸಿ ಅದು ಸಮ, ಅರ್ಧಸಮ, ವಿಷಮವೆನ್ನುವಂತಿಲ್ಲ. ರನ್ನನ ಗದಾಯುದ್ಧದಲ್ಲಿಯೇ 'ಇರಲೀ ಮಾದ್ರಿತನೂಜಂ (೭/೪೧)' ಅರ್ಧಸಮವೃತ್ತವಿದೆ. ಇದರ ೧/೩ನೆಯ ಪಾದಗಳು ೨೦ ಅಕ್ಷರಗಳ ಮತ್ತೇಭವಿಕ್ರೀಡಿತದಲ್ಲಿ, ೨/೪ನೆಯ ಪಾದಗಳು ೨೨ ಅಕ್ಷರಗಳ ಮಹಾಸ್ರಗ್ಧರೆಯಲ್ಲಿವೆ. ನಾಲ್ಕೂ ಪಾದಗಳ ಪಾದಾದಿಮಾತ್ರೆ ಲಘು ಮತ್ತು ಎಲ್ಲ ಪಾದಗಳಿಗೆ ರ-ಪ್ರಾಸವಿದೆ. ಕೈಪಿಡಿಯಲ್ಲಿ ನಾಲ್ಕು—ನಾಗ, ವಿಯೋಗಿನಿ, ವಸಂತಮಾಲಿಕೆ, ಪುಷ್ಪಿತಾಗ್ರ—ಅರ್ಧಸಮವೃತ್ತಗಳು ಉದಾಹೃತವಾಗಿವೆ (ಪು. ೮೯). ಇವುಗಳಲ್ಲಾದರೂ ೧/೩ ಮತ್ತು ೨/೪ನೆಯ ಪಾದಗಳು, ಪಾದಾದಿಮಾತ್ರೆ ಮತ್ತು ಪ್ರಾಸಗಳು ಶಾಸ್ತ್ರಕ್ಕನುಸರಿಸಿ ಬಂದಿವೆ. ಛಂದೋಂಬುಧಿಯ ನಾಗವರ್ಮ ಮೂರು

—ಅಚ್ಯುತಕ, ದಿವಿಜಕಲ್ಪಲತೆ ಮತ್ತು ರವಿಪ್ರಭೆ—ಅರ್ಧಸಮವೃತ್ತಗಳನ್ನು ಲಕ್ಷಿಸಿರುವನು. ಮೊದಲಿನದರಲ್ಲಿ ೧/೩ನೆಯ ಪಾದಗಳು ದ್ರುತಪಾದಗತಿಯವು, ೨/೪ನೆಯವು ಚಿತ್ರಗತಿಯವು; ಎಲ್ಲ ಪಾದಗಳಿಗೆ ತ-ಪ್ರಾಸವಿದೆ. ಎರಡನೆಯದು ರಥೋದ್ಧತ (೧/೩) ಮತ್ತು ಮತ್ತಕೋಕಿಲೆ(೨/೪)ಗಳ ಕೂಡಿಕೆಯಿಂದಾಗಿದೆ; ಎಲ್ಲ ಪಾದಗಳಲ್ಲಿ ವ-ಪ್ರಾಸವಿದೆ. ಮೂರನೆಯದರ ಪಾದಗಳ ವೃತ್ತಗಳು ಉಪಲಬ್ಧವಿರುವ ಛಂದೋಗ್ರಂಥಗಳಲ್ಲಿ ಉಕ್ತವಾಗಿಲ್ಲ. ಎಲ್ಲ ಪಾದಗಳಲ್ಲಿ ಮ-ಪ್ರಾಸವಿದೆ. ಮೂರೂ ವೃತ್ತಗಳ ಪಾದಾದಿ ಮಾತ್ರೆಗಳ ವಿಷಯದಲ್ಲಿ ನಾವೀನ್ಯವನ್ನು ತೋರಿರುವನು. ಅಚ್ಯುತಕ ಮತ್ತು ರವಿಪ್ರಭೆಯ ೧/೩ ಪಾದಗಳ ಪಾದಾದಿಮಾತ್ರೆ ಲಘು, ೨/೪ನೆಯ ಪಾದಗಳ ಪಾದಾದಿ ಮಾತ್ರೆ ಗುರು ಇವೆ. ದಿವಿಜಕಲ್ಪಲತೆಯಲ್ಲಿ ಇವು ಗುರು (೧/೩) ಲಘು (೨/೪) ಇವೆ.

ಇವೆಲ್ಲ ಅಕ್ಷರವೃತ್ತಗಳು. ಕನ್ನಡದಲ್ಲಿ ಕಂದ ಅರ್ಧಸಮ-ಮಾತ್ರಾವೃತ್ತ ಚತುಷ್ಪದಿ. ಇದರ ಪ್ರಥಮಾರ್ಧದ ೧ನೆಯ ಪಾದದಲ್ಲಿ ೩ ಚತುರ್ಮಾತ್ರಾ ಗಣಗಳು ಅಂದರೆ ಒಟ್ಟು ೧೨ ಮಾತ್ರೆಗಳಿರುತ್ತವೆ. ೨ನೆಯ ಪಾದದಲ್ಲಿ ೫ ಚತುರ್ಮಾತ್ರಾಗಣಗಳು (ಒಟ್ಟು ೨೦ ಮಾತ್ರೆಗಳು). ೧, ೩, ಮೊದಲಾದ ವಿಷಮಸಂಖ್ಯೆಯ ಗಣಗಳಲ್ಲಿ ಜ-ಗಣ (౮-౮) ಬರಕೂಡದು; ೬ನೆಯ ಗಣ ಜ-ಗಣ ಅಥವಾ ನ್ಲ-ಗಣ (೪ ಲಘು- ౮౮౮౮) ಇರಬೇಕೆಂದಿದೆ. ದ್ವಿತೀಯಾರ್ಧವಾದರೂ ಹೀಗೆಯೆ. ಪಾದಾದಿಮಾತ್ರೆ ಮತ್ತು ಪ್ರಾಸನಿಯಮಗಳು ಇದಕ್ಕೂ ಮತ್ತು ಇತರ ಮಾತ್ರಾವೃತ್ತಗಳಿಗೂ ಸಮನಾಗಿ ಅನ್ವಯಿಸುವವು.

ವೃತ್ತಗಳನ್ನು ಸಮ, ಅರ್ಧಸಮ, ಮೊದಲಾಗಿ ವರ್ಗೀಕರಿಸುವಾಗ ಪ್ರಾಸವನ್ನು ಗಣಿಸಬೇಕೆಂದು ಕನ್ನಡ ಲಾಕ್ಷಣಿಕರು ಸಹ ಹೇಳಿಲ್ಲ. ಹೀಗೆ ಹೇಳಿದವರು ಮೇವುಂಡಿ ಒಬ್ಬರೇ.

ಪದ್ಯದ ಪ್ರಥಮಾರ್ಧದಲ್ಲಿ ಒಂದು ಪ್ರಾಸ ದ್ವಿತೀಯಾರ್ಧದಲ್ಲಿ ಇನ್ನೊಂದು ಪ್ರಾಸವಿರುವದು ಕನ್ನಡದಲ್ಲಿ ಅಪೂರ್ವ. ರಗಳೆಯಲ್ಲಿ ಎರಡೆರಡು ಪಾದಗಳಿಗೆ ಪ್ರಾಸವಿರುತ್ತದೆ. ರಗಳೆ ದ್ವಿಪದಿಗಳ ಮಾಲಿಕೆ. ಆದ್ದರಿಂದ ಇದು ಕ್ರಮಪ್ರಾಪ್ತ. ತಾಳಬಂಧವಿರುವದರಿಂದ ಲಯಕ್ಕನುಸರಿಸಿ ಪ್ರಸ್ತಾರ ಬೇರೆಯಾಗುತ್ತಿದ್ದರೂ ತಾಳ-ಪ್ರಸ್ತಾರಕ್ಕೆ ಹೊಂದಿಸಿ ಅದನ್ನು ಹೇಳಬೇಕು. ಹೀಗೆ ಹೇಳುವಾಗ ಲಯಾನುಸಾರಿ ಗಣಗಳಲ್ಲಿಯ ಮಾತ್ರೆಗಳ ಹೆಚ್ಚು-ಕಡಿಮೆಯನ್ನು ತ್ವರಿತೋಚ್ಚಾರದಿಂದ, ಧ್ವನಿ ಎಳೆದು ಅಥವಾ ಅಷ್ಟು ಕಾಲ ಮೌನದಿಂದಿದ್ದು ಧಾಟಿ, ತಾಳ, ಅರ್ಥಗಳಿಗೆ ಹೊಂದಿಸಿಕೊಂಡು ಹೋಗಬೇಕು. ಅಪಭ್ರಂಶ (ಭಾಷೆ) ಕವಿಗಳಿಗೆ ಒಳ್ಳೇ ಮೆಚ್ಚಿಗೆಯ ಬಂಧವಿದು. ರಾಷ್ಟ್ರಕೂಟರ ಆಶ್ರಯದಲ್ಲಿ ಬಾಳಿದ ಸ್ವಯಂಭು ಮೊದಲಾದ ಪಂಪ-ಪೂರ್ವ ಮತ್ತು ಆತನ ನಂತರದ ಅಪಭ್ರಂಶ

ಕವಿಗಳು ಈ ಬಗೆಯ ವಿವಿಧ ಬಂಧಗಳನ್ನು ವಿಪುಲವಾಗಿ ಬಳಸಿರುವರು. ಅಲ್ಲಿ ಇವುಗಳಿಗೆ ಅಂತ್ಯಪ್ರಾಸವಿದೆ. ಪ್ರಾರಂಭದಲ್ಲಿ ಒಂದು ಪ್ರಾಸ್ತಾವಿಕ ಚೌಪದಿ/ಷಟ್ಪದಿ, ನಂತರ ಹತ್ತಿಪ್ಪತ್ತು ಅಥವಾ ಯಥೇಷ್ಟ ಈ ಬಂಧಗಳು, ಕೊನೆಯಲ್ಲಿ ಪುನಃ ಒಂದು ಚೌಪದಿ/ಷಟ್ಪದಿ (ಇದಕ್ಕೆ ಘತ್ತಾ ಎನ್ನುವರು) ಇರುವವು. ಇಂಥ ಒಂದೊಂದು ತುಂಡು 'ಕಡವಕ' ಎನಿಸಿಕೊಂಡಿದೆ. ಹಲವು ಕಡವಕಗಳು ಸೇರಿ ಒಂದು ಸಂಧಿಯೊ ಆಶ್ವಾಸವೊ ಆಗುತ್ತದೆ. ಮೂಲದಲ್ಲಿ ರಗಳೆ ಒಂದು ಕಾವ್ಯಪ್ರಕಾರ. ಸಂಸ್ಕೃತದ 'ಪ್ರಶಸ್ತಿ' ಕಾವ್ಯಗಳಲ್ಲಿ ಇದೂ ಒಂದು. ಕೆಲವರು ಈ ಬಗೆಯ ಕಾವ್ಯಗಳನ್ನು ಕ್ಷುದ್ರ (ಚಿಕ್ಕ) ಕಾವ್ಯ, ಉದಾಹರಣ, ಚಾಟು-ಪ್ರಬಂಧ ಎಂದು ಮುಂತಾಗಿ ವರ್ಗೀಕರಿಸಿರುವರು ಇವೆಲ್ಲ ತಾಳಾನುಗಗಳು. ರಗಳೆಗೆ 'ರಗಲಾ' ಎಂದಿರುವರು. ಬಹುಭಾಷಾ ಅಂದರೆ ಒಂದೊಂದು ನುಡಿ/ಪದ್ಯ ಒಂದೊಂದು ಭಾಷೆಯಲ್ಲಿರುವ ಕೃತಿ.[೧೩] ಕಾಲಾಂತರದಲ್ಲಿ ಬಹುಭಾಷಾ ನಿಯಮವು ಕಳಚಿ ಅಥವಾ ದೇಶಿ ಭಾಷೆಗಳಲ್ಲಿ ಏಕಭಾಷಾಕೃತಿಯಾಗಿ ನಿಂತಂತಿದೆ. ಕನ್ನಡರಗಳೆಗಳು ಈ ಬಗೆಯವು. ಹರಿಹರಾದಿಗಳ ಕೆಲವು ಕೃತಿಗಳಿಗೆ ರಗಳೆಗಳೆಂದು ಹೆಸರಿರುವದು ಈ ಅರ್ಥದಲ್ಲಿ. ರಚನೆಯ ಮಟ್ಟಿಗೆ ಕನ್ನಡ ರಗಳೆ, ತೆಲುಗಿನ ರಘಟ, ಸಂಗೀತರತ್ನಾಕರಕಾರ ಶಾರ್ಙ್ಗದೇವನ ರಾಹಡಿಗೆ ಭೇದವಿಲ್ಲ. ಪಂಪಾದಿಗಳ ಕೃತಿಗಳಲ್ಲಿ ದೊರೆಯುವ ರಗಳೆಗಳು ಕಾವ್ಯಪ್ರಕಾರಗಳಲ್ಲ. ಛಂದೋವೈವಿಧ್ಯಕ್ಕಾಗಿ ರಗಳೆಗಳಿಗಾಗಿ ಬಳಸುವ ತಾಳಬಂಧಗಳು ಅವು. ಕನ್ನಡದಲ್ಲಿ ರಗಳೆ ಛಂದಸ್ಸೆಂಬ ಅರ್ಥದಲ್ಲೂ ರೂಢವಿರುವದರಿಂದ ಇವಾದರೂ ರಗಳೆಗಳೆಂದು ಹೆಸರಿಸಲ್ಪಟ್ಟಿವೆ, ಇಷ್ಟೇ.

ಕಾಲಕ್ರಮದಲ್ಲಿ ಪಂಪಪೊನ್ನರು ಸ್ವಯಂಭು ಮೊದಲಾದವರ ಸಮೀಪವರ್ತಿಗಳಿದ್ದುದರಿಂದ ಅವರು ತಮ್ಮ ರಗಳೆಗಳಿಗೆ ಅಂತ್ಯಪ್ರಾಸವನ್ನು ಬಳಸಿದಂತಿದೆ. ರನ್ನನ ಅಜಿತಪುರಾಣದಲ್ಲಿ—

'ಅವಱಬೞಸಿದುಪವನಂಗ। ಉದಿತಕೋಕಿಲಸ್ವನಂಗ'

—ಎಂದು ಪ್ರಾರಂಭವಾಗುವ ಆದ್ಯಂತಪ್ರಾಸವಿರುವ ರಗಳೆ ಇದೆ. ಇದಕ್ಕೆ ಉತ್ಸಾಹರಗಳೆ ಎಂದಿರುವರು. ಆದ್ದರಿಂದ ರಗಳೆಗೆ ಆದ್ಯಂತಪ್ರಾಸವನ್ನಿರಿಸಿ ಅದಕ್ಕೆ ಕನ್ನಡದ ಮೆರುಗು ಕೊಟ್ಟ ಪ್ರಸಿದ್ಧ ಕವಿಗಳಲ್ಲಿ ರನ್ನನೇ ಮೊದಲಿಗನಿದ್ದು. ಮುಂದೆ ಇದೇ ಕನ್ನಡರಗಳೆಗಳ ವೈಶಿಷ್ಟ್ಯವಾಗಿ ಪರಿಣಮಿಸಿದಂತಿದೆ.

ರಗಳೆಯ ಇತಿಹಾಸ ಇಂತಿರುವಾಗ ನಾಲ್ಕೇ ಪಾದಗಳಲ್ಲಿ ಚುಟಕವಾಗಿ ಪೂರ್ವಕವಿಗಳಿಬ್ಬರನ್ನು (ಕಾಳಿದಾಸ, ಬಾಣ) ಸ್ಮರಿಸುವದು ರನ್ನನ ಮನೀಷೆ ಇದ್ದುದರಿಂದ, ತನ್ನ ಈ ಪದ್ಯಚತುಷ್ಪದಿ ಇದ್ದರೂ, ರಗಳೆಯ ಅಂದದಲ್ಲಿ

---

೧೩. ಅಲಂ. ಸಂ. ಪು. ೧೬೯

ಎರಡೆರಡು ಪಾದಗಳಿಗೆ ಒಂದೊಂದು ಬಗೆಯ ಪ್ರಾಸವನ್ನಿಟ್ಟು, ರಗಳೆಗಿರಬೇಕಿದ್ದ ಅಂತ್ಯಪ್ರಾಸವನ್ನು ತ್ಯಜಿಸಿ, ನಾಲ್ಕೂ ಪಾದಗಳ ಮಾತ್ರೆಗಳ ಮೊತ್ತ ಮತ್ತು ಗಣವಿಭಾಗದಲ್ಲಿ ವ್ಯತ್ಯಾಸಮಾಡದೆ, ಪ್ರಥಮಾರ್ಧದಲ್ಲಿ ಪಾದವೊಂದಕ್ಕೆ ೧೧, ದ್ವಿತೀಯಾರ್ಧದಲ್ಲಿ ೧೩ ಅಕ್ಷರಗಳನ್ನಿಟ್ಟು, (ಕನ್ನಡಪದ್ಯಗಳಿಗೆ ವಿಶಿಷ್ಟವಿರುವ ಪಾದಾದಿಮಾತ್ರೆಯ ನಿಯಮವನ್ನು ಉಲ್ಲಂಘಿಸಿ),[೧೪] ಪ್ರಯೋಗವೆಂದು ಆತ ಈ ಪದ್ಯವನ್ನು ರಚಿಸಿರಬೇಕು ; ಪಂಪನ 'ನಂದನಂಗಳೊಳ್' ಮಂದಾನಿಲರಗಳೆ ಮತ್ತು ಮತ್ತಕೋಕಿಲ ಅಕ್ಷರವೃತ್ತದ ಧಾಟಿಗಳಲ್ಲಿರುವ ಸಾಮ್ಯದಿಂದ ಪ್ರಚೋದಿತನಾದ ಆತ ಆ ಧಾಟಿಗೆ ಹೊಂದುವಂತೆ ಮತ್ತಕೋಕಿಲೆಯನ್ನು ಮಾತ್ರಾವೃತ್ತಕ್ಕೆ ತಿರುಗಿಸಿ, ಎರಡೆರಡು ಪಾದಗಳಿಗೆ ಒಂದೊಂದು ಬಗೆಯ ಆದಿಪ್ರಾಸವನ್ನಿಷ್ಟೇ ಇಟ್ಟು ಇದನ್ನು ರಚಿಸಿರುವದರಿಂದ, ಇದಕ್ಕೆ ಅರ್ಧಸಮ-ಮಾತ್ರಾವಿಶಿಷ್ಟ-ಮತ್ತಕೋಕಿಲೆಯೆಂದು ಹೆಸರಿಸಬಹುದಾಗಿ ಸೂಚಿಸಿರುವರು, ಮೇವುಂಡಿಯವರು.

'ಶಾಸ್ತ್ರವೆಂದರೆ ಒಂದು ನಿರ್ದಿಷ್ಟ ನಿಯಮವನ್ನು ಅಸಂದಿಗ್ಧವಾಗಿ ಹೇಳಬೇಕು', ಎಂದು ಮೇವುಂಡಿಯವರು ತಮ್ಮ ಪ್ರತಿವಾದದಲ್ಲಿ ಒಂದೆಡೆ ಹೇಳಿರುವರು. ಆದರೆ ರನ್ನನ ಪ್ರಯೋಗವೆಂದು ಅವರು ಪುನರ್ರಚಿಸಿದ ಪದ್ಯ ಮತ್ತು ಅದರ ವಿಷಯದಲ್ಲಿರುವ ಪ್ರತಿಪಾದನೆಗೆ ಛಂದಃಶಾಸ್ತ್ರದ ಯಾವ ನೀತಿ-ನಿಯಮಗಳನ್ನು ಅನ್ವಯಿಸಿಕೊಳ್ಳಬೇಕೋ ತಿಳಿಯದಾಗಿದೆ. ರನ್ನ ಈ ಬಗೆಯ ಪ್ರಯೋಗವನ್ನು ಕೈಕೊಂಡಿರಬಹುದೆ, 'ಪ್ರಗತಿಶೀಲ' ಕವಿಯೆಂದು ಒಪ್ಪ-ವಿಡಿಸಿಕೊಳ್ಳುವ 'ಧಾರ್ಷ್ಟ್ಯ'ಕ್ಕೆ ಎಳೆಸಿರಬಹುದೆ, ಎಂಬ ಸಂದೇಹ ಮೂಡುವಂತಾಗಿದೆ.[೧೫]

---

೧೪. ಕಂಸಗಳಲ್ಲಿಯ ಮಾತು ನನ್ನದು.

೧೫. ಪದ್ಯದ ಪ್ರಥಮಾರ್ಧದಲ್ಲಿ ಒಂದು, ದ್ವಿತೀಯಾರ್ಧದಲ್ಲಿ ಇನ್ನೊಂದು ಬಗೆಯ ಪ್ರಾಸವಿರುವ ಕುಮಾರವ್ಯಾಸನ ಭಾರತದಲ್ಲಿಯ 'ಅಲ್ಲಿ ಭಜಿಸುವಪಮಲಗಿರಿಜಾ (ಕೈಪಿಡಿ, ಪು. ೭೫)' ಮತ್ತು 'ಲಲಿತಮಧುರಾಪಾಂಗದಲಿ (ಗದ್ಯ-ಪದ್ಯ ಸಂಗ್ರಹ, ಪುಣೆ ಎಸ್.ಎಸ್.ಸಿ. ಬೋರ್ಡ, ೧೯೫೧, ಪು. ೨೧೩)' ಎರಡು ಪದ್ಯಗಳಿವೆ. ಕುವೆಂಪು-ಮಾಸ್ತಿ ಸಂಪಾದಿತ ಕುಮಾರವ್ಯಾಸನ ಈ ಗ್ರಂಥದ ಸಂಸ್ಕರಣದಲ್ಲಿ ಈ ಪದ್ಯಗಳ ದ್ವಿತೀಯಾರ್ಧ ಬೇರೆ ಇದ್ದು ಎಲ್ಲ ಪಾದಗಳಲ್ಲಿಯ ಪ್ರಾಸ ಮತ್ತು ಪಾದಾದಿಮಾತ್ರೆಗಳು ಸರಿಯಾಗಿ ಹೊಂದಿಕೊಂಡಿವೆ (ಕು.ಭಾ. ಅರಣ್ಯ ಪ. ೪/೨೦ ; ಆದಿ. ಪ. ೧೫/೩೪). ಆದ್ದರಿಂದ ಇವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಂತಿಲ್ಲ.

ಪ್ರಾಸ ಮತ್ತು ಪಾದಾದಿಮಾತ್ರೆಯ ಮಟ್ಟಿಗೆ ಮೇವುಂಡಿಯವರ ಪುನರ್ರಚನೆಗೆ ಹೊಂದುವಂಥ 'ರಾವಣದಿಗ್ವಿಜಯ' ಯಕ್ಷಗಾನದಲ್ಲಿಯ ಒಂದು ಚೌಪದಿ ಲಭ್ಯವಿದೆ. ನಾಗವರ್ಮನ ಛಂದೋಂಬುಧಿಯಲ್ಲಿ ಇದು ಪ್ರಕ್ಷಿಪ್ತವಾಗಿದೆ. ಸಂಪಾದಕರು ಬಹಳ ಅರ್ವಾಚೀನ ಪದ್ಯವೆಂದಿರುವರು ಇದಕ್ಕೆ (ಪು. ೧೪೬). ಇದು ಆ ಪದ್ಯ—

ಶಾಸ್ತ್ರವೇನೇ ಇರಲಿ. ಪ್ರಾಚೀನರಲ್ಲಿ ಒಬ್ಬನಾದರೂ ರಚಿಸಿದ ತಮ್ಮ ಪುನರ್ರಚಿತ ಬಗೆಯ ಒಂದು ಪದ್ಯವನ್ನು ಮೇವುಂಡಿಯವರು ಉದಾಹರಿಸಿದ್ದರೆ ಇಷ್ಟೊಂದು ವಾದಕ್ಕೆ ಎಡೆ ದೊರೆಯುತ್ತಿದ್ದಿಲ್ಲ. ಛಂದಃಶಾಸ್ತ್ರದ ಅನಂತತ್ವವನ್ನೂ ಮತ್ತು ಸುಪರಿಚಿತ 'ಅಪಾರೇ ಕಾವ್ಯಸಂಸಾರೇ ಕವಿರೇವ ಪ್ರಜಾಪತಿಃ' ಉಕ್ತಿಯನ್ನೂ ನೆನೆದು ರನ್ನನ ಈ ಪದ್ಯವಾದರೂ ಮೂಲದಲ್ಲಿ ಮೇವುಂಡಿಯವರು ಪುನರ್ರಚಿಸಿದ ಬಗೆಯಲ್ಲಿ ಇದ್ದಿರಬಹುದೆಂದು ಭಾವಿಸಬಹುದಿತ್ತು. ಆದರೆ ಅವರು ಹೀಗೆ ಮಾಡದಿರುವದು ನಮ್ಮ ದುರ್ಭಾಗ್ಯವೇ ಸೈ.

'ನಡೆವರೆಡಹದೆ ಕುಳಿತರೆಡಹುವರೆ?' ಎಂದಿರುವವನು ರಾಘವಾಂಕ, ಆತನ ಈ ಉಕ್ತಿಗನುಸರಿಸಿ ಮೇವುಂಡಿಯವರ ಪ್ರತಿವಾದದಲ್ಲಿ ರನ್ನನ ಈ ಪದ್ಯ ಸಾಮಾನ್ಯ ತ್ರಿಪದಿಯಲ್ಲ; ಅದು ಗಾಥಾ ಅಥವಾ ಗಾಥಾ-ತ್ರಿಪದಿಯೆಂಬ ನನ್ನ ಪ್ರತಿಪಾದನೆಯ ಇತ್ಯರ್ಥವೇನೇ ಆದರೂ ಹಿರಿಯ ಸಾಹಿತಿಗಳೆಂದು ಹೆಸರು

ಪ್ರಾಚೇತಸಾಖ್ಯಮುನಿಪತಿಯ ಬಲವೊಂದು
ವಾಚಸ್ಪತಾಚಾರ್ಯನಡಿಗೆಱಗಿ ನಿಂದು ।
ಗುರುಹಿರಿಯರಂಘ್ರಿಯುಂ ನೆನೆದು ಮಾನಸದಿ
ಧರೆಯ ಕವಿಗಳಿಗೆ ಕೆಯ್ಮುಗಿದು ಸಂತಸದಿ ॥

—ಇದರ ಪ್ರಥಮಾರ್ಧದಲ್ಲಿ ಪಾದಾದಿಮಾತ್ರೆ ಗುರು, ಚ-ಆದಿಪ್ರಾಸ, ಂದು-ಅಂತ್ಯಪ್ರಾಸ, ದ್ವಿತೀಯಾರ್ಧದಲ್ಲಿ ಲಘು, ರ-ಆದಿಪ್ರಾಸ, ದಿ-ಅಂತ್ಯಪ್ರಾಸ ಇವೆ. ಇಷ್ಟರಮಟ್ಟಿಗೆ, ಅಂದರೆ ಆದಿಪ್ರಾಸಪಾದಾದಿಮಾತ್ರೆಗಳ ಮಟ್ಟಿಗೆ, ಮೇವುಂಡಿಯವರ ಪುನರ್ರಚನೆಗೂ ಇದಕ್ಕೂ ವ್ಯತ್ಯಾಸವಿಲ್ಲ. ಆದರೆ ಇದರ ಲಕ್ಷಣಪದ್ಯದೊಂದಿಗೆ ಹೋಲಿಸಿದಾಗ ಇದೊಂದು ಅಶುದ್ಧ ಅಥವಾ ಅಪವಾದಾತ್ಮಕ ರಚನೆ ಎನ್ನಬೇಕಾಗುವದು. ಲಕ್ಷಣಪದ್ಯದಲ್ಲಿ ಎಲ್ಲ ಪಾದಗಳಲ್ಲಿ ಪ್ರಾಸ ಮತ್ತು ಪಾದಾದಿಮಾತ್ರೆ ಸರಿಯಾಗಿ ಬಂದಿವೆ. ಅಲ್ಲದೆ ಲಕ್ಷಣಪದ್ಯದಲ್ಲಿ 'ಬಿಸಜಾಕ್ಷಿ ಪ್ರಾಸಂ ಕೀೞ್ ಮೊದಲು ಕಡೆಯಿರಲು' ಎಂದಿರುವದರಿಂದ ಈ ಬಗೆಯ ಬಂಧಕ್ಕೆ ಆದಿಪ್ರಾಸದಷ್ಟೇ ಅಂತ್ಯಪ್ರಾಸವೂ ಅಗತ್ಯ ಎಂಬುದು ಸ್ಪಷ್ಟವಿದೆ. ಪಾದಗಳಲ್ಲಿಯ ಮಾತ್ರಾಸಂಖ್ಯೆ ಮತ್ತು ಗಣವಿಭಾಗಗಳನ್ನು ಕಡೆಗಣಿಸಿದರೂ, ಅಪವಾದಾತ್ಮಕವೆಂದು ಪಾದಾದಿಮಾತ್ರೆ ಮತ್ತು ಪ್ರಾಸಭೇದವನ್ನು ಮನ್ನಿಸಿದರೂ, ಮೇವುಂಡಿಯವರ ಪುನರ್ರಚನೆ ಅಂತ್ಯಪ್ರಾಸರಾಹಿತ್ಯದಿಂದ ಈ ಬಗೆಯ ಬಂಧಗಳಿಗೂ ಹೊಂದುವದಿಲ್ಲ. ಕೈಪಿಡಿಯಲ್ಲಿ ಈ ಬಂಧಗಳ ಮೂಲವನ್ನು ತೆಲುಗಿನ ದ್ವಿಪದದಲ್ಲಿ ಕಂಡಿದ್ದು, ಎರಡು ದ್ವಿಪದಗಳು ಕೂಡಿದರೆ ಚೌಪದಿಯಾಗುವದೆಂದು ಹೇಳಿದೆ (ಪು. ೧೫೧).

ಮೇವುಂಡಿಯವರ ಪುನರ್ರಚನೆಯನ್ನು ಶುದ್ಧ ಅಕ್ಷರವೃತ್ತವೆಂದು ಗ್ರಹಿಸಿ ಪ್ರಥಮಾರ್ಧದ ಪ್ರತಿಪಾದದಲ್ಲಿ ೧೧, ದ್ವಿತೀಯಾರ್ಧದಲ್ಲಿ ೧೨ ಅಕ್ಷರಗಳಿರುವದರಿಂದ ಅದನ್ನು ಸಂಸ್ಕೃತದ 'ಉಪಜಾತಿ' ವರ್ಗದಲ್ಲಿ ಸೇರಿಸಬಹುದಾಗಿದೆ. ಆದರೆ ಪದ್ಯ ಕನ್ನಡದಲ್ಲಿರುವದರಿಂದ ಪ್ರಾಸ ಮತ್ತು ಪಾದಾದಿಮಾತ್ರೆ ನಿಯಮಗಳ ಮೂಲಕ ಇಲ್ಲಿಯೂ ಲೆಕ್ಕ ತಪ್ಪುವದು. ಮೇಲಾಗಿ ತಮ್ಮ ಪುನರ್ರಚನೆ ಮಾತ್ರಾವೃತ್ತಕ್ಕೆ ತಿರುಗಿಸಿದ ಮತ್ತಕೋಕಿಲ ಅಕ್ಷರವೃತ್ತವೆಂದು ಅವರೇ ಹೇಳಿರುವರು.

ಗಳಿಸಿದ ಅವರಿಂದ ರನ್ನನ ಈ ಪದ್ಯಕ್ಕೆ ಅಂಟಿಕೊಂಡಿರುವ ಸಮಸ್ಯೆಗೆ ಯುಕ್ತ ಪರಿಹಾರ ದೊರೆಯಬಹುದೆಂದು ಭಾವಿಸಿದ್ದೆನು. ಆ ಭಾವನೆ ಬಯಲಾಯಿತೆಂದು ವಿಷಾದಿಸಬೇಕಾಗಿದೆ, ಇಷ್ಟೇ.

★ ಭೀಮರಾವ ಚಿಟಗುಪ್ಪಿ

ಉದ್ಧೃತ ಸಾಹಿತ್ಯ

	ಸಂಕ್ಷಿಪ್ತ ನಿರ್ದೇಶ
೧. ಗದಾಯುದ್ಧಂ—ರನ್ನಕೃತ, ಸಂ. ಎಮ್. ಎ. ರಾಮಾನುಜ ಅಯ್ಯಂಗಾರ, ಕರ್ನಾಟಕ ಕಾವ್ಯಕಲಾನಿಧಿ, ೩ನೆಯ ಆವೃತ್ತಿ, ೧೯೨೫.	ಗ.ಯು.
೨. ಅಜಿತತೀರ್ಥಂಕರಪುರಾಣತಿಲಕಂ—ರನ್ನಕೃತ, ಸಂ. ಹೆಚ್. ದೇವೀರಪ್ಪ ಮತ್ತು ಡಿ. ಜವರೇಗೌಡ, ೧೯೫೫.	ಅಜಿತಪು.
೩. ಪಂಪಭಾರತ—ಭಾಗ ೧, ಕರ್ನಾಟಕ ಸಾಹಿತ್ಯ ಪರಿಷತ್ತು, ೧೯೩೫.	ಪಂ.ಭಾ.
೪. ಶಾಂತಿಪುರಾಣಂ—ಪೊನ್ನ, ಸಂ. ಎ. ವೆಂಕಟರಾವ್ ಮತ್ತು ಎಚ್. ಶೇಷ ಅಯ್ಯಂಗಾರ, ಮದ್ರಾಸ ವಿ.ವಿ., ೧೯೨೯.	ಶಾಂ.ಪು.
೫ ಛಂದೋಂಬುಧಿ—ನಾಗವರ್ಮ, ಸಂ. ಎಚ್. ಎಸ್. ರಾಮಸ್ವಾಮಿ ಅಯ್ಯಂಗಾರ, ಮದ್ರಾಸ ವಿ.ವಿ., ೧೯೪೬.	ನಾ.ಛಂ.
೬ ಕರ್ನಾಟಕ ಭಾರತಮಂಜರಿ—ಕುಮಾರವ್ಯಾಸ, ಸಂ. ಕುವೆಂಪು-ಮಾಸ್ತಿ, ಮೈಸೂರು ಸರಕಾರ, ೧೯೫೮.	ಕು.ವ್ಯಾ.
೭ ಛಂದಃಶಾಸ್ತ್ರ—ಪಿಂಗಲ, ಸಂ. ಪಂ. ಕೇದಾರನಾಥ ಮತ್ತು ವಾಸುದೇವಶಾಸ್ತ್ರಿ ಪಣಶೀಕರ, ನಿರ್ಣಯಸಾಗರ ಮುದ್ರಣ, ಮುಂಬಯಿ, ೧೯೦೮.	ಪಿಂ.ಛಂ.
೮. ಅಲಂಕಾರಸಂಗ್ರಹ—ಅಮೃತಾನಂದ ಯೋಗಿನ್, ಅಡ್ಯಾರ ಲೈಬ್ರರಿ, ಮದ್ರಾಸ, ೧೯೪೯ ; ರಸರತ್ನಾಕರಕಾರ ಸಾಳ್ವ ಈತನನ್ನು ಸ್ಮರಿಸಿರುವನು	ಅಲಂ.ಸಂ.
೯. ಸಂಗೀತರತ್ನಾಕರ—ಶಾರ್ಙ್ಗದೇವ, ಭಾಗ ೨, ಅಡ್ಯಾರ ಲೈಬ್ರರಿ, ಮದ್ರಾಸ, ೧೯೫೯.	ಸಂ.ರ.
೧೦. ಶಬ್ದಮಣಿದರ್ಪಣ—ಕೇಶಿರಾಜ, ಸಂ. ಕಿಟೆಲ್-ಪಂಜೆ, ಮಂಗಳೂರು, ೧೯೨೦.	ಶ.ದ.
೧೧. ಕರ್ನಾಟಕ ಕವಿಚರಿತೆ—ಆರ್. ನರಸಿಂಹಾಚಾರ, ಸಂ. ೧–೨.	ಕ.ಚ.
೧೨. ಕನ್ನಡ ಕೈಪಿಡಿ—ಮೈಸೂರು ವಿ.ವಿ., ೧೯೫೫, ಸಂ. ೧.	ಕೈಪಿಡಿ
೧೩. ಜಯಕರ್ನಾಟಕ—ಧಾರವಾಡ, ಸಂ. ೯.	ಜ.ಕ.
೧೪. ಕರ್ನಾಟಕ ಭಾರತಿ—ಕರ್ನಾಟಕ ವಿ.ವಿ., ಧಾರವಾಡ, ಸಂ. ೧, ಸಂ. ೧-೨.	ಕ.ಭಾ.

ರೋಗದ ಹುಟ್ಟು, ಬದುಕು ಮತ್ತು ಸಾವು

ತಿಳಿದವರನ್ನು ಸಂಧಿಸಿದರೆ "ಏನು! ಕ್ಷೇಮವೇ?" ಎಂದು ಕೇಳುವುದು ಸಂಪ್ರದಾಯ. ಇದಕ್ಕೆ ದೊರೆಯುವ ಉತ್ತರ ಮಾತ್ರ ಬೇರೆ ಬೇರೆ ರೀತಿಯವು.

"ಏನೋ ತಮ್ಮ ಆಶೀರ್ವಾದದಿಂದ ಇಷ್ಟರಮಟ್ಟಿಗೆ" ಅನ್ನುವವರು ಕೆಲವರು.

"ಇದೀನಿ, ಹಾಗೂ ಹೀಗೂ, ಈಚೀಚೆಗೆ ತಿಂದದ್ದು ಜೀರ್ಣವಾಗೊಲ್ಲ ನೋಡಿ........" ಅನ್ನುವವರು.

"ಬಿಡರಿ! ನಂಗೇನಾಗಿದೆ! ಭರ್ಜರಿ ಇದ್ದೀನಿ!" ಎಂದು ಅನ್ನುವವರು ಮತ್ತೆ ಕೆಲವರು.

ಹೀಗೆ ಕೆಲವರ ಆರೋಗ್ಯ ಅತ್ಯುತ್ತಮ, ಮತ್ತೆ ಕೆಲವರ ಆರೋಗ್ಯ ಹೇಳುವಂತಿಲ್ಲ. ಇನ್ನೂ ಕೆಲವರು ಅನಾರೋಗ್ಯದಿಂದ ನರಳುವವರು. ಈ ವಿವಿಧ ರೀತಿಯ ಆರೋಗ್ಯ ಅನಾರೋಗ್ಯಗಳಿಗೆ ಕಾರಣಗಳೇನು? ವ್ಯಕ್ತಿ ದೋಷವೇ, ಮಾಡುವ ಕಸುಬು, ತಿನ್ನುವ ಆಹಾರ ಕಾರಣವೇ, ಕಾಲ, ಸ್ಥಳಗಳ ಮಹಾತ್ಮೆಯೋ? ಅಥವಾ ಪೂರ್ವಾರ್ಜಿತ ಕರ್ಮವೇ?

ವೈಜ್ಞಾನಿಕ ದೃಷ್ಟಿಯಿಂದ ರೋಗಗಳ ಹುಟ್ಟು, ಬದುಕು, ಸಾವಿನ ವಿಚಾರ ಸ್ಥೂಲವಾಗಿ ಪರಿಶೀಲಿಸೋಣ.

ಒಂದು ಸಸಿ ಹುಟ್ಟಲು—ಬೀಜ ಬಿತ್ತುವವನು ಮತ್ತು ಫಲವತ್ತಾದ ಭೂಮಿ ಆವಶ್ಯಕ. ಅಂತೆಯೇ ಒಬ್ಬನಲ್ಲಿ ರೋಗ ಹುಟ್ಟಲು ರೋಗದ ಬೀಜ ಅಥವಾ ರೋಗಕಾರಕ (Disease Agent), ಇದನ್ನು ಸಾಗಿಸಲು ಆವಶ್ಯಕವಾದ ವಾಯುಗುಣ ಮತ್ತು ವಾಹಕ ಅಥವಾ ಬಾಹ್ಯ ಸೌಲಭ್ಯಗಳು (Environment facilities) ಮತ್ತು ರೋಗಕ್ಕೆ ಎಡೆಕೊಡುವ ಆಶ್ರಯದಾತ (Susceptible host) ಆವಶ್ಯಕ. ಈ ಮೂರು ಅಂಶಗಳ ಪರಸ್ಪರ ಪ್ರತಿಕ್ರಿಯೆಗಳ ಪರಿಣಾಮವೇ ರೋಗ. ಈ ಅಂಶಗಳ ಪರಿಚಯ ಮಾಡಿಕೊಳ್ಳೋಣ.

ರೋಗಕಾರಕ (Disease Agent)

ನಮ್ಮನ್ನು ಪೀಡಿಸುವ ರೋಗಕಾರಕಗಳು ಅನೇಕವಿಧ. ಇದು ಸಜೀವಿ ಅಥವಾ ನಿರ್ಜೀವಿಯಾಗಿರಬಹುದು, ಅಥವಾ ಒಂದು ರಭಸದ ಏಟು, ಪೆಟ್ಟು ತಗಲಿ ಸಹ ನಮಗೆ ಬಾಧೆಕೊಡಬಹುದು. ರೋಗಕಾರಕ ನಮ್ಮ ದೇಹದಲ್ಲಿ ಹೊಕ್ಕು ನೆಲಸುವುದರಿಂದಾಗಲೀ ಅಥವಾ ದೇಹಕ್ಕೆ ಬೇಕಾದ ಆವಶ್ಯಕವಾದ ಅಂಶದ ಕೊರತೆಯಿಂದಾಗಲೀ ರೋಗ ಬರಬಹುದು. ರೋಗಕಾರಕಗಳು ಯಾವುವೆಂದರೆ:

(೧) **ಸಜೀವಿಗಳು (Biological Agents) :** ಉದಾಹರಣೆಗೆ—ಕೀಟ, ಜಂತುಹುಳು, ಕೊಕ್ಕೆಹುಳು, ಲಾಡಿಹುಳು, ಮಲೇರಿಯಾ ಮತ್ತು ಆನೆಕಾಲಿನ ರೋಗಕಾರಕ ಪರಾವಲಂಬಿಗಳು, ಕ್ಷಯ, ಕುಷ್ಟ, ಕಾಲರ, ಪ್ಲೇಗ್, ವಿಷಮ-ಶೀತಜ್ವರ, ಗಂಟಲುಮಾರಿ, ನಾಯಿಕೆಮ್ಮಿನ ವಿಷಕ್ರಿಮಿಗಳು (Bacteria) ಹಾಗೂ ಸಿಡುಬು, ಸಿತಾಳಿ, ದಡಾರ, ನಾಯಿಹುಚ್ಚು ಇವುಗಳನ್ನು ತರುವ ರೋಗಾಣು (Viruses) ಮುಂತಾದವು.

(೨) **ಆಹಾರಸತ್ವಾಂಶ (Nutrients) :** ದೇಹದಲ್ಲಿ ಕೆಲವು ಅಂಶಗಳ ಕೊರತೆಯಿಂದಾಗಿ ಇರುಳುಗಣ್ಣು, ಒಣಕಣ್ಣು (ವೈಟಮಿನ್ 'ಎ' ತತ್ವಾಂಗದ ಕೊರತೆಯಿಂದ), ಬೆರಿಬೆರಿ, ಪೆಲಾಗ್ರ ಇತ್ಯಾದಿ ('ಬಿ' ತತ್ವಾಂಗದ ಕೊರತೆ ಯಿಂದ), ಸ್ಕರ್ವಿ ('ಸಿ' ತತ್ವಾಂಗದ ಕೊರತೆಯಿಂದ), ರಿಕೆಟ್ಸ್ ಅಥವಾ ಮೆದು ಮೂಳೆರೋಗಗಳು ('ಡಿ' ತತ್ವಾಂಗದ ಕೊರತೆಯಿಂದ) ತಲೆಹಾಕುತ್ತವೆ.

(೩) **ರಸಾಯನಿಕಗಳು** (**Chemical Agents :** (ನಮ್ಮ ಉಸಿರೊಳಗೆ ಶ್ವಾಸಕೋಶಗಳಿಗೆ ಹೋಗಿ ಅಥವಾ ತಿನ್ನುವ ಆಹಾರಪಾನೀಯಗಳಲ್ಲಿ ಜಠರ ಕರುಳುಗಳಿಗೆ ಹೋಗಿ ಅಥವಾ ಚರ್ಮಸಂಪರ್ಕದಿಂದ ದೇಹದೊಳಗಿಳಿದು, ಹಾಗೂ ರೋಗಿ, ಔಷಧರೂಪದಲ್ಲಿ ತೆಗೆದುಕೊಂಡಾಗ ರೋಗಕ್ಕೆ ಅಥವಾ ಬಾಧೆಗೆ ಕಾರಣವಾಗಬಹುದು.

(೪) **ಪೆಟ್ಟು-ಗಾಯಗಳಿಂದಲೂ (Mechanical Agents)** ನಾವು ಬಾಧೆಪೀಡಿತರಾಗಬಹುದು.

ಕಡೆಯದಾಗಿ (೫) **ಪ್ರಕೃತಿಕರ್ತೃ (Physical Agents)** ಗಳಿಂದ ರೋಗ ಪೀಡಿತರಾಗಬಹುದು. ಉದಾಹರಣೆಗೆ—ಅತಿಶೀತಲಾವಸ್ಥೆ (Frost bite) ಅತಿ ಉಷ್ಣಾಂಶ (Sun stroke), ಗಾಳಿ ಒತ್ತಡದ ಏರಿಕೆ (Caison's disease), ವಿದ್ಯುತ್ ವಿಕರಣಕ್ರಿಯಾಶಕ್ತಿ (Radiation) ಮುಂತಾದವು.

ಈ ರೋಗಕಾರಕಗಳಿದ್ದ ಮಾತ್ರಕ್ಕೇ ರೋಗ ಎಲ್ಲರಿಗೂ ಬರಬೇಕೆಂಬ ನಿಯಮವೇನಿಲ್ಲ. ಆಸ್ಪತ್ರೆಗಳಲ್ಲಿ ಅನೇಕ ರೋಗಿಗಳಿದ್ದು ರೋಗಕಾರಕಗಳು ತಾಂಡವಾಡುತ್ತಿರಬಹುದು. ಆದರೂ ರೋಗಿಗಳನ್ನು ನೋಡುವುದಕ್ಕೆ ಹೋದ ವರಿಗೆ ಎಲ್ಲರಿಗೂ ತಗಲುತ್ತದೆಯೇ? ಇಲ್ಲ! ರೋಗ ಬರುವುದೂ ಇಲ್ಲದಿರು ವುದೂ ರೋಗಕಾರಕದ ಗುಣ, ಲಕ್ಷಣ, ಅವುಗಳ ಸಂಖ್ಯೆ ಇತ್ಯಾದಿಯನ್ನವಲಂಬಿ ಸುತ್ತದೆ. ಅತಿಸಂಖ್ಯೆಯ ವಿಷಮಯ ಹಾಗೂ ಶಕ್ತಿಹೊಂದಿದ ರೋಗಕಾರಕ ಗಳು ಆಶ್ರಯದಾತನಿಗೆ ರೋಗಕಾರಕವಾಗುವ ಸಂದರ್ಭ ಹೆಚ್ಚು.

ಬಾಹ್ಯ ಸೌಲಭ್ಯ (Environment)

ರೋಗಕಾರಕಗಳ ಜನ್ಮಸ್ಥಾನ (Source), ವಾಸಸ್ಥಾನ (Reservoir), ಹರಡಲು ಅವಶ್ಯಕವಾದ ವಿದ್ಯಮಾನಗಳು, ನಮ್ಮ ದೇಹದ ಪ್ರತಿಭಟನಾಶಕ್ತಿಯನ್ನೆದುರಿಸಿ ಗೆಲ್ಲುವ ಶಕ್ತಿ ಮುಂತಾದ ಅನೇಕ ಲಕ್ಷಣಗಳು ಮುಖ್ಯ. ಜನ್ಮಸ್ಥಾನ, ವಾಸಸ್ಥಾನ ಗೂಢವಾಗಿದ್ದು ರೋಗ ಹರಡಲು ಅವಶ್ಯಕವಾದ ವಿದ್ಯಮಾನಗಳು ತೃಪ್ತಿಕರವಾಗಿರದೆ ರೋಗಕಾರಕ ಸ್ವರೂಪ ಸೌಮ್ಯವಾಗಿದ್ದರೆ ಅದರಿಂದ ರೋಗದ ಭಯ ಕಡಿಮೆ ಎಂದು ಹೇಳಬಹುದು.

ತಾಯಿಯ ಗರ್ಭದಿಂದ ಆಗತಾನೇ ಜನಿಸಿದ ಶಿಶು ಹೊರಬಂದ ಕ್ಷಣದಿಂದ ಭೌತಿಕ ಪ್ರಪಂಚರ ಪ್ರಭಾವವನ್ನೆದುರಿಸಬೇಕಾಗುತ್ತದೆ. ಜೀವರಾಶಿ ಮತ್ತು ಅದನ್ನು ಸುತ್ತುಗಟ್ಟಿರುವ ಬಾಹ್ಯಪ್ರಪಂಚ ಒಂದಕ್ಕೊಂದು ಹೊಂದಿಕೊಳ್ಳದೆ ಅವುಗಳ ಬಾಂಧವ್ಯವಿರಸವೇ ರೋಗ ಎಂದು ಹೇಳುವುದೂ ಉಂಟು. ಇದು ತೀರ ಸರಳ ನಿರೂಪಣೆಯಾದರೂ ಇವುಗಳೆರಡಕ್ಕೂ ಇರುವ ನಿಕಟಸಂಬಂಧವನ್ನು ಸೂಚಿಸುತ್ತದೆ. ಬಾಹ್ಯಪ್ರಪಂಚದಲ್ಲಿ ಗಮನಿಸಬೇಕಾದ ಅಂಶಗಳೆಂದರೆ —ಪ್ರಕೃತಿ ಅಥವಾ ನೈಸರ್ಗಿಕ ಅಂಶಗಳು, ಜೀವರಾಶಿ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ.

ಪ್ರಕೃತಿ ಅಥವಾ ನೈಸರ್ಗಿಕ ಅಂಶಗಳನ್ನು ಪರಿಶೀಲಿಸಿದರೆ, ಒಂದು ದೇಶದ ಹವಾಮಾನ, ಮೇಲ್ಮೈಲಕ್ಷಣ, ಮಳೆ, ಉಷ್ಣಾಂಶ, ವಾಯುಗುಣ, ಭೂಮಿ, ಸಮುದ್ರಮಟ್ಟ, ವಾಯುಮಂಡಲದೊತ್ತಡ, ವಿದ್ಯುತ್ ವಿಕರಣಕ್ರಿಯಾಶಕ್ತಿ (Cosmic Radiation) ಇವುಗಳೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಆರೋಗ್ಯ ಅಥವಾ ಅನಾರೋಗ್ಯವನ್ನು ರೂಪಿಸುತ್ತವೆ. ಗೂರಲು (Asthma) ರೋಗದಿಂದ ನರಳುವವನಿಗೆ ವೈದ್ಯರು ಹವಾಬದಲಾವಣೆ ಆಗಬೇಕು ಎಂದು ಹೇಳುವುದು ವಾಡಿಕೆ. ಉಷ್ಣೋದ್ರೇಕ ಹವಾಗುಣದಿಂದ ಸೂರ್ಯಾಘಾತಕ್ಕೆ (Sun stroke), ಶೀತೋದ್ರೇಕ ಹವಾಗುಣದಿಂದ ಹಿಮವ್ರಣ (Frost bite)ಕ್ಕೆ ಕಾರಣವೆಂಬುದು ತಿಳಿದ ವಿಷಯ. ವಾಯುಮಂಡಲದೊತ್ತಡ ಏರುಪೇರುಗಳಿಂದ ಗಣಿಗಳಲ್ಲಿ ಕೆಲಸ ಮಾಡುವವರೂ, ಸಮುದ್ರದಲ್ಲಿ ಮುಳುಗುವವರೂ, ಹಾಗೂ ವಿಮಾನದಲ್ಲಿ ಹಾರುವವರೂ ಅನೇಕ ಸಲ ಬಾಧೆಯಿಂದ ನರಳುತ್ತಾರೆ. ಗಗನಯಾನಿ ಅಂತರಿಕ್ಷದಲ್ಲಿ ಯಾನಮಾಡುವಾಗ ತಕ್ಕ ರಕ್ಷಣೆಯನ್ನು ಪಡೆಯದಿದ್ದರೆ ವಿದ್ಯುತ್ ವಿಕರಣಾಕ್ರಿಯಾಶಕ್ತಿಯನ್ನು ಎದುರಿಸಲಾರ. ಗಾಳಿಯೇ ಅನೇಕ ವಿಷಕ್ರಿಮಿಗಳು, ರೋಗಾಣುಗಳನ್ನು ಒಬ್ಬರಿಂದೊಬ್ಬರಿಗೆ ರೋಗ ಹರಡಲು ವಾಹಕ. ಮಿತಿಮೀರಿದ ಶಬ್ದದಿಂದ ಕಿವುಡುದೋಷಗಳೂ, ಮಲಿನಗೊಂಡ ವಾತಾವರಣದಿಂದ ಶ್ವಾಸಕೋಶರೋಗಗಳೂ ಬರಬಹುದು.

ಮನುಷ್ಯನಿಗೆ ಮನುಷ್ಯನೇ ಪರಮಶತ್ರು. ರೋಗಕಾರಕಗಳು ಸರಳು ಪವನ ಮಲ, ಮೂತ್ರ, ರಕ್ತ, ಕೀವು, ಬೆವರು, ಎಂಜಲು, ಉಸಿರು ಮುಂತಾದ ವಿಸರ್ಜನೆಗಳ ಮೂಲಕ ಹಾಗೂ ಕೆಮ್ಮಿದಾಗ, ಸೀನಿದಾಗ, ಮಾತನಾಡುವಾಗ ಹೊರಬಂದು ಗಾಳಿ, ನೀರು, ಆಹಾರ, ಪಾನೀಯ, ಮಲಿನಗೊಂಡ ಬಟ್ಟೆ, ಪಾತ್ರೆ, ಮಂಚ, ಮೇಜು, ಕುರ್ಚಿ ಇತ್ಯಾದಿಯ ಸಂಪರ್ಕಹೊಂದಿ ಅವುಗಳ ಮೂಲಕ ಮತ್ತೊಬ್ಬರಿಗೆ ಹರಡುವುದು. ಈ ರೀತಿ ಹರಡುವ ರೋಗಗಳೆಂದರೆ ಕಾಲರಾ, ವಿಷಮಶೀತಜ್ವರ, ಆವುಶಂಕೆ, ಭೇದಿ, ಗಂಟಲುಮಾರಿ (Diphtheria), ನಾಯಿ ಕೆಮ್ಮು, ಕ್ಷಯ ಇತ್ಯಾದಿ. ರೋಗಿಯ ನೇರಸಂಪರ್ಕದಿಂದ ಅಂದರೆ ಚುಂಬನ, ಸಂಭೋಗದಿಂದ ಬರುವುದು ಕ್ಷಯ, ಮೇಹ ಇತ್ಯಾದಿ. ಕೆಲವು ಕೀಟಗಳು ರೋಗಿಯ ರಕ್ತವನ್ನು ಹೀರಿ ಆರೋಗ್ಯವಾಗಿರುವವನನ್ನು ಕಚ್ಚಿ ರೋಗಕಾರಕ ವನ್ನು ಅವನ ರಕ್ತಕ್ಕೆ ಸೇರಿಸುತ್ತವೆ. ಮಲೇರಿಯಾ, ಆನೇಕಾಲುರೋಗ, ಡೆಂಗ್ಯೂಜ್ವರ, ಮಿದುಳಿನ ಉರಿ ಊತ (Encephalitis) ಸೊಳ್ಳೆಗಳಿಂದಲೂ, ಪ್ಲೇಗ್–ಚಿಗಟಗಳಿಂದಲೂ, ಮರುಕೊಳಿಸುವ ಜ್ವರ (Relapsing fever), ಕಲ್ಲುದಡಾರ (Typhus), ಕ್ಯಾಸನೂರು ಅರಣ್ಯರೋಗ—ಇವು ಹೇನು, ಉಣ್ಣೆ (Louse, ticks and mites)ಗಳಿಂದಲೂ ಮತ್ತೊಬ್ಬರಿಗೆ ಹರಡುತ್ತದೆ. ನೊಣ ಗಳೂ ಸಹ ತಿಪ್ಪೆಯ ಮೇಲೆ, ಹೇಸಿಗೆ ಮೇಲೆ ಕುಳಿತು ಅವುಗಳಲ್ಲಿ ವಿಸರ್ಜಿಸಿದ ರೋಗಕಾರಕ ಕ್ರಿಮಿಗಳನ್ನು ತನ್ನ ದೇಹ, ಮೂತಿ, ಕಾಲುಗಳ ಮೇಲೆ ಹೊತ್ತು ನಾವು ತಿನ್ನುವ ಆಹಾರ, ಕುಡಿಯುವ ಪಾನೀಯಗಳ ಮೇಲೆ ಕುಳಿತಾಗ ಸೋಂಕನ್ನು ಹಾಯಿಸಿ, ಭೀಕರ ರೋಗಗಳಿಗೆ ಕಾರಣವಾಗುತ್ತವೆ. ಕೆಲವು ಕೀಟ ಗಳು, ತಾವೇ ರೋಗಕ್ಕೆ ಕಾರಣವಾಗುತ್ತವೆ. ಉದಾಹರಣೆಗೆ—ಸಾರ್ ಕಾಪ್ಟಿಸ್ ಎಂಬ ಕಜ್ಜಿ ಕೀಟ ನಮ್ಮ ದೇಹದ ಚರ್ಮದಲ್ಲಿ ನೆಲಸಿ, ತುರಿಕಜ್ಜಿ ರೋಗ ತರು ತ್ತದೆ. ಕೆಲವು ಪ್ರಾಣಿಗಳ ರೋಗಗಳು—ಅವುಗಳು ನಮ್ಮನ್ನು ಕಚ್ಚುವುದ ರಿಂದ ಬರುತ್ತವೆ—ನಾಯಿಹುಚ್ಚು (Rabies) ಈ ರೀತಿ ಬರುವ ರೋಗ. ಮತ್ತೆ ಕೆಲವು ರೋಗಗಳು ಪ್ರಾಣಿಗಳನ್ನು ಆಶ್ರಯಿಸಿರುತ್ತವೆ. ಈ ಪ್ರಾಣಿಗಳ ಮಾಂಸವನ್ನು ಪೂರ್ಣ ಬೇಯಿಸಿ ಪಕ್ವಮಾಡದೆ ಸೇವಿಸಿದರೆ ಜೀವಸಹಿತ ಇರುವ ಪರಾವಲಂಬಿ ನಮ್ಮ ದೇಹವನ್ನು ಹೊಗುತ್ತವೆ. ಹಂದಿಯ ಮಾಂಸದಿಂದ ಮತ್ತು ದನಗಳ ಮಾಂಸಸೇವನೆಯಿಂದ ಲಾಡಿಹುಳುಗಳ ರೋಗ ಈ ರೀತಿ ಬರುವುದು.

ಈ ಮೇಲೆ ಹೇಳಿದ ರೋಗಗಳು ಒಬ್ಬರಿಂದ ಮತ್ತೊಬ್ಬರಿಗೆ ಹರಡಲು ಒಂದಲ್ಲ ಒಂದು ರೀತಿಯ ಬಾಹ್ಯವಾತಾವರಣದ ಹಾಗೂ ಸೌಕರ್ಯಗಳ ಆವಶ್ಯ- ಕತೆಯನ್ನು ಸೂಚಿಸುತ್ತವೆ. ರೋಗಕಾರಕಗಳು ಹೊರಗೆ ಸಾಕಷ್ಟು ಕಾಲ ಜೀವಂತದಿಂದಿರಬೇಕು ಹಾಗೂ ಮತ್ತೊಬ್ಬರಿಗೆ ಸಂಪರ್ಕ ಬರುವಂತೆ ತಕ್ಕ

ಸೌಕರ್ಯ ಒದಗಬೇಕು. ಇವುಗಳಲ್ಲಿ ಯಾವುದಕ್ಕೇ ಚ್ಯುತಿ ಬಂದರೂ ರೋಗ ಹರಡಲವಕಾಶವಿಲ್ಲ.

ಆಶ್ರಯದಾತ

ಆರೋಗ್ಯ ಅಥವಾ ಅನಾರೋಗ್ಯ ಅಥವಾ ಅನಾರೋಗ್ಯ ಪ್ರಚೋದನೆಯಲ್ಲಿ "ರೋಗಕಾರಕ", "ವಾಯುಗುಣ ಬಾಹ್ಯ ಸೌಲಭ್ಯ"ಗಳನ್ನು ಕುರಿತು ವಿಚಾರ ಮಾಡಿದ್ದಾಯಿತು. ಉಳಿದಿರುವುದು ರೋಗಕ್ಕೆ ಎಡೆಕೊಡುವ ಆಶ್ರಯದಾತ.

ಮನುಷ್ಯನೇ ರೋಗವನ್ನನುಭವಿಸುವ ವ್ಯಕ್ತಿಯಾದರೂ — ಅವನ ವಿಚಾರದಲ್ಲಿ ನಮ್ಮ ಜ್ಞಾನ ಕಡಿಮೆ ಅಂದರೆ ಉತ್ಪ್ರೇಕ್ಷೆಯೇನಲ್ಲ. ತಜ್ಞರು ಕೇವಲ ರೋಗಕಾರಕಗಳ ಕಡೆ ಯಥೇಚ್ಛವಾಗಿ ಗಮನಕೊಟ್ಟು, ಅನುಭವಿಸುವ ವ್ಯಕ್ತಿಯನ್ನೇ ಅಲಕ್ಷಿಸಿದ್ದಾರೆ ಎಂದು ಹೇಳಬಹುದು. ವ್ಯಕ್ತಿಯ ವಿಚಾರ ಪೂರ್ಣಜ್ಞಾನ ಅತ್ಯವಶ್ಯಕ. ಆದರೆ ಈ ಜ್ಞಾನ ಸುಲಭವಾಗಿ ದೊರಕಲಾರದು. ಏಕೆಂದರೆ ನಮ್ಮ ಸಂಶೋಧನೆಗಳೇನೆ ಇರಲಿ, ಅವು ಪ್ರಯೋಗಶಾಲೆಯಲ್ಲಿ ಪ್ರಾಣಿಗಳ ಮೇಲೆ ಹಾಗೂ ಇತರ ರೀತಿಗಳಲ್ಲಿ ನಡೆಯಲು ಅಡಚಣೆಗಳಿಲ್ಲ. ಆದರೆ ಮನುಷ್ಯನನ್ನು ಪ್ರಯೋಗಶಾಲೆಯ ಪ್ರಾಣಿಯಂತೆ ಸಂಶೋಧನೆಗೆ ಉಪಯೋಗಿಸಿಕೊಳ್ಳುವುದು ಅನೇಕ ವೇಳೆ ಆಗಲಾರದು. ಅದೂ ಅಲ್ಲದೆ ಮನುಷ್ಯನಲ್ಲಿ ರೋಗ ಕಾಲಿಟ್ಟ ಕಾಲ, ಅಲ್ಲಿಂದ ಮುಂದೆ ಅದರ ಪ್ರಗತಿ, ಮುಂತಾದುವನ್ನು ನಿಗದಿಯಾಗಿ ಅಳತೆ ಮಾಡಲು ಸಾಧನಗಳಿಲ್ಲ. ರೋಗ ತೀವ್ರಸ್ವರೂಪವನ್ನು ತಾಳುವ ಮುಂಚೆಯೇ ಅದರ ಲಕ್ಷಣಗಳನ್ನು ತಿಳಿಯುವುದು ಅವಶ್ಯಕ; ಆದರೆ ಇದು ಸುಲಭಸಾಧ್ಯವಲ್ಲ.

ರೋಗಕ್ಕೆ ಎಲ್ಲರೂ ಆಶ್ರಯಕೊಡುವುದಿಲ್ಲ. ರೋಗಕಾರಕಗಳ ಸಂಖ್ಯೆ, ರೋಗೋದ್ರೇಕಶಕ್ತಿ (Virulence), ಆಯುಸ್ಸು (Period of viability), ಆಶ್ರಯದಾತನ ಅಂಗಾಂಗದ ಪ್ರತಿಕ್ರಿಯೆ (Reaction of the host tissue), ಪ್ರವೇಶದ್ವಾರ (Portal of entry) ಮತ್ತು ದೇಹದ ಯಾವ ಅಂಗದಲ್ಲಿ ರೋಗ ಕೇಂದ್ರಿತವಾಗುತ್ತದೆ ಎನ್ನುವುದನ್ನವಲಂಬಿಸಿ ರೋಗಕ್ಕೆ ಆಶ್ರಯ ನಿಶ್ಚಿತವಾಗುತ್ತದೆ. ಪ್ರತಿಯೊಂದು ರೋಗ, ರೋಗಿಯಿಂದ ಮತ್ತೊಬ್ಬನಿಗೆ ಹರಡುವುದಕ್ಕೆ ನಿಶ್ಚಿತ ಕಾಲಗಳಿವೆ (Period of communicability). ಈ ಕಾಲದಲ್ಲೇ ರೋಗ ಹರಡಲು ಸಾಧ್ಯ. ದಡಾರ, ಸೀತಾಳಿ ಮುಂತಾದವು ರೋಗಿಯಲ್ಲಿ ಚಿಹ್ನೆಗಳು ಕಾಣುವುದಕ್ಕೆ ೩–೪ ದಿನಗಳಿಗೆ ಮೊದಲೇ ಮತ್ತೊಬ್ಬರಿಗೆ ಹರಡುವ ಶಕ್ತಿಯನ್ನು ಹೊಂದಿವೆ. ಇದೇ ರೀತಿ ಪ್ರತಿ ರೋಗಕ್ಕೂ ನಿರ್ದಿಷ್ಟಕಾಲವಿದೆ.

ರೋಗಕಾರಕ ಆಶ್ರಯಿಸಿದರೂ, ಅದನ್ನು ನಮ್ಮ ದೇಹವು ವಿಸರ್ಜಿಸ ಬಹುದು ಅಥವಾ ನಾಶಗೊಳಿಸಬಹುದು. ಒಂದು ವೇಳೆ ಅದು ವಿಸರ್ಜನೆ ಗೊಳ್ಳದೆ, ನಾಶಗೊಳ್ಳದೆ ದೇಹದಲ್ಲಿ ವೃದ್ಧಿಯಾದರೂ, ರೋಗದ ಯಾವ ಕುರುಹುಗಳೂ ಕಾಣದಿರಬಹುದು. (Inapparent infa) ಕಂಡರೂ ಅದು ಅತಿಸೌಮ್ಯಸ್ವರೂಪದ್ದಾಗಿದ್ದು ಅದರ ಕಡೆ ಗಮನವಿಲ್ಲದಿರಬಹುದು, (Sub-clinical infection) ಹಾಗೂ ರೋಗಕಾರಕ ವೃದ್ಧಿಯಾಗಿ, ರೋಗಪ್ರಚೋದನೆ ಮಾಡಿ ರೋಗದ ಪೂರ್ಣ ಚಿಹ್ನೆಗಳು ಕಂಡು ರೋಗದಿಂದ ನರಳಲೂ ಬಹುದು.

ರೋಗ ಬಂದರೆ ಅದರ ಅಂತ್ಯ ಒಂದಲ್ಲ ಒಂದು ರೀತಿಯಲ್ಲಿ ಇತ್ಯರ್ಥ ವಾಗಲೇಬೇಕು. ರೋಗಕಾರಕದ ವಿಸರ್ಜನೆಯಾಗಿ ಸಂಪೂರ್ಣ ಗುಣಹೊಂದ ಬಹುದು. ವಿಸರ್ಜನೆ ಪೂರ್ಣವಾಗದೆ ಗುಣಹೊಂದಲೂ ಸಾಧ್ಯ. ಇದಕ್ಕೆ ರೋಗವಾಹಕಾವಸ್ಥೆ (Carrier) ಎನ್ನುತ್ತಾರೆ. ಕೆಲವು ವೇಳೆ ಪೂರ್ಣ ಆರೋಗ್ಯ ಹೊಂದದೆ ಯಾವದಾದರೂ ಕುಂದು ಅಥವಾ ನ್ಯೂನತೆ ಉಳಿಯಬಹುದು. ಕಿವುಡು, ಕುರುಡು ಅಥವಾ ಪಾರ್ಶ್ವವಾಯು ಇತ್ಯಾದಿ. ಹಾಗಿಲ್ಲದಿದ್ದರೆ ರೋಗಿ ರೋಗಕ್ಕೆ ಬಲಿಯಾಗಬಹುದು.

ಮನುಷ್ಯನಲ್ಲಿ ಆರೋಗ್ಯ ಅಥವಾ ರೋಗಪ್ರಚೋದನೆಗೆ ಸಂಬಂಧಿಸಿದ ಕೆಲವು ವಿಚಾರಗಳನ್ನು ಪರಿಶೀಲಿಸೋಣ. ಇವು ಯಾವುವೆಂದರೆ—ಜೀವನ ಪದ್ಧತಿ, ಸಂಪ್ರದಾಯಗಳು, ರೂಢಿಯಲ್ಲಿ ಅಥವಾ ಆಚರಣೆಯಲ್ಲಿರುವ ನಡತೆ ಗಳು, ನಾವು ತಿನ್ನುವ ಆಹಾರ, ಅಡಿಗೆ ಮಾಡುವ ವಿಧಾನ, ನಮ್ಮ ವ್ಯಕ್ತಿ-ಶುಭ್ರತೆ (Personal cleanliness), ಉಗುಳುವುದು, ಕೆಮ್ಮುವುದು, ಸೀನು ವುದು, ಹೊಲಸು-ಹೇಸಿಗೆ ಎಲ್ಲೆಂದರಲ್ಲಿ ಮಾಡುವುದು ಇತ್ಯಾದಿ ಮುಖ್ಯ. ಆಹಾರ ಸತ್ವಪೂರ್ಣವಾದಷ್ಟು ರೋಗ ಕಡಿಮೆ. ಅಂಗಡಿಯಿಂದ ತಂದ ಕಾಯಿಪಲ್ಯಗಳನ್ನು ಹೆಚ್ಚುವದಕ್ಕೆ ಮುಂಚೆ ತೊಳೆಯುವುದರ ಬದಲಿ ಹೆಚ್ಚಿದ ಮೇಲೆ ತೊಳೆದು ಅಡಿಗೆ ಮಾಡುವುದು, ಹೆಚ್ಚುವಾಗಲೂ ಸಣ್ಣ ತುಂಡುಗಳಾಗಿ ಮಾಡುವುದು, ಬೇಯಿಸಿದ ನೀರನ್ನು ತೋಡಿ ಚೆಲ್ಲುವುದು, ಅನ್ನಮಾಡಿದ ಗಂಜಿ ಬಸಿಯುವುದು, ಅಡಿಗೆಗೆ ಸೋಡಾ ಪುಡಿ ಹಾಕುವುದು—ಈ ಅಭ್ಯಾಸಗಳಿಂದ ಆಹಾರದಲ್ಲಿರುವ ಸತ್ವ ಕಡಿಮೆಯಾಗಿ ನಾವು ತಿನ್ನುವ ಆಹಾರ ನಿಸ್ಸತ್ವ ವಾಗಿರುತ್ತದೆ. ವ್ಯಕ್ತಿಶುಭ್ರತೆಯಿಂದ ಅನೇಕ ರೋಗಗಳು ದೂರವಾಗುತ್ತವೆ. ಎಲ್ಲೆಂದರಲ್ಲಿ ಉಗುಳುವುದು, ಬಾಯಿ ಮುಚ್ಚಿಕೊಳ್ಳದೇ ಸೀನುವುದು ಕೆಮ್ಮು ವುದರಿಂದ ಕ್ಷಯ, ಗಂಟಲುರೋಗ, ಇನ್‌ಫ್ಲೂಎನ್‌ಜಾ ಮುಂತಾದ ರೋಗಗಳು ಹರಡುತ್ತವೆ. ಹಳ್ಳಿಗಳಲ್ಲಿ ಕಕ್ಕಸ್ಸುಗಳಿಲ್ಲ ಹಾಗೂ ಪಾದರಕ್ಷೆ ಹಾಕುವ ಅಭ್ಯಾಸವಿಲ್ಲ. ಇದರಿಂದ ಎಲ್ಲೆಂದರಲ್ಲಿ ಹೇಸಿಗೆ ಮಾಡುವುದರಿಂದ ಕೊಕ್ಕೆಹುಳ,

ವಾಂತಿಭೇದಿ, ವಿಷಮಶೀತಜ್ವರ ಇತ್ಯಾದಿ ಹರಡಲು ಕಾರಣ. ಮಾನವನ ಅಭ್ಯಾಸ, ನಡತೆ, ಸಂಪ್ರದಾಯಗಳಿಂದ ಅವನು ಅನೇಕ ರೋಗಗಳಿಗೆ ಆಶ್ರಯದಾತನಾಗುತ್ತಾನೆ.

ವಯಸ್ಸು, ಗಂಡು, ಹೆಣ್ಣು—ಈ ಲಕ್ಷಣಗಳಿಂದ ಕೆಲವು ರೋಗಗಳು ಬರುತ್ತವೆ. ಮಕ್ಕಳಿಗೆ ಶಿಡಬು, ನಾಯಿಕೆಮ್ಮು, ದಡಾರ, ಶೀತಾಳಿ ಇತ್ಯಾದಿ ರೋಗಗಳೂ, ವೃದ್ಧರಿಗೆ ಹೃದಯರೋಗ, ರಕ್ತದೊತ್ತಡದಲ್ಲಿ ಏರಿಕೆ, ಮಧುಮೂತ್ರ (Diabetes melitus), ಏಡಿಹುಣ್ಣು (Cancer) ಇತ್ಯಾದಿ ರೋಗಗಳೂ ಬರುತ್ತವೆ. ಹೆಂಗಸರಿಗೆ ಮುಟ್ಟಿಗೆ ಸಂಬಂಧಿಸಿದ ರೋಗಗಳೂ, ಗರ್ಭಿಣಿಯರಾದಾಗ ಹೆರಿಗೆಯಿಂದಾಗಿ ಕೆಲವು ರೋಗಗಳೂ ಬರುತ್ತವೆ.

ಒಂದು ರಾಷ್ಟ್ರದ ಸ್ವಾತಂತ್ರ್ಯರಕ್ಷಣೆಗೆ ಭೂ, ವಾಯು, ನೌಕಾಪಡೆಗಳಿದ್ದಂತೆ ನಮ್ಮ ಶರೀರರಕ್ಷಣೆಗೂ ಕೆಲವು ರಕ್ಷಣಾವ್ಯವಸ್ಥೆಗಳಿವೆ.

ಪಂಚೇಂದ್ರಿಯಗಳು ನಮ್ಮನ್ನು ಅನೇಕ ಸಲ ಅಪಾಯಗಳಿಂದ ಪಾರು ಮಾಡುತ್ತವೆ. ಎದುರಿಗೆ ಮದಿಸಿದ ಆನೆ ಮುನ್ನುಗ್ಗಿ ಬರುತ್ತಿದ್ದರೆ ಅದನ್ನು ಕಂಡು ಕಣ್ಣುಗಳು, ಕಾಲಿಗೆ ಕೂಡಲೇ ಬುದ್ಧಿ ಹೇಳಿ ಆ ಜಾಗದಿಂದ ಸುರಕ್ಷಿತ ಸ್ಥಳಕ್ಕೆ ಒಯ್ಯುವಂತೆ ಮಾಡುತ್ತವೆ. ವಾಹನ, ದುಷ್ಟಮೃಗ, ಇವುಗಳ ಶಬ್ದವನ್ನಾಲಿಸಿ ಕಿವಿಗಳು ಕೂಡಲೇ ನಮ್ಮನ್ನೆಚ್ಚರಗೊಳಿಸುತ್ತವೆ. ಮೂಗು ಕಣ್ಣುಗಳ ರೋಮಗಳು ಧೂಳು ಮತ್ತಿತರ ಬಾಹ್ಯವಸ್ತುಗಳು ಒಳನುಗ್ಗದಂತೆ ತಡೆ ಹಾಕುತ್ತವೆ. ವಿಷಭರಿತ ತಿಂಡಿತಿನಸುಗಳ ರುಚಿಯನ್ನು ನಾಲಿಗೆ ಕಂಡುಹಿಡಿದು, ಅವುಗಳಿಗೆ ದೇಹದೊಳಗೆ ಪ್ರವೇಶವಿಲ್ಲದಂತೆ ಅಡ್ಡಿ ಮಾಡುತ್ತದೆ. ಮೇಲು ಹೊದಿಕೆಯಾದ ಚರ್ಮ, ಯಾವ ಶತ್ರುವನ್ನೂ ಒಳಹೋಗಲು ಬಿಡುವುದಿಲ್ಲ. ಹಾಗೂ ಅತಿ ಉಷ್ಣ, ಶೀತದ ಪರಿಣಾಮಗಳಿಂದ ಮುನ್ನೆಚ್ಚರಗೊಳಿಸುತ್ತದೆ.

ಮತ್ತೊಂದು ರೀತಿಯ ರಕ್ಷಣೆ ಅಂದರೆ—ಹೊಟ್ಟೆಗಿಲ್ಲದೆ ಹಸಿವಿನಿಂದ ನರಳುವ ಸನ್ನಿವೇಶ ಬಂದಾಗ, ನಾವು ಹೆಚ್ಚಿಗೆ ತಿಂದ ಆಹಾರಶೇಖರಣೆಯಾದದ್ದು ಈ ಸಂದರ್ಭದಲ್ಲಿ ಪ್ರಯೋಜನವಾಗುತ್ತದೆ.

ರಕ್ತಸ್ರಾವದ ಸಮಯದಲ್ಲಿ ನಮ್ಮ ಗುಲ್ಮದಲ್ಲಿ ಶೇಖರಣೆಯಾದ ರಕ್ತ ಹೊರಬೀಳುತ್ತದೆ.

ವಿಷವಾಗಿ ಪರಿಣಮಿಸುವ ಕೆಲವು ವಸ್ತುಗಳನ್ನು ನಮ್ಮ ಯಕೃತ್ತು (Liver) ವಿಷರಹಿತ (Detoxify) ಮಾಡುವ ಶಕ್ತಿಯನ್ನು ಹೊಂದಿದೆ.

ಮೇಲೆ ಹೇಳಿದ ರಕ್ಷಣಾವ್ಯವಸ್ಥೆಗಳೆಲ್ಲವೂ ನಮ್ಮ ದೇಹಕ್ಕೆ ಸಾಮಾನ್ಯ ಶತ್ರುಗಳಿಂದ ಹಾಗೂ ಅಪಾಯಗಳಿಂದ ಪಾರುಮಾಡುವ ವ್ಯವಸ್ಥೆಗಳೆಂದು ಹೇಳಬಹುದು (General defence mechanisms). ಅನೇಕ ರೀತಿಯ ವಿಷಕ್ರಿಮಿಗಳು, ರೋಗಾಣುಗಳೂ, ಇತರ ರೋಗಕಾರಕಗಳೂ ಹೊಕ್ಕು ರೋಗಕ್ಕೆ

ಕಾರಣವಾಗುತ್ತವೆ. ಇವುಗಳನ್ನೆದುರಿಸಲು ನಮ್ಮ ರಕ್ತದಲ್ಲಿ ಅಡಗಿರುವ ನಿರ್ದಿಷ್ಟ ರಕ್ಷಣಾವ್ಯವಸ್ಥೆಯನ್ನು (Specific defence mechanisms) ವಿಚಾರ ಮಾಡೋಣ.

ಶ್ವೇತರಕ್ತಕಣಗಳು

ಮೊದಲನೆಯದು ರಕ್ತದ ಶ್ವೇತರಕ್ತಕಣಗಳು (Cellular mechanism). ಇವುಗಳಲ್ಲಿ ಮುಖ್ಯವಾದವು ಮೂರು: ಗ್ರಾನ್ಯುಲೋಸೈಟ್‌ಗಳು, ಲಿಂಫೋಸೈಟ್‌ಗಳು ಮತ್ತು ಇಯೋಸಿನೋಫಿಲ್‌ಗಳು.

ದೇಹದಲ್ಲಿ ಯಾವ ಭಾಗಕ್ಕಾದರೂ ಪೆಟ್ಟು ಬಿದ್ದಲ್ಲಿ ಅಥವಾ ವಿಷಕ್ರಿಮಿಗಳ ಸೋಂಕು ತಗಲಿದಲ್ಲಿ ತಕ್ಷಣ ಆ ಸ್ಥಳಕ್ಕೆ ಈ ಸಹಸ್ರಾರು ಗ್ರ್ಯಾನ್ಯುಲೋಸೈಟ್ ಕಣಗಳು ಕೂಡಲೇ ಧಾವಿಸಿ ಪೆಟ್ಟುಬಿದ್ದು ನಶಿಸಿದ ಭಾಗಗಳ ಪುನರ್ರಚನೆಗೆ (Repair) ಸಹಾಯಕವಾಗುವುದೊಂದೇ ಅಲ್ಲದೆ ಹೊರಗಿನಿಂದ ಬಂದ ವಿಷಕ್ರಿಮಿಗಳನ್ನು ತಡೆದು ಅವುಗಳ ಜೊತೆ ಹೋರಾಡಿ ಅವುಗಳನ್ನು ನಾಶ ಮಾಡುತ್ತವೆ. ಇಲ್ಲದಿದ್ದರೆ ಹೋರಾಟದಲ್ಲಿ ತಾವು ಮಡಿಯುವುದೂ ಉಂಟು. ಈ ಹೋರಾಟದ ಫಲವೇ ನಾವು ಅನುಭವಿಸುವ ಉರಿ ಊತ (Inflamation), ಹಾಗೂ ಹೋರಾಟದಲ್ಲಿ ಮಡಿದ ಕಣಗಳ ಸಂಗ್ರಹವೇ ಕೀವು (Pus).

ಇದೇ ರೀತಿ ದೀರ್ಘಕಾಲದ ಮತ್ತು ಬೇರೂರಿದ ರೋಗಗಳಲ್ಲಿ—(Chronic diseases) ಅಂದರೆ ಕ್ಷಯ, ಮೇಹ, ಕುಷ್ಟ, ಇತ್ಯಾದಿಗಳಲ್ಲಿ ಹೋರಾಡಲು ಲಿಂಫೋಸೈಟ್‌ಗಳು ಅಂದರೆ ದುಗ್ಧರಸಕಣಗಳು ತಕ್ಷಣ ಧಾವಿಸಿ ಈ ರೋಗಕಾರಕಗಳೊಂದಿಗೆ ಹೋರಾಡುತ್ತವೆ.

ಗೂರಲು, ಜಂತುಹುಳ, ಕೊಕ್ಕೆಹುಳ ಮುಂತಾದ ರೋಗಗಳಲ್ಲಿ ಇಯೋಸಿನೋಫಿಲ್‌ಗಳು ಅಂದರೆ ಕೆಂಪು ಸ್ಫುರಕ ಕಣಗಳು ಹೋರಾಟಕ್ಕಿಳಿಯುತ್ತವೆ.

ಪ್ರತಿವಿಷವಸ್ತು

ರೋಗಕಾರಕಗಳು ದೇಹವನ್ನು ಹೊಕ್ಕಾಗ ಈ ವಿಷಾಣುಗಳ ದುಷ್ಪರಿಣಾಮವನ್ನು ತಡೆಗಟ್ಟಲು ರಸಧಾತುವಿನಲ್ಲಿ ಒಂದು ಪದಾರ್ಥವಿಶೇಷ ಪ್ರಚೋದಿತವಾಗುತ್ತದೆ. ಇದನ್ನು ಪ್ರಚೋದನೆ ಮಾಡುವ ರೋಗಕಾರಕ ಅಥವಾ ವಿಷಾಣುವನ್ನು ಪ್ರತಿವಿಷಜನಕವೆಂದೂ (Antigen) ಇದರಿಂದ ಪ್ರಚೋದಿಸಲ್ಪಟ್ಟ ವಸ್ತುವಿಗೆ ಪ್ರತಿವಿಷವಸ್ತು (Antibody) ಎಂದೂ ಕರೆಯಬಹುದು. ನಿರ್ದಿಷ್ಟ ಪ್ರತಿವಿಷಜನಕಗಳು ನಮ್ಮ ದೇಹದಲ್ಲಿ ನಿರ್ದಿಷ್ಟ ಪ್ರತಿವಿಷವಸ್ತುವನ್ನು ಮಾತ್ರ ಪ್ರಚೋದಿಸಲು ಸಾಧ್ಯ. ಉದಾಹರಣೆಗೆ—ಕಾಲರಾ ವಿಷಕ್ರಿಮಿ (ಪ್ರತಿವಿಷಜನಕ) ದೇಹಕ್ಕೆ ಹೊಕ್ಕರೆ, ನಮ್ಮ ದೇಹ ಕಾಲರಾ ವಿಷಕ್ರಿಮಿ

ಗಳೊಂದಿಗೆ ಹೋರಾಡುವ ಪ್ರತಿವಿಷವಸ್ತುವನ್ನು ಮಾತ್ರ ತಯಾರು ಮಾಡುತ್ತದೆ. ಈ ಪ್ರತಿವಿಷವಸ್ತು ವಿಷಮಶೀತಜ್ವರದ ಕ್ರಿಮಿಗೆ ಏನೂ ಮಾಡಲಾರದು. ಏಕಕಾಲದಲ್ಲಿ ವ್ಯಕ್ತಿಯ ರಕ್ತದಲ್ಲಿ ಅವನು ಅನುಭವಿಸಿ ಹೋರಾಡಿದ ರೋಗಗಳಿಗೆಲ್ಲಾ ಪ್ರತಿವಿಷವಸ್ತು ಇರಬಹುದು.

ಈ ಪ್ರತಿವಿಷವಸ್ತುವನ್ನು ನಮ್ಮ ಶರೀರ ಪ್ರಕೃತಿಸಿದ್ಧವಾಗಿ ಪಡೆದುಕೊಳ್ಳಬಹುದು ಅಥವಾ ಕೃತಕ ಪ್ರಚೋದನೆಯಿಂದ ಗಳಿಸಿಕೊಳ್ಳಬಹುದು. (ಲೇಖನದ ಕಡೇ ಭಾಗದಲ್ಲಿ ಇರುವ ನಿರೂಪಣೆ ನೋಡಿ)

ಪ್ರಕೃತಿಸಿದ್ಧವಾಗಿ ಅನ್ಯಕೃತ ಅಂದರೆ ತಾಯಿ ತನ್ನ ರಕ್ತದಲ್ಲಿ ತಯಾರು ಮಾಡಿದ ಪ್ರತಿವಿಷವಸ್ತು ರಕ್ತದಲ್ಲಿ ಶಿಶುವಿಗೆ ಹಾಯ್ದುಬರುತ್ತದೆ. ಉದಾಹರಣೆಗೆ—ಜನನವಾದ ಶಿಶುವಿಗೆ ಮೂರು ತಿಂಗಳುಗಳು ತುಂಬುವವರೆಗೆ ರೋಗದ ಭಯ ಕಡಿಮೆ. ಮಾತೃದತ್ತವಾದ ಪ್ರತಿವಿಷವಸ್ತು ಶಿಶುವಿನಲ್ಲಿರುವವರೆಗೆ ಶಿಶು ರೋಗಕಾರಕಗಳನ್ನು ತಡೆಹಿಡಿದೋಡಿಸುವ ಶಕ್ತಿಯನ್ನು ಪಡೆದಿರುತ್ತದೆ. ಆದ್ದರಿಂದ ಹೀಗೆ ಹಾಯ್ದುಬಂದ ಶಕ್ತಿ ಬಹಳ ದಿನಗಳುಳಿಯಲಾರದು.

ಪ್ರಕೃತಿಸಿದ್ಧವಾಗಿ, ರೋಗಕಾರಕದ ಪೂರ್ವಸಂಪರ್ಕದಿಂದ, ದೇಹದ ಸ್ವಪ್ರಯತ್ನದಿಂದಲೇ ಪ್ರತಿವಿಷವಸ್ತುವನ್ನು ತಯಾರುಮಾಡಲೂ ಬಹುದು. ಇದು ಸ್ವಯಂಕೃತ ಪ್ರತಿವಿಷವಸ್ತು. ಹೀಗೆ ದೇಹದ ಸ್ವಪ್ರಯತ್ನದಿಂದ ಪಡೆದ ರೋಗನಿರೋಧಶಕ್ತಿ ಬಹಳ ಕಾಲದವರೆಗೆ ಇರುತ್ತದೆ.

ಕೃತಕವಾಗಿ, ಪ್ರತಿವಿಷಜನಕಗಳನ್ನು ಪ್ರಾಣಿಗಳಿಗೆ (ಅನ್ಯಕೃತ) ಕೊಟ್ಟು, ಅವುಗಳ ರಕ್ತದಲ್ಲಿ ಪ್ರತಿವಿಷವಸ್ತುವನ್ನು ಪ್ರಚೋದಿಸಿ ನಂತರ ಈ ಪ್ರಾಣಿಯ ರಕ್ತವನ್ನು ಸಂಗ್ರಹಿಸಿ ಅದರಲ್ಲಿ ಪ್ರತಿವಿಷವಸ್ತುವಿರುವ ಭಾಗವನ್ನು ಬೇರ್ಪಡಿಸಿ ಮನುಷ್ಯರಿಗೆ ರೋಗಭಯವಿದ್ದಾಗ ಅಥವಾ ಆ ರೋಗ ಬಂದಾಗ ಈ ಸಿದ್ಧಪಡಿಸಿದ ಪ್ರತಿವಿಷವಸ್ತುವನ್ನು ದೇಹಕ್ಕೆ ಚುಚ್ಚಬಹುದು. ಉದಾಹರಣೆಗೆ—ಧನುರ್ವಾಯು (Telanus) ಮತ್ತು ಗಂಟಲುಮಾರಿ (Diphtheria) ಈ ರೋಗಗಳ ಸಂಪರ್ಕಹೊಂದಿದವರಿಗೂ ಅಥವಾ ರೋಗದಿಂದ ನರಳುವವರಿಗೂ ಸಿದ್ಧಪಡಿಸಿದ ಪ್ರತಿವಿಷವಸ್ತುವಿನ ರಸಧಾತು (Anti serums) ಗಳನ್ನು ವೈದ್ಯರು ಕೊಡುತ್ತಾರೆ. ಇದರ ಶಕ್ತಿಯೂ ಕೇವಲ ಅಲ್ಪಕಾಲ ಈ ಎರಡು ರೋಗಗಳನ್ನೂ ತಡೆಗಟ್ಟಲು ನಮ್ಮ ದೇಹವೇ ಸ್ವಯಂಪ್ರಯತ್ನದಿಂದ ಪ್ರತಿ-ವಿಷವಸ್ತುವನ್ನು ತಯಾರುಮಾಡಲು ಪ್ರಚೋದಿಸುವಂತೆ ಪ್ರತಿವಿಷಜನಕವನ್ನು ಕೊಟ್ಟು ನಿರೋಧಶಕ್ತಿ ಬಹಳ ವರ್ಷಗಳಿರುವಂತೆ ಮಾಡಲೂ ಸಾಧ್ಯ.

ಪ್ರಾಣಿಗಳಲ್ಲಿ ಪ್ರತಿವಿಷವಸ್ತುಗಳನ್ನು ಪ್ರಚೋದಿಸುವ ಬದಲಾಗಿ ಮನುಷ್ಯನಿಗೇ ನೇರವಾಗಿ ಪ್ರತಿವಿಷಜನಕಗಳನ್ನು ಚುಚ್ಚಿ ಅವನ ದೇಹವೇ (ಸ್ವಯಂಕೃತ) ಪ್ರತಿವಿಷವಸ್ತುವನ್ನು ಪ್ರಚೋದನೆ ಮಾಡಿ ತಯಾರು

ಮಾಡುವಂತೆ ಮಾಡುವದು ಮತ್ತೊಂದು ವಿಧ. ಈ ರೀತಿ ಸ್ವಯಂಕೃತ ಪ್ರತಿ. ವಿಷವಸ್ತುಗಳ ಪ್ರಭಾವ ಬಹಳ ಕಾಲದವರೆಗೆ ಇರುತ್ತದೆ. ಈ ರೀತಿ ಕೊಡಲು ನಾವು ಅಳವಡಿಸಿಕೊಂಡಿರುವ ಪ್ರತಿವಿಷಜನಕಗಳೆಂದರೆ ಕ್ಷಯನಿರೋಧ (BCG) ಸಿಡುಬುನಿರೋಧ (Smallpox vaccination), ಗಂಟಲುಮಾರಿ, ಧನುರ್ವಾಯು ಮತ್ತು ನಾಯಿಕೆಮ್ಮುಲುನಿರೋಧ(ತ್ರಿರೋಗನಿರೋಧಚುಚ್ಚುಮದ್ದು)ಗಳು, ಪೋಲಿಯೊಮಯಲೈಟಿಸ್ ನಿರೋಧ, ಕಾಲರಾ, ಪ್ಲೇಗ್, ವಿಷಮಶೀತಜ್ವರ, ದಡಾರ, ಹಳದೀಜ್ವರ ನಿರೋಧಗಳು. ಈ ಪ್ರತಿವಿಷಜನಕಗಳು ಪ್ರಚೋದಿಸುವ ಆಯಾ ರೋಗಗಳನ್ನು ನಿರೋಧಿಸುವ ಶಕ್ತಿ ಬಹಳ ಕಾಲವಿರುತ್ತದೆ.

ಆಶ್ರಯದಾತನಿಗೆ ರೋಗ ಬರುವುದೂ ಬರದಿರುವುದೂ ಈ ಮೇಲೆ ಹೇಳಿದ ವ್ಯಕ್ತಿಯ ಜೀವನಪದ್ಧತಿ, ಸಂಪ್ರದಾಯ, ವ್ಯಕ್ತಿಶುಭ್ರತೆ, ಅಡಿಗೆ-ವಿಧಾನ, ವಯಸ್ಸು, ರೋಗದೊಂದಿಗೆ ಹಿಂದಿನ ಅನುಭವ, ಕೃತಕವಾಗಿ ರೋಗ ನಿರೋಧಗಳ ಚುಚ್ಚುಮದ್ದಿನ ಅನುಭವ, ವಿವಧ ರೀತಿಯ ಲಕ್ಷಣಗಳನ್ನನುಸರಿಸುತ್ತದೆ. ಈ ಲಕ್ಷಣಗಳು ಪ್ರತಿ ವ್ಯಕ್ತಿಗೇ ಸಂಬಂಧಪಟ್ಟದ್ದು.

ಉಪಸಂಹಾರ

ರೋಗಕಾರಕ, ಹರಡಲು ಬಾಹ್ಯಸೌಲಭ್ಯ ಮತ್ತು ಆಶ್ರಯದಾತ—ಈ ಮೂರು ಅಂಶಗಳ ಪರಸ್ಪರ ಪ್ರತಿಕ್ರಿಯೆಗಳನ್ನವಲಂಬಿಸಿ ವ್ಯಕ್ತಿಯ ಆರೋಗ್ಯ ಅಥವಾ ಅನಾರೋಗ್ಯ ರೂಪಗೊಳ್ಳುತ್ತದೆ. ಈ ಪ್ರತಿಯೊಂದು ಅಂಶದ ಪಾತ್ರ, ಅವುಗಳ ಗುಣವಿಶೇಷ ಮತ್ತು ಇತರ ಪರಿಸ್ಥಿತಿ ಸಂದರ್ಭಗಳ ಮೇಲೆ ನಿಶ್ಚಯವಾಗುತ್ತದೆ. ಆದುದರಿಂದಲೇ—ಒಂದೇ ವಯಸ್ಸಿನ, ಒಂದೇ ಸ್ಥಳದ, ಒಂದೇ ರೀತಿಯ ಸ್ಥಿತಿಗತಿಗಳುಳ್ಳ ಅನೇಕರ ಆರೋಗ್ಯ ಒಂದೇ ರೀತಿಯಾಗಿರುವುದಿಲ್ಲ. ನಮ್ಮ ಜ್ಞಾನ ಈ ವಿಷಯದಲ್ಲಿ ಇನ್ನೂ ಬೆಳೆಯಬೇಕು. ನಮ್ಮ ಅಜ್ಞಾನವನ್ನು ಮುಚ್ಚಿಕೊಳ್ಳಲು "ಆರೋಗ್ಯ ಅಥವಾ ಅನಾರೋಗ್ಯ ಅವರವರ ಕರ್ಮಫಲ" ಎಂದುಬಿಡುತ್ತೇವೆ.

★ ಸು. ವೆಂ. ರಾಮರಾಯ

ಶರೀರದ ರಕ್ಷಣಾ ವ್ಯವಸ್ಥೆಗಳು

- ಸಾಮಾನ್ಯ ವ್ಯವಸ್ಥೆ
  - ರಕ್ತದಲ್ಲಿರುವ ಶ್ವೇತಕಣಗಳು
    CELLULAR MECHANISM
    - ಗ್ರ್ಯಾನುಲೋಸೈಟ್ಸ್
    - ದುಗ್ಧರಸಕಣಗಳು
      LYMPHOCYTES
    - ಕೆಂಪು ಸ್ಫುರಕ ಕಣಗಳು
      EOSINOPHILS
- ನಿರ್ದಿಷ್ಟ ವ್ಯವಸ್ಥೆ
  - ರಕ್ತರಸಧಾತುವಿನಲ್ಲಿರುವ ಅಂಶಗಳು
    (ಪ್ರತಿವಿಷವಸ್ತು)
    (ANTIBODIES)
    HUMORAL MECHANISM
    - ಪೂರ್ವಭಾವಿಯಾಗಿ ಸಿದ್ಧಪಡಿಸಿದ ಪ್ರತಿವಿಷವಸ್ತುಗಳು
      - ತಾಯಿಯ ರಕ್ತದಿಂದ, ಶಿಶುವಿಗೆ ಹಾಯ್ದ ಪ್ರತಿವಿಷವಸ್ತುಗಳು.
      - ಕೃತಕವಾಗಿ ಪ್ರಾಣಿಗಳಲ್ಲಿ ಪ್ರಚೋದಿಸಿದ ಪ್ರತಿವಿಷವಸ್ತುಗಳು.
    - ದೇಹದಲ್ಲೇ ಪ್ರಚೋದನೆಯಾಗಿ ತಯಾರಾದ ಪ್ರತಿವಿಷವಸ್ತುಗಳು
      - ರೋಗಸಂಪರ್ಕ ಅಥವಾ, ರೋಗದಿಂದ ನರಳಿ ತಯಾರಾದ, ಪ್ರತಿವಿಷವಸ್ತುಗಳು.
      - ಕೃತಕ ಪ್ರತಿವಿಷಜನಕಗಳನ್ನು. ದೇಹಕ್ಕೆ ಚುಚ್ಚಿ, ಪ್ರತಿವಿಷವಸ್ತುಗಳನ್ನು ಪ್ರಚೋದಿಸುವುದು.

ವೀರಶೈವ ಅಪ್ರಕಟಿತ ಗ್ರಂಥಗಳು

ಇದುವರೆಗೂ ಬೆಳಕು ಕಾಣದೆ ಇರುವ ಅನೇಕ ವೀರಶೈವಗ್ರಂಥಗಳತ್ತ ಸಂಶೋಧಕರ ಗಮನ ಸೆಳೆಯಬೇಕೆಂಬುದೇ ನನ್ನ ಈ ಲೇಖನದ ಮುಖ್ಯ ಉದ್ದೇಶ. ಕರ್ಣಾಟಕ ಕವಿಚರಿತೆಯ ಮೂರು ಸಂಪುಟಗಳು, ಶಿವಾನುಭವ, ಶರಣಸಾಹಿತ್ಯ, ಈತನಕ ಪ್ರಕಟಗೊಂಡ ಹಸ್ತಪ್ರತಿಗ್ರಂಥಸೂಚಿ, ಪ್ರಾಚ್ಯ-ಸಂಶೋಧನಭಂಡಾರ ಮತ್ತು ಹಲವು ಇಂಗ್ಲಿಷ್‌ಪತ್ರಿಕೆಗಳ ನೆರವಿನಿಂದ ಪ್ರಕೃತ ಗ್ರಂಥಪಟ್ಟಿಯನ್ನು ಸಿದ್ಧಗೊಳಿಸಲಾಗಿದೆ. ಇದೇ ಲೇಖಕನ 'ಕರ್ಣಾಟಕ ಕವಿ ಚರಿತೆಯ ಅನುಕ್ತ ಕೃತಿಸೂಚಿ'ಯಲ್ಲಿ ಇಲ್ಲಿಯ ಹಲವು ಗ್ರಂಥಗಳು ಸೂಚಿತ ವಾಗಿವೆ. ಗರುಡದೃಷ್ಟಿಯನ್ನು ಬೀರಿ ಹುಡುಕಿದರೆ ಮರವಿನ ಗೂಡಿನಲ್ಲಿ ಬೆಳಕು ಕಾಣದೆ ಇರುವ ಇನ್ನೂ ಅನೇಕ ಕೃತಿಗಳು ದೊರೆಯುವುದರಲ್ಲಿ ಸಂದೇಹವಿಲ್ಲ. ಈ ನಿಟ್ಟಿನಲ್ಲಿ ವಿದ್ವಾಂಸರು ಕಾರ್ಯ ಕೈಕೊಳ್ಳಬಹುದು.

ಪ್ರಕಟನೆಗಾಗಿ ಪ್ರತಿಗಳನ್ನು ಉಪಯೋಗಿಸಿಕೊಂಡ ಆ ಆ ಪತ್ರಿಕೆಗಳಿಗೂ ಪ್ರಾಚ್ಯವಸ್ತುಗಾರ ಹಾಗು ಗ್ರಂಥಭಂಡಾರಗಳ ಅಧಿಕಾರಗಳಿಗೂ ನಾನು ಕೃತಜ್ಞ ನಾಗಿದ್ದೇನೆ. ಎಷ್ಟೇ ಜಾಗ್ರತಿವಹಿಸಿದರೂ ನನಗೆ ಅರಿವಾಗದೆ ಕೆಲವು ದೋಷ ಗಳು ಉಳಿದಿರುವುದು ಅನಿವಾರ್ಯ. ಅದನ್ನು ಪ್ರಾಜ್ಞರು ಮನ್ನಿಸುವರೆಂದು ಪರಿಭಾವಿಸಿದ್ದೇನೆ.

ಸಂಕೇತಸೂಚಿ

I, II, III	ಕರ್ಣಾಟಕ ಕವಿಚರಿತೆಯ ಮೂರು ಸಂಪುಟಗಳು	ಯ.	ಯಕ್ಷಗಾನ
		ಯ. ಸಾ.	ಯಕ್ಷಗಾನ ಸಾಹಿತ್ಯ
ಕಂ.	ಕಂದ	ರ.	ರಗಳೆ
ಕಾ. ವ. ಗ.	ಕಾಲಜ್ಞಾನದ ವಚನಗಳು	ಲ. ರ.	ಲಲಿತರಗಳೆ
ಕು. ಷ.	ಕುಸುಮ ಷಟ್ಪದಿ	ವ.	ವಚನ
ಗ.	ಗದ್ಯ	ವ. ವಾ. ಭಾಂ. (ಧಾ)	ವಚನವಾಙ್ಮಯ ಭಾಂಡಾರ, ಧಾರವಾಡ
ಚಂ.	ಚಂಪೂ		
ಚೌ.	ಚೌಪದಿ	ವಾ. ಷ.	ವಾರ್ಧಕ ಷಟ್ಪದಿ
ಜ. ಕ.	ಜಯಕರ್ನಾಟಕ	ವೃ.	ವೃತ್ತ
ಟೀ.	ಟೀಕೆ	ಶಂ. ಶ.	ಶಂಕರಶತಕ
ತ್ರಿ.	ತ್ರಿಪದಿ	ಶ. ಸಾ.	ಶರಣಸಾಹಿತ್ಯ
ಪ್ರ. ಲೀ.	ಪ್ರಭುಲೀಲೆ (ಗುರುಸಿದ್ಧ)	ಶಾ.	ಶಾರದ
ಬ. ತ. ರ.	ಬಸವತತ್ವರತ್ನಾಕರ	ಶಿಭ.	ಶಿವಾನುಭವ
ಭಾ. ಷ.	ಭಾಮಿನಿ ಷಟ್ಪದಿ	ಶ್ರೀ. ಎಲ್. ಬಿ.	ಶ್ರೀ. ಎಲ್. ಬಸವರಾಜು ಅವರ ಹಸ್ತಪ್ರತಿ
ಮಿ.	ಮಿಶ್ರ		

ಶ್ಲೋ.	ಶ್ಲೋಕ
ಷ.	ಷಟ್ಪದಿ
ಸಂ.	ಸಂಪುಟ
ಸ.ದೀ.	ಸದ್ಧರ್ಮದೀಪಿಕೆ
ಸಾಂ.	ಸಾಂಗತ್ಯ
ಹ. ಕೃ. ಸಂ.	ಹರಿಹರನ ಕೃತಿಗಳ ಸಂಖ್ಯಾನಿರ್ಣಯ
ಹಾ.	ಹಾಡು
GOML.	A descriptive catalogue of the Kannada Manuscripts in the Government Oriental manuscripts Library, Madras.
K, KA, KB,	ಈ ಸಂಕೇತಗಳಿಂದ ಸೂಚಿಸಿದ ಜಾತಿ ಮತ್ತು ಕಾಗದದ ಹಸ್ತಪ್ರತಿಗಳು ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ಕೃತಿಗಳಿಗೆ ಸಂಬಂಧಿಸಿದೆ.
KRI.	Descriptive Catalogue of Kannada manuscripts in the Kannada Institute, Dharwar
MAR.	Mysore Archaeological Reports (Mysore)
OUL.	A descriptive catalogue of the Kannada Manuscripts in the Osmania University Library, Hyderabad
RCS.	Research Corner Series No. 2

ಸಂಕೇತಸೂಚಿ

ಇ.ರು. : ಇಟಗೂರು ರುದ್ರಕವಿ ಮತ್ತು ಶ್ರೀ ಭೀಮೇಶ್ವರ ಕ್ಷೇತ್ರಗಳು
—ಎಂ. ಜಿ. ನಂಜುಂಡಾರಾಧ್ಯ (1966)

ಕ.ಕ.ಚ. : ಕರ್ನಾಟಕ ಕವಿಚರಿತೆ —ಆರ್. ನರಸಿಂಹಾಚಾರ್ಯ
ಸಂಪುಟ I (1907) & (1961) ಸಂಪುಟ II (1919)
ಸಂಪುಟ III (1929)

ಕ.ಕ.ಚ.ಅ. : ಕರ್ನಾಟಕ ಕವಿಚರಿತೆಯ ಅನುಕ್ತಕೃತಿಸೂಚಿ
—ಎಸ್. ಶಿವಣ್ಣ (1967)

ಕ.ನು. : ಕನ್ನಡ ನುಡಿ (ಬೆಂಗಳೂರು)

ಕ.ಸಾ.ಪ.ಪ. : ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ (ಬೆಂಗಳೂರು)

ಕಾ.ಸಂ. : [ಭಾಗ ೧] ಕಾಲಜ್ಞಾನಸಂಗ್ರಹ —ಸಂ. ಶಿವಬಸವಸ್ವಾಮಿಗಳು (1946)

ಕಾ.ವ.ಗ. : ಕಾಲಜ್ಞಾನದ ವಚನಗಳು —ಸಂ. ಡಾ॥ ಫ. ಗು. ಹಳಕಟ್ಟಿ (1934)

ಕು.ರಾ.ಸಾಂ. : ಕುಮಾರರಾಮನ ಸಾಂಗತ್ಯಗಳು —ಡಾ॥ ಜಿ. ವರದರಾಜರಾವ (1966)

ಜ.ಕ. : ಜಯಕರ್ಣಾಟಕ (ಧಾರವಾಡ)

ದೇ.ದಾ ಪ್ರ. : ದೇವರ ದಾಸಿಮಾರ್ಯನ ಪ್ರಶಸ್ತಿ —ಸಂ. ಡಾ॥ ಫ. ಗು. ಹಳಕಟ್ಟಿ ಇತಾದಿ (1953)

ಪ್ರ.ಕ. : ಪ್ರಬುದ್ಧ ಕರ್ನಾಟಕ (ಬೆಂಗಳೂರು, ಮೈಸೂರು)

ಪ್ರ.ಲೀ. : ಪ್ರಭುಲೀಲೆ (ಗುರುಸಿದ್ಧಕೃತ) —ಸಂ. ಡಾ॥ ಜಿ. ಮರುಳಸಿದ್ಧಯ್ಯ (1966)

ಬ.ತ.ರ. : ಬಸವತತ್ತ್ವರತ್ನಾಕರ —ಚಂದ್ರಶೇಖರ ಶಾಸ್ತ್ರಿ (1961)

ಬ ಕಾ. : ಬಸವೇಶ್ವರನ ಕಾಲ —ಚನ್ನಮಲ್ಲಿಕಾರ್ಜುನ (1951)

ಬ.ಸಾ.ದ. : ಬಸವಸಾಹಿತ್ಯ ದರ್ಪಣ —ಎಸ್. ಆರ್. ಗುಂಜಾಳ (1967)

ಬ.ಸ್ಮಾ.ಸಂ. : ಬಸವನಾಳ ಸ್ಮಾರಕ ಸಂಪುಟ —ಸಂ. ಎಂ. ಜಿ. ವಿರೂಪಾಕ್ಷ (1956)

ಮ.ಸಂ.ಪಾ. : ಮಹಾರಾಜಾ ಸಂಸ್ಕೃತ ಪಾಠಶಾಲೆ (ಮೈಸೂರು)

ಮ.ಸಿ. : ಮರುಳಸಿದ್ಧಾಂಕ —ಸಂ. ಕವಲಿ ಚೆನ್ನಬಸಪ್ಪ, ಮರಿದೇವಸ್ವಾಮಿ (1949)

ಲಿಂ.ಸಾ.ಲಿಂ.ಕೃ. : ಲಿಂಗವಂತರ ಅಮರ ಕೃತಿಗಳು ಮತ್ತು ಲಿಂಗವಂತ ಕವಿಗಳು —ಬ. ಗುರುಸಿದ್ಧಪ್ಪ (1960)

ವ.ವಾ.ಭಂ. (ಧಾ) : ವಚನವಾಙ್ಮಯ ಭಾಂಡಾರ, ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವೀ.ಮ.ಪು. : ವೀರಶೈವ ಮಹಾಪುರುಷರು —ಜಿ. ಶಿವಮೂರ್ತಿಶಾಸ್ತ್ರಿ.

ವೀ.ಸಾ.ಇ. : ವೀರಶೈವ ಸಾಹಿತ್ಯ ಮತ್ತು ಇತಿಹಾಸ (ಭಾಗ III) —ಜಿ. ಶಿವಮೂರ್ತಿ ಶಾಸ್ತ್ರಿ (1961)

ಶ.ಚ.ಮಾ. : ಹಂಪೆಯ ಹರಿಹರದೇವರ ಶರಣಚರಿತಮಾನಸಂ —ಸಂ. ಹೆಚ್. ದೇವೀರಪ್ಪ (1968)

ಶ.ಸಾ. : ಶರಣಸಾಹಿತ್ಯ —ಸಂ. ಜಿ. ಶಿವಮೂರ್ತಿಶಾಸ್ತ್ರಿ (ಬೆಂಗಳೂರು)

ಶಂ.ದೇ.ಕಂ. : ಶಂಕರದೇವರ ಕಂದ —ಸಂ. ಸಿ. ಮಹದೇವಪ್ಪ

ಶಂ. ಶ. : ಶಂಕರಶತಕ —ಸಂ. ಸಿ. ಮಹದೇವಪ್ಪ (1965)

ಶಿ. ಭ. : ಶಿವಾನುಭವ —ಸಂ. ಫ. ಗು. ಹಳಕಟ್ಟಿ (ವಿಜಾಪುರ)

ಸ.ದೀ. : ಸದ್ಧರ್ಮದೀಪಿಕೆ —ಸಂ. ಚನ್ನಮಲ್ಲಿಕಾರ್ಜುನ (ಹಾವೇರಿ–ಮೈಸೂರು)

ಸ.ಪು.ಕಾ. : ಸರ್ವಪುರಾತನರ ಕಾಲಜ್ಞಾನ —ಸಂ. ಶಿವರುದ್ರಸ್ವಾಮಿ (1963)

ಹ.ಕೃ.ಸಂ. : ಹರಿಹರನ ಕೃತಿಗಳ ಸಂಖ್ಯಾನಿರ್ಣಯ —ಡಾ॥ ಹಿರೇಮಲ್ಲೂರ್ ಈಶ್ವರನ್ (ಅಪ್ರಕಟಿತ)

GOML. : A Descriptive Catalogue of the Kannada Manuscripts in the Government Oriental Manuscripts Library, Madras

Vol. I [1–138] (1935) Vol. II [139–317] (1937)
Vol. III [318–476] (1939) Vol. IV [477–825] (1946)
Vol. V [826–1038] (1951) Vol. VI [1039–1261] (1952)
Vol. VII [1262–1441] (1958)

J.K.U. : Journal of the Karnatak University, Dharwar.

K.R.I. : Descriptive Catalogue of Kannada Manuscripts in the Kannada Research Institute, Dharwar.

Vol. I (1953) Vol. II (1955)
Vol. III (1957) Vol. IV (1961)
Vol. V (1964) Vol. VI (1965)
Vol. VII (1967) Vol. VIII (1968)

L.J.L.E.S. : Literary Journal of the Lingayat Education Society, Dharwar.

O.U.L. : A Descriptive Catalogue of the Kannada Manuscripts in the Osmania University Library.
—Ed. Dr. R. Ramachandra Rao, T. V. Venkatachalasastry (1966)

R.C.S. : Research Corner Series, No. 2 —C. Mahadevappa (1960)

K; K.A. ಮತ್ತು **K.B.** ಸಂಕೇತದಿಂದ ಸೂಚಿಸಿದ ಓಲೆ ಮತ್ತು ಕಾಗದದ ಹಸ್ತಪ್ರತಿಗಳು "ಕನ್ನಡ ಅಧ್ಯಯನ ಸಂಸ್ಥೆ" (ಮೈಸೂರು)ಯಲ್ಲಿನ ಕೃತಿಗಳಿಗೆ ಸಂಬಂಧಿಸಿವೆ.

ಅಂ. : ಅಂಕಿತ

ಪ. : ಪರಿಷ್ಕೃತ

ಸಂ. : ಸಂಪಾದಿತ

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
1	ಅಕ್ಕಗಳ ಪೀಠಿಕೆ	ಮಹಾದೇವಿಯಕ್ಕ	1160	?	1.188 [ಅಲಭ್ಯ]
2	ಅಕ್ಕಮಹದೇವಿ ಕದಳಿ ಹೊಕ್ಕ ಹಾಡು	ರಾಚಮ್ಮ	?	ಹಾ. 300	ಶಿಭ. 12.12
3	ಅಕ್ಷರದ ಚೌಪದ	ಕ. ನಾಗಲಿಂಗಯ್ಯ	1430	ಚೌ.	KB. 328/1
4	ಅಕ್ಷರಮಾಲಿಕಾಗದ್ಯ	—			GOML. IV. ಸಂ. 615
5	ಅಕ್ಷರಮಾಲಿಕೆ	?	1700	ಕಂ. 56	III 303
6	ಅಕ್ಷರಾಂಕಗದ್ಯ	ಅಂ/ಹಂಪೆಯ ವಿರುಪಾಕ್ಷ	?		GOML. IV. ಸಂ. 943-43
7	ಅಕ್ಷರಾಂಕಗದ್ಯ	ಚೆನ್ನವೀರದೇಶಿಕ	1650	ಗ.	RCS. No. 2 (ಪು. 9)
8	ಅಕ್ಷರಾಂಕಪದ್ಯ	ಪಾಲ್ಕುರಿಕೆ ಸೋಮ	1190	ವೃ.	ಶ.ಸಾ., 2.10 (ಪು. 402)
9	ಅಘೋರಮಂತ್ರ	?	?	ಟೀ.	KRI. VIII. ಸಂ. 5
10	ಅಟವೀಶ್ವರಚರಿತೆ	?	?	?	III. 418
11	ಅದ್ವೈತರಾಮಾಯಣ	ನಿಜಗುಣಾರ್ಯ	1650	ವ.	III. 245–46
12	ಅನ್ನದಾನೀ ಮಲ್ಲಿಕಾರ್ಜುನ ಸ್ವಾಮಿಯವರ ಕಾವ್ಯ	ಚನ್ನಾಂಕ	1500	ಕು. ಷ.	ಸದೀ., 83–4
13	ಅನಾದಿವೀರಶೈವಪುರಾಣ	?	1700	?	III. 418
14	ಅನಾಮಯಸ್ತೋತ್ರ	ಗುರುದೇವ	1350	ಟೀ.	I. 467
15	ಅನುಭವದವಚನ	?	1700	ವ.	III. 418

16	ಅನುಭವಶತಕ	ಶಾಂತವೃಷಭೇಶ	1700	ಕಂ. 115	II. 551
17	ಅನುಭವಸಾರ(ನಿಜಗುಣಶಿವಯೋಗಿ)ದ ವ್ಯಾಖ್ಯಾನ	?	1800	ಟೀ.	KRI. VIII. ಸಂ. 27
18	ಅನುಭವಸೂತ್ರ (ಮೊಗ್ಗೆ ಮಾಯಿದೇವ) ಟೀಕೆ	ಉಜ್ಜಿನೀಶ	1550	ಟೀ.	RCS. No. 2 (ಪು. 7)
19	ಅನುಭವಸೂತ್ರ (ಮೊಗ್ಗೆ ಮಾಯಿದೇವ) ಟೀಕೆ	ಚೆನ್ನಮಲ್ಲಿಕಾರ್ಜುನ	1700	ಟೀ.	III. 418
20	ಅನುಭವಸ್ತೋತ್ರ	?	1700	?	III. 418
21	ಅಪರಾಧಸ್ತೋತ್ರ	ದೇ. ನಂಜುಂಡ	1841	ವಾ.ಷ. 147	III. 193, 96
22	ಅಪರಾಧಸ್ತೋತ್ರ ಟೀಕೆ	?	?	ಟೀ.	III. 418
23	ಅಬ್ಬಲೂರ ಚರಿತ್ರೆ	ಶಾಂತನಿರಂಜನ	?	ಸಾಂ. 5•505	KA. 320
24	ಅಭಿಧಾನವಸ್ತುಕೋಶ (ನಾಗವರ್ಮ II) ದ ಟೀಕೆ	ಸಿದ್ಧಲಿಂಗಸ್ವಾಮಿ	?	ಟೀ.	KB. 459/1
25	ಅಮ್ಮವ್ವೆಚರಿತೆ	ಶಾಂತವೀರದೇಶಿಕ	1650	?	GOML.IV. ಸಂ. 803 [ಅಲಭ್ಯ]
26	ಅಮ್ಮವ್ವೆಯ ರಗಳೆ	ತ್ರಿಭುವನತಾತ	1165	ರ–388	KA. 62
27	ಅಮೃತೇಶ್ವರಭಾಷ್ಯದ ಟೀಕೆ	?	1600	ಟೀ.	III. 418
28	[ಅರವತ್ತುಮೂರು] ಪುರಾತನರ ಪುರಾಣ	ಘನಮಠಾರ್ಯ	1830	?	ಶಿಭ. 3.11 (ಪು. 105)
29	ಅರವತ್ತುಮೂರು ಪುರಾತನ ಶರಣರ ಚರಿತ್ರೆ	ವಿರೂಪಾಕ್ಷಕವಿ	?	?	MAR., 3925 (ಪು. 5)
30	ಅರವತ್ತುಮೂವರು ಪುರಾತನ ಚರಿತ್ರೆ	?	?	ಗ	MAR. 1925 (ಪು. 5)

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
31	ಅರವತ್ತುಮೂವರು ಪುರಾತನರ ಚರಿತ್ರೆ	?	?	?	III. 418
32	ಅರವತ್ತುಮೂರು ಪುರಾತನರ ಚರಿತ್ರೆ	ಶಿವಯೋಗಿ ಸೋಮೇಶ	1650	ಸಾಂ. 60–2173	KBV. 56
33	ಅರವತ್ತುಮೂವರ ಚರಿತ್ರೆ	ಆರಾಧ್ಯದೇವ	1700	ವಾ. ಷ.–9·561	RCS. No. 2 (ಪು. 2)
34	ಅರವತ್ತುಮೂವರ ತ್ರಿವಿಧಿ	ಕಳಲೆ ನಂಜರಾಜ	1740	ಹಾ.	KA. 148/6
35	ಅರವತ್ತುಮೂವರ ಪುರಾಣ	ವೀರಭದ್ರ	?	ವಾ.ಷ. 21·1049	KA. 261/2
36	ಅರುವತ್ತುಮೂವರು ಪ್ರಮಥಗಣಾಧೀಶ್ವ-ರರ ತ್ರಿಪದಿ	?	1750	ತ್ರಿ.–64	III. 316–17
37	ಅರುವತ್ತುಮೂವರು ಪ್ರಮಥಗಣಾಧೀಶ್ವ-ರರ ಸ್ತುತಿ	?	?	ಷ.	III. 418
38	ಅಲ್ಲಮಪ್ರಭುವಿನಷ್ಟಕ	?	1700	?	III. 303
39	ಅಲ್ಲಮಪ್ರಭುವಿನ ಸಾಂಗತ್ಯ	?	?	ಸಾಂ.	III. 418
40	ಅಲ್ಲಮಪ್ರಭುಸಂಗೀತಪದ	?	1700	ಹಾ.	III. 311
41	ಅವಧೂತಗೀತೆ	ಶಿವಯೋಗೀಂದ್ರ	?	ಹಾ.	III. 418
42	ಅವಧೂತಚರಿತ್ರ	?	?	?	ವ. ವಾ. ಭಾಂ. (ಧಾ.)
43	ಅಷ್ಟಮಹಸಿದ್ಧಿವಾರ್ಧಕ	?	?	ಮಿ.	K. 322/9
44	ಅಷ್ಟಾವಧಾನದ ಪದ	ಶಾಂತವೀರದೇವ	?	ಹಾ.	K. 322/8

45	ಅಷ್ಟಾವರಣ	ರುದ್ರದೇವ	1700	?	III. 419
46	ಅಷ್ಟಾವರಣ ಗ್ರಂಥ	ಸಿದ್ಧರಾಮ	?	ಶ್ಲೋ+ಟೀ–15	KRI. VII. ಸಂ. 5, 6
47	ಅಷ್ಟಾವರಣತಿಲಕ	ಮಹಮೂರ್ತಿ	1772	ವಾ. ಷ–11•1336	III. 134-36
48	ಅಷ್ಟಾವರಣದ ವಚನ	?	1700	ವ.	III. 419
49	ಅಷ್ಟಾವರಣಮಣಿದರ್ಪಣಶತಕ	ಚೆನ್ನವೀರದೇಶಿಕ	1650	ವೃ.	RCS. No. 2 (ಪು. 9)
50	ಅಷ್ಟಾವರಣಮಹತ್ವದ ಸ್ತೋತ್ರ	?	1600	?	III. 419
51	ಅಷ್ಟಾವರಣ ಮಹಾತ್ಮೆ	ಎ. ಗುರುಶಾಂತದೇವ	1565	ಮಿ.	II. 298; KRI. I. ಸಂ. 36
52	ಅಷ್ಟಾವರಣಮಾಹಾತ್ಮ್ಯ	?	1700	?	III. 419
53	ಅಷ್ಟಾವರಣಸ್ತೋತ್ರದ ವಚನ	ಎ. ಗುರುಶಾಂತದೇವ	1565	ವ.	II. 298
54	ಅಷ್ಟಾವರಣಸ್ತೋತ್ರಷಟ್ಪದ	ಗುರುನಂಜ	1500	ವಾ. ಷ-113	II. 167-68
55	ಅಸಂಖ್ಯಾತರಗಳೆ	ಅಂ/ಗುರುಪುರದ ಮಲ್ಲಿನಾಥ	1600	ರ–138	III. 284
56	ಅಂತಃಕರಣಪ್ರಕಾಶಿಕೆ	ಸೋಸಲೆ ರೇವಣಾಚಾರ್ಯ	1623	ಟೀ.	II. 365–66
57	ಅಂಬಿಕಾಪತಿಶತಕ	?	1500	ವೃ.	ಶಂ. ಶ. ಪೀಠಿಕೆ XXI
58	[ಅಂ]ಬಿಕಾ ಸ್ತೋತ್ರ	ಶಾಂತವೀರದೇಶಿಕ	1650	?	GOML. IV. ಸಂ. 803 [ಅಲಭ್ಯ]
59	ಅಂಜನೇಯ ಪ್ರಾಣನಾಥಾಷ್ಟಕ	?	?	ವೃ.-8	K. 773/22
60	ಆಗಮವಚನ	?	1700	ವ.	III. 419
61	ಆಚರಣಸಂಬಂಧದ ವಚನ	ಸಂ/ಮುದೆಯ	?	ವ.	OUL. ಸಂ. 7, 147
62	ಆಚರಣಸಂಬಂಧ ಷಟ್ಪದಿ	?	1500	ಷ. ಷ-165	III. 276

ಅ. ಸಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
63	ಆಚರಣೆಯ ಸಂಬಂಧದ ವಚನ	ಸಂ. ಚನ್ನಂಜೀದೇವ	1530	ವ.–26	II. 214
64	ಆಚರಣೆಯ ಸಂಬಂಧದ ವಚನ	ಸಂ. ಸಿದ್ಧವೀರಣಾಚಾರ್ಯ	1600	ವ-275	II. 324–25
65	ಆಚರಣೆಯ ಸಂಬಂಧದ ವಚನ	ಮುಪ್ಪಿನಯ್ಯ	1700	ವ-275	II. 555
66	ಆಚಾರ್ಯಸಂಭವಟೀಕೆ	?	?	ಟೀ.	K. 525
67	ಆದಯ್ಯಗಳ ಉಯ್ಯಲೆ ಪದ	ಆದಯ್ಯ	1160	ಹಾ.–ನುಡಿ-23	KRI. VIII. ಸಂ. 8
68	ಆದಯ್ಯಗಳ ಕಂದ	ಆದಯ್ಯ	1160	ಕಂ.–16	KRI. VIII. ಸಂ. 9
69	ಆದಯ್ಯಗಳ ಮುಕ್ತಿಕ್ಷೇತ್ರ	ಆದಯ್ಯ	1160	51	KRI. VIII. ಸಂ. 10
70	ಆದಯ್ಯಗಳ ವಾರ್ಧಿಕ	?	?	ವಾ.ಷ.–39	KRI. II. ಸಂ. 1
71	ಆದಯ್ಯಗಳ ಸ್ವರವಚನ	ಆದಯ್ಯ	1160	ವ. + ಹಾ.–86	KRI. VIII. ಸಂ. 13
72	ಆದಿಶೆಟ್ಟಿಪುರಾಣ	ಶಾಂತವಕ್ರಯ್ಯ		ಮಿ–17:1005	KRI. VIII. ಸಂ. 19
73	ಆಯ್ದಕ್ಕಿ ಮಾರಯ್ಯನ ರಗಳೆ	ಶಂಕರದೇವ	1500	ರ.	ಹ. ಕೃ. ಸಂ., 150
74	ಆರಾಧ್ಯಚಾರಿತ್ರ	ನೀಲಕಂಠಾಚಾರ್ಯ	1485	ವಾ.ಷ. 65·3069	II. 133-36
75	ಅಲಂದೆಯ ಶರಣಬಸವಪುರಾಣ	ವಿರೂಪಾಕ್ಷಪಂಡಿತ	1900	ಷ.	III. 236
76	ಇಪ್ಪತ್ತೊಂದು ನಾಂದ್ಯ	ಶಾಂತವೀರದೇಶಿಕ	?	ಷ. ?	III. 419
77	ಇಷ್ಟಲಿಂಗಚಾರಿತ್ರ	ಶಂಕರದೇವ	1500	ವಾ.ಷ.–47	III. 289
78	ಇಷ್ಟಲಿಂಗಶತಕ	ಕಾಡಸಿದ್ಧೇಶ	1725	ವೃ.–111	III. 28–9

79	ಇಷ್ಟಲಿಂಗೇಶ್ವರಶತಕ	ಮೋಡ್ಲೇರಿ ಶಿವಲಿಂಗ	1570	ವೃ.-98	KB. 467
80	ಇಂದುಶೇಖರಲೀಲೆ ಅಥವಾ ಮಡಿವಾಳದ ಶಿವಲಂಕಾರೇಶ್ವರನ ಮಹಾತ್ಮ್ಯ	ಸಾಕಲಯ್ಯ	1654	ಸಾಂ.	III. 497
81	ಈಶ್ವರವೋಲಗಶತಕ	ಚೆನ್ನವೀರದೇಶಿಕ	1650	ವೃ.	ಕಂ.ಶ. ಪೀಠಿಕೆ., xxvi-viii
82	ಈಶ್ವರಸ್ವರೂಪ	?	?	ಗ-ಅ. 47	KB. 303/1
83	ಉಚಿತ ಕಥೆಗಳು	ಉ. ಬಸವಲಿಂಗದೇವ		ಗ-74	II. 321-22
84	ಉದ್ಧರಣೆಯ ವಾರ್ಧಕ	ನಿರಂಜನಸ್ವಾಮಿ	?	ಹಾ.	ಬ.ತ.ರ., 596
85	ಉದ್ಧರಣೆ	?	?	?	III. 419
86	ಉದ್ಧರಣೆಯ ಕಟ್ಟು	?	1700	?	III. 419
87	ಉದ್ಧರಣೆ ಪಟಲಗಳು	?	?	ಗ.	KA. 314
88	ಉದ್ಧರಣೆಯ ಪಟಲ	?	?	?	KRI. VIII. ಸಂ. 32, 33
89	ಉದ್ಧರಣೆಯ ಪಟಲಗಳು	?	?	?	KRI. VIII. ಸಂ. 34
90	ಉದ್ಧರಣೆಯ ವಾಕ್ಯ	?	1650	ಗ.	III. 294
91	ಉದ್ಧರಣೆಯ ವಾಕ್ಯದ ಚಿತ್ರಪಟ	?	?	?	KRI. VIII. ಸಂ. 35
92	ಉದ್ಧರಣೆಯ ಸಂಬಂಧ	?	1800	?	III. 419
93	ಉದ್ಭಟನ ಕಾವ್ಯ	ಕಲ್ಲರಸ	?	ಹಾ-433	ಶ. ಸಾ., 4.5-6
94	ಉಪನಿಷತ್ತು	ಗುರುಶಿವಸಿದ್ಧೇಶ್ವರ	?	ವ.	KB. 225
95	ಉಮಾಸ್ತೋತ್ರಷಟ್ಪದ ಅಥವಾ ತ್ರಿಪುರಸುಂದರೀಸ್ತೋತ್ರ	ಗುರುನಂಜ	1500	ಷ. ಷ-109	II. 167-68

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
96	ಉರಿಲಿಂಗಸ್ತವ	?	?	?	III. 419
97	ಉರಿಲಿಂಗಿ ಪೆದ್ದಯ್ಯನ ಕಥೆ	ಬಸವರಾಜ ?	?	ಭಾ.ಷ-3·175	K. 260/2
98	ಎಲ್ಲ ಪ್ರಮಥರ ಬೆಡಗಿನ ವಚನ	?	?	ವ.	III. 419
99	ಎಲ್ಲ ಪುರಾತನರ ಪುರಾಣ	ಕಿತ್ತನಕೆರೆವೀರ	?	ಸಾಂ–3·693	K. 590
100	ಎಲ್ಲ ಪುರಾತನರ ಸ್ತೋತ್ರದ ವಚನ	ಸಂಗ್ರಾ/ ಕುಂಕೂರ ಮಹಾದೇವ	?	ವ-469	KRI. VIII. ಸಂ. 45
101	ಎಲ್ಲಾ ಪುರಾತನರ ತ್ರಿಪದಿ	?	1605	ತ್ರಿ-62	III. 285
102	ಎಲ್ಲಾ ಪುರಾತನರ ವಚನ	ಕುಂತೂರ ಮಹತ್ತರದೇವ	?	ವ-143	OUL., ಸಂ. 10
103	ಎಲ್ಲಾ ಪುರಾತನರ ವಚನ	?	?	ವ.	III. 419
104	ಏಕಾಂತರಾಮಯ್ಯನ ಚರಿತ್ರೆ	?	?	?	III. 419
105	ಏಕೋತ್ತರಶತಸ್ಥಲ	ಮಹಾಲಿಂಗದೇವ	1430	ವ+ಹಾ.	II. 52–3
106	ಏಕೋತ್ತರಶತಸ್ಥಲ	?	?	ಟೀ.	K. 628
107	ಏಕೋತ್ತರಶತಸ್ಥಲ	?	?	?	GOML. III. ಸಂ. 443
108	ಏಕೋತ್ತರಶತಸಂಬಂಧ	?	1700	?	III. 419
109	ಏಕೋತ್ತರಶತಸ್ಥಲಸಾರಸಂಗ್ರಹ	?	?	?	III. 419
110	ಏಕೋತ್ತರಶತಸ್ಥಲಸಾರಾಮೃತ	ಮಹಲಿಂಗದೇವ	1430	ವ+ಟೀ-393	RCS. No. 2 (ಪು. 3–4)
111	ಏಕೋತ್ತರಶತಸ್ಥಲಿ (ಮಹಲಿಂಗದೇವ) ಟೀಕೆ	ಶ್ರೀಗಿರೀಂದ್ರ	1480	ಟೀ.	II. 69

112	ಏಕೋಃದೇವಪ್ರತಿಷ್ಠಾತ್ರಿವಿಧಿ	?	?	ತ್ರಿ-135	K. 280/1
113	ಏಕೋನವಿಂಶತಿ ಪ್ರಬಂಧ	ಮುರಿಗೆಯ ಶಾಂತವೀರ	1530	ವಾ.ಷ. 19	II. 212-14
114	ಏಕೋಃರಾಮೇಶ್ವರಪುರಾಣ	ಹ. ನಂಜಣಾರ್ಯ	1651	ವಾ.ಷ. 16.1463	KA. 307
115	ಏಲೇಶ್ವರದ ಕೇತಯ್ಯಗಳ	ಶಂಕರದೇವ	1500	ರ.	ಹ.ಕೃ. ಸಂ. 150
116	ಐದು ಬಗೆಯ ಸ್ತೋತ್ರ	?	1700	?	III. 419
117	ಕಟ್ಟಿಗೆಹಳ್ಳಿ ಸ್ವಾಮಿಗಳ ತಾರಾವಳಿ	?	1700	?	III. 419
118	ಕಡಕೋಳ ಮಡಿವಾಳಪ್ಪನವರ ಪುರಾಣ	?	?	?	ಶಿಫ., 3.11 (ಪು. 106)
119	ಕಣ್ಣಪ್ಪನವರ ಕಥೆ	?	?	?	III. 419
120	ಕರ್ಣರಸಾಯನ	ಮಲ್ಲಿಕಾರ್ಜುನ	1593	ಸಾಂ. 11.1131	RCS. No. 2 (ಪು. 8)
121	ಕರ್ಣಾಟಕಶಬ್ದಮಂಜರಿ				
	(ವಿರಕ್ತ ತೋಂಟದಾರ್ಯ)ಯ ಟೀಕೆ	?	1700	ಟೀ.	III. 420
122	ಕದಂಬನೀತಿ	ಕೊಟ್ಟೂರ ಬಸವೇಶ	?	ಮಿ-105	OUL. 190
123	ಕದಂಬನೀತಿಯ ವಚನ	?	1700	ವ.	III. 419
124	ಕದಂಬಶತಕ	?	?	ವೃ.	ಶಿಫ., 7.1 (ಪು. 62)
125	ಕನ್ನಡ ವಿಕ್ರಮಾರ್ಕಚರಿತೆ	ಇಮ್ಮಡಿ ತೋಂಟದಯ್ಯ	1530	ಭಾ.ಷ.43.2887	ಶ.ಸಾ. 8.10-11
126	ಕನ್ನಡ ಶಬ್ದಮಂಜರೀ				
	(ವಿರಕ್ತ ತೋಂಟದಾರ್ಯ) ಟೀಕುಸುಧಾ	?	?	ಟೀ.	KB. 290/7
127	ಕಪ್ಪಿನಂಜಯ್ಯನವರ ನಾಂದ್ಯದ ನುಡಿ	?	?	ಟೀ.	KRI. VII. ಸಂ. 11

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
128	ಕಮುಳವ್ವೆರಗಳೆ	ಶಂಕರದೇವ	1500	ರ.	ಹ.ಕೃ. ಸಂ. 150
129	ಕರಣಹಸುಗೆ(ಚೆನ್ನಬಸವ)ಯ ಟೀಕೆ	ಪರ್ವತಶಿವಯೋಗಿ	1650	ಟೀ.	II. 397
130	ಕರಣಹಸುಗೆಯ ಬಯಲನುಡಿ	?	1700	ಟೀ.	III. 420
131	ಕರುಣಹಸುಗೆ ವಾಚ್ಯ	?	?	ಟೀ.	GOML. III. ಸಂ. 452
132	ಕರವೀರಚೋಳ ಹೋಳೀಪದ	ಕುಂದಗೋಳ ಬಸವಲಿಂಗ	1800	ಹಾ.	OUL., ಸಂ. 249
133	ಕರವೀರರಾಯಚರಿತ್ರೆ	?	1800	?	III. 420
134	ಕರಸ್ಥಲದ ನಾಗಯ್ಯನ ಚರಿತೆ	ರುದ್ರ	1650	ಸಾಂ.+ಷ-11.952	II. 400-01
135	ಕರಸ್ಥಲದ ನಾಗಲಿಂಗಯ್ಯನ ಚರಿತ್ರೆ	ಶಿವನುಗ	1750	ಸಾಂ.	III. 420
136	ಕರಸ್ಥಲದ ನಾಗಿದೇವರು ನಿರೂಪಿಸಿದ ಲಿಂಗನಿಜಸ್ಥಲದ ವಚನ	ಕ. ನಾಗಿದೇವ	1430	ತ್ರಿ-98	KRI. VIII. ಸಂ. 52
137	ಕರಸ್ಥಲದ ವೀರಣ್ಣಗಳ ವಚನ	ಕ. ವೀರಣ್ಣ	1430	ವ.	III. 420
138	ಕರಸ್ಥಲವೀರಣ್ಣೊಡೆಯರ ಕಂದ	ಕ. ವೀರಣ್ಣೊಡೆಯ	1430	ಕಂ. 25	RCS. No. 2 (ಪು. 4-5)
139	ಕರಿಕಾಲಚೋಳಚರಿತ್ರೆ	?	1700	?	III. 420
140	ಕರಿಬಂಟನ ಕಥೆ	ಸಿದ್ಧೇಶ	?	ಯ.	ಯ.ಸಾ., 105
141	ಕರಿಯಬಂಟನ ಕಥೆ	ಭಾಳಾಕ್ಷ	1800	ಯ.	III. 162
142	ಕರಿಯಭಂಟನ ಕಥೆ	ಸಾಂಬಯ್ಯ	1750	ಯ.	III. 101

143	ಕರೀಭಂಟನ ಕಥೆ	ವೀ. ಪುಟ್ಟಣ್ಣ	19. ಶ.	ಯು.	ಯು.ಸಾ., 40
144	ಕಲ್ಮಲೆಯ ವೃತ್ತ	?	17. ಶ.	?	III. 420
145	ಕಲ್ಯಾಣದ ಶರಣರು ನಿರೂಪಿಸಿದ ನಿರೂಪ	?	12. ಶ.	ವ.	III. 420
146	ಕಲ್ಯಾಣ ಪಟ್ಟಣದ ಮಾಹಾತ್ಮ್ಯ	?	?	?	III. 420
147	ಕಲ್ಯಾಣಪುರಮಹಿಮೆ	?	17. ಶ.	?	III. 420
148	ಕಲ್ಯಾಣಶತಕ	ಗಾ. ಬಸವಣ್ಣ	?	ವೃ–108	ಕರ್ಮವೀರ, 6–9–1959
149	ಕಲಿಗಣನಾಥನ ರಗಳೆ	ಶಂಕರದೇವ	1500	ಲ. ರ.	KA. 62
150	ಕಲಿಗಣನಾಥನ ಶಾರದ	?	?	ಶಾ.	ಸ. ದೀ., 54-5
151	ಕಲಿಗಣನಾಥ ಸಾಂಗತ್ಯ	ಮಲ್ಲಯ್ಯ	?	ಸಾಂ–8•641	KA. 363
152	ಕಲ್ಲೇಲಿಂಗೇಶ್ವರನ ಚಾರಿತ್ರ	ಬಸವ	?	ಸಾಂ–11•1097	KB. 510
153	ಕವಿಲಿಂಗನ ಪದ	ಕವಿಲಿಂಗ	1490	ಹಾ.	II. 137-38
154	ಕಾಮನಸೋಗಪದ	ಚೆನ್ನವೀರಗೌಡ	1800	ಹಾ–157	III. 161
155	ಕಾಯಸಾಂಗತ್ಯ	ರಾಚಯ್ಯ	?	ಸಾಂ- 2•63	ಶ. ಸಾ., 1•6
156	ಕಾಯಾರ್ಪಣ	?	?	ಗ.	ಶ್ರೀ. ಎಲ್. ಬಿ. ಅವರ ಪ್ರತಿ
157	ಕಾರಣಾಗಮದ ವಾರ್ಧಕ	ಕಲ್ಯಾಣದ ಸ್ವಾಮಿ	1500	ವಾ.ಷ-25	II. 172
158	ಕಾಲಜ್ಞಾನ	ಹಡಪದಪ್ಪಣ್ಣ	1160	?	I. 199
159	ಕಾಲಜ್ಞಾನ	ಅಕ್ಕನಾಗಮ್ಮ	1160	?	ಕಾ.ವ.ಗ. (ಪ್ರಸ್ತಾವನೆ)
160	ಕಾಲಜ್ಞಾನ	ಕಲ್ಯಾಣಿಯಮ್ಮ	?	?	ಕಾ.ವ.ಗ. (ಪ್ರಸ್ತಾವನೆ)

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
161	ಕಾಲಜ್ಞಾನ	ಕೂಗಿನ ಮಾರಯ್ಯ	1160	?	ಕಾ.ವ.ಗ. (ಪ್ರಸ್ತಾವನೆ)
162	ಕಾಲಜ್ಞಾನ	ಕೊಡಗದ ಮೊಗೆ ರಾಮಯ್ಯ	?	?	ಕಾ.ವ.ಗ. (ಪ್ರಸ್ತಾವನೆ)
163	ಕಾಲಜ್ಞಾನ	ಕೋಡಮೊಗ್ಗೆ ಸಿದ್ಧರಾಮ	?	?	ಶ್ರೀ. ಎಲ್. ಬಿ. ಅವರ ಪ್ರತಿ
164	ಕಾಲಜ್ಞಾನ	ಜೋಗಿಕೊಳ್ಳದ ಸ್ವಾಮಿ	?	?	ಕಾ.ವ.ಗ. (ಪ್ರಸ್ತಾವನೆ)
165	ಕಾಲಜ್ಞಾನ	ನಿಡುಮಾಮಿಡಿ ಕರಿಬಸವಸ್ವಾಮಿ	?	?	III. 420
166	ಕಾಲಜ್ಞಾನ	ಮಹಿಲಯ್ಯ	?	?	ಕಾ.ವ.ಗ. (ಪ್ರಸ್ತಾವನೆ)
167	ಕಾಲಜ್ಞಾನದ ಹೋಳಿಪದ	ಅಲ್ಲಮಪ್ರಭು	1165	ಹಾ.	ನೈವೇದ್ಯ., 229
168	ಕಿತ್ತೂರ ಚೆನ್ನಮ್ಮನ ಪುರಾಣ	?	?	ಷ ?	ವ. ವಾ. ಭಾಂ. (ಧಾ)
169	ಕೀರ್ತನೆಗಳು	ವೀರಣಕವಿ	17. ಶ.	ಹಾ.	III. 420
170	ಕೀರ್ತಿಶತಕ	ಸಂಗ್ರಾ/ಬರೆಹದ ಗುರುನಂಜೇಸ್ವಾಮಿ	1620	ವೃ-110	ಶಂ. ಶ. (ಪೀಠಿಕೆ) viii
